ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

(ಪರಿಷ್ಕೃತ ಪಠ್ಯಪುಸ್ತಕ)

## ಭಾಗ – 1

# 8

## ಎಂಟನೆಯ ತರಗತಿ

©KTBS Not to be republished

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು – 85

# ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010 ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ಹನ್ನೊಂದು ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1 ರಿಂದ 4 ನೇ ತರಗತಿಯವರೆಗೆ ಪರಿಸರ ವಿಜ್ಞಾನ ಮತ್ತು 5 ರಿಂದ 10 ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜವಿಜ್ಞಾನಗಳಿರುತ್ತವೆ.

2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳನ್ನು ಕೆಳಗಿನ ಮೂಲಭೂತ ವಿಧಾನಗಳ ಆಧಾರದ ಮೇಲೆ ರಚಿಸಲಾಗಿದೆ.

- ಅಂತರ್ಗತ ವಿಧಾನ (Integrated Approach),
- ರಚನಾತ್ಮಕ ವಿಧಾನ (Constructive Approach)
- ಸುರುಳಿಯಾಕಾರದ ವಿಧಾನ (Spiral Approach) .

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಭಾರತೀಯ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾಪೂರಕ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

5ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಒಂದು ಹೊಸತನವನ್ನು ತರಲಾಗಿದೆ. ಕರ್ನಾಟಕದ ನಾಲ್ಕು ವಿಭಾಗಗಳಿಗೆ ಬೇರೆ ಬೇರೆ ಪುಸ್ತಕಗಳನ್ನು ತಯಾರಿಸಲಾಗಿದೆ. ಅವುಗಳಲ್ಲಿನ ಮೊದಲ ಅಧ್ಯಾಯ ಆಯಾ ವಿಭಾಗದ ಇತಿಹಾಸ, ಭೌಗೋಳಿಕ ಲಕ್ಷಣಗಳು, ಜನಜೀವನ, ಸಂಸ್ಕೃತಿ, ಸಂಪ್ರದಾಯಗಳು ಹಾಗೂ ಆ ವಿಭಾಗದ ಜನಜೀವನವನ್ನು ಶ್ರೀಮಂತಗೊಳಿಸಿದ ವಿವಿಧ ಕ್ಷೇತ್ರಗಳಲ್ಲಿನ ಹಿರಿಯನಾಯಕರ ವಿಚಾರ ಮಾಹಿತಿ ಇತ್ಯಾದಿಗಳನ್ನು ಕೊಡಲಾಗಿದೆ. ಎನ್‌ಸಿಎಫ್ 2005 ರ ಮಾರ್ಗಸೂಚಿಯಂತೆ ಇತಿಹಾಸ, ಭೂಗೋಳ, ಪೌರನೀತಿ, ಅರ್ಥಶಾಸ್ತ್ರ ಹಾಗೂ ವಾಣಿಜ್ಯಶಾಸ್ತ್ರಗಳ ಅಂಶಗಳನ್ನು 8 ನೇ ತರಗತಿಯಲ್ಲಿ ಸೇರಿಸಲಾಗಿದೆ. ಅನೇಕ ಅವಶ್ಯಕ ವಿಚಾರಗಳನ್ನು ಆವರಣಗಳಲ್ಲಿ ಕೊಡಲಾಗಿದೆ. ಮಕ್ಕಳು ಸ್ವಂತವಾಗಿ ಕಲಿಯುವುದಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಅನೇಕ ಪ್ರಾಜೆಕ್ಟ್‌ಗಳನ್ನು ಸೂಚಿಸಲಾಗಿದೆ. ಆದರೆ, ಕಂಠಪಾಠ ಮಾಡುವ ಅಂಶಗಳಾದ ಇಸವಿಗಳು, ಅನಾವಶ್ಯಕ ವಿಷಯಗಳನ್ನು ಕಡಿಮೆ ಮಾಡುವುದರ ಮೂಲಕ ಕಲಿಕಾ ಹೊರೆಯನ್ನು ಕಡಿಮೆ ಮಾಡಲಾಗಿದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕ ರಚನಾ ಕಾರ್ಯದಲ್ಲಿ ಸಹಕರಿಸಿದ ಎಲ್ಲರಿಗೂ, ಪುಸ್ತಕವನ್ನು ಸುಂದರವಾಗಿ ಡಿ.ಟಿ.ಪಿ ಮಾಡಿದ ಮತ್ತು ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಮುಖ್ಯ ಸಂಯೋಜಕರು
ಪಠ್ಯಕ್ರಮ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು
ದಿನಾಂಕ: 1.3.2012

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ
ಬೆಂಗಳೂರು.

© KTBS
Not to be republished

## ಅಧ್ಯಕ್ಷರ ನುಡಿ

ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಜಾರಿಗೆ ತರುತ್ತಿರುವ ಪ್ರಸ್ತುತ ಪಠ್ಯಪುಸ್ತಕವು ಅನೇಕ ಕಾರಣಗಳಿಂದ ಭಿನ್ನವಾಗಿ, ವಿಶಿಷ್ಟವಾಗಿ ಹೊರಬರುತ್ತಿದೆ. ಈ ಸಮಾಜವಿಜ್ಞಾನ ಪಠ್ಯವು ಎಂಟನೆಯ ತರಗತಿಗೆ ಸಂಬಂಧಪಟ್ಟಿದ್ದು, ಇದುವರೆಗೂ ತಂದಿರುವ ಪಠ್ಯಪುಸ್ತಕಗಳಿಗಿಂತ ವಿಶೇಷವಾಗಿದೆ. ಪ್ರಥಮಬಾರಿಗೆ ಚರಿತ್ರೆ, ಭೂಗೋಳದಂತಹ ಸಾಂಪ್ರದಾಯಕ ವಿಷಯಗಳೊಂದಿಗೆ ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ವ್ಯವಹಾರ ಅಧ್ಯಯನಗಳನ್ನು ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005 ರ ಹಿನ್ನಲೆಯಲ್ಲಿ ಎಂಟನೆ ತರಗತಿಯ ಸಮಾಜವಿಜ್ಞಾನ ಪಠ್ಯವು ಒಳಗೊಂಡಿರುವುದು ಗಮನಾರ್ಹವಾಗಿದೆ.

ಜನ ಸಾಮಾನ್ಯರ ಏಕೈಕ ಆಶಾಕಿರಣವಾದ ಸರ್ಕಾರಿ ಸ್ವಾಮ್ಯದ ಯೋಜನೆಯ ಭಾಗವಾಗಿರುವ ಈ ಪಠ್ಯಪುಸ್ತಕವು ಸರಳವಾಗಿ ಓದಿಕೊಂಡು ಹೋಗುವಂತೆ ಮಾಡಲು ನಾವು ಯತ್ನಿಸಿದ್ದೇವೆ. ಪ್ರಸ್ತುತ ಪಠ್ಯವು ಕಂಠಪಾಠ ಪದ್ಧತಿಯನ್ನು ಪಕ್ಕಕ್ಕಿಡಲು ಕ್ರಿಯಾಶೀಲವಾಗಿರುವ ಪಠ್ಯಕ್ರಮವನ್ನು ಒಳಗೊಂಡಿದೆ. ಮಕ್ಕಳಿಗೆ ತಮ್ಮ ಅನುಭವಕ್ಕೆ ನಿಲುಕುವಂತೆ ಪಠ್ಯಗಳನ್ನು ನಿರೂಪಿಸಲಾಗಿದೆ. ವಿದ್ಯಾರ್ಥಿಗಳಿಗೆ ತೀರಾ ಹೊರೆ ಎಂದೆನ್ನಿಸಿದ ಇಸವಿಗಳ ಪಟ್ಟಿಗಳನ್ನು ಹಾಗೂ ಅನಗತ್ಯ ವಿವರಗಳನ್ನು ಈ ಪಠ್ಯದಲ್ಲಿ ಕೈಬಿಡಲಾಗಿದೆ. ಬದಲಿಗೆ, ಚರಿತ್ರೆಯ ಪ್ರಕ್ರಿಯೆಗಳನ್ನು, ಒಳನೋಟಗಳನ್ನು ವಿದ್ಯಾರ್ಥಿಗಳು ಗ್ರಹಿಸುವಂತೆ ಪಠ್ಯವನ್ನು ರೂಪಿಸಲಾಗಿದೆ. ಸಮಕಾಲೀನ ಸಂದರ್ಭಗಳನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ ಬಾಕ್ಸ್‌ಗಳಲ್ಲಿ ಹೆಚ್ಚಿನ ಮಾಹಿತಿಗಳನ್ನು ನೀಡಲಾಗಿದೆ. ಅವುಗಳು ಬೋಧಿಸುವವರ ಹಾಗೂ ವಿದ್ಯಾರ್ಥಿಗಳ ಅನುಭವದ ಭಾಗಗಳಾಗುವಂತೆ ಈ ಪಠ್ಯವನ್ನು ರೂಪಿಸಲಾಗಿದೆ. ವಿದ್ಯಾರ್ಥಿಗಳು ಪಠ್ಯಕ್ಕೆ ಮಾತ್ರ ಸೀಮಿತವಾಗದೆ ಹೆಚ್ಚಿನ ವಿಚಾರಗಳನ್ನು ಗ್ರಹಿಸಲು ಪೂರಕವಾಗುವಂತೆ ಚಟುವಟಿಕೆ ಮತ್ತು ಯೋಜನಾ ಕಾರ್ಯಗಳಿಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಪಠ್ಯವು ಜಾಗತಿಕ ಶೈಕ್ಷಣಿಕ ಮಟ್ಟವನ್ನು ಕಾಯ್ದುಕೊಳ್ಳಲು ನಮ್ಮ ಪಠ್ಯ ಪುಸ್ತಕ ರಚನಾ ಸಮಿತಿಯು ಶ್ರಮಿಸಿದೆ.

ಪ್ರಸ್ತುತ ಪಠ್ಯವನ್ನು ಯಶಸ್ವಿಯಾಗಿ ಹೊರತರಲು ಕಾರಣಕರ್ತರಾದ ನಮ್ಮ ಪಠ್ಯಪುಸ್ತಕ ರಚನಾಸಮಿತಿಗೆ ನಾನು ಋಣಿಯಾಗಿದ್ದೇನೆ. ಹಾಗೆಯೇ ಕಾಲಕಾಲಕ್ಕೆ ನಮಗೆ ಸಲಹೆ ಸೂಚನೆಗಳನ್ನು ನೀಡಿದ ಸಂಪಾದಕ ಮಂಡಳಿ, ಅನುವಾದಕರು ಹಾಗು ಮುಖ್ಯ ಸಲಹೆಗಾರರಿಗೆ ನಾನು ಆಭಾರಿಯಾಗಿದ್ದೇನೆ.

ಪಠ್ಯಪುಸ್ತಕ ಯೋಜನೆಯನ್ನು ಸಮರ್ಥವಾಗಿ ಹೊರತರಲು ಅವಿರತವಾಗಿ ಶ್ರಮಿಸಿದ ಈ ಯೋಜನೆಯ ಮುಖ್ಯ ಸಂಯೋಜಕರಾದ ಪ್ರೊ.ಜಿ.ಎಸ್. ಮುಡಂಬಡಿತ್ತಾಯ ಅವರಿಗೆ ಹಾಗೂ ಎಲ್ಲ ರೀತಿಯ ಸಹಕಾರ ನೀಡಿದ ಪಠ್ಯಪುಸ್ತಕ ಸಂಘದ ಅಧಿಕಾರಿಗಳಿಗೆ, ತಾಂತ್ರಿಕ ಸಹಾಯಕರಿಗೆ ನಾನು ಆಭಾರಿಯಾಗಿದ್ದೇನೆ. ಪ್ರಸ್ತುತ ಪಠ್ಯದ ಭಾಷಾ ಪರಿಶೀಲನೆಯನ್ನು ಬಹಳ ಪ್ರೀತಿಯಿಂದ ಮಾಡಿದ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದ ಡಾ.ಎಂ.ಉಷಾ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಡಾ. ವಿಜಯ್ ಪೂಣಚ್ಚ ತಂಬಂಡ
ಅಧ್ಯಕ್ಷರು, ಪಠ್ಯಪುಸ್ತಕ ರಚನಾಸಮಿತಿ

©KTBS Not to be republished

# ರಚನಾ ಸಮಿತಿ

**ಅಧ್ಯಕ್ಷರು**

**ಡಾ. ವಿಜಯ್ ಪೂಣಚ್ಚ ತಂಬಂಡ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ.

**ಸದಸ್ಯರು**

**ಡಾ. ಎಂ. ಶಶಿಧರ್,** ಸಹಪ್ರಾಧ್ಯಾಪಕರು ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಶ್ರೀ. ಎನ್. ಸತ್ಯಪ್ರಕಾಶ್,** ಸಹಶಿಕ್ಷಕರು, ವಿದ್ಯಾವರ್ಧಕ ಸಂಘ ಪ್ರೌಢಶಾಲೆ, ರಾಜಾಜಿನಗರ, ಒಂದನೇ ಬ್ಲಾಕ್, ಬೆಂಗಳೂರು – 10.

**ಶ್ರೀ. ಪಿ.ಎ. ಕುಮಾರ್,** ನಿವೃತ್ತ ಮುಖ್ಯಶಿಕ್ಷಕರು, ವಿಜಯ ಪ್ರೌಢಶಾಲೆ, ಜಯನಗರ 3ನೇ ಬ್ಲಾಕ್ ಬೆಂಗಳೂರು – 11.

**ಡಾ. ಲಕ್ಷ್ಮೀಪತಿ ಸಿ.ಜಿ,** ಸಹಪ್ರಾಧ್ಯಾಪಕರು, ಶ್ರೀಮತಿ ವಿ.ಹೆಚ್.ಡಿ. ಕೇಂದ್ರೀಯ ಗೃಹವಿಜ್ಞಾನ ಕಾಲೇಜು, ಶೇಷಾದ್ರಿ ರಸ್ತೆ, ಬೆಂಗಳೂರು

**ಶ್ರೀ. ಕೆ.ಆರ್. ಮಂಜುನಾಥ್,** ಪ್ರಾಂಶುಪಾಲರು, ಎಂ.ಇ.ಎಸ್ ಪದವಿ ಪೂರ್ವ ಕಾಲೇಜು, ಬಿ.ಟಿ.ಎಂ ಲೇಔಟ್, ಬೆಂಗಳೂರು–76

**ಶ್ರೀ. ಬಿ. ಹನುಮಂತರಾವ್,** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಕ್ಕಬಳ್ಳಾಪುರ.

**ಶ್ರೀ. ಜಿ.ಎನ್. ಕೆಂಪಯ್ಯ,** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ದಂಡಿನಶಿವರ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ.

**ಶ್ರೀ. ಎ.ಎಸ್ ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಕೇಂದ್ರ, ಬಸವೇಶ್ವರನಗರ, ಬೆಂಗಳೂರು–79

**ಶ್ರೀ. ಶೇಖ್ ಇರ್ಫಾನ್,** ಚಿತ್ರಕಲಾ ಶಿಕ್ಷಕರು, ಪೋಲೀಸ್ ಪಬ್ಲಿಕ್ ಶಾಲೆ, ಕೆ.ಎಸ್.ಆರ್‌ಪಿ ಕ್ಯಾಂಪಸ್, ಕೋರಮಂಗಲ, ಬೆಂಗಳೂರು.

**ಪರಿಶೀಲಕರು**

**ಡಾ. ರಾಜಾರಾಮ್ ಹೆಗಡೆ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ.

**ಪ್ರೊ. ಟಿ.ಡಿ. ದೇವೇಗೌಡ,** ಪ್ರಾಧ್ಯಾಪಕರು, ರಾಜಶಾಸ್ತ್ರವಿಭಾಗ, ಡೀನ್, (ಅಧ್ಯಯನ ಕೇಂದ್ರಗಳು) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

**ಡಾ. ರಂಗನಾಥ,** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸ್ನಾತಕೋತ್ತರ ಭೂಗೋಳ ಶಾಸ್ತ್ರ ವಿಭಾಗ, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು.

**ಡಾ. ಜೋಗನ್‌ಶಂಕರ್,** ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

**ಡಾ. ಎಸ್.ಆರ್. ಕೇಶವ,** ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಕೆ.ಆರ್. ಶ್ರೀಲಕ್ಷ್ಮೀ,** ಸಹಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಯನಗರ 6ನೇ ಬ್ಲಾಕ್, ಬೆಂ.–11

**ಸಂಪಾದಕೀಯ ಮಂಡಳಿ**

**ಡಾ. ಆರ್.ಎಲ್.ಎಂ. ಪಾಟೀಲ್,** ನಿವೃತ್ತ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಈಶ್ವರಪ್ಪ,** ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಶ್ರೀ. ರಾಮಪ್ರಸಾದ್,** (ಚರಿತ್ರೆ ವಿಭಾಗ) ಪ್ರಾಂಶುಪಾಲರು, ಶ್ರೀ ಎ.ಆರ್.ಎಸ್. ಪದವಿ ಪೂರ್ವ ಕಾಲೇಜು, ಹರಿಹರಪುರ, ಚಿಕ್ಕಮಗಳೂರು ಜಿಲ್ಲೆ.

**ಅನುವಾದಕರು**

**ಪ್ರೊ. ಎಸ್.ಎಸ್ ಆರಾಧ್ಯ,** ಪ್ರಾಧ್ಯಾಪಕರು, ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು.

**ಡಾ. ರಂಗನಾಥ,** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸ್ನಾತಕೋತ್ತರ ಭೂಗೋಳ ಶಾಸ್ತ್ರ ವಿಭಾಗ, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು.

**ಶ್ರೀ. ಬಿ. ಹನುಮಂತರಾವ್,** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಕ್ಕಬಳ್ಳಾಪುರ.

**ಶ್ರೀ. ಎ.ಎಸ್ ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಕೇಂದ್ರ, ಬಸವೇಶ್ವರನಗರ, ಬೆಂಗಳೂರು–79

**ಮುಖ್ಯ ಸಂಯೋಜಕರು**

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ,** ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ,ಬೆಂಗಳೂರು–85.

**ಮುಖ್ಯ ಸಲಹೆಗಾರರು**

**ಶ್ರೀ. ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–85.

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–85.

**ಕಾರ್ಯಕ್ರಮ ಸಂಯೋಜಕರು**

**ಶ್ರೀ. ಎ.ಟಿ. ರಂಗದಾಸಪ್ಪ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ (ರಿ.), ಬೆಂಗಳೂರು

©KTBS Not to be republished

## ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ, ಅರ್ಥಸಚಿವರೂ ಆಗಿರುವ ಶ್ರೀ ಸಿದ್ಧರಾಮಯ್ಯನವರು ತಮ್ಮ 2014–15 ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" – ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ 27 ಸಮಿತಿಗಳನ್ನು ರಚಿಸಿ ದಿನಾಂಕ: 24.11.2014 ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು 24.11.2014ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ 19.09.2015 ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು 2016–17 ರ ಬದಲು 2017–18ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (NCERT) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

© KTBS Not to be republished

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ 27 ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಮತ್ತು ಪರಿಷ್ಕೃತ ಪಾಠಗಳ ರಚನೆ ಮಾಡಿದ ತಜ್ಞರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**ಗೋಪಾಲಕೃಷ್ಣ ಹೆಚ್.ಎನ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು-85

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು-85

©KTBS Not to be republished

# ಪಠ್ಯಪುಸ್ತಕಗಳ ಪರಿಷ್ಕರಣ ಸಮಿತಿ

**ಸರ್ವಾಧ್ಯಕ್ಷರು**

**ಪ್ರೊ. ಬರಗೂರು ರಾಮಚಂದ್ರಪ್ಪ,** ಅಧ್ಯಕ್ಷರು, ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಅಧ್ಯಕ್ಷರು**

**ಡಾ. ಅಶ್ವತ್ಥ ನಾರಾಯಣ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ ಮೈಸೂರು.

**ಸದಸ್ಯರು**

**ಡಾ. ಅಶ್ವತ್ಥ ನಾರಾಯಣ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಜೆ. ಸೋಮಶೇಖರ್,** ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ.

**ಡಾ. ಎಚ್.ಡಿ. ಪ್ರಶಾಂತ್,** ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**ಪ್ರೊ. ಎಸ್.ಟಿ. ಬಾಗಲಕೋಟಿ,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪ್ರೊ. ಪಿ ಮಲ್ಲಪ್ಪ,** ನಿವೃತ್ತ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಜೆ.ಎಸ್.ಎಸ್. ಮಹಾವಿದ್ಯಾಲಯ, ಮೈಸೂರು.

**ಡಾ. ಬಿ. ಶೇಖರ್,** ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಶ್ರೀ ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು.

**ಶ್ರೀ ಈರಣ್ಣ. ಎಂ. ಅಂಬಿ,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ತಡಕೊಡು, ಧಾರವಾಡ ತಾ. ಮತ್ತು ಜಿಲ್ಲೆ.

**ಶ್ರೀ ಡಿ.ಎನ್. ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರಕಸಲಗೆರೆ, ಮಂಡ್ಯ ತಾ. ಮತ್ತು ಜಿಲ್ಲೆ.

**ಉನ್ನತ ಪರಿಶೀಲನಾ ಸಮಿತಿ**

**ಶ್ರೀ ಅಶೋಕ ಶೆಟ್ಟರ್,** ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಡಾ. ಎಂ.ಎಸ್. ತಳವಾರ್,** ನಿವೃತ್ತ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ದಶರಥ್ ನಾಯಕ್,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರಗಿ.

**ಡಾ. ಹಸೀನ್ ತಾಜ್,** ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಅನುವಾದಕರು**

**ಪ್ರೊ. ಎಸ್.ಟಿ. ಬಾಗಲಕೋಟಿ,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಶ್ರೀ ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು.

**ಸಲಹೆಗಾರರು**

**ಶ್ರೀ ಗೋಪಾಲಕೃಷ್ಣ ಹೆಚ್.ಎನ್** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಶ್ರೀ ಕೆ. ಜಿ. ರಂಗಯ್ಯ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು**

**ಡಾ. ಎಂ.ವಿ. ಕೃಷ್ಣಮೂರ್ತಿ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

©KTBS Not to be republished

# ಪರಿವಿಡಿ


| ಕ್ರಮ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 1. | ಆಧಾರಗಳು | 1 |
| 2. | ಭೌಗೋಳಿಕ ಲಕ್ಷಣಗಳು ಹಾಗೂ ಚರಿತ್ರೆ ಪೂರ್ವ ಭಾರತ | 6 |
| 3. | ಭಾರತದ ಪ್ರಾಚೀನ ನಾಗರಿಕತೆಗಳು | 12 |
| 4. | ಜಗತ್ತಿನ ಪ್ರಾಚೀನ ನಾಗರಿಕತೆಗಳು | 23 |
| 5. | ಗ್ರೀಕ್, ರೋಮನ್ ಹಾಗೂ ಅಮೆರಿಕದ ನಾಗರಿಕತೆ | 30 |
| 6. | ಜೈನ ಮತ್ತು ಬೌದ್ಧ ಧರ್ಮಗಳ ಉದಯ | 44 |
| | **ರಾಜ್ಯಶಾಸ್ತ್ರ** | |
| 1. | ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಮುಖ್ಯತೆ | 51 |
| 2. | ಸಾರ್ವಜನಿಕ ಆಡಳಿತ | 54 |
| | **ಸಮಾಜಶಾಸ್ತ್ರ** | |
| 1. | ಸಮಾಜಶಾಸ್ತ್ರ ಪರಿಚಯ | 66 |
| 2. | ಸಂಸ್ಕೃತಿ | 76 |
| | **ಭೂಗೋಳ ವಿಜ್ಞಾನ** | |
| 1. | ಭೂಮಿ–ನಮ್ಮ ಜೀವಂತ ಗ್ರಹ | 83 |
| 2. | ಶಿಲಾಗೋಳ | 90 |
| | **ಅರ್ಥಶಾಸ್ತ್ರ** | |
| 1. | ಅರ್ಥಶಾಸ್ತ್ರದ ಪರಿಚಯ | 106 |
| 2. | ಅರ್ಥವ್ಯವಸ್ಥೆಯ ಅರ್ಥ ಮತ್ತು ಪ್ರಕಾರಗಳು | 113 |
| | **ವ್ಯವಹಾರ ಅಧ್ಯಯನ** | |
| 1. | ವಾಣಿಜ್ಯ ಅಧ್ಯಯನದ ಘಟಕಗಳು | 122 |


©KTBS Not to be republished

# ಇತಿಹಾಸ

## ಅಧ್ಯಾಯ-1

## ಆಧಾರಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಇತಿಹಾಸದ ಅಧ್ಯಯನಕ್ಕೆ ಬೇಕಾಗುವ ಆಧಾರಗಳ ಬಗ್ಗೆ.*
- *ಆಧಾರದ ವಿಧಗಳು.*
- *ಪ್ರಾಕ್ತನ ಆಧಾರಗಳ ಅರ್ಥ, ಪ್ರಾಮುಖ್ಯತೆ.*
- *ಶಾಸನಗಳ ಬಗ್ಗೆ ಅರಿವು.*
- *ಮೌಖಿಕ ಆಧಾರಗಳು ಇತಿಹಾಸ ಅಧ್ಯಯನಕ್ಕೆ ಪೂರಕ.*

ಇತಿಹಾಸವು ಗತಿಸಿ ಹೋದ ಸಂಗತಿಗಳನ್ನು ಕ್ರಮಬದ್ಧವಾಗಿ ಹೇಳುವ ಶಾಸ್ತ್ರವಾಗಿದೆ. ಆಧಾರಗಳನ್ನು ಬಳಸಿಕೊಂಡು ಇತಿಹಾಸವನ್ನು ಬರೆಯಲಾಗುತ್ತದೆ. ಆದ್ದರಿಂದ 'ಆಧಾರವಿಲ್ಲದೆ ಇತಿಹಾಸವಿಲ್ಲ' ಎಂಬುದು ಇತಿಹಾಸದ ತಾತ್ವಿಕ ನೆಲೆಯಾಗಿದೆ. ಇತಿಹಾಸಕಾರ ಒಬ್ಬ ನ್ಯಾಯವಾದಿ ಇದ್ದಂತೆ. ನ್ಯಾಯವಾದಿಗಳು ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷಿ-ಪುರಾವೆಗಳನ್ನು ಸಂಗ್ರಹಿಸಿ ತಮ್ಮ ವಾದಗಳನ್ನು ಮಂಡಿಸುತ್ತಾರೆ. ಅದೇ ರೀತಿ ಇತಿಹಾಸಕಾರರು ಆಧಾರಗಳನ್ನು ಸಂಗ್ರಹಿಸಿ, ಅವುಗಳನ್ನು ವಿಮರ್ಶಿಸಿ, ವಿಶ್ಲೇಷಿಸಿ ಇತಿಹಾಸವನ್ನು ಬರೆಯುತ್ತಾರೆ. ಕೆಲವೊಮ್ಮೆ ನಿಖರ ಆಧಾರಗಳು ದೊರಕದಿದ್ದಾಗ ಲಭ್ಯವಿರುವ ಆಧಾರಗಳ ಮೇಲೆ ಊಹೆಗಳನ್ನೂ ಮಾಡಬೇಕಾಗುತ್ತದೆ. ಹೀಗಾಗಿ ಒಂದೇ ಘಟನೆಯನ್ನು ಬೇರೆ ಬೇರೆ ಇತಿಹಾಸಕಾರರು ಭಿನ್ನ ಭಿನ್ನ ದೃಷ್ಟಿಕೋನಗಳಲ್ಲಿ ಅರ್ಥೈಸುವುದುಂಟು.

**ಆಧಾರ ಎಂದರೇನು?** ಪ್ರಾಚೀನ ಕಾಲದಿಂದಲೂ ಮನುಷ್ಯರು ತಮ್ಮ ಬದುಕನ್ನು ಕಟ್ಟಿಕೊಳ್ಳಲು ವಿವಿಧ ಬಗೆಯ ಅನುಕೂಲಗಳನ್ನು ಮಾಡಿಕೊಂಡಿದ್ದರು. ಮಾನವ ಸಮಾಜಗಳು ತಮ್ಮ ಅನುಕೂಲಕ್ಕೆ ಬಳಸಿಕೊಂಡಿದ್ದ ವಸ್ತುಗಳು ಇಂದಿಗೂ ಉಳಿದುಕೊಂಡಿದ್ದರೆ ಅವುಗಳನ್ನು ಆಕರಗಳೆಂದು ಇತಿಹಾಸಕಾರರು ಪರಿಗಣಿಸುತ್ತಾರೆ. ಆದ್ದರಿಂದ ಹಿಂದಿನವರು ಬಳಸಿ ಬಿಟ್ಟುಹೋಗಿರುವ ವ್ಯವಸಾಯದ ಪರಿಕರಗಳು, ದೇವಾಲಯಗಳು ಮತ್ತು ಇತರ ಧಾರ್ಮಿಕ ಕಟ್ಟಡಗಳು, ಕೋಟೆಗಳು, ಶಾಸನಗಳು, ನಾಣ್ಯಗಳು, ಆಯುಧಗಳು ಮುಂತಾದವುಗಳನ್ನು ಇತಿಹಾಸದ ಆಕರಗಳೆಂದು ಪರಿಗಣಿಸಿ ಇತಿಹಾಸವನ್ನು ಬರೆಯಲು ಉಪಯೋಗಿಸಿಕೊಳ್ಳಲಾಗುತ್ತದೆ. ಹಾಗೆಯೇ ಲಿಖಿತ ಸ್ವರೂಪದ ದಾಖಲೆಗಳು ಮತ್ತು ಕೃತಿಗಳು ಇತಿಹಾಸ ರಚನೆಗೆ ಪ್ರಮುಖ ಅಂಶಗಳಾಗಿವೆ. ಇತಿಹಾಸ ರಚನೆಗೆ ಬೇಕಾಗುವ ಮೂಲ ಸಾಮಗ್ರಿಗಳೇ ಆಧಾರ. ಈ ಆಧಾರಗಳನ್ನು ಮುಖ್ಯವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು.

ಎ) ಸಾಹಿತ್ಯ ಆಧಾರಗಳು        ಬಿ) ಪುರಾತತ್ವ ಆಧಾರಗಳು

ಎ) **ಸಾಹಿತ್ಯ ಆಧಾರಗಳು :** ಸಾಹಿತ್ಯ ಆಧಾರಗಳಲ್ಲಿ ಎರಡು ವಿಧಗಳಿವೆ.

1. ಲಿಖಿತ ಸಾಹಿತ್ಯ        2. ಮೌಖಿಕ ಸಾಹಿತ್ಯ.

### 1. ಲಿಖಿತ ಸಾಹಿತ್ಯ

ಸಾಹಿತ್ಯ ಆಧಾರಗಳಲ್ಲಿ ಪ್ರಮುಖವಾದುದು ಲಿಖಿತ ಸಾಹಿತ್ಯ. ಸಾಹಿತ್ಯವು ವಿವರಣೆಗಳ ಮೂಲಕ ಸಮಕಾಲೀನ ಅಂದರೆ ಸಾಹಿತ್ಯ ರಚನೆಯ ಕಾಲದ ಐತಿಹಾಸಿಕ ಅಂಶಗಳನ್ನು ಕಣ್ಮುಂದೆ ತರಬಲ್ಲದು. ಸಾಹಿತ್ಯ

©KTBS Not to be republished

ಕೃತಿಯೊಂದು ಅದು ರಚನೆಯಾದ ಕಾಲದಲ್ಲಿ ಪ್ರಚಲಿತದಲ್ಲಿದ್ದ ಅನೇಕ ಸಂಗತಿಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಮಗೆ ಕಟ್ಟಿಕೊಡುತ್ತದೆ. ಸಾಹಿತ್ಯದಲ್ಲಿ ಎರಡು ಪ್ರಕಾರಗಳಿವೆ. ಅವುಗಳೆಂದರೆ ದೇಶೀಯ ಸಾಹಿತ್ಯ ಮತ್ತು ವಿದೇಶೀಯ ಸಾಹಿತ್ಯ.

**ದೇಶೀಯ ಸಾಹಿತ್ಯ :** ಭಾರತೀಯರಿಂದಲೇ ದೇಶೀಯ ಭಾಷೆಗಳಲ್ಲಿ ರಚನೆಯಾಗಿರುವ ಸಾಹಿತ್ಯವನ್ನು ದೇಶೀಯ ಸಾಹಿತ್ಯವೆಂದು ಕರೆಯಲಾಗುವುದು. ಸಂಸ್ಕೃತ, ಪ್ರಾಕೃತ, ಕನ್ನಡ, ತೆಲುಗು, ತಮಿಳು, ಹಿಂದಿ, ಮರಾಠಿ, ಕಾಶ್ಮೀರಿ, ಗುಜರಾತಿ, ಒರಿಯಾ ಹೀಗೆ ಇನ್ನೂ ಹಲವು ಭಾಷೆಗಳಲ್ಲಿ ರಚಿತವಾದುವುಗಳು ಆಕರಗಳಾಗಿ ಉಳಿದಿವೆ. ಕೌಟಿಲ್ಯನ 'ಅರ್ಥಶಾಸ್ತ್ರ', ಹಾಲ ರಾಜನ 'ಗಾಥಾಸಪ್ತಶತಿ', ವಿಶಾಖದತ್ತನ 'ಮುದ್ರಾರಾಕ್ಷಸ', ಕಲ್ಹಣನ 'ರಾಜತರಂಗಿಣಿ', ಬಾಣಭಟ್ಟನ 'ಹರ್ಷಚರಿತ', ಚಾಂದ್ ಬರ್ದಾಯಿಯ 'ಪೃಥ್ವಿರಾಜ ರಾಸೋ', ಪಂಪನ 'ವಿಕ್ರಮಾರ್ಜುನ ವಿಜಯ', ಸಂಗಂ ಸಾಹಿತ್ಯಗಳು ಮುಂತಾದ ಸಾಹಿತ್ಯ ಕೃತಿಗಳನ್ನು ದೇಶೀಯ ಸಾಹಿತ್ಯ ಕೃತಿಗಳಲ್ಲಿ ಹೆಸರಿಸಬಹುದು. ಇವುಗಳು ತಮ್ಮ ರಚನೆಯ ಕಾಲದಲ್ಲಿದ್ದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ, ಆಡಳಿತ ಮೊದಲಾದ ಸಂಗತಿಗಳ ಚಿತ್ರಣಗಳನ್ನು ಕಟ್ಟಿಕೊಡುತ್ತವೆ.

**ವಿದೇಶೀಯ ಸಾಹಿತ್ಯ :** ವಿದೇಶಗಳಿಂದ ಭಾರತಕ್ಕೆ ಬಂದ ಪ್ರವಾಸಿಗರು, ರಾಯಭಾರಿಗಳು, ವ್ಯಾಪಾರಿಗಳು, ಯಾತ್ರಾರ್ಥಿಗಳು, ಅಧಿಕಾರಿಗಳು, ಮಿಷನರಿಗಳು ಮೊದಲಾದವರು ಇಲ್ಲಿನ ತಮ್ಮ ಅನುಭವಗಳನ್ನು ಬರವಣಿಗೆಗಳ ರೂಪದಲ್ಲಿ ದಾಖಲಿಸಿದ್ದಾರೆ. ಅವುಗಳನ್ನು ವಿದೇಶೀಯ ಸಾಹಿತ್ಯವೆಂದು ಪರಿಗಣಿಸಲಾಗುವುದು. ಇವುಗಳಲ್ಲಿ ಮೆಗಸ್ತನೀಸನ 'ಇಂಡಿಕಾ', ಫಾಹಿಯಾನನ 'ಫೋ-ಕೋ-ಕಿ', ಹ್ಯುಯೆನ್ ತ್ಸಾಂಗನ 'ಸಿ-ಯು ಕಿ', ಟಾಲೆಮಿಯ 'ಜಿಯೋಗ್ರಾಫಿ', ಬರೌನಿಯ 'ತಾರೀಖ್-ಎ-ಫಿರೋಜ್ ಷಾಹಿ', ಫರಿಶ್ತಾನ 'ತಾರೀಖ್-ಎ-ಫರಿಶ್ತಾ', ಬಾಬರನ 'ತುಜ್-ಕಿ-ಬಾಬರಿ' ಮೊದಲಾದವುಗಳು ಪ್ರಮುಖವಾದುವುಗಳಾಗಿವೆ. ಇವುಗಳ ಹೊರತಾಗಿಯೂ ಇನ್ನೂ ಅನೇಕ ಗ್ರಂಥಗಳು ಈ ಸಾಲಿಗೆ ಸೇರುತ್ತವೆ. ಇವುಗಳಲ್ಲಿಯೂ ಆಯಾ ಕಾಲಘಟ್ಟದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ಆಡಳಿತ ಮೊದಲಾದ ಸಂಗತಿಗಳ ಚಿತ್ರಣಗಳನ್ನು ಗಮನಿಸಬಹುದು.

ದೇಶೀಯ ಸಾಹಿತ್ಯದಲ್ಲಿ ಅತಿಶಯೋಕ್ತಿ, ಉತ್ಪ್ರೇಕ್ಷೆ ಮತ್ತು ಸ್ವಾಮಿನಿಷ್ಠೆ ಅಂಶಗಳು ತೀವ್ರವಾಗಿದ್ದರೆ, ವಿದೇಶೀಯ ಸಾಹಿತ್ಯದಲ್ಲಿ ಸ್ಥಳೀಯ ಜ್ಞಾನದ ಕೊರತೆಯಿಂದ ತಪ್ಪುಗ್ರಹಿಕೆಗಳು ವ್ಯಕ್ತವಾಗಿರುತ್ತವೆ. ಇವು ಲಿಖಿತ ಸಾಹಿತ್ಯದ ನ್ಯೂನ್ಯತೆಗಳಾಗಿವೆ. ಈ ನ್ಯೂನ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಇತಿಹಾಸ ರಚನೆ ಮಾಡಬೇಕಾದ ಸವಾಲು ಇತಿಹಾಸಕಾರರ ಮುಂದಿರುತ್ತದೆ.

### 2. ಮೌಖಿಕ ಸಾಹಿತ್ಯ

ಮೌಖಿಕ ಸಾಹಿತ್ಯ ಎಂದರೆ ಒಬ್ಬರಿಂದ ಒಬ್ಬರಿಗೆ ಬಾಯಿಮಾತಿನ ಮೂಲಕ ಹರಿದು ಬಂದಿರುವ ಕಥೆ, ಲಾವಣಿ, ಐತಿಹ್ಯ, ಜಾನಪದ ಗೀತೆ ಮೊದಲಾದವುಗಳಾಗಿವೆ. ಅನಾದಿ ಕಾಲದಿಂದಲೂ ಮಾನವರು ತಮ್ಮ ಅನುಭವ ಹಾಗೂ ನೆನಪುಗಳನ್ನು ಹಾಡು, ಕಥೆ, ಲಾವಣಿ ರೂಪಗಳಲ್ಲಿ ಮೌಖಿಕವಾಗಿ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಿಕೊಂಡು ಬಂದಿದ್ದಾರೆ. ಜನಪದರು ಸ್ಥಳೀಯ ವೀರರ ಬಗೆಗೆ ಲಾವಣಿಗಳನ್ನು ಕಟ್ಟಿಹಾಡಿದ್ದಾರೆ. ಕುಮಾರರಾಮ, ಚಿತ್ರದುರ್ಗದ ನಾಯಕರು, ಕೆಂಪೇಗೌಡ, ಟಿಪ್ಪುಸುಲ್ತಾನ್, ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮ, ಸಿಂಧೂರ ಲಕ್ಷ್ಮಣ, ಮೆಡೋಸ್‌ಟೇಲರ್ ಮೊದಲಾದವರ ಬಗೆಗೆ ಲಾವಣಿಗಳನ್ನು ಕಟ್ಟಿ ಹಾಡಿದ್ದಾರೆ. ಐತಿಹ್ಯ ಎಂದರೆ ಸ್ಥಳಪುರಾಣಗಳು. ಪ್ರತಿಯೊಂದು ಊರಿಗೂ ಅದರದೇ ಆದ ಸ್ಥಳಪುರಾಣಗಳಿರುತ್ತವೆ. ಶ್ರವಣಬೆಳಗೊಳ, ಬೆಂಗಳೂರು, ಕೊಪ್ಪಳ, ಪಟ್ಟದಕಲ್ಲು, ಗೋಕರ್ಣ, ಮೈಸೂರು ಮೊದಲಾದ ಊರುಗಳ ಹೆಸರಿನ ಹಿಂದೆ ಹಲವು ಐತಿಹ್ಯಗಳಿವೆ. ಹಾಗೆಯೇ ಪ್ರತಿ ಹಳ್ಳಿ, ನಗರಗಳ ಹಿಂದೆ-ಯೂ ಐತಿಹ್ಯಗಳಿರುತ್ತವೆ.


©KTBS Not to be republished

## ಪುರಾತತ್ವ ಆಧಾರಗಳು

ಪುರಾತತ್ವ ಆಧಾರಗಳನ್ನು ನಾಲ್ಕು ವಿಧಗಳಲ್ಲಿ ವರ್ಗೀಕರಿಸಲಾಗಿದೆ.

1. ಶಾಸನಗಳು 2. ನಾಣ್ಯಗಳು 3. ಸ್ಮಾರಕಗಳು 4. ಇತರೆ ಅವಶೇಷಗಳು.

ಪುರಾತತ್ವ ಆಧಾರಗಳು ಭೂಮಿಯ ಮೇಲೆ ಮಾತ್ರವಲ್ಲ; ಭೂಗರ್ಭದಲ್ಲಿಯೂ ಹುದುಗಿವೆ. ಭೂಮಿಯ ಒಳಗಿರುವ ಅವಶೇಷಗಳನ್ನು ವೈಜ್ಞಾನಿಕ ವಿಧಾನಗಳನ್ನು ಬಳಸಿ ಅಗೆಯುವ ಮೂಲಕ ಹೊರ ತೆಗೆಯುತ್ತಾರೆ. ಇದನ್ನೇ ಉತ್ಖನನ ಎನ್ನುವರು. ಉತ್ಖನನದ ಫಲವಾಗಿಯೇ ಹರಪ್ಪ ನಾಗರಿಕತೆಯು ಬೆಳಕಿಗೆ ಬಂದಿತು. ಉತ್ಖನನದ ಸಂದರ್ಭದಲ್ಲಿ ಕಟ್ಟಡಗಳ ಅವಶೇಷ, ಶಾಸನ, ನಾಣ್ಯ, ಮಡಕೆ ಚೂರು, ಬಳೆ, ಮುದ್ರೆ, ಮಣಿ, ಎಲುಬು, ಲೋಹ ಮುಂತಾದವುಗಳು ದೊರೆತಿವೆ. ಇವುಗಳನ್ನು ವಿವಿಧ ವೈಜ್ಞಾನಿಕ ಮಾರ್ಗಗಳನ್ನು ಬಳಸಿಕೊಂಡು ವಿಶ್ಲೇಷಿಸುತ್ತಾರೆ.



ಹಲ್ಮಿಡಿ ಶಾಸನ

**ಶಾಸನಗಳು:** ಶಾಸನ ಎಂದರೆ ಕೊರೆಯಲ್ಪಟ್ಟಿರುವ ಎಂದರ್ಥ. ಕಲ್ಲು, ಬಂಡೆ, ಲೋಹ, ದಂತ, ಸುಟ್ಟ ಮಣ್ಣಿನ ಹಲಗೆ ಮೊದಲಾದ ದೀರ್ಘಕಾಲ ಬಾಳಿಕೆ ಬರುವ ವಸ್ತುಗಳ ಮೇಲೆ ಶಾಸನಗಳನ್ನು ಬರೆಯಲಾಗುತ್ತಿತ್ತು. ಅಂದಿನ ಘಟನೆಗಳ ಜೊತೆಗೆ ನೇರ ಸಂಬಂಧಗಳನ್ನು ಹೊಂದಿರುವುದರಿಂದ ಶಾಸನಗಳು ಹೆಚ್ಚು ವಿಶ್ವಾಸಾರ್ಹ ಆಧಾರಗಳಾಗಿವೆ. ಅಶೋಕನ ಶಾಸನಗಳೇ ಭಾರತದಲ್ಲಿ ಕಂಡುಬರುವ ಆರಂಭಿಕ ಶಾಸನಗಳಾಗಿವೆ. ಅಶೋಕನ ಬಹುತೇಕ ಶಾಸನಗಳು ಬ್ರಾಹ್ಮಿ ಲಿಪಿಯಲ್ಲಿವೆ. ಅವುಗಳ ಭಾಷೆ ಪ್ರಾಕೃತವಾಗಿದೆ. ಕನ್ನಡ, ತಮಿಳು, ತೆಲುಗು, ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿ ಸಾವಿರಾರು ಶಾಸನಗಳು ಕಂಡುಬರುತ್ತವೆ. ಸಮುದ್ರಗುಪ್ತನ ಅಲಹಾಬಾದ್ ಸ್ತಂಭಶಾಸನ, ಇಮ್ಮಡಿ ಪುಲಿಕೇಶಿಯ ಐಹೊಳೆ ಶಾಸನ, ಖಾರವೇಲನ ಹಾಥಿಗುಂಪ ಶಾಸನ ಮೊದಲಾದವುಗಳು ಅವರ ಸೈನಿಕ ಸಾಧನೆಗಳನ್ನು ವಿವರಿಸುತ್ತವೆ. ಉತ್ತರಮೇರೂರಿನ ಶಾಸನ ಚೋಳರ ಗ್ರಾಮಾಡಳಿತವನ್ನು ತಿಳಿಸುತ್ತದೆ. ಇವಲ್ಲದೆ ಅನೇಕ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಸಂಗತಿಗಳನ್ನು ಶಾಸನಗಳು ತಿಳಿಸುತ್ತವೆ.



ನಾಣ್ಯಗಳು

**ನಾಣ್ಯಗಳು:** ನಾಣ್ಯಗಳು ಆಕಾರದಲ್ಲಿ ಚಿಕ್ಕದಾಗಿದ್ದರೂ ಹಲವು ಮಹತ್ವದ ಸಂಗತಿಗಳನ್ನು ಒಳಗೊಂಡಿರುತ್ತವೆ. ಇವುಗಳನ್ನು ಹೊರಡಿಸಿದ ರಾಜನ ಅಧೀನದಲ್ಲಿರುವ ಪ್ರದೇಶದ ವ್ಯಾಪ್ತಿ, ಆಡಳಿತ ಭಾಷೆ, ರಾಜನ ಬಿರುದು ಮತ್ತು ಸಾಧನೆ, ರಾಜನ ಮತ–ಧರ್ಮ, ರಾಜ್ಯದ ಆರ್ಥಿಕ ಸ್ಥಿತಿ, ಲೋಹ ತಂತ್ರಜ್ಞಾನ ಮೊದಲಾದ ವಿಚಾರಗಳನ್ನು ಅರಿಯುವಲ್ಲಿ ನಾಣ್ಯಗಳ ಪಾತ್ರ ಮಹತ್ವವಾದುದು. ಸಮುದ್ರಗುಪ್ತನು ಏಳು ಪ್ರಕಾರದ ಚಿನ್ನದ ನಾಣ್ಯಗಳನ್ನು ಹೊರಡಿಸಿದ್ದನು. ಅವುಗಳ ಮೇಲಿರುವ ಚಿತ್ರಗಳ ಆಧಾರದ ಮೇಲೆ ಸಮುದ್ರಗುಪ್ತನು ಸಂಗೀತ ಪ್ರಿಯನಾಗಿದ್ದನು ಮತ್ತು ಅಶ್ವಮೇಧ ಯಾಗ ನಡೆಸಿದನೆಂದು ಹೇಳಲಾಗುವುದು. ಗೌತಮಿಪುತ್ರ ಶಾತಕರ್ಣಿಯು ನಹಪಾಣನ ನಾಣ್ಯಗಳ ಮೇಲಿದ್ದ ಅವನ ಹೆಸರನ್ನು ಅಳಿಸಿಹಾಕಿ ತನ್ನ

©KTBS Not to be republished

ಹೆಸರನ್ನು ಟಂಕಿಸಿದ್ದಾನೆ. ಇದರಿಂದ ಶಾತಕರ್ಣಿಯು ನಹಪಾಣನನ್ನು ಸೋಲಿಸಿದ್ದನೆಂಬುದಕ್ಕೆ ಪುಷ್ಟಿ ದೊರೆತಂತಾಗಿದೆ. ಬೆಂಗಳೂರಿನಲ್ಲಿ ರೋಮನ್ ನಾಣ್ಯಗಳು ದೊರಕಿರುವುದನ್ನು ಗಮನಿಸಿದರೆ, ಈ ಪ್ರದೇಶ 2000 ವರ್ಷಗಳ ಹಿಂದೆಯೇ ರೋಮ್ ಜೊತೆಗೆ ವ್ಯಾಪಾರ ಸಂಪರ್ಕ ಹೊಂದಿತ್ತೆಂದು ತಿಳಿಯುತ್ತದೆ.

**ಸ್ಮಾರಕಗಳು:** ಸ್ಮಾರಕಗಳು ಚರಿತ್ರೆಯನ್ನು ಬರೆಯಲು ಪ್ರಮುಖ ಸಾಕ್ಷಿಗಳಾಗಿವೆ. ಅರಮನೆಗಳು, ದೇವಾಲಯಗಳು, ಕೋಟೆ–ಕೊತ್ತಲಗಳು, ಸ್ತಂಭಗಳು ಮುಂತಾದವುಗಳೆಲ್ಲವೂ ಸ್ಮಾರಕಗಳೆ. ಮೆಹರೂಲಿಯ ಉಕ್ಕಿನ ಸ್ತಂಭ ಮತ್ತು ವಿಜಯಪುರದ ಗೋಲಗುಮ್ಮಟದ ಪಿಸುಮಾತಿನ ಮೊಗಸಾಲೆಗಳು ಆ ಕಾಲಘಟ್ಟದ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಬುದ್ಧತೆಗೆ ಸಾಕ್ಷಿಯಾಗಿವೆ. ತಾಜ್‌ಮಹಲ್ ಷಹಜಹಾನನ ಪ್ರೇಮಕಥನವನ್ನು ಹೇಳುತ್ತದೆ. ಚಿತ್ತೋಡಘಡದ ವಿಜಯಸ್ತಂಭವು ರಾಣಕುಂಭನ ವಿಜಯವನ್ನು ಸಾರುತ್ತದೆ. ಅಜಂತ, ಎಲ್ಲೋರ, ಎಲಿಫೆಂಟಾ ಗುಹೆಗಳ ಭಿತ್ತಿಚಿತ್ರಗಳು, ಉಬ್ಬುಶಿಲ್ಪಗಳು ಮುಂತಾದುವುಗಳು ಅಂದಿನ ಕಾಲದ ಕಲಾನೈಪುಣ್ಯತೆ ಮತ್ತು ತಾಂತ್ರಿಕ ಕೌಶಲ್ಯತೆಗೆ ಸಾಕ್ಷಿಯಾಗಿವೆ. ಕರ್ನಾಟಕದ ಐಹೊಳೆ ಮತ್ತು ಪಟ್ಟದಕಲ್ಲಿನ ದೇವಾಲಯಗಳು ಭಾರತೀಯ ದೇವಾಲಯಗಳ ವಾಸ್ತುಶಿಲ್ಪದ ವಿಕಸನ ಕ್ರಮವನ್ನು ಪರಿಚಯಿಸುತ್ತವೆ. ನಳಂದದಲ್ಲಿರುವ ಸ್ಮಾರಕಗಳು ಮತ್ತು ಬೀದರ್‌ನಲ್ಲಿ ಗವಾನ್ ಕಟ್ಟಿಸಿದ ಮದರಸ ವಾಸ್ತುಶಿಲ್ಪಗಳು ಅಂದಿನ ಕಾಲದ ಶೈಕ್ಷಣಿಕ ಮಹತ್ವವನ್ನು ಸಾರುತ್ತವೆ. ಶ್ರೀರಂಗಪಟ್ಟಣದ ಕೋಟೆಯು ರಕ್ಷಣಾ ತಂತ್ರಜ್ಞಾನದ ಕೌಶಲ್ಯವನ್ನು ತೋರ್ಪಡಿಸುತ್ತದೆ. ಹೀಗೆ ಸ್ಮಾರಕಗಳು ಅಂದಿನ ಕಾಲಘಟ್ಟದ ಧಾರ್ಮಿಕತೆ, ತಾಂತ್ರಿಕತೆ, ವೈಜ್ಞಾನಿಕತೆ, ಸೃಜನಶೀಲತೆ ಮೊದಲಾದ ಆಯಾಮಗಳ ಮೇಲೆ ಬೆಳಕು ಚೆಲ್ಲುತ್ತವೆ.

**ಇತರೆ ಅವಶೇಷಗಳು:** ಉತ್ಖನನದ ಸಂದರ್ಭದಲ್ಲಿ ದೊರೆತ ಮಡಕೆಚೂರು, ಮಣಿ, ಮುದ್ರೆ, ಲೋಹದ ತುಣುಕು ಮೊದಲಾದ ಅವಶೇಷಗಳ ಸಹಾಯದಿಂದ ಅಂದಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಜನಜೀವನ ಮಾತ್ರವಲ್ಲ; ವ್ಯಾಪಾರ ವ್ಯವಹಾರ, ಆಹಾರ ಪದ್ಧತಿ ಮೊದಲಾದವುಗಳನ್ನು ಅರ್ಥಮಾಡಿಕೊಳ್ಳಬಹುದು. ಉತ್ಖನನದಲ್ಲಿ ದೊರೆತ ಜೈವಿಕ ಸತ್ತಪ್ರಾಣಿ, ಪಕ್ಷಿ ಮತ್ತು ಮರಗಿಡಗಳ ಅವಶೇಷಗಳನ್ನು ಇಂಗಾಲ–14ರ ವಿಧಾನಕ್ಕೆ ಒಳಪಡಿಸುವ ಮೂಲಕ ಅವುಗಳ ಕಾಲವನ್ನು ನಿಷ್ಕರ್ಷೆ ಮಾಡುತ್ತಾರೆ. ಉತ್ಖನನದಿಂದ ಕಲಬುರಗಿ ಜಿಲ್ಲೆಯ ಸನ್ನತಿ ಮತ್ತು ದೊಡ್ಡಬಳ್ಳಾಪುರ ಸಮೀಪ ರಾಜಘಟ್ಟದಲ್ಲಿ ಬೌದ್ಧ ಸ್ತೂಪಗಳು ಬೆಳಕಿಗೆ ಬಂದವು. ತಮಿಳುನಾಡಿನ ಅರಿಕಮೇಡು ಮತ್ತು ಪಟ್ಟಣಂ ಎಂಬಲ್ಲಿ ನಡೆದ ಉತ್ಖನನದಿಂದ ರೋಮ್ ಮತ್ತು ದಕ್ಷಿಣ ಭಾರತದ ನಡುವಿನ ವ್ಯಾಪಾರ ಸಂಬಂಧಗಳ ಬಗೆಗೆ ವಿಪುಲ ಸಾಕ್ಷಿಗಳು ದೊರೆತಿವೆ. ಹೀಗೆ ಉತ್ಖನನದ ಅವಶೇಷಗಳು ಕಾಲಾನಂತರದಲ್ಲಿ ಅದೃಶ್ಯಗೊಂಡ ಸಂಗತಿಗಳನ್ನು ತಿಳಿಸಿಕೊಡುತ್ತವೆ.

**ನಿಮಗಿದು ತಿಳಿದಿರಲಿ.**

*ಸಿ–14 (Radio active carbon ಅಥವಾ ವಿಕೀರಣಶೀಲ ಇಂಗಾಲ) – ಇದು ಕಾಲ ನಿಷ್ಕರ್ಷೆಯ ಒಂದು ವೈಜ್ಞಾನಿಕ ವಿಧಾನವಾಗಿದೆ. ಈ ವಿಧಾನಕ್ಕೆ ಒಳಪಡಿಸುವ ಅವಶೇಷಗಳು ಜೈವಿಕ (ಮರ, ಗಿಡ, ಪ್ರಾಣಿ, ಪಕ್ಷಿ ಇತ್ಯಾದಿಗಳ) ಪಳೆಯುಳಿಕೆಗಳಾಗಿರಬೇಕು. ಪ್ರತಿಯೊಂದು ಜೀವಿಯಲ್ಲಿಯೂ ಇಂಗಾಲ–12 ಮತ್ತು ಇಂಗಾಲ–14 ಸಮ ಪ್ರಮಾಣದಲ್ಲಿ ಇರುತ್ತವೆ. ಜೀವಿಯು ಸತ್ತನಂತರವೂ ಇಂಗಾಲ–12 ಅದೇ ಪ್ರಮಾಣದಲ್ಲಿ ಇದ್ದರೆ, ಇಂಗಾಲ–14 ಕ್ರಮೇಣ ಕ್ಷೀಣಿಸುತ್ತಿರುತ್ತದೆ. ಇದು 5700 ವರ್ಷಗಳಿಗೆ ತನ್ನ ಅರ್ಧ ಪ್ರಮಾಣದಷ್ಟು ಕ್ಷೀಣವಾಗುತ್ತದೆ. ಇಂಗಾಲ–12 ಮತ್ತು 14ರ ನಡುವಿನ ವ್ಯತ್ಯಾಸದ ಪ್ರಮಾಣವನ್ನು ಪ್ರಯೋಗಗಳ ಮೂಲಕ ಗುರುತಿಸಿದರೆ ಪಳೆಯುಳಿಕೆಯು ಎಷ್ಟು ವರ್ಷಗಳ ಹಳೆಯದೆಂದು ಲೆಕ್ಕಾಚಾರಮಾಡಬಹುದು. ಈ ವಿಧಾನದ ಮೂಲಕ 10,000 ವರ್ಷಗಳ ಹಿಂದಿನವರೆಗಿನ ಪಳೆಯುಳಿಕೆಗಳ ಕಾಲವನ್ನು ಗುರುತಿಸಬಹುದು.*

©KTBS Not to be republished

# ಅಭ್ಯಾಸಗಳು

**I. ಕೆಳಗಿನ ಪ್ರಶ್ನೆಗಳಿಗೆ ಸಹಪಾಠಿಗಳೊಂದಿಗೆ ಚರ್ಚಿಸಿ ಉತ್ತರಿಸಿ.**

1. ಇತಿಹಾಸಕಾರರು ಇತಿಹಾಸವನ್ನು ಹೇಗೆ ರಚಿಸುತ್ತಾರೆ?
2. ಆಧಾರ ಎಂದರೇನು? ಅವುಗಳಲ್ಲಿ ಎಷ್ಟು ವಿಧ?
3. ಯಾವುದಾದರು ಎರಡು ದೇಶೀಯ ಸಾಹಿತ್ಯ ಕೃತಿಗಳನ್ನು ಹೆಸರಿಸಿ.
4. ಯಾರಾದರು ಇಬ್ಬರು ವಿದೇಶಿ ಸಾಹಿತ್ಯ ರಚನೆಕಾರರನ್ನು ಹೆಸರಿಸಿ.
5. ಇತಿಹಾಸ ರಚನೆಗಿರುವ ಹೆಚ್ಚು ವಿಶ್ವಾಸಾರ್ಹ ಆಧಾರ ಯಾವುದು?
6. ಇತಿಹಾಸ ರಚನೆಯಲ್ಲಿ ನಾಣ್ಯಗಳ ಪ್ರಾಮುಖ್ಯತೆಯನ್ನು ತಿಳಿಸಿ.
7. ಸ್ಮಾರಕಗಳು ಹಿಂದಿನ ಕಾಲದ ಯಾವ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ?
8. ಜೈವಿಕ ಪಳೆಯುಳಿಕೆಗಳ ಕಾಲವನ್ನು ಯಾವ ವಿಧಾನದ ಮೂಲಕ ನಿಷ್ಕರ್ಷೆ ಮಾಡಬಹುದು?

**II. ಚಟುವಟಿಕೆಗಳು :**

1. ಶಿಕ್ಷಕರ ಮಾರ್ಗದರ್ಶನದಲ್ಲಿ ನಿಮ್ಮ ನಿಮ್ಮ ಊರಿನ ಐತಿಹ್ಯಗಳನ್ನು ಸಂಗ್ರಹಿಸಿ, ಕೈಬರಹದ ಪುಸ್ತಕ ಮಾಡಿ, ನಿಮ್ಮ ಶಾಲೆಯ ಗ್ರಂಥಾಲಯದಲ್ಲಿಡಿ.
2. ಪ್ರವಾಸ ಕೈಗೊಂಡು ಐತಿಹಾಸಿಕ ಸ್ಮಾರಕಗಳ ವಿಶೇಷತೆಗಳನ್ನು ಪಟ್ಟಿಮಾಡಿ.

**ನಿಮಗಿದು ತಿಳಿದಿರಲಿ**

***ಇತಿಹಾಸ ಭಾಗದ ಮುಂದಿನ ಪಾಠಗಳಲ್ಲಿ ಕ್ರಿ.ಪೂ. ಮತ್ತು ಕ್ರಿ.ಶ. ಇವುಗಳಿಗೆ ಬದಲಾಗಿ ಸಾ.ಶ.ಪೂ. (ಸಾಮಾನ್ಯ ಶಕ ಪೂರ್ವ) ಮತ್ತು ಸಾ.ಶ. (ಸಾಮಾನ್ಯ ಶಕ) ಎಂದು ಬಳಸಲಾಗಿದೆ.***

*****

©KTBS Not to be republished

## ಅಧ್ಯಾಯ – 2

# ಭೌಗೋಳಿಕ ಲಕ್ಷಣಗಳು ಹಾಗೂ ಚರಿತ್ರೆ ಪೂರ್ವ ಭಾರತ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**


- *ಭಾರತದ ಭೌಗೋಳಿಕ ಲಕ್ಷಣಗಳು.*
- *ಭಾರತವು ಒಂದು ಉಪಖಂಡ ಹಾಗೂ ಪರ್ಯಾಯ ದ್ವೀಪ.*
- *ಭಾರತದ ನೆರೆಯ ರಾಷ್ಟ್ರಗಳು.*
- *ಚರಿತ್ರೆಯ ಪೂರ್ವಕಾಲ ಘಟ್ಟದಲ್ಲಿನ ಮಾನವನ ಜೀವನ ಕ್ರಮ.*
- *ಚರಿತ್ರೆ ಪೂರ್ವಕಾಲ ಘಟ್ಟದಲ್ಲಿನ ಶಿಲಾಯುಗಗಳು.*

ಜಗತ್ತಿನ ಪ್ರತಿಯೊಂದು ರಾಷ್ಟ್ರ ಹಾಗೂ ಜನಸಮುದಾಯಗಳ ಮೇಲೆ ಅಲ್ಲಿನ ಭೌಗೋಳಿಕ ಪರಿಸರವು ಪ್ರಭಾವ ಬೀರಿವೆ. ಮಾನವನ ಜೀವನಕ್ಕೂ ಅವನ ಪರಿಸರಕ್ಕೂ ನಿಕಟ ಸಂಬಂಧವಿದೆ. ಆದ್ದರಿಂದ ಮನುಷ್ಯನ ಚರಿತ್ರೆ ತಿಳಿಯಲು ಭೌಗೋಳಿಕ ಪರಿಸರದ ಅರಿವು ಅತ್ಯವಶ್ಯಕವಾಗಿದೆ. ಏಷ್ಯಾ ಖಂಡದ ದಕ್ಷಿಣ ಭಾಗದಲ್ಲಿ ವಿಶಾಲ ಪ್ರದೇಶವನ್ನು ಹೊಂದಿರುವ ಭಾರತವು ಒಂದು ಉಪಖಂಡ. ಮೂರುಕಡೆ ನೀರಿನಿಂದಲೂ ಮತ್ತು ಒಂದು ಕಡೆ ಭೂಭಾಗದಿಂದಲೂ ಆವೃತವಾಗಿರುವುದರಿಂದ ಇದೊಂದು ಪರ್ಯಾಯ ದ್ವೀಪವಾಗಿದೆ. ಭಾರತ ಇಂದು ಪಾಕಿಸ್ತಾನ, ಆಫ್ಘಾನಿಸ್ಥಾನ, ಚೀನಾ, ನೇಪಾಳ, ಭೂತಾನ್, ಬಾಂಗ್ಲ ಮತ್ತು ಮಯನ್ಮಾರ್‌ಗಳೊಂದಿಗೆ ತನ್ನ 15,200 ಕಿ.ಮೀ. ಉದ್ದದ ಭೂಗಡಿಯನ್ನು ಹೊಂದಿದೆ. 29 ರಾಜ್ಯಗಳು ಹಾಗೂ 6 ಕೇಂದ್ರಾಡಳಿತ ಪ್ರದೇಶಗಳು ಮತ್ತು ಒಂದು ರಾಷ್ಟ್ರ ರಾಜಧಾನಿ (ದೆಹಲಿ) ಪ್ರದೇಶ ಇದರ ವ್ಯಾಪ್ತಿಯಲ್ಲಿವೆ.

ಭಾರತದ ಭೂ ರಚನೆಯು ಉತ್ತರದಲ್ಲಿ ಹಿಮಾಲಯದ ಪರ್ವತಶ್ರೇಣಿಗಳನ್ನು, ಸಮತಟ್ಟಾದ ಸಿಂಧೂ, ಗಂಗಾ ಬಯಲು ಪ್ರದೇಶವನ್ನು, ದಕ್ಷಿಣದ ದಖನ್ ಪ್ರಸ್ಥಭೂಮಿಯನ್ನು ಹಾಗೂ ಕರಾವಳಿ ತೀರ ಪ್ರದೇಶವನ್ನು ಹೊಂದಿದೆ. ಉತ್ತರದ ಹಿಮಾಲಯ ಪರ್ವತ ಶ್ರೇಣಿಯು ಜಗತ್ತಿನಲ್ಲೇ ಅತ್ಯಂತ ಎತ್ತರವಾದ ಶಿಖರಗಳನ್ನು ಒಳಗೊಂಡಿದೆ. ಭಾರತದ ಸುರಕ್ಷತೆಯನ್ನು ಹಾಗೂ ಭದ್ರತೆಯನ್ನು ಇವು ಕಾಯ್ದಿರಿಸಲು ಸಹಾಯಕವಾಗಿವೆ. ಪ್ರಾಚೀನ ಭಾರತದ ಮೇಲೆ ಉತ್ತರದ ಹಿಮಾಲಯದ ಮೂಲಕ ಆದ ಅತಿಕ್ರಮಣಗಳು ವಿರಳ. ವಾಯವ್ಯ ಭಾರತದಲ್ಲಿನ ಬೊಲಾನ್ ಮತ್ತು ಖೈಬರ್ ಕಣಿವೆಮಾರ್ಗಗಳ ಮೂಲಕವೇ ದಾಳಿಗಳು ಸಂಭವಿಸಿವೆ ಎನ್ನಬಹುದು. ಸಮತಟ್ಟಾದ ಸಿಂಧೂ ಗಂಗಾ ಬಯಲು ಸೀಮೆಗಳು ಅತ್ಯಂತ ಫಲವತ್ತಾದ ಪ್ರದೇಶಗಳು. ಪ್ರಾಚೀನ ನಾಗರಿಕತೆಗಳಾದ ಸಿಂಧೂ ಮತ್ತು ವೇದಕಾಲದ ನಾಗರಿಕತೆಗಳು ಇಲ್ಲಿಯೇ ಮೂಡಿಬಂದಿವೆ. ಕಾಲದಿಂದ ಕಾಲಕ್ಕೆ ಈ ಫಲವತ್ತಾದ ಪ್ರದೇಶದ ಮೇಲೆ ಹಿಡಿತ ಸಾಧಿಸಲು ಅನೇಕ ಕದನಗಳು ನಡೆದಿವೆ. ಸಾಮಾನ್ಯವಾಗಿ ಯಾರು ಗಂಗಾನದಿಯ ಫಲವತ್ತಾದ ಪ್ರದೇಶದ ಮೇಲೆ ನಿಯಂತ್ರಣವನ್ನು ಹೊಂದಿದ್ದರೋ ಆ ರಾಜಮನೆತನಗಳವರೇ ಚಕ್ರಾಧಿಪತಿಗಳೂ ಆಗಿದ್ದರು.

ನರ್ಮದಾ ನದಿಯು ಭಾರತವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದೆ–ಉತ್ತರದ ಎತ್ತರ ಪ್ರದೇಶ ಅಥವಾ ಮಾಳ್ವ ಪ್ರಸ್ಥಭೂಮಿ ಹಾಗೂ ದಖನ್ ಪ್ರಸ್ಥಭೂಮಿ. ಮೌರ್ಯರು ಹಾಗೂ ಗುಪ್ತರು ಪ್ರಾಚೀನ ಭಾರತದ ಸನ್ನಿವೇಶದಲ್ಲಿ ಭಾರತದ ಈ ಎರಡು ಭಾಗಗಳನ್ನು ಆಳಿದರು. ಉತ್ತರ ಹಾಗೂ ದಕ್ಷಿಣ ಭಾರತವೆಂಬ ವಿಭಜನೆಯು ಸಾಂಸ್ಕೃತಿಕ ಪ್ರಭೇದಗಳಿಗೂ ಕಾರಣವಾಗಿದೆ. ಭಾರತ ಕರಾವಳಿಯು ಸುದೀರ್ಘವಾಗಿದ್ದು 6100 ಕಿ.ಮೀ.ಗಳವರೆಗೆ ಹಬ್ಬಿಕೊಂಡಿದೆ. ಪೂರ್ವ ಕರಾವಳಿಯು ಕೋರಮಂಡಲದ ತೀರವೆಂದು ಕರೆಸಿಕೊಂಡಿದೆ.

©KTBS Not to be republished





©KTBS Not to be republished

ಪಶ್ಚಿಮದ ಕರಾವಳಿಯನ್ನು ಕೊಂಕಣ ಮತ್ತು ಮಲಬಾರ್ ತೀರವೆಂದು ಕರೆದಿದ್ದಾರೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಇಲ್ಲಿರುವ ಹತ್ತಾರು ರೇವುಪಟ್ಟಣಗಳು ರೋಮನ್ನರನ್ನು ಆಕರ್ಷಿಸಿದ್ದವು. ಆ ಕಾಲದ ವಿದೇಶಿ ವ್ಯಾಪಾರವು ಸಾಮಾನ್ಯವಾಗಿ ಸಮುದ್ರದ ಮೂಲಕವೇ ಸಾಗಿತ್ತು. ಈ ಕಾರಣಕ್ಕಾಗಿಯೇ ರೇವುಪಟ್ಟಣಗಳ ಅಭಿವೃದ್ಧಿಯು ಸಾಧ್ಯವಾಗಿ ದಕ್ಷಿಣದಲ್ಲಿ ಪ್ರಬಲ ರಾಜ್ಯಗಳಾದ ಪಾಂಡ್ಯ, ಚೇರ ಹಾಗೂ ಚೋಳರ ರಾಜ್ಯಗಳ ಉದಯಕ್ಕೆ ಕಾರಣವಾಯಿತು.

ವೈವಿಧ್ಯತೆಯಿಂದ ಕೂಡಿದ ಭಾರತೀಯ ಭೌಗೋಳಿಕ ಪರಿಸರವು ಇಲ್ಲಿ ಬದುಕಿಬಾಳಿದ ಜನಾಂಗಗಳ ಸಾಂಸ್ಕೃತಿಕ ಚರಿತ್ರೆಯನ್ನು ರೂಪಿಸಿಕೊಳ್ಳಲು ಬೇಕಾದ ಹಿನ್ನೆಲೆಯನ್ನು ಒದಗಿಸಿದೆ. ಜನಾಂಗೀಯ

ಅನನ್ಯತೆಗಳ ನಡುವೆ ಇಲ್ಲಿ ಭಾವನಾತ್ಮಕವಾಗಿ ಬೆಸೆದುಹೋದ ಸಂಸ್ಕೃತಿಯು ತನ್ನ ಎಲ್ಲಾ ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡಿದೆ. ವೈವಿಧ್ಯತೆಗಳಲ್ಲಿನ ಏಕತೆಯೇ ಇದರ ಜೀವಾಳ.




ಪ್ರಾಗೈತಿಹಾಸಿಕ ಕಾಲ ಅಥವಾ ಚರಿತ್ರೆಯ ಪೂರ್ವಕಾಲ – ಮಾನವರು ಲೇಖನ ಕಲೆಯನ್ನು ಕಂಡು ಹಿಡಿಯುವುದಕ್ಕೆ ಮೊದಲಿನ ಕಾಲವನ್ನು ಪ್ರಾಗೈತಿಹಾಸಿಕ ಕಾಲವೆನ್ನುತ್ತೇವೆ. ಈ ಕಾಲಘಟ್ಟದಲ್ಲಿ ಭಾಷೆಯ ಬೆಳವಣಿಗೆ ಹಾಗೂ ಲಿಪಿಯ ಬಳಕೆಯ ಬಗ್ಗೆ ನಮಗೆ ಆಧಾರಗಳು ಸಿಗದೆ ಇರುವುದರಿಂದ ಇದನ್ನು ಚರಿತ್ರೆಯ ಪೂರ್ವಕಾಲವೆಂದು ಕರೆಯುತ್ತೇವೆ. ಇಲ್ಲಿ ಮನುಷ್ಯರ ಯಾವುದೇ ಲಿಖಿತ ದಾಖಲೆಗಳು ಚರಿತ್ರೆಯ ಅಧ್ಯಯನಕ್ಕೆ ನಮಗೆ ದೊರಕುವುದಿಲ್ಲ. ಹಾಗಿದ್ದ ಮೇಲೆ ಇವರ ಬದುಕನ್ನು ನಾವು ತಿಳಿದದ್ದಾದರೂ ಹೇಗೆ? ಈ ಕಾಲಘಟ್ಟವನ್ನು ಅಧ್ಯಯನ ಮಾಡುವ ತಜ್ಞರಿಗೆ ನಾವು ಪ್ರಾಕ್ತನ ಅಥವಾ ಪ್ರಾಚ್ಯವಸ್ತು ಅಧ್ಯಯನಕಾರರೆಂದು ಕರೆಯುತ್ತೇವೆ. ಈ ಕಾಲದಲ್ಲಿ ಮನುಷ್ಯ ಅಲೆಮಾರಿಯಾಗಿ ಬದುಕುತ್ತಿದ್ದು, ಬೇಟೆ ಹಾಗೂ ಆಹಾರ ಸಂಗ್ರಹಣೆಯಲ್ಲಿ

© KTBS Not to be republished

ತೊಡಗಿದ್ದನು. ಪ್ರಾಚ್ಯವಸ್ತು ಅಧ್ಯಯನಕಾರರಿಗೆ ಈ ಕಾಲದಲ್ಲಿ ಜನರು ಆಹಾರ ಸಂಗ್ರಹಣೆಯಲ್ಲಿ ತೊಡಗಿದ್ದು, ಬೇಟೆಯಾಡಲು ತಯಾರಿಸಿದ್ದ ಹಾಗೂ ಬಳಸುತ್ತಿದ್ದ ಕೆಲವು ಪರಿಕರಗಳು ದೊರೆತಿವೆ. ಪ್ರಾಯಶಃ ಜನರು ಶಿಲೆ, ಕಟ್ಟಿಗೆ ಹಾಗೂ ಎಲುಬುಗಳಿಂದ ತಯಾರಿಸಿದ ಆಯುಧಗಳನ್ನು ಬಳಸುತ್ತಿದ್ದಿರಬಹುದು. ಇವುಗಳಲ್ಲಿ ನಮಗೆ ಶಿಲೆಯಲ್ಲಿ ತಯಾರಿಸಿದ ಪರಿಕರಗಳಷ್ಟೇ ಕಾಲಗಳನ್ನು ಭೇದಿಸಿ ಇವತ್ತಿಗೂ ಅಧ್ಯಯನದ ಆಧಾರಗಳಾಗಿ ಉಳಿದುಕೊಂಡಿವೆ. ಪ್ರಾಣಿಗಳ ಮಾಂಸ ಹಾಗೂ ಮೂಳೆಗಳನ್ನು ಕತ್ತರಿಸಲು, ಮರಗಳ ತೊಗಟೆಯನ್ನು ಮತ್ತು ಪ್ರಾಣಿಗಳ ಚರ್ಮವನ್ನು ಸುಲಿಯಲು, ಹಣ್ಣು ಹಾಗೂ ಬೇರುಗಳನ್ನು ಕತ್ತರಿಸಲು, ಗೆಡ್ಡೆ–ಗೆಣಸುಗಳನ್ನು ಪಡೆದುಕೊಳ್ಳಲು ಶಿಲಾಪರಿಕರಗಳನ್ನು ಬಳಸುತ್ತಿದ್ದರು. ಜನರು ಎಲುಬು ಮತ್ತು ಕಟ್ಟಿಗೆಗಳನ್ನು ಕೈಹಿಡಿಯಾಗಿ ಅಳವಡಿಸಿ ಅವುಗಳನ್ನು ಭರ್ಜಿ ಹಾಗೂ ಬಾಣವನ್ನಾಗಿಸಿಕೊಂಡು ಬೇಟೆಯಾಡುತ್ತಿದ್ದರು. ಮರವನ್ನು ಕಡಿದು ಸೌದೆಯಾಗಿ ಬಳಸಲು ಶಿಲೆಗಳನ್ನು ಕೊಡಲಿಯನ್ನಾಗಿ ಮಾಡಿಕೊಂಡರು. ಗುಡಿಸಲನ್ನು ಕಟ್ಟಲು ಮರವನ್ನು ಬಳಸಿರಬಹುದು. ಮರವನ್ನು ಕೆಲವೊಂದು ಆಯುಧಗಳ ಕೈಹಿಡಿಗಳಾಗಿ ರೂಪಿಸಿಕೊಂಡಿರಬಹುದು. ಚರಿತ್ರೆಯ ಪೂರ್ವಕಾಲವೆಂದರೆ ಇಂತಹದೊಂದು ಚಿತ್ರಣ ನಮ್ಮ ಕಣ್ಣ ಮುಂದೆ ಬರುತ್ತದೆ.

**ಇವರು ಬದುಕಿಗಾಗಿ ಯಾವೆಲ್ಲ ತಾಣಗಳನ್ನು ಬಳಸಿಕೊಂಡರು?**

ಬೇಟೆ ಮತ್ತು ಆಹಾರ ಸಂಗ್ರಹಣೆ ಮಾಡಿ ಬದುಕನ್ನು ಸಾಗಿಸುತ್ತಿದ್ದ ಮನುಷ್ಯರ ಕುರುಹುಗಳು ಭಾರತದಲ್ಲಿ ಬಿಂಬೇಟ್ಕ, ಹುಣಸಗಿ ಮತ್ತು ಕರ್ನೂಲ್‌ನ ಪ್ರದೇಶಗಳ ನೆಲೆಗಳಲ್ಲಿ ಲಭ್ಯವಾಗಿವೆ. ಬೇಟೆ ಮತ್ತು ಆಹಾರ ಸಂಗ್ರಹಣೆಯಲ್ಲಿ ತೊಡಗಿದ್ದ ಜನರ ಇನ್ನೂ ಬೇರೆ ಬೇರೆ ನೆಲೆಗಳೂ ಕೂಡ ಭಾರತದಲ್ಲಿ ಲಭ್ಯವಿವೆ. ಇಂತಹ ಬಹುತೇಕ ನೆಲೆಗಳು ನದಿಗಳು ಹಾಗೂ ಕೆರೆದಂಡೆಗಳಲ್ಲಿ ಕಂಡುಬಂದಿವೆ. ಇಷ್ಟೇ ಅಲ್ಲದೆ, ಈ ಕಾಲಘಟ್ಟದ ಮನುಷ್ಯನ ಅಳಿವು–ಉಳಿವಿಗೆ ಶಿಲೆಗಳ ಪರಿಕರಗಳು ಅನಿವಾರ್ಯವಾದ್ದರಿಂದ ತಮ್ಮ ಅಗತ್ಯಕ್ಕೆ ಸೂಕ್ತವಾದ ಕಲ್ಲುಗಳು ದೊರೆಯುವ ಸ್ಥಳಗಳನ್ನೇ ಅವರು ವಾಸಕ್ಕೆ ಆಯ್ಕೆ ಮಾಡಿಕೊಂಡರು. ಮನುಷ್ಯರು ಕಲ್ಲುಗಳನ್ನು ಬಳಸಿ ಪರಿಕರಗಳನ್ನು ತಯಾರಿಸಿದ ಇಂತಹ ಪ್ರದೇಶಗಳನ್ನು ಆರಂಭಿಕ ಕೈಗಾರಿಕೆಯ ನೆಲೆಗಳೆಂದು ಭಾವಿಸಲಾಗಿದೆ.

ಇಂತಹ ಕೈಗಾರಿಕೆಗಳ ನೆಲೆ ಎಲ್ಲಿವೆ ಎನ್ನುವುದನ್ನು ತಿಳಿಯುವುದಾದರು ಹೇಗೆ? ಸಾಮಾನ್ಯವಾಗಿ, ಕೆಲವೆಡೆ ಬಂಡೆಗಳು ಕಂಡುಬರುವ ಪ್ರದೇಶಗಳಲ್ಲಿ ಕೆಲವು ಕಲ್ಲಿನ ಪರಿಕರಗಳನ್ನು ನಾವು ಕಾಣಲು ಸಾಧ್ಯ. ಬಹುಶಃ ಪರಿಕರಗಳನ್ನು ರೂಪಿಸುವ ಸಂದರ್ಭಗಳಲ್ಲಿ ಕೆಲವೊಂದು ಕಲ್ಲಿನ ಪರಿಕರಗಳನ್ನು ಮನುಷ್ಯನು ತ್ಯಜಿಸಿರಬಹುದು. ಇಷ್ಟೇ ಅಲ್ಲದೆ ಹಾಗೆ ನಿರ್ಮಿಸುವ ಸಂದರ್ಭದಲ್ಲಿ ಮೂಡಿಬರುವ ಕಲ್ಲಿನ ಚಕ್ಕೆಗಳ ರಾಶಿಗಳು ನೆಲೆಗಳ ಸುತ್ತಲಿನ ಪ್ರದೇಶಗಳಲ್ಲಿ ಲಭ್ಯವಾಗಿವೆ. ಮಾನವನು ಇಂತಹ ಪ್ರದೇಶಗಳಲ್ಲಿ ಅನೇಕ ವರ್ಷಗಳು ನೆಲಸಿರಲೂ ಸಾಧ್ಯವಿದೆ. ಇಂತಹ ನೆಲೆಗಳಿಗೆ ವಾಸ ಹಾಗೂ ಕೈಗಾರಿಕೆಯ ನೆಲೆಗಳೆಂದು ಕರೆಯಲಾಗಿದೆ.

**ಬೆಂಕಿಯ ಬಗೆಗಿನ ತಿಳಿವು**

ಕರ್ನೂಲಿನ ಗವಿಗಳಲ್ಲಿ ಬೂದಿಯ ಕುರುಹುಗಳು ದೊರೆತಿವೆ. ಇದು ಬೆಂಕಿಯ ಬಗೆಗಿನ ಇವರ ಜ್ಞಾನವನ್ನು ಹಾಗೂ ಅದರ ಬಳಕೆಯನ್ನು ಸೂಚಿಸುತ್ತದೆ. ಬಹುಶಃ ಬೆಂಕಿಯನ್ನು ಆಹಾರ ಬೇಯಿಸಲು, ಬೆಳಕನ್ನು ಪಡೆಯಲು ಹಾಗೂ ಪ್ರಾಣಿಗಳನ್ನು ಬೆದರಿಸಲು ಇತ್ಯಾದಿ ಬೇರೆ ಬೇರೆ ಕಾರಣಗಳಿಗಾಗಿ ಬಳಸುತ್ತಿದ್ದಿರಬಹುದು.

**ಗುಹಾಲಯಗಳಲ್ಲಿ ಕಂಡು ಬರುವ ರೇಖಾಚಿತ್ರಗಳು**


ಶಿಲಾಯುಗದ ಮಾನವರು ವಾಸವಾಗಿದ್ದ ಹಲವು ಗುಹೆಗಳಲ್ಲಿ ನಾವು ಕೆಲವು ರೇಖಾ ಚಿತ್ರಗಳನ್ನೂ ಸಹ ಕಾಣಲು ಸಾಧ್ಯ. ಇವುಗಳನ್ನು ಅವರು ಗವಿಯ ಗೋಡೆ ಹಾಗೂ ಬಂಡೆಗಳ ಮೇಲೆ ಚಿತ್ರಿಸಿರುವುದನ್ನು ಇಂದಿಗೂ ನಾವು ಕಾಣಬಹುದು. ಇಂತಹ ಕೆಲವು ಚಿತ್ರಗಳನ್ನು ಮಧ್ಯಪ್ರದೇಶ, ಉತ್ತರಪ್ರದೇಶ ಹಾಗೂ ಕರ್ನಾಟಕದ ಕೆಲವು ಗವಿಗಳಲ್ಲಿ ಕಾಣುತ್ತೇವೆ. ಇವುಗಳಲ್ಲಿ ಕಾಡು ಮೃಗಗಳ ಹಾಗೂ ಬೇಟೆಯ ಚಿತ್ರಗಳಿದ್ದು ಅವು ಅತ್ಯಂತ ಸುಂದರವಾಗಿ ಮೂಡಿಬಂದಿವೆ.

©KTBS Not to be republished

## ಬದಲಾಗುತ್ತಿರುವ ಪರಿಸರ

ಸುಮಾರು 12,000 ವರ್ಷಗಳ ಹಿಂದೆ ಜಗತ್ತಿನ ಪರಿಸರದಲ್ಲಿ ಬದಲಾವಣೆಯು ಉಂಟಾಯಿತೆಂದು ಭಾವಿಸಲಾಗಿದೆ. ಈ ಸಂದರ್ಭದಲ್ಲಿ ಭೂ ಮಂಡಲದ ತಾಪಮಾನವು ಮತ್ತಷ್ಟು ಹೆಚ್ಚಿತು. ಹಲವೆಡೆ ಇದು ಹುಲ್ಲುಗಾವಲಿನ ಬೆಳವಣಿಗೆಗೆ ಕಾರಣವಾಯಿತು. ಪ್ರಾಣಿ ಪಕ್ಷಿಗಳು ಹಿಂದೆಂದೂ ಇಲ್ಲದ ಪ್ರಮಾಣದಲ್ಲಿ ಸಂತಾನಾಭಿವೃದ್ಧಿಯಲ್ಲಿ ತೊಡಗಿ ಅವುಗಳ ಸಂತತಿಯು ಹೆಚ್ಚಾಗತೊಡಗಿದವು. ಈ ಸಂಕುಲಗಳ ಜೊತೆಯಲ್ಲಿಯೇ ಜಿಂಕೆ, ಕಡವೆ, ಮೇಕೆ, ಕುರಿ ಹಾಗೂ ಇನ್ನಿತರ ಪ್ರಾಣಿಗಳು ಹುಲ್ಲುಗಾವಲು ಪ್ರದೇಶದಲ್ಲಿ ಸಮೃದ್ಧಿಯಿಂದ ಬೆಳೆಯಲು ಕಾರಣವಾಯಿತು. ಇವನ್ನೇ ಬೇಟೆಯಾಡುತ್ತಿದ್ದ ಮಾನವರು ಅವುಗಳ ಸ್ವಭಾವ, ಆಹಾರದ ರೀತಿ ಹಾಗೂ ಸಂತತಿ ವೃದ್ಧಿಯ ಬಗ್ಗೆ ತಿಳಿದುಕೊಂಡರು. ಕ್ರಮೇಣವಾಗಿ ಈ ಕೆಲಪ್ರಾಣಿಗಳನ್ನು ಹಿಡಿದು ತಂದು ಪೋಷಿಸತೊಡಗಿದರು. ಹೀಗೆ ಪಶುಸಂಗೋಪನೆ ಮತ್ತು ಹೈನುಗಾರಿಕೆಯು ಪ್ರಾರಂಭವಾಯಿತು. ಹೊಳೆ, ಕೆರೆಗಳಲ್ಲಿ ಮೀನು ಹಿಡಿಯುವುದನ್ನು ಈ ಜನರು ಕಲಿತಿದ್ದರು. ಇದೇ ಸಂದರ್ಭದಲ್ಲಿ ಹಲವು ದವಸ ಧಾನ್ಯಗಳನ್ನು ಬಿಡುವ ಸಸ್ಯಗಳೂ ಸ್ವಾಭಾವಿಕವಾಗಿಯೇ ಹುಟ್ಟಿಕೊಂಡಿದ್ದವು. ಇವುಗಳಿಂದ ದೊ–ರೆತ ಅಕ್ಕಿ, ಗೋಧಿ ಹಾಗೂ ಬಾರ್ಲಿಯಂತಹ ದವಸ–ಧಾನ್ಯಗಳನ್ನು ಇವನು ಆಹಾರಕ್ಕಾಗಿ ಬಳಸುವುದನ್ನು ತಿಳಿದುಕೊಂಡರು. ಕ್ರಮೇಣವಾಗಿ ಅವುಗಳನ್ನು ಬೆಳೆಯುವ ವಿಧಾನವನ್ನು ಕೂಡ ಕಂಡುಕೊಂಡರು.

ಮೇಲೆ ವಿವರಿಸಿದ ಕಾಲಘಟ್ಟವನ್ನು ಪ್ರಾಕ್ತನಶಾಸ್ತ್ರಜ್ಞರು ವಿವಿಧ ಹೆಸರಿನಿಂದ ಕರೆಯುತ್ತಾರೆ. ಇದರ ಅತ್ಯಂತ ಪೂರ್ವದ ಕಾಲಘಟ್ಟವನ್ನು ಹಳೆಯ ಶಿಲಾಯುಗವೆಂದು ಕರೆಯುವರು. ಹಳೆಯ ಶಿಲಾಯುಗದ ಕಾಲವು 2 ಮಿಲಿಯನ್ ವರ್ಷದಷ್ಟು ಹಳೆಯದು ಹಾಗೂ ಅದು ಸುಮಾರು 12,000 ವರ್ಷದವರೆಗೂ ವಿಸ್ತರಿಸಲ್ಪಟ್ಟಿದೆ. ಈ ಸುದೀರ್ಘ ಕಾಲಾವಧಿಯನ್ನು ಮೂರು ಭಾಗವಾಗಿ ವಿಂಗಡಿಸಲಾಗಿದೆ. ಅವೆಂದರೆ ಆದಿ, ಮಧ್ಯ ಮತ್ತು ಅಂತ್ಯ ಹಳೆ ಶಿಲಾಯುಗಗಳು.




**ಆಯುಧಗಳು**

ಸುಮಾರು 12,000 ವರ್ಷಗಳಿಂದ ಹಿಡಿದು ಸುಮಾರು 10,000 ವರ್ಷದವರೆಗಿನ ಕಾಲವನ್ನು ಮಧ್ಯಶಿಲಾಯುಗವೆಂದು ಕರೆಯಲಾಗಿದೆ. ಈ ಹಂತವನ್ನು ಸ್ಥಿತ್ಯಂತರ ಸೂಕ್ಷ್ಮ ಶಿಲಾಯುಗವೆಂದು, ಈ ಕಾಲದ ಪರಿಕರಗಳು ಸಾಮಾನ್ಯವಾಗಿ ಅತಿ ಚಿಕ್ಕದಿದ್ದು ಈ ಕಾರಣಕ್ಕಾಗಿ ಅವುಗಳನ್ನು ಸೂಕ್ಷ್ಮ ಶಿಲಾಪರಿಕರಗಳು (Micro liths)ಎಂದು ಕರೆಯಲಾಗಿದೆ. ಈ ಕಾಲದಲ್ಲಿ ಮಾನವನು ಸೂಕ್ಷ್ಮ ಶಿಲೆಗಳಿಂದ ಮಾಡಿದ ಆಯುಧಗಳಿಗೆ ಎಲುಬು ಹಾಗೂ ಕಟ್ಟಿಗೆಯ ಅಲಂಕಾರಿಕ ಕೈಹಿಡಿಗಳನ್ನು ಅಳವಡಿಸುತ್ತಿದ್ದರು. ಅವುಗಳನ್ನು ಕೈಗೊಡಲಿ ಹಾಗೂ ಗರಗಸಗಳಾಗಿ ಬಳಸುತ್ತಿದ್ದರು. ಇದರ ಜೊತೆ ಜೊತೆಯಲ್ಲಿಯೆ ಹಳೆ ಮಾದರಿಯ ಆಯುಧಗಳು ಮುಂದುವರಿದವು.

©KTBS Not to be republished

## ಚರಿತ್ರೆ ಪೂರ್ವ ಘಟ್ಟಗಳ ರೇಖಾಚಿತ್ರ




ನವ ಶಿಲಾಯುಗದ ಕಾಲಘಟ್ಟವು ಸುಮಾರು 10,000 ವರ್ಷಗಳ ಈಚಿನದು. ಈ ಕಾಲಘಟ್ಟದ ಕಲ್ಲಿನ ಆಯುಧವು ಮೊದಲಿನವುಗಳಿಗಿಂತ ಭಿನ್ನವಾದವು. ಈ ಆಯುಧಗಳು ಹೊಳಪಿನಿಂದ ಕೂಡಿದ್ದು ಹರಿತವಾದ ಅಲಗನ್ನು ಹೊಂದಿದ್ದವು. ಗಿಡ-ಮೂಲಿಕೆಯನ್ನು ಅರೆಯಲು, ದವಸ-ಧಾನ್ಯಗಳನ್ನು ಪುಡಿಮಾಡಲು ಬೀಸುಕಲ್ಲನ್ನು ಬಳಸುತ್ತಿದ್ದರು. ಈ ಕಾಲಮಾನದ ಕೆಲವು ಮಡಿಕೆ-ಕುಡಿಕೆಗಳು ದೊರೆತಿವೆ. ಇವುಗಳಲ್ಲಿ ಕೆಲವು ಅಲಂಕರಿಸಲ್ಪಟ್ಟಿವೆ. ಮಡಿಕೆಗಳನ್ನು ಧಾನ್ಯಗಳ ಶೇಖರಣೆಗಾಗಿ ಬಳಸಲಾಗುತ್ತಿತ್ತು. ಇವುಗಳಲ್ಲಿ ಅಕ್ಕಿ, ಗೋಧಿ ಹಾಗೂ ಇನ್ನಿತರ ದವಸ-ಧಾನ್ಯಗಳನ್ನು ಬೇಯಿಸಲಾಗುತ್ತಿತ್ತು. ಈ ಕಾಲಘಟ್ಟದ ಮಾನವರು ಬಟ್ಟೆಯನ್ನು ನೇಯುವುದನ್ನು ಕಲಿತಿದ್ದರು.

©KTBS Not to be republished

## ಅಭ್ಯಾಸಗಳು

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಭಾರತವು ಒಂದು ____________ ದ್ವೀಪವಾಗಿದೆ.
2. ಬೂದಿಯ ಕುರುಹುಗಳು __________ ಗವಿಗಳಲ್ಲಿ ದೊರೆತಿವೆ.
3. ಮಧ್ಯಶಿಲಾಯುಗದ ಪರಿಕರಗಳನ್ನು __________ ಎಂದು ಕರೆಯುತ್ತಾರೆ.

**II. ಸಂಕ್ಷಿಪ್ತವಾಗಿ ಉತ್ತರಿಸಿ.**

1. ಭಾರತದ ಭೂ ಮೇಲ್ಮೈ ರಚನೆಯನ್ನು ಸ್ಥೂಲವಾಗಿ ತಿಳಿಸಿ.
2. ಯಾವ ಕಣಿವೆಗಳ ಮೂಲಕ ಭಾರತದ ಮೇಲೆ ದಾಳಿಗಳು ಸಂಭವಿಸಿವೆ?
3. ಪ್ರಾಗೈತಿಹಾಸಿಕ ಕಾಲ ಎಂದರೇನು?
4. ಪಶುಸಂಗೋಪನೆ ಮತ್ತು ಹೈನುಗಾರಿಕೆಯು ಹೇಗೆ ಪ್ರಾರಂಭವಾಯಿತು?
5. ಪ್ರಾಗೈತಿಹಾಸಿಕ ಕಾಲಘಟ್ಟವನ್ನು ವಿದ್ವಾಂಸರು ವಿವಿಧ ಹೆಸರುಗಳಿಂದ ಕರೆದಿದ್ದಾರೆ. ಅವು ಯಾವುವು?

**III. ಚಟುವಟಿಕೆ**

ಯಾವುದಾದರೂ ಒಂದು ಗವಿಗೆ ಭೇಟಿ ನೀಡಿ, ಅದರ ಬಗ್ಗೆ ಶಿಕ್ಷಕರಿಂದ ಹೆಚ್ಚು ವಿಷಯ ತಿಳಿದುಕೊಳ್ಳಿ.

*****

## ಅಧ್ಯಾಯ – 3

# ಭಾರತದ ಪ್ರಾಚೀನ ನಾಗರಿಕತೆಗಳು

### ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತದಲ್ಲಿನ ಪ್ರಾಚೀನ ನಾಗರಿಕತೆಗಳು.*
- *ನಾಗರಿಕತೆಯಲ್ಲಿ ಮೊದಲ ನಗರೀಕರಣ, ನಗರಗಳ ವಿಶೇಷತೆ, ನಗರಯೋಜನೆ, ನಗರ ಜೀವನ, ನಗರಗಳ ಅವನತಿ.*
- *ವೇದಗಳ ಬೆಳವಣಿಗೆ, ವಿಧಗಳು ಮತ್ತು ವೇದಗಳ ಕಾಲ ಹಾಗೂ ನಂತರದ ಕಾಲದಲ್ಲಿನ ಜನಜೀವನ.*

### ವಲಸೆಯ ಬದುಕು ಸ್ಥಿರಗೊಂಡಾಗ

ಪ್ರಾಕ್ತನಶಾಸ್ತ್ರಜ್ಞರು ಕೆಲವು ಸ್ಥಳಗಳಲ್ಲಿ ಗುಡಿಸಲು ಹಾಗೂ ಮನೆಯ ಕುರುಹುಗಳನ್ನು ಪತ್ತೆಹಚ್ಚಿದ್ದಾರೆ. ಇವತ್ತಿನ ಕಾಶ್ಮೀರದಲ್ಲಿನ ಬರ್ಜುಹೊಂನಲ್ಲಿ ನೆಲಮನೆಯನ್ನು ಗುರುತಿಸಿದ್ದಾರೆ. ಅಂದಿನ ಜನ ಭೂಮಿಯೊಳಗೆ ರಂಧ್ರದಂತೆ ಗುಂಡಿಯನ್ನು ತೋಡಿಕೊಂಡು ಅದರೊಳಗೆ ಬದುಕುತ್ತಿದ್ದರು. ಗುಂಡಿಯೊಳಗೆ ಹೋಗಲು ಮೆಟ್ಟಿಲುಗಳಿದ್ದವು. ಚಳಿ ಹಾಗೂ ಕ್ರೂರ ಮೃಗಗಳಿಂದ ರಕ್ಷಿಸಿಕೊಳ್ಳಲು ಅವರು ಹೀಗೆ ಮಾಡಿಕೊಂಡಿದ್ದರು. ಇಂತಹ ಗೂಡುಗಳ ಹೊರಗೂ ಹಾಗೂ ಒಳಗೂ ಮಣ್ಣಿನ ಕುಡಿಕೆಗಳು ದೊರೆತಿವೆ. ಇವುಗಳನ್ನು ವಾತಾವರಣಕ್ಕೆ ಅನುಗುಣವಾಗಿ ಗೂಡುಗಳ ಹೊರಗೆ ಹಾಗೂ ಒಳಗೆ ಅಡುಗೆ ಮಾಡಿಕೊಳ್ಳಲು ಉಪಯೋಗಿಸುತ್ತಿದ್ದರು.

ಇರಾನ್‌ಗೆ ಸಾಗಿಹೋಗುವ ಮಾರ್ಗವಾದ ಬೊಲಾನ್‌ಪಾಸಿನ ಫಲವತ್ತಾದ ಮೈದಾನದ ಸಮೀಪದಲ್ಲಿ ಮೆಹರ್‌ಗರ್ ಎಂಬ ನೆಲೆಯಿದೆ. ಮೆಹರ್‌ಗರ್‌ನ ಜನ ಬಾರ್ಲಿ ಮತ್ತು ಗೋಧಿಯನ್ನು ಬೆಳೆಯುವುದನ್ನು ಹಾಗೂ ಕುರಿ ಮತ್ತು ಮೇಕೆ ಸಾಕುವುದನ್ನು ಕಲಿತಿದ್ದರು. ಇದು ಪ್ರಾಕ್ತನಶಾಸ್ತ್ರಜ್ಞರ ಗಮನಕ್ಕೆ ಬಂದಿರುವ ಮೊಟ್ಟಮೊದಲ ಹಳ್ಳಿ. ಮೆಹರ್‌ಗರ್‌ನ ಜನ ಮನೆಗಳಲ್ಲಿ ವಾಸಿಸುತ್ತಿದ್ದರು. ಕೆಲವು ಮನೆಗಳು ನಾಲ್ಕು ಹಾಗೂ ಹೆಚ್ಚಿನ ಕೊಠಡಿಗಳನ್ನು ಹೊಂದಿದ್ದವು. ಪ್ರಾಣಿಗಳ ಪಳೆಯುಳಿಕೆಗಳಲ್ಲದೆ ಹಲವು ಸಮಾಧಿಗಳ ನೆಲೆಗಳೂ ಇಲ್ಲಿ ದೊರೆತಿವೆ. ಮನುಷ್ಯರ ಜೊತೆಯಲ್ಲಿಯೇ ಪ್ರಾಣಿಗಳನ್ನು ಇಲ್ಲಿ ಹೂಳುತ್ತಿದ್ದರು.

### ಮೊದಲ ಹಂತದ ನಗರೀಕರಣ


ಸುಮಾರು 150 ವರ್ಷಗಳ ಹಿಂದೆ ಪಂಜಾಬಿನ ಸಿಂಧೂ ಕಣಿವೆ ಪ್ರದೇಶದಲ್ಲಿ ರೈಲಿನ ಹಳಿಗಳನ್ನು ಜೋಡಿಸುವಾಗ ಅಲ್ಲಿನ ಇಂಜಿನೀಯರುಗಳು ಹರಪ್ಪದ ಪ್ರಾಚೀನ ನೆಲೆಗಳನ್ನು ಕಂಡರು. ಅವರಿಗೆ ಅದೊಂದು ಅತ್ಯುತ್ತಮ ಇಟ್ಟಿಗೆಗಳಿಂದ ಕೂಡಿದ ದಿಣ್ಣೆಯಂತೆ ಕಂಡಿತು. ಅದರಲ್ಲಿ ಲಭ್ಯವಾದ ಇಟ್ಟಿಗೆಗಳನ್ನು ಅವರು ರೈಲು ಹಳಿಯ ನಿರ್ಮಾಣದಲ್ಲಿ ಬಳಸಿಕೊಂಡರು.

ಈ ರೀತಿಯಾಗಿ ಅಲ್ಲಿ ಹುದುಗಿ ಹೋಗಿದ್ದ ಅನೇಕ ಕಟ್ಟಡಗಳು ಪತ್ತೆಯಾದವು. ನಂತರದ ದಿನಗಳಲ್ಲಿ ಪ್ರಾಕ್ತನಶಾಸ್ತ್ರಜ್ಞರು ಇದರ ಬಗ್ಗೆ ವೈಜ್ಞಾನಿಕ ಸಂಶೋಧನೆ ಕೈಗೊಂಡರು, ಅದೊಂದು ಪ್ರಾಚೀನ ನಗರವೆಂದು ಅವರಿಗೆ ಮನವರಿಕೆಯಾಯಿತು. ಅಲ್ಲಿ ಸುತ್ತಲು ಕಂಡುಬಂದ ಮತ್ತಿತರ ನೆಲೆಗಳಿಗೂ ಈ ಮೊದಲು ಸಿಕ್ಕ ನೆಲೆಗಳಿಗೂ ಸಾಮ್ಯತೆ ಇದ್ದ ಕಾರಣ ಅವುಗಳನ್ನು ಹರಪ್ಪದ ನಾಗರಿಕತೆಯೆಂದು ಕರೆಯಲಾಯಿತು. ಸಿಂಧ್ ಮತ್ತು ಪಂಜಾಬ್ ಪ್ರಾಂತ್ಯಗಳಲ್ಲಿ ಸಿಂಧು ಹಾಗೂ ಅದರ ಉಪನದಿಗಳ ಕಣಿವೆ ಪ್ರದೇಶದಲ್ಲಿ ಶೋಧಗೊಂಡ ಈ ನೆಲೆಗಳೆಲ್ಲವು ಸುಮಾರು 4600 ವರ್ಷಗಳಷ್ಟು ಪುರಾತನ ಕಾಲದ್ದೆಂದು ಭಾವಿಸಲಾಗಿದೆ.

©KTBS Not to be republished

## ನಗರಗಳ ವಿಶೇಷತೆ


ಹರಪ್ಪದ ನಗರಗಳಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಭಾಗವನ್ನು ಕಾಣಬಹುದು. ಪಶ್ಚಿಮದ ಭಾಗವು ಕಿರಿದಾಗಿದ್ದು ಅದು ಎತ್ತರದಲ್ಲಿದೆ. ಇದನ್ನು ಪ್ರಾಕ್ತನಶಾಸ್ತ್ರಜ್ಞರು ಕೋಟೆಯೆಂದಿದ್ದಾರೆ. ಸಾಮಾನ್ಯವಾಗಿ ಪೂರ್ವದ ಭಾಗವು ವಿಶಾಲವಾಗಿದ್ದು ಅದು ತಗ್ಗು ಪ್ರದೇಶದಲ್ಲಿದೆ. ಇದನ್ನು ಕೆಳಗಿನ ಗ್ರಾಮವೆಂದಿದ್ದಾರೆ. ಪ್ರತಿಯೊಂದು ಭಾಗದ ಸುತ್ತಲು ಸುಟ್ಟ ಇಟ್ಟಿಗೆಗಳ ಗೋಡೆಯೊಂದನ್ನು ಕಟ್ಟಿದ್ದರು. ಇಟ್ಟಿಗೆಗಳನ್ನು ಪರಸ್ಪರ ಬೆಸೆಯುವ ರೀತಿಯಲ್ಲಿ ಅಳವಡಿಸಿದ್ದರಿಂದ ಗೋಡೆಯು ಹೆಚ್ಚು ಭದ್ರವಾಗಿತ್ತು.



**ಕಂಚಿನ ನರ್ತಕಿ ಪ್ರತಿಮೆ**



**ಮಾನವನ ಮುಂಡದ ಪ್ರತಿಮೆ**



**ಮೊಹೆಂಜೋದಾರೋ ನಗರದ ಸ್ನಾನದ ಕೊಳ**

ಕೋಟೆಯ ಒಳಗೆ ಗಮನಾರ್ಹವಾದ ಕಟ್ಟಡಗಳಿದ್ದವು. ಇನ್ನೊಂದು ಪಟ್ಟಣವಾದ ಮೊಹೆಂಜೋದಾರೊವಿನಲ್ಲಿ ಒಂದು ಕೊಳವನ್ನು ಕಟ್ಟಲಾಗಿತ್ತು. ಇದನ್ನು ವಿದ್ವಾಂಸರು ಸ್ನಾನದ ಕೊಳವೆಂದಿದ್ದಾರೆ. ಇದನ್ನು ಇಟ್ಟಿಗೆಗಳಿಂದ ಕಟ್ಟಿದ್ದಾರೆ. ಈ ಮೂಲಕ ಕೊಳದಿಂದ ನೀರಿನ ಸೋರಿಕೆ ಆಗದಂತೆ ನಿರ್ಮಿಸಿದ್ದಾರೆ. ಇದರ ಎರಡು ಕಡೆಗಳಲ್ಲಿ ಇಳಿಯುವ ಮೆಟ್ಟಿಲುಗಳಿದ್ದು ಸುತ್ತಲು ಕೊಠಡಿಗಳಿವೆ. ಬಹುಶಃ ಇದರ ನೀರಿನ ಪೂರೈಕೆಯು ಬಾವಿಯಿಂದ ಆಗುತಿತ್ತು ಹಾಗೂ ಬಳಕೆಯ ನಂತರ ನೀರನ್ನು ಹೊರಗೆ ಬಿಡಲಾಗುತ್ತಿತ್ತು. ಪ್ರಾಯಶಃ ಈ ಕೊಳದಲ್ಲಿ ಬಹು ಮುಖ್ಯ ವ್ಯಕ್ತಿಗಳು ವಿಶೇಷವಾದ ಸಂದರ್ಭಗಳಲ್ಲಿ ಸ್ನಾನ ಮಾಡುತ್ತಿದ್ದಿರಬಹುದು. ಇತರೆ ನಗರಗಳಾದ ಕಾಲಿಬಂಗನ್ ಮತ್ತು ಲೋಥಾಲ್‌ಗಳಲ್ಲಿ ಬೆಂಕಿಯ ಒಲೆಗಳು ಕಂಡುಬಂದಿವೆ. ಮೊಹೆಂಜೋದಾರೊ, ಹರಪ್ಪ ಹಾಗೂ ಲೋಥಾಲದಲ್ಲಿ ಸುವ್ಯವಸ್ಥಿತವಾದ ಸಂಗ್ರಹಣೆಯ ಕೊಠಡಿಗಳನ್ನು ನಿರ್ಮಿಸಿದ್ದರು.

## ನಗರ ಯೋಜನೆ

ನಗರದ ತಳ ಪ್ರದೇಶದಲ್ಲಿರುವ ಕೆಳಗಿನ ಗ್ರಾಮವು ಜನವಸತಿ ಜಾಗವಾಗಿತ್ತು. ಅದನ್ನು ಅತ್ಯಂತ ವ್ಯವಸ್ಥಿತವಾದ ರೀತಿಯಲ್ಲಿ ರಚಿಸಲಾಗಿತ್ತು. ಕ್ರಮಬದ್ಧವಾಗಿ ನಿರ್ಮಿಸಲಾದ ಮನೆಗಳನ್ನು, ರಸ್ತೆಗಳನ್ನು ಹಾಗೂ ಚರಂಡಿಗಳನ್ನು ನಾವು ಇಲ್ಲಿ ಕಾಣಬಹುದು. ಸಾಮಾನ್ಯವಾಗಿ ಜನರು ಒಂದು ಅಥವಾ ಎರಡು ಅಂತಸ್ತಿನ

©KTBS Not to be republished

ಮನೆಯನ್ನು ಹೊಂದಿದ್ದರು. ಮನೆಗಳು ಇಟ್ಟಿಗೆಗಳಿಂದ ಕಟ್ಟಲ್ಪಟಿದ್ದು, ಅವುಗಳ ಗೋಡೆಯು ಭದ್ರವಾಗಿದ್ದವು. ಒಳಾಂಗಣದ ಸುತ್ತ ಕೊಠಡಿಗಳು ಇದ್ದವು. ಮನೆಯ ದ್ವಾರವು ರಸ್ತೆಯ ಮಗ್ಗಲಿನಲ್ಲಿದ್ದವು. ಯಾವ ಕಿಟಕಿಗಳೂ ಕೂಡ ರಸ್ತೆಗೆ ಮುಖಮಾಡಿರಲಿಲ್ಲ. ಮನೆಗಳು ಸ್ನಾನದ ಕೊಠಡಿಗಳನ್ನು ಹೊಂದಿದ್ದವು. ಕೆಲವೊಂದರಲ್ಲಿ ಬಾವಿಗಳಿದ್ದು ಅವುಗಳಿಂದ ನೀರಿನ ಪೂರೈಕೆಯಾಗುತ್ತಿತ್ತು. ನಗರಗಳು ಒಳಚರಂಡಿ ವ್ಯವಸ್ಥೆಯನ್ನು ಹೊಂದಿದ್ದವು. ಇಟ್ಟಿಗೆಯಿಂದ ನಿರ್ಮಿಸಲಾಗಿದ್ದ ಚರಂಡಿಯನ್ನು ಚಪ್ಪಡಿಗಳಿಂದ ಮುಚ್ಚಲಾಗಿತ್ತು. ಮನೆಯ ಮೋರಿಗಳನ್ನು ಹೊರಗಿನ ಚರಂಡಿಗೆ ಹೊಂದಿಸಲಾಗಿತ್ತು. ಮನೆ ಬಳಕೆಯ ಹಾಗೂ ಸ್ನಾನದಲ್ಲಿ ಬಳಸಿದ ಕಲುಷಿತ ನೀರು ಮೋರಿಯ ಮೂಲಕ ಚರಂಡಿಗೆ ಬಂದು ಸೇರುತ್ತಿದ್ದವು. ಚರಂಡಿಗಳನ್ನು ಕಾಲದಿಂದ ಕಾಲಕ್ಕೆ ಶುಚಿಯಾಗಿಡಲು ಅಲ್ಲಲ್ಲಿ ರಂಧ್ರಗಳನ್ನು ನಿರ್ಮಿಸಿದ್ದರು.

### ನಗರ ಜೀವನ

ಕಟ್ಟಡಗಳನ್ನು ಹೊರತುಪಡಿಸಿ ದೊರೆತಿರುವ ವಸ್ತುಗಳಲ್ಲಿ ನಾವು ಲೋಹ ಹಾಗೂ ಬೆಲೆಬಾಳುವ ಹರಳುಗಳನ್ನು ಕಾಣುತ್ತೇವೆ. ಅತಿ ಹೆಚ್ಚಿನದಾಗಿ ದೊರೆತಿರುವ ವಸ್ತುಗಳಲ್ಲಿ ಮಣಿಗಳನ್ನು ಹಾಗೂ ಮುದ್ರೆಗಳನ್ನು ನಾವು ಕಾಣಲು ಸಾಧ್ಯ. ನಗರ ವ್ಯವಸ್ಥೆಯು ಇದ್ದ ರೀತಿಯು ಅಲ್ಲಿ ಇದ್ದ ಆಡಳಿತ ವರ್ಗವೊಂದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಬೆಲೆಬಾಳುವ ಲೋಹಗಳನ್ನು, ಹರಳುಗಳನ್ನು ಮತ್ತು ಆಭರಣಗಳನ್ನು ಇವರು ಬಳಸಿರಬೇಕು. ಮಣಿಗಳನ್ನು ಜನಸಾಮಾನ್ಯರು ಬಳಸಿರಬೇಕು. ಮುದ್ರೆಗಳ ಮೇಲೆ ಇಲ್ಲಿಯವರೆಗೂ ಅರಿಯಲಾಗದ ಲಿಪಿಯಿದೆ. ಇದರಿಂದ ಅಕ್ಷರ ಕಲಿತಿದ್ದ ಜನಗಳಿಗೇನು ಕೊರತೆಯಿರಲಿಲ್ಲ ಎಂದೆನ್ನಬಹುದು. ಹೀಗಾಗಿ ಸಾವಿರಾರು ಮುದ್ರೆಗಳ ಮೇಲೆ ಲಿಪಿಗಳನ್ನು ಮೂಡಿಸಲು ಸಾಧ್ಯವಾಯಿತು.

ಹರಪ್ಪ ಸಂಸ್ಕೃತಿಯ ಜನ ಕೃಷಿ ಮತ್ತು ವ್ಯಾಪಾರವನ್ನು ಅವಲಂಬಿಸಿದ್ದರು. ಗೋಧಿ, ಬಾರ್ಲಿ, ಕಾಳು ಹಾಗೂ ಸಾಸಿವೆ ಇವರ ಮುಖ್ಯ ಬೆಳೆಯಾಗಿತ್ತು. ಹತ್ತಿಯನ್ನು ಬೆಳೆದು ಉಡುಪು ತಯಾರಿಸುವುದನ್ನು ಸಹ ಇವರು ಕಲಿತಿದ್ದರು. ಹಲವು ನಗರಗಳು ನದಿಯ ದಂಡೆಯ ಮೇಲೆ ಇದ್ದ ಕಾರಣ ಅವರು ನೀರಾವರಿ ಬಲ್ಲವರಾಗಿದ್ದರೆನ್ನಬಹುದು. ಇವರು ಡುಬ್ಬದ ಗೂಳಿ, ದನಗಳು, ಎಮ್ಮೆ, ಕುರಿ, ಮೇಕೆ, ನಾಯಿ ಹಾಗೂ ಕೋಳಿಗಳ ಪಶುಸಂಗೋಪನೆಯಲ್ಲಿ ತೊಡಗಿದ್ದರು. ಎತ್ತುಗಳನ್ನು ಹೊರೆ ಒಯ್ಯಲು ಬಳಸಲಾಗುತ್ತಿತ್ತು. ಕೃಷಿಯ ಜೊತೆಯಲ್ಲಿ ವ್ಯಾಪಾರ ವಾಣಿಜ್ಯಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದವು. ಇಲ್ಲಿನ ನಗರಗಳು ಗ್ರಾಮೀಣ ಪ್ರದೇಶಗಳ ಜೊತೆಯಲ್ಲಿ ವ್ಯಾಪಾರ ಸಂಪರ್ಕ ಹೊಂದಿದ್ದವು. ಬಲೂಚಿಸ್ತಾನ, ಸೌರಾಷ್ಟ್ರ ಹಾಗೂ ದಖನ್ ಪ್ರದೇಶಗಳು ಇವುಗಳಲ್ಲಿ ಕೆಲವು. ಮೆಸಪಟೋಮಿಯಾದಲ್ಲಿ ಲಭ್ಯವಾಗಿರುವ ಸಿಂಧೂಕಣಿವೆ ನಾಗರಿಕತೆಗೆ ಸಂಬಂಧಿಸಿದ ಹಲವು ಮುದ್ರೆಗಳು ಅವುಗಳು ಪರಸ್ಪರ ಹೊಂದಿದ್ದ ಸಂಬಂಧವನ್ನು ಸೂಚಿಸುತ್ತವೆ.

### ನಗರಗಳ ಅವನತಿ

ಸುಮಾರು 4000 ವರ್ಷಗಳ ಹಿಂದೆ ಇಲ್ಲಿನ ವ್ಯವಸ್ಥೆ ಬದಲಾಗತೊಡಗಿತು. ಅವನತಿಗೆ ಪ್ರಾಕೃತಿಕ ಕಾರಣಗಳೂ ಸೇರಿದಂತೆ ವಿವಿಧ ಕಾರಣಗಳಿದ್ದವು. ಹರಪ್ಪದ ಕೋಟೆಯ ಸುತ್ತಲಿನ ಗೋಡೆಗಳನ್ನು ಮತ್ತಷ್ಟು ಭದ್ರಪಡಿಸಲಾಯಿತು. ಈ ನಗರದ ಕಡೆಯ ದಿನಗಳಲ್ಲಿ ಅದರ ಪಶ್ಚಿಮ ದ್ವಾರವನ್ನು ಸಂಪೂರ್ಣವಾಗಿ ಮುಚ್ಚಲಾಯಿತು. ಮೊಹೆಂಜೋದಾರೊವಿನ ವಿಶಾಲ ಕೋಣೆಗಳು ಈಗ ಕಿರಿದಾದವು. ಬೃಹತ್ ಕಟ್ಟಡಗಳು ಈಗ ಕುಟೀರಗಳಾದವು. ನಗರ ಯೋಜನೆಯಾಗಲಿ, ರಸ್ತೆ ಯೋಜನೆಯಾಗಲಿ ಈ ಸಂದರ್ಭದಲ್ಲಿ ವ್ಯವಸ್ಥಿತವಾಗಿ ಉಳಿಯಲಿಲ್ಲ.

ಚರಿತ್ರೆಕಾರರು ನಗರಗಳ ಅವನತಿಗೆ ಅನೇಕ ವಿವರಣೆಗಳನ್ನು ನೀಡಿದ್ದಾರೆ. ಕೆಲವರು ಬತ್ತಿಹೋದ ನದಿಗಳು, ದಿಕ್ಕು ಬದಲಾದ ನದಿಗಳು ಇದಕ್ಕೆ ಕಾರಣವೆಂದಿದ್ದಾರೆ. ಇನ್ನೂ ಕೆಲವರು ಕಾಡಿನ ನಾಶ ಇದಕ್ಕೆ

© KTBS Not to be republished

ಕಾರಣವೆಂದಿದ್ದಾರೆ. ಪ್ರವಾಹಗಳಿಂದ ಜಲಾವೃತಗೊಂಡಿರುವುದು ಇದರ ನಾಶಕ್ಕೆ ಕಾರಣವಿರಬಹುದು. ಸಿಂಧೂ ಮತ್ತು ಪಶ್ಚಿಮ ಪಂಜಾಬಿನ ಕೆಲವು ನಿವೇಶನಗಳಲ್ಲಿನ ಜನರು ಆ ಪ್ರದೇಶವನ್ನೇ ಬಿಟ್ಟು ಪೂರ್ವ ಮತ್ತು ದಕ್ಷಿಣದ ಹೊಸ ಪ್ರದೇಶಗಳಿಗೆ ವಲಸೆ ಹೋಗಿರಬಹುದು. ಗುಜರಾತಿನಲ್ಲಿರುವ ಲೋಥಾಲ್‌ನ ನಗರದಲ್ಲಿ ಈ ನಾಗರಿಕತೆಯ ಪ್ರಕ್ರಿಯೆ ಇನ್ನೂ ಅನೇಕ ವರ್ಷಗಳು ಮುಂದುವರೆಯಿತು. ಏನೇ ಆಗಲಿ ಸಿಂಧೂ ನಾಗರಿಕತೆಯು ಪ್ರಾಚೀನ ಭಾರತೀಯರ ಪ್ರಬುದ್ಧತೆಗೆ ಸಾಕ್ಷಿಯಾಗಿದೆ.

## ವೇದಗಳ ಕಾಲ

ವೇದಗಳನ್ನು ರಚಿಸಿದವರು ಆರ್ಯರು. ಇವರು ದಕ್ಷಿಣ ರಷ್ಯಾದ ಯೂರಲ್ ಪರ್ವತದ ಇಳಿಜಾರು ಪ್ರದೇಶಗಳಲ್ಲಿದ್ದ ಆದಿ ಇಂಡೋ ಯುರೋಪಿಯನ್ ಬುಡಕಟ್ಟಿಗೆ ಸೇರಿದವರು. ಮಧ್ಯ ಏಷ್ಯಾದ ಮೂಲಕ ಇರಾನ್ ಪ್ರಸ್ಥಭೂಮಿಗೆ ಬಂದ ಈ ಬುಡಕಟ್ಟಿನ ಕೆಲವು ಗುಂಪುಗಳು ಆಫ್ಘಾನಿಸ್ತಾನವನ್ನು ದಾಟಿ ಪಂಜಾಬ್ ಪ್ರದೇಶಕ್ಕೆ ವಲಸೆ ಬಂದು ನೆಲೆಸಿದವು ಎಂದು ಭಾರತೀಯ ವಿದ್ಯಾಭವನವು ಪ್ರಕಟಿಸಿರುವ 'ದಿ ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಪುಸ್ತಕಗಳ ಶ್ರೇಣಿಯಲ್ಲಿನ ಮೊದಲ ಸಂಪುಟದಲ್ಲಿ ಖ್ಯಾತ ಇತಿಹಾಸಕಾರ ಬಿ.ಕೆ. ಘೋಷ್‌ರವರು ಅಭಿಪ್ರಾಯ ಪಟ್ಟಿದ್ದಾರೆ. ಈ ಗುಂಪುಗಳು ಕಟ್ಟಿದ ಸಂಸ್ಕೃತಿಯನ್ನು ವೇದಗಳ ಆಧಾರದ ಮೇಲೆ ಅರ್ಥ ಮಾಡಿಕೊಂಡು  ಅದನ್ನು ವೈದಿಕ ಸಂಸ್ಕೃತಿ ಎಂದು ಕರೆಯಲಾಗುತ್ತಿದೆ. ವೇದಗಳ ಕಾಲವನ್ನು ಸಾ.ಶ.ಪೂ. 1500 ರಿಂದ ಸಾ.ಶ.ಪೂ 700 ನಡುವಿನ ಅವಧಿ ಎಂದು ಗುರುತಿಸಲಾಗಿದೆ. ಇದನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲ ಭಾಗ ಋಗ್ವೇದ ಕಾಲ ಅಥವಾ ಆರಂಭಿಕ ವೈದಿಕ ಕಾಲ. ಇದರ ಅವಧಿ ಸುಮಾರು ಸಾ.ಶ.ಪೂ. 1500 ರಿಂದ ಸಾ.ಶ.ಪೂ. 1000ದ ವರೆಗೆ. ಎರಡನೇ ಭಾಗ ಉತ್ತರ ಋಗ್ವೇದ ಕಾಲ ಅಥವಾ ನಂತರದ ವೈದಿಕ ಕಾಲ. ಇದರ ಅವಧಿ ಸುಮಾರು ಸಾ.ಶ.ಪೂ. 1000 ದಿಂದ 700. ಆದರೆ ವೇದಗಳು ಈ ಕಾಲಘಟ್ಟದಲ್ಲಿ ಬರವಣಿಗೆ ರೂಪದಲ್ಲಿ ರಚನೆಯಾಗಿರಲಿಲ್ಲ. ಇವು ಆರಂಭದಲ್ಲಿ ಮೌಖಿಕವಾಗಿ ಬೆಳೆದು ನಂತರದ ಕಾಲದಲ್ಲಿ ಸಾಕಷ್ಟು ಬದಲಾವಣೆಗಳೊಂದಿಗೆ ಬರಹ ರೂಪಕ್ಕೆ ಬಂದಿವೆ.

**ವೇದಗಳು ನಾಲ್ಕು :** ಋಗ್ವೇದ, ಸಾಮವೇದ, ಯಜುರ್‌ವೇದ ಮತ್ತು ಅಥರ್ವವೇದ. ಪ್ರಮುಖವಾಗಿ ವೇದಗಳು ಪ್ರಕೃತಿ ಆರಾಧನೆ, ಯಾಗ-ಯಜ್ಞಾದಿಗಳು, ಮಾಟವಿದ್ಯೆ ಮುಂತಾದವುಗಳ ಬಗೆಗಿನ ಸಂಗ್ರಹವಾಗಿವೆ. ಅವುಗಳನ್ನು 'ಸಂಹಿತೆ' ಎಂದೂ ಕರೆಯಲಾಗಿದೆ. ಪ್ರತಿಯೊಂದು ಸಂಹಿತೆಗೆ ಧಾರ್ಮಿಕ ಆಚರಣೆಗಳ ಬಗ್ಗೆ ವಿವರ ನೀಡುವಂತಹ 'ಬ್ರಾಹ್ಮಣ'ಗಳೆಂಬ ಪಠ್ಯಗಳಿವೆ. ಪ್ರತಿಯೊಂದು ಬ್ರಾಹ್ಮಣವೂ ಒಂದು 'ಅರಣ್ಯಕ' ಮತ್ತು 'ಉಪನಿಷತ್'ನಿಂದ ಕೂಡಿದೆ. ಅರಣ್ಯದಲ್ಲಿ ವಾಸಿಸುತ್ತಿದ್ದ ಋಷಿಗಳಿಗೆ ಅಗತ್ಯವಾದ 'ಅತೀಂದ್ರಿಯ' ಉಪದೇಶಗಳು ಅರಣ್ಯಕದಲ್ಲಿದೆ. ಉಪನಿಷತ್ತುಗಳು ತತ್ವಜ್ಞಾನದ ಆಲೋಚನೆಯ ಕೃತಿಗಳಾಗಿವೆ. ಉಪನಿಷತ್ತುಗಳು ವೇದ ಕಾಲದ ಭಾರತೀಯರ ಬೌದ್ಧಿಕ ಪ್ರಬುದ್ಧತೆಗೆ ಸಾಕ್ಷಿಗಳಂತಿವೆ.

## ಋಗ್ವೇದ ಕಾಲ

ವೇದಗಳಲ್ಲಿ ಋಗ್ವೇದ ಮೊದಲಿನದು. ಅದರ ಭಾಷೆ, ಅದರಲ್ಲಿ ಬರುವ ಭೌಗೋಳಿಕ ಮತ್ತು ಸಾಮಾಜಿಕ ಸನ್ನಿವೇಶಗಳು ಇದನ್ನು ಪುಷ್ಟೀಕರಿಸುತ್ತವೆ. ಋಗ್ವೇದದಲ್ಲಿ 1028 ಸೂಕ್ತ ಅಥವಾ ಸ್ತುತಿಗೀತೆಗಳಿದ್ದು ಅವು 10 ಮಂಡಲಗಳಲ್ಲಿ ವಿಂಗಡಣೆಯಾಗಿವೆ. ಇವೆಲ್ಲವೂ ಒಂದೇ ಕಾಲಕ್ಕೆ ರಚನೆಯಾದವುಗಳಲ್ಲ. ಋಗ್ವೇದದ ಪ್ರಾರಂಭಿಕ ಪಠ್ಯ ಮತ್ತು ಅಂತಿಮ ಪಠ್ಯ ಜೋಡಣೆಯ ನಡುವೆ 500 ವರ್ಷಗಳಷ್ಟು ದೀರ್ಘಕಾಲವಿತ್ತು ಎಂದು ಇತಿಹಾಸಕಾರರು ಹೇಳುತ್ತಾರೆ.

ಋಗ್ವೇದದ ಭಾಷೆ ಇಂಡೋ-ಯೂರೋಪಿಯನ್ ಭಾಷಾ ಕುಟುಂಬಕ್ಕೆ ಸೇರಿದೆ. ಋಗ್ವೇದದಲ್ಲಿ ಪ್ರಸ್ತಾಪವಾಗಿರುವ ಭೌಗೋಳಿಕ ಎಲ್ಲೆ ಆಫ್ಘಾನಿಸ್ತಾನದ ಹಿಂದೂ ಕುಶ್ ಪರ್ವತಗಳಿಂದ, ಗಂಗಾ-ಯಮುನಾ



Not to be republished ©KTBS

ದೋ–ಅಬ್ (ಎರಡು ನದಿಗಳ ಮಧ್ಯದ ಪ್ರದೇಶ – ಈಗಿನ ಉತ್ತರ ಪ್ರದೇಶ ರಾಜ್ಯದ ಪಶ್ಚಿಮ ಭಾಗದ) ವರೆಗೆ ಮತ್ತು ಕಾಶ್ಮೀರದಿಂದ ಸಿಂಧ್‌ನ ಉತ್ತರ ಗಡಿಗಳ ನಡುವಿನದ್ದು ಎಂದು ಪರಿಗಣಿಸಲಾಗಿದೆ.

**ಸಾಮಾಜಿಕ ವ್ಯವಸ್ಥೆ:** ಭಾರತಕ್ಕೆ ಬಂದ ಆರಂಭದಲ್ಲಿ ಆರ್ಯರಲ್ಲಿದ್ದ ಪ್ರಮುಖ ಸಾಮಾಜಿಕ ವರ್ಗಗಳೆಂದರೆ ಶ್ರೀಮಂತರು, ಪುರೋಹಿತರು ಮತ್ತು ಸಾಮಾನ್ಯ ಜನರು. ಜಾತಿ ಪ್ರಜ್ಞೆಯು ಇನ್ನೂ ಮೂಡಿರಲಿಲ್ಲ. ಋಗ್ವೇದದ ಹತ್ತನೆಯ (ಸುಮಾರು ಸಾ.ಶ.ಪೂ. 1000ದಲ್ಲಿ) ಮಂಡಲದಲ್ಲಿ ಬರುವ ಪುರುಷ ಸೂಕ್ತದಲ್ಲಿ ಹೊಸ ಸಾಮಾಜಿಕ ವ್ಯವಸ್ಥೆ ರೂಪುಗೊಳ್ಳುತ್ತಿದ್ದ ಚಿತ್ರಣ ಸಿಗುತ್ತದೆ. ಇದರ ಪ್ರಕಾರ ದೇವತೆಗಳು (gods) ಸೃಷ್ಟಿಸಿದ ಆದಿಪುರುಷನ ಬಾಯಿಯೇ ಬ್ರಾಹ್ಮಣರಾದರು, ಬಾಹುಗಳು ಕ್ಷತ್ರಿಯರಾದರು, ತೊಡೆಗಳು ವೈಶ್ಯರಾದರು ಹಾಗೂ ಪಾದಗಳಿಂದ ಶೂದ್ರರು ಹುಟ್ಟಿದರು. ಈ ಮೂಲಕ ಜಾತಿ ಸೃಷ್ಟಿಗೆ ದೈವಿಕ ಮತ್ತು ಪುರಾಣದ ಮೂಲವನ್ನು ಹಿನ್ನೆಲೆಯಾಗಿ ಒದಗಿಸುವ ಪ್ರಯತ್ನ ಮಾಡಲಾಯಿತು. ಇದರಲ್ಲಿ ವರ್ಣ ಎಂಬ ಪದವಿಲ್ಲ. ನಂತರದ ವೇದಗಳಲ್ಲಿ ನಾಲ್ಕು ವರ್ಣಗಳ ಪ್ರಸ್ತಾಪವಿದೆ. ಮೊದಲ ಮೂರು ವರ್ಣಗಳು ಆಡಳಿತ ಸಂಬಂಧಿಸಿದ, ಪುರೋಹಿತಿಕೆ ಮತ್ತು ವ್ಯಾಪಾರಿ ವೃತ್ತಿಗಳನ್ನು ಮಾಡುತ್ತಿದ್ದರು ಹಾಗೂ ಆಸ್ತಿಯ ಹಕ್ಕುಗಳನ್ನು ಹೊಂದಿದ್ದರು.

ನಾಲ್ಕನೆಯ ವರ್ಣವಾದ 'ಶೂದ್ರ' ಎಂಬುದು ಋಗ್ವೇದ ಕಾಲದ ಕೊನೆ ಘಟ್ಟದಲ್ಲಿ ಸೇರ್ಪಡೆಯಾಗಿದೆ. ಈ ವರ್ಣದಲ್ಲಿ ಸ್ಥಳೀಯ ಬುಡಕಟ್ಟುಗಳಾದ ದಸ್ಯು, ಪಾಣಿಗಳು ಮತ್ತು ದಾಸರಿದ್ದರು. ಆರ್ಯರು ಇಲ್ಲಿನ ಸ್ಥಳೀಯ ಬುಡಕಟ್ಟುಗಳಾದ ದಾಸ ಹಾಗೂ ದಸ್ಯುಗಳ ಮೇಲೆ ಜಯ ಸಾಧಿಸಿದ ನಂತರ ಇವರನ್ನು ಗುಲಾಮರಂತೆ ದುಡಿಸಲು ಪ್ರಾರಂಭಿಸಿದರು. ಯುದ್ಧಗಳಲ್ಲಿ ಗೆದ್ದು ಅದರಿಂದ ಬಂದ ಸಂಪತ್ತಿನ ಹಂಚಿಕೆಯಲ್ಲಿ ವ್ಯತ್ಯಾಸಗಳು ಉಂಟಾಗಿ ಸಾಮಾಜಿಕ ತಾರತಮ್ಯಗಳು ಬೆಳೆದವು. ಜೊತೆಗೆ ವಿಸ್ತರಣೆಯಾಗುತ್ತಿದ್ದ ಕೃಷಿ ಮತ್ತು ಇದರ ಒಡೆತನವನ್ನು ಮೇಲಿನ ವರ್ಣಗಳವರು ಹೊಂದಿದ್ದರು. ಮೇಲಿನ ಮೂರು ವರ್ಣಗಳಿಗೆ ದುಡಿಮೆ ಮಾಡುವುದು ಶೂದ್ರರ ಕರ್ತವ್ಯವೆಂದು ಅವರ ಮೇಲೆ ಹೇರಲಾಯಿತು. ಪಿತೃಪ್ರಧಾನ ಕುಟುಂಬ ಮುಖ್ಯವಾದ ಸಾಮಾಜಿಕ ಘಟಕವಾಗಿತ್ತು.

**ಅರ್ಥ ವ್ಯವಸ್ಥೆ:** ಋಗ್ವೇದದ ಜನ ಮೂಲಭೂತವಾಗಿ ಪಶುಸಂಗೋಪನೆಯಲ್ಲಿ ತೊಡಗಿದ್ದರು. ಋಗ್ವೇದ ರಚನಾಕಾರರ ದೃಷ್ಟಿಯಲ್ಲಿ ಸಂಪತ್ತು ಎಂದರೆ ಪ್ರಧಾನವಾಗಿ ಕುದುರೆಗಳು, ಹಸುಗಳು, ಒಂಟೆಗಳು ಮತ್ತು ಕುರಿಗಳು. ಆದರೂ ಋಗ್ವೇದದಲ್ಲಿ ಸಾಗುವಳಿ ಮಾಡಿದ ಭೂಮಿಯನ್ನು ಸಂಪತ್ತಿನ ಒಂದು ಭಾಗವೆಂದು ಪರಿಗಣಿಸಲಾಗಿದೆ. ವ್ಯವಸಾಯ ಒಂದು ಕಸುಬಾಗಿ ರೂಪುಗೊಳ್ಳುತ್ತಿದ್ದ ಬಗ್ಗೆ ವಿವರಗಳಿವೆ. ಭೂಮಿಯನ್ನು ಯಾರಾದರೂ ವಶಪಡಿಸಿಕೊಳ್ಳಬಹುದಿತ್ತು ಮತ್ತು ಅದರ ಒಡೆತನವನ್ನು ಪಡೆಯಬಹುದಿತ್ತು. ಭೂಮಿಯನ್ನು ಉತ್ತಲು, ನೀರೆತ್ತಲು ಮತ್ತು ಬಂಡಿಗಳನ್ನು ನಡೆಸಲು ಮತ್ತು ವ್ಯವಸಾಯದ ವಿಸ್ತರಣೆಗೆ ಪಶುಗಳ ಮಹತ್ವ ಹೆಚ್ಚಾಗುತ್ತಾ ಬಂತು. ಇವುಗಳಿಂದ ಹಾಲು ಮತ್ತು ಮಾಂಸದ ಉಪಯೋಗವೂ ಇತ್ತು. ಒಟ್ಟಾರೆಯಾಗಿ ದನದ ಮಂದೆಗಳನ್ನು ಹೆಚ್ಚೆಚ್ಚು ಹೊಂದಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಇದರಿಂದ 'ಗೋಮಾಳ'ಗಳು ಅಸ್ತಿತ್ವಕ್ಕೆ ಬಂದವು.

ಕಬ್ಬಿಣದ ಬಗ್ಗೆ ಇನ್ನೂ ತಿಳಿದಿರಲಿಲ್ಲ. ಆದರೆ ಲೋಹ ಕರಗಿಸಲು 'ಮಾಗಿದ ಮತ್ತು ಸಂಸ್ಕರಿಸಿದ ಗಿಡ'ಗಳನ್ನು ಇದ್ದಿಲಾಗಿ ಬಳಸುತ್ತಿದ್ದರು. ಮಿಶ್ರಲೋಹವಾದ ಕಂಚನ್ನು 'ಅಯಸ್' ಎನ್ನುತ್ತಿದ್ದರು. ಮಡಿಕೆ ಕುಡಿಕೆಗಳ ಬಗ್ಗೆ ಉಲ್ಲೇಖಗಳಿವೆ. ಕುಂಬಾರಿಕೆಯ ಬಗ್ಗೆ ಉಲ್ಲೇಖವಿಲ್ಲ. ಋಗ್ವೇದದಲ್ಲಿ ನೇಕಾರಿಕೆ, ಬಡಗಿ ಮುಂತಾದ ಕುಶಲವೃತ್ತಿಗಳ ಬಗ್ಗೆ ಉಲ್ಲೇಖಗಳು ಕೇವಲ ಪ್ರಾಸಂಗಿಕವಾಗಿ ಬಂದಿವೆ. ಋಗ್ವೇದದಲ್ಲಿ 'ಪಾಣಿ'ಗಳು ಎಂಬ ಪದ ಹಲವಾರು ಬಾರಿ ಬರುತ್ತದೆ. ಇದನ್ನು ಶ್ರೀಮಂತವಾಗಿದ್ದ ಸ್ಥಳೀಯ ಬುಡಕಟ್ಟಿನ ಜನರನ್ನು ಗುರ್ತಿಸಲು ಬಳಸಲಾಗಿದೆ. ಇವರಿಗೆ ಕೃಷಿಯ ಬಗ್ಗೆ ತಿಳುವಳಿಕೆ ಇತ್ತು.

©KTBS Not to be republished

ಋಗ್ವೇದದಲ್ಲಿ ಸಾಗುವಳಿ ಮಾಡಿದ ಗದ್ದೆಯನ್ನು 'ಕ್ಷೇತ್ರ'ವೆಂದು, ಉಳುಮೆ ಮಾಡುವ ಕಾರ್ಯವನ್ನು 'ಕೃಷಿ' ಎಂದು ಕರೆಯಲಾಗಿದೆ. ಸಾ.ಶ.ಪೂ 11ನೇ ಶತಮಾನದ್ದು ಎನ್ನಬಹುದಾದ ಸ್ವಾತ್ ಕಣಿವೆಯ ಅಲಿಗ್ರಾಮದಲ್ಲಿ ಉಳುಮೆ ಮಾಡಿದ ಗದ್ದೆ ಪತ್ತೆಯಾಗಿದೆ. ನೀರೆತ್ತುವ ಕಲ್ಲಿನ ರಾಟೆ ಚಕ್ರವನ್ನು ಬಳಸಿ ಬಾವಿಯಿಂದ ನೀರೆತ್ತುವ ಮರದ ಬಾನೆಯ ಕುರಿತು ಉಲ್ಲೇಖವಿದೆ. ನೇಗಿಲು ಮತ್ತು ಬಂಡಿಗಳನ್ನು ಎಳೆಯಲು ಎತ್ತುಗಳನ್ನು ಬಳಸಲಾಗುತ್ತಿದ್ದ ಅನುಭವದ ಆಧಾರದಲ್ಲಿ, ಅವುಗಳನ್ನು ರಾಟೆ ಮತ್ತು ಹಗ್ಗದ ಸಹಾಯದಿಂದ ನೀರನ್ನು ಎತ್ತಿ ಅಗಲವಾದ ಕಾಲುವೆಗಳಿಗೆ ಹರಿಸಲು ಬಳಸಲಾಗುತ್ತಿತ್ತು. ಈ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ, ಅದುವರೆಗೂ ನದಿ ಕಾಲುವೆ ಪಕ್ಕದ ಜಾಗಗಳಿಗೆ ಸೀಮಿತವಾಗಿದ್ದ ವ್ಯವಸಾಯ, ಹೆಚ್ಚಿನ ಅಂತರ್ಜಲ ಮಟ್ಟ ಇರುವ ಪ್ರದೇಶಗಳಿಗೆ ಹರಡಲು ಅವಕಾಶವಾಯಿತು. ಋಗ್ವೇದದಲ್ಲಿ ಬಿತ್ತನೆ ಬೀಜವನ್ನು ನೆಲದೊಳಗಿಡುವ ಬಗ್ಗೆ ಮತ್ತು ಬೆಳೆದ ಕಾಳಿನ ಬಗ್ಗೆ ಉಲ್ಲೇಖವಿದೆ.

**ರಾಜಕೀಯ ವ್ಯವಸ್ಥೆ:** ಋಗ್ವೇದದಲ್ಲಿ 'ಗ್ರಾಮ'ದ ಉಲ್ಲೇಖವಿದೆ. ಗ್ರಾಮಗಳಲ್ಲಿ ಬುಡಕಟ್ಟುಗಳು ವಾಸಿಸುತ್ತಿದ್ದವು. ಬುಡಕಟ್ಟಿನ ಮುಖ್ಯಸ್ಥನಾಗಿ ರಾಜನ್ ಅಥವಾ ರಾಜ ಇರುತ್ತಿದ್ದ. ರಾಜರ ಹೆಸರುಗಳು ನಿರ್ದಿಷ್ಟ ಬುಡಕಟ್ಟುಗಳಿಗೆ ಸಂಬಂಧಿಸಿತ್ತು. ಒಂದು ಬುಡಕಟ್ಟಿನಲ್ಲಿ ಒಂದಕ್ಕಿಂತ ಹೆಚ್ಚು ರಾಜರು ಇದ್ದಿರಬಹುದು. ರಾಜನ ಸ್ಥಾನ ವಂಶಪಾರಂಪರ್ಯವಾಗಿತ್ತು. ಪುರು ವಂಶಾವಳಿಯ 'ತ್ರೃಕ್ಷಿ' ಮತ್ತು ಭರತ ವಂಶಾವಳಿಯ 'ಸುಧಾಸ' ಇದಕ್ಕೆ ಉದಾಹರಣೆ.

ರಾಜಕೀಯ ಚಟುವಟಿಕೆಗಳಲ್ಲಿ ಆರ್ಯೇತರ ಬುಡಕಟ್ಟುಗಳಾಗಿದ್ದ ದಸ್ಯುಗಳು, ಪಾಣಿಗಳ ಮೇಲೆ ಆರ್ಯರು ನಡೆಸಿದ ಆಕ್ರಮಣಗಳು ಮತ್ತು ಆ ಬುಡಕಟ್ಟುಗಳ ದಮನದಂತಹ ಅಂಶಗಳು ಮುಖ್ಯ ಸಂಗತಿಗಳಾಗಿವೆ. ಋಗ್ವೇದ ದಸ್ಯುಗಳು, ಪಾಣಿಗಳು ಅಮಾನುಷರು, ಅನ್ಯವ್ರತದವರು ಮತ್ತು ವಧಾರ್ಹರು ಎಂದು ಹೇಳಿದೆ, ಆರ್ಯ ಮತ್ತು ಆರ್ಯೇತರರ ಈ ಸಂಘರ್ಷದ ಬಗ್ಗೆ ಋಗ್ವೇದದಲ್ಲಿ ಪ್ರಸ್ತಾಪಗಳಿವೆ.

ರಾಜನ ಸುತ್ತ ಸಾರ್ವಜನಿಕರು ಸೇರುವ ಅರ್ಥದಲ್ಲಿ 'ಸಭಾ' ಮತ್ತು 'ಸಮಿತಿ' ಎಂಬ ಶಬ್ದಗಳ ಉಲ್ಲೇಖವಿದೆ. ಜನರ ಮೇಲೆ ಅಧಿಕಾರ ನಡೆಸುವವರನ್ನು 'ಕ್ಷತ್ರ' ಎನ್ನಲಾಗುತ್ತಿತ್ತು. ಸೈನಿಕ ಅಥವಾ ಹೋರಾಡುವವರನ್ನು 'ಯೋಧ' ಎನ್ನಲಾಗುತ್ತಿತ್ತು. ಕ್ಷತ್ರಿಯ ಪದ ಇನ್ನೂ ಬಳಕೆಗೆ ಬಂದಿರಲಿಲ್ಲ. ರಾಜರು, ಸಿರಿವಂತರು ಅಧಿಕಾರವನ್ನು ಹೊಂದಿದ್ದರು. ಇವರು ಪುರೋಹಿತರಿಗೆ ಅಪಾರವಾಗಿ ದನಗಳು, ಕುದುರೆಗಳು, ಚಿನ್ನ ಮತ್ತು ವ್ಯವಸಾಯದ ಉತ್ಪನ್ನಗಳನ್ನು ಕಾಣಿಕೆಯಾಗಿ ನೀಡುತ್ತಿದ್ದರು. ದನಕರುಗಳಿಗಾಗಿ ದಾಳಿ ಅಥವಾ ಜಗಳಗಳು ನಡೆಯುತ್ತಿದ್ದವು. ಇಂತಹ ದಾಳಿಗಳಿಂದ ಯಶಸ್ಸು ಪಡೆದವರ ಸಂಪತ್ತು ಹೆಚ್ಚಾಗುವುದರ ಜೊತೆಗೆ, ಸೆರೆಯಾಳುಗಳು ಸಹ ದೊರೆಯುತ್ತಿದ್ದರು.

**ಧಾರ್ಮಿಕ ವ್ಯವಸ್ಥೆ:** ಧಾರ್ಮಿಕ ವ್ಯವಸ್ಥೆಯ ಮುಖ್ಯ ಕೇಂದ್ರ ಬಿಂದು ಯಜ್ಞ, ಯಜ್ಞದಲ್ಲಿ ದೇವತೆಗಳನ್ನು ತೃಪ್ತಿಪಡಿಸಲು ಪ್ರಾಣಿ ಬಲಿಯನ್ನು ಕೊಡಲಾಗುತ್ತಿತ್ತು. ಮುಖ್ಯವಾಗಿ ಎರಡು ಉದ್ದೇಶಗಳನ್ನು ಪೂರೈಸಿಕೊಳ್ಳಲು ಯಜ್ಞವನ್ನು ನೆರವೇರಿಸಲಾಗುತ್ತಿತ್ತು. ಉತ್ತಮ ಮಳೆ-ಬೆಳೆ ಮತ್ತು ತಮ್ಮ ಶತ್ರುಗಳಾಗಿದ್ದ ದಸ್ಯು ಬುಡಕಟ್ಟುಗಳನ್ನು ಸಂಹರಿಸಲು ಇಂದ್ರಾಧಿದೇವತೆಗಳ ಸಹಾಯ ಪಡೆಯಲು ಆರ್ಯರು ಯಜ್ಞಗಳನ್ನು ಮಾಡುತ್ತಿದ್ದರು.

ಯಜ್ಞಗಳನ್ನು ನಡೆಸಿಕೊಡುವ ಪುರೋಹಿತನನ್ನು 'ಹೊತರ್' ಎಂದು ಕರೆಯಲಾಗುತ್ತಿತ್ತು. ಇದರಲ್ಲಿ ಮಂತ್ರಗಳ ಉಚ್ಚಾರಣೆ ಮತ್ತು 'ಸೋಮ' ಪಾನ ಸೇವನೆ ಇರುತ್ತಿತ್ತು. ಆರ್ಯರ ಧರ್ಮದಲ್ಲಿ ಮೂರ್ತಿ ಪೂಜೆ ಇರಲಿಲ್ಲ. ಮನುಷ್ಯ, ಪ್ರಾಣಿ ಅಥವಾ ಇನ್ನಾವುದೇ ಸಂಕೇತಗಳನ್ನು ಬಳಸುತ್ತಿರಲಿಲ್ಲ.

ಋಗ್ವೇದದಲ್ಲಿ ಬೆಂಕಿಗೆ ತುಂಬಾ ಪ್ರಾಮುಖ್ಯತೆಯಿದ್ದು, ಅಗ್ನಿಯನ್ನು ಕುರಿತು ಸುಮಾರು 200 ಶ್ಲೋಕಗಳಿವೆ. ಇಂದ್ರ ಮಳೆ ತರುತ್ತಾನೆ, ಆರ್ಯರ ಶತ್ರುಗಳನ್ನು, ದಸ್ಯು ಮತ್ತು ದಾಸರನ್ನು ನಾಶಪಡಿಸುತ್ತಾನೆ, ಸೋಮರಸವನ್ನು ವಿಪರೀತವಾಗಿ ಕುಡಿಯುತ್ತಾನೆ, ಕೋಣಗಳನ್ನು ತಿನ್ನುತ್ತಾನೆ, ಮುಂತಾದ ಸುಮಾರು 250



©KTBS Not to be republished

ಶ್ಲೋಕಗಳನ್ನು ಇಂದ್ರನಿಗೆ ಅರ್ಪಿಸಲಾಗಿದೆ. ವಿಷ್ಣುವಿಗೆ ಇನ್ನೂ ಅಂತಹ ಮಹತ್ವ ಬಂದಿರಲಿಲ್ಲ. ಋಗ್ವೇದದಲ್ಲಿ ಜನ್ಮಾಂತರದ ನಂಬಿಕೆ ಬಗ್ಗೆ ವಿವರಗಳಿಲ್ಲ. ಆಳುವವರು ಮತ್ತು ಬುಡಕಟ್ಟು ಮುಖ್ಯಸ್ಥರ ಮಹಾಯಾಗಗಳನ್ನು ಪುರೋಹಿತರು ನಡೆಸಿಕೊಡುತ್ತಿದ್ದರು.

ಋಗ್ವೇದದ ಪ್ರಾರಂಭಿಕ ಹಂತದಲ್ಲಿ ಪುರೋಹಿತರ ಹಿಡಿತ ತುಂಬಾ ಕಡಿಮೆ ಇದ್ದಾಗ, ಉಳುಮೆ ಮಾಡಿದ ಕಿರುದೇವತೆ 'ಕ್ಷೇತ್ರಸ್ಯ–ಪತಿ', ನೇಗಿಲ ದೇವಿ 'ಸೀತಾ', ಮನೆಯ ಕಿರುದೇವತೆ 'ವಾಸ್ತೋಷ್–ಪತಿ', ಇಂತಹ ಸಾಮಾನ್ಯ ಜನರ ಧರ್ಮದ ಕುರಿತು ಪ್ರಸ್ತಾಪಗಳಿವೆ. ಋಗ್ವೇದದ ಕೊನೆಯ ಭಾಗದಲ್ಲಿ ವಿವಾಹ ಮತ್ತು ಮರಣದ ಕುರಿತು ಶ್ಲೋಕಗಳಿವೆ. ಋಗ್ವೇದ ಕಾಲದ ಜನರಿಗೆ ಬರವಣಿಗೆ ಗೊತ್ತಿರಲಿಲ್ಲ. ಭಾಷೆಯು ಉಚ್ಚಾರಗಳನ್ನು ಆಧರಿಸಿತ್ತು. ಋಗ್ವೇದದ ಮತ್ತು ಇಂಡೋ–ಇರಾನಿಯನ್ ಧರ್ಮಗ್ರಂಥ 'ಅವೆಸ್ತ'ದಲ್ಲಿ ಬರುವ ಹೆಸರುಗಳು ಮತ್ತು ಪಾತ್ರಗಳು ಸಾಕಷ್ಟು ಹೋಲಿಕೆಯನ್ನು ಹೊಂದಿವೆ.

## ಉತ್ತರ ಋಗ್ವೇದ ಕಾಲ

ಋಗ್ವೇದದ ನಂತರ ಅದರ ಮುಂದುವರೆದ ಮತ್ತು ಪೂರಕವಾದ ಸ್ವರೂಪದಲ್ಲಿ ಇತರ ಮೂರು ವೇದಗಳು; ಸಾಮವೇದ, ಯಜುರ್ವೇದ ಮತ್ತು ಅಥರ್ವವೇದ ಬಂದವು. ಇವು ಮೂರು ವಿಭಿನ್ನ ರೀತಿಯ ಯಜ್ಞಗಳನ್ನು ನಡೆಸುವ ಪುರೋಹಿತರಾದ ಸಾಮನ್ (ಉದ್ಗಾತ್ರಿ = ಹಾಡುಗಾರ), ಅಧ್ವರ್ಯು (ಯಜುಸ್ ಎಂಬ ಸೂತ್ರಗಳನ್ನು ಹೇಳುವವನು) ಮತ್ತು ಅಥರ್ವನ್ (ಅಂಗಿರ = ಅಗ್ನಿ ಪುರೋಹಿತ) ಇವರ ಹೆಸರನ್ನು ಹೊಂದಿರುವ ವೇದಗಳಾಗಿವೆ.

ಸಾಮವೇದವು ಋಗ್ವೇದದಿಂದಲೇ ಹೆಚ್ಚಿನ ಭಾಗ ಆರಿಸಿಕೊಂಡು ಕೆಲವು ಬದಲಾವಣೆಗಳನ್ನು ಮಾಡಿಕೊಂಡು ಯಜ್ಞದಲ್ಲಿ ಪಠಿಸುವ ಮಂತ್ರಗಳನ್ನು ಒಳಗೊಂಡಿದೆ. ಯಜುರ್ವೇದವು ಕಪ್ಪು (ಕೃಷ್ಣ) ಮತ್ತು ಬಿಳಿ (ಶುಕ್ಲ) ಯಜುರ್ವೇದಗಳೆಂಬ ಎರಡು ಭಿನ್ನ ಪಠ್ಯಗಳನ್ನು ಹೊಂದಿದೆ. ಕಪ್ಪು ಯಜುರ್ವೇದದಲ್ಲಿ, ಮಂತ್ರಗಳನ್ನು ಯಾವ ವಿಧಿಯ ಭಾಗವಾಗಿ ಉಚ್ಚರಿಸಬೇಕೋ ಅದರ ವಿವರಣೆಗಳು ಮತ್ತು ಚರ್ಚೆಗಳಿವೆ. ಬಿಳಿ ಯಜುರ್ವೇದದಲ್ಲಿ ಮಂತ್ರಗಳು ಮತ್ತು ಶ್ಲೋಕಗಳು ಮಾತ್ರವಿದ್ದು ವಿವರಣೆಗಳು ಕಾಣುವುದಿಲ್ಲ. ಇವುಗಳಲ್ಲಿ ಕಬ್ಬಿಣದ ಉಲ್ಲೇಖ ಬಂದಿದೆ. ಆದ್ದರಿಂದ ಈ ವೇದವು ಸಾ.ಶ.ಪೂ 1000ಕ್ಕಿಂತ ಮುಂಚಿನದ್ದಲ್ಲ ಎಂದು ತಿಳಿಯುತ್ತದೆ.

ಅಥರ್ವವೇದವು ಗಾತ್ರ ಮತ್ತು ವಿಷಯದ ದೃಷ್ಟಿಯಿಂದ ಋಗ್ವೇದವನ್ನು ಹೆಚ್ಚು ಹೋಲುತ್ತದೆ. ಇದು ಋಗ್ವೇದದ ಹತ್ತನೆಯ ಮಂಡಲದಿಂದ ಸಾಕಷ್ಟು ಪಡೆದಿದೆ. ಅಥರ್ವವೇದವು ಗದ್ಯ ರೂಪದಲ್ಲಿದೆ. ಇದರಲ್ಲಿ ಹೆಚ್ಚಾಗಿ ಪ್ರಾಚೀನ ಭಾಷೆಗಿಂತ 'ಬ್ರಾಹ್ಮಣ'ಗಳ ಭಾಷೆ ಬಳಕೆಯಾಗಿದೆ. ಇದರಲ್ಲಿನ ಭೌಗೋಳಿಕ ವಿವರಣೆಯು ಋಗ್ವೇದದ ಪ್ರದೇಶಕ್ಕಿಂತ ಭಿನ್ನವಾಗಿದೆ. ಅಂದರೆ ಆರ್ಯರು ಪೂರ್ವಕ್ಕೆ ಚಲಿಸಿರುವುದನ್ನು ಇದು ಸೂಚಿಸುತ್ತದೆ.

**ಸಾಮಾಜಿಕ ವ್ಯವಸ್ಥೆ:** ಋಗ್ವೇದದ ಕೊನೆಯಲ್ಲಿ ಪುರುಷಸೂಕ್ತದಲ್ಲಿ ಪ್ರಸ್ತಾಪಗೊಂಡ, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಎಂಬ ನಾಲ್ಕು ವಿಭಜನೆಗಳು ಉತ್ತರ ವೇದಗಳ ಕಾಲದಲ್ಲಿ ಹಲವಾರು ಬದಲಾವಣೆಗಳಿಗೆ ಒಳಗಾಗಿ ಗಟ್ಟಿಗೊಂಡವು. ಬ್ರಾಹ್ಮಣರು ವೈದಿಕ ಯಜ್ಞ ಮತ್ತು ಆಚರಣೆಗಳನ್ನು ಮಾಡುವುದಕ್ಕೆ ಪ್ರತಿಫಲವಾಗಿ ಕಾಣಿಕೆಗಳನ್ನು ಸ್ವೀಕರಿಸುತ್ತಿದ್ದರು. ಜಮೀನು ಹೊಂದುವುದರಲ್ಲಿ, ಗೋವುಗಳನ್ನು ಪಡೆಯುವುದರಲ್ಲಿ, ಪೂಜೆಯಲ್ಲಿ, ದೇವರ ವಿಚಾರದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಇವರು ಪಡೆದುಕೊಂಡರು.

ರಾಜನ್ಯ ಎಂಬುದು ಕ್ಷತ್ರಿಯ ವರ್ಣವನ್ನು ಸೂಚಿಸುತ್ತಿತ್ತು. ಅಧಿಕಾರ ಪಡೆದವರ ಮೂಲ ಏನೇ ಆಗಿದ್ದರೂ ಅವರನ್ನು ಕ್ಷತ್ರಿಯ ಎಂದು ಪರಿಗಣಿಸಲಾಗುತ್ತಿತ್ತು. ಬಿಲ್ಲುವಿದ್ಯೆಯಲ್ಲಿ ಪರಿಣತರು ಮತ್ತು ರಥಗಳಲ್ಲಿ ಕುಳಿತು ಯುದ್ಧ ಮಾಡಬಲ್ಲ ಯೋಧರಾಗಿ ರಾಜನ್ಯರ ಮಹತ್ವ ಹೆಚ್ಚಾಯಿತು. 'ವೈಶ್ಯ' ಪದ ಬಳಕೆ ಇಲ್ಲಿಯೂ ವಿರಳವಾಗಿ ಕಾಣುತ್ತದೆ. ಇವರು ಕಾಣಿಕೆಯನ್ನು ಇನ್ನೊಬ್ಬರಿಗೆ ಕೊಡಬೇಕಾಗಿತ್ತು. ಇವರನ್ನು ಇಷ್ಟ ಬಂದಾಗ

©KTBS Not to be republished

ದಬ್ಬಾಳಿಕೆಗೆ ಒಳಪಡಿಸಬಹುದಾಗಿತ್ತು. ಯಜ್ಞ ಮಾಡುವ ಮತ್ತು ಅಲ್ಲಿ ಪ್ರವೇಶಿಸುವ ಹಕ್ಕು ಹೊಂದಿರಲಿಲ್ಲ. ಮೇಲಿನ ಎರಡು ವರ್ಣಗಳಿಗಿಂತ ಕೆಳಗಿದ್ದರೂ ಸಹ ಇವರೂ ಆರ್ಯರೇ ಆಗಿದ್ದರು.

ಶೂದ್ರರನ್ನು ವರ್ಣ ವ್ಯವಸ್ಥೆಯ ಕೊನೆಯಲ್ಲಿ ಇಡಲಾಗಿತ್ತು. ಆದರೆ ದಸ್ಯುಗಳು ಮತ್ತು ದಾಸರನ್ನು ವರ್ಣವ್ಯವಸ್ಥೆಯ ಹೊರಗಡೆ ಇಡಲಾಗಿತ್ತು. ಕ್ರಮೇಣ ಇವರು ಶೂದ್ರ ವರ್ಣಕ್ಕೆ ಸೇರ್ಪಡೆಯಾದರು. ಶೂದ್ರರನ್ನು ವರ್ಣ ಸಮಾಜದ ಭಾಗವೆಂದು ಒಪ್ಪಿಕೊಂಡಾಗಲೂ ಅವರಿಗೆ ಯಾವ ಹಕ್ಕುಗಳನ್ನೂ ನೀಡಿರಲಿಲ್ಲ. ಶೂದ್ರನನ್ನು ಬೇಕೆಂದಾಗ ಹೊರಹಾಕಬಹುದಿತ್ತು ಮತ್ತು ಕೊಲ್ಲಬಹುದಿತ್ತು. ಶೂದ್ರ ಯಜ್ಞ ಆಚರಣೆ ಮಾಡುವಂತಿರಲಿಲ್ಲ. ಪವಿತ್ರನಾದ ಗುರುವು ಶೂದ್ರರನ್ನು ತ್ಯಜಿಸಬೇಕು ಮತ್ತು ಅಷ್ಟೇ ಅಲ್ಲ, ಶೂದ್ರರನ್ನು ನೋಡಬಾರದೆಂದು ಹೇಳಲಾಯಿತು. ಕೆಲವೊಮ್ಮೆ ಈ ದಾಸ, ದಸ್ಯು ಮತ್ತು ಇತರ ಬುಡಕಟ್ಟುಗಳಿಂದಲೇ ಶೂದ್ರರು ಬಂದಿರಬಹುದು. ಕೆಲವು ಆದಿಕಾಲದ 'ಆಹಾರ ಸಂಗ್ರಹ' ಸಮುದಾಯಗಳಾದ 'ನಿಷಾದರು' ಮತ್ತು 'ಚಂಡಾಲ'ರನ್ನು ಅಸ್ಪೃಶ್ಯ ಜಾತಿಗಳೊಂದಿಗೆ ಸೇರಿಸಲಾಗಿದೆ.

ಸಾಮಾಜಿಕ ಶ್ರೇಣೀಕರಣದಲ್ಲಿ ಹೆಣ್ಣನ್ನು ಕೆಳಸ್ಥಾನದಲ್ಲಿ ಇರಿಸಲಾಯಿತು. ಮಹಿಳೆಯನ್ನು 'ಅಸತ್ಯ'ದ ಮೂರ್ತರೂಪವೆಂದು ಪರಿಗಣಿಸಲಾಗಿತ್ತು. ಅಥರ್ವವೇದದ ಸಮಯಕ್ಕೆ ವರದಕ್ಷಿಣೆ ಪದ್ಧತಿಯ ಉಲ್ಲೇಖವಿದೆ. ಮಹಿಳೆಯರ ಶ್ರಮಕ್ಕೆ ಪ್ರತಿಫಲವೂ ಸರಿಯಾಗಿರಲಿಲ್ಲ. ಬಾಲ್ಯ ವಿವಾಹ ಪದ್ಧತಿ ಇರಲಿಲ್ಲ. ಶ್ರೀಮಂತರು ಮತ್ತು ಬಲಾಢ್ಯರಲ್ಲಿ ಬಹುಪತ್ನಿತ್ವ ಇತ್ತು. ವಿಧವೆಯರು ಮರುವಿವಾಹ ಮಾಡಿಕೊಳ್ಳುವ ಸಾಧ್ಯತೆಯಿತ್ತು.

**ಅರ್ಥ ವ್ಯವಸ್ಥೆ:** ಉತ್ತರ ವೇದಗಳ ಕಾಲಕ್ಕೆ ಆರ್ಯ ಬುಡಕಟ್ಟುಗಳು ಸಿಂಧೂ ನದಿ ಪ್ರದೇಶದಿಂದ ಗಂಗಾ ನದಿ ಪ್ರದೇಶಕ್ಕೆ ಬಂದು ನೆಲೆಸಿದವು. ಇದಕ್ಕಾಗಿ ಅರಣ್ಯಗಳನ್ನು ನಾಶ ಮಾಡಬೇಕಿತ್ತು. ಅರಣ್ಯವನ್ನು ಅಗ್ನಿಯ ಸಹಾಯದಿಂದ ಸುಡುತ್ತಾ, ಕೃಷಿಗೆ ಅನುಕೂಲವಾದ ಭೂಮಿಯನ್ನು ಸೃಷ್ಟಿಸುತ್ತಾ ಉತ್ತರ ಪ್ರದೇಶದ ಬಯಲುಗಳಿಗೆ ಈ ಬುಡಕಟ್ಟುಗಳು ಬಂದವು. ಸಟ್ಲೇಜ್ ಮತ್ತು ಯಮುನಾ ದೋ ಅಬ್ ಪ್ರದೇಶಗಳ ನೀರಿನ ಕೊರತೆಯನ್ನು ನೀಗಿಕೊಳ್ಳಲು ಸಹಜವಾಗಿಯೇ ಗಂಗಾ ಬಯಲಿಗೆ ಬಂದರು. ಮರಗಳನ್ನು ಕಡಿಯಲು ಕಬ್ಬಿಣದ ಕೊಡಲಿಯನ್ನು ಬಳಸುತ್ತಿದ್ದರು. ಅಥರ್ವವೇದದಲ್ಲಿ ಆರು ಮತ್ತು ಎಂಟು ಎತ್ತುಗಳ ನೇಗಿಲಿನ ಪ್ರಸ್ತಾಪವಿದೆ. ಯಜುರ್ವೇದ ಸಂಹಿತೆಗಳಲ್ಲಿ ಹನ್ನೆರಡು ಎತ್ತುಗಳ ನೇಗಿಲಿನ ಬಗ್ಗೆ ಹೇಳಲಾಗಿದೆ. ಅಂದರೆ ಕೃಷಿ ಕ್ಷೇತ್ರದಲ್ಲಿ ಎತ್ತುಗಳ ಬಳಕೆ ಇನ್ನೂ ಹೆಚ್ಚಾಯಿತು ಎಂಬುದನ್ನು ಇದು ಸೂಚಿಸುತ್ತದೆ.

**ನಿಮಗಿದು ತಿಳಿದಿರಲಿ:**

ವೈದಿಕ ಪಠ್ಯಗಳಲ್ಲಿ ಮುಂದೆ ಹೆಸರಿಸಿರುವ ಬೆಳೆಗಳ ಉಲ್ಲೇಖವಿದೆ : 1. ಭತ್ತ, 2. ಬಾರ್ಲಿ, 3. ಉದ್ದು, 4. ಎಳ್ಳು, 5. ಹೆಸರು, 6. 'ಕುಳ್ಥಿ' ಅಥವಾ ಹುರುಳಿ, 7. ನವಣೆ, 8. 'ಚೀನ' ಅಥವಾ ಸಾಮಾನ್ಯ ರಾಗಿ, 9. 'ಸಾನ್ವ' ಅಥವಾ 'ಬಡವನ ರಾಗಿ', 10. ಕಾಡು ನೆಲ್ಲು, 11. ಗೋಧಿ ಮತ್ತು 12. ಮಸೂರ್. ಕಾಡು ನೆಲ್ಲು ಬಿಟ್ಟು ಮೇಲೆ ಹೇಳಿದ 12 ರಲ್ಲಿ 9 ಬೆಳೆಗಳು ಸಾ.ಶ.ಪೂ 1500 ಕ್ಕಿಂತ ಮೊದಲಿನ ಅವಧಿಯದ್ದೆಂದು ಪುರಾತತ್ವಶಾಸ್ತ್ರ ಪ್ರಮಾಣೀಕರಿಸಿದೆ. ಇನ್ನೊಂದು ಸೂಕ್ತದಲ್ಲಿ 13ನೇ ಬೆಳೆಯಾಗಿ ಕಬ್ಬಿನ (ಇಕ್ಷು) ಬಗ್ಗೆ ಉಲ್ಲೇಖವಿದೆ.

ಆರ್ಯರ ಜೀವನ ಪದ್ಧತಿಯಲ್ಲಿ ಈಗ ಬೇಟೆ ಮತ್ತು ಪಶುಪಾಲನೆಗಿಂತ ಕೃಷಿ ಪ್ರಮುಖವಾಯಿತು. ಕೃಷಿ ಮತ್ತು ವಾಣಿಜ್ಯದಲ್ಲಿ ಯಾರು ತೊಡಗಿಕೊಂಡಿಲ್ಲವೋ ಅವರನ್ನು 'ವ್ರಾತ್ರರು', ಅಂದರೆ ಪರಕೀಯರು ಎಂದು ಕರೆಯಲಾಯಿತು. ಆದರೆ ವ್ಯವಸಾಯ ಮತ್ತು ವಸ್ತುಗಳ ಸಾಗಾಣಿಕೆಗೆ ದನಗಳ ಸಾಕಾಣಿಕೆ ಅಗತ್ಯವಾಗಿತ್ತು. ಈ ಹಿನ್ನೆಲೆಯಲ್ಲೇ 'ಹಸು ಮತ್ತು ಎತ್ತುಗಳನ್ನು ತಿನ್ನಬಾರದು' ಎಂಬ ವಿಚಾರ ಮಹತ್ವ ಪಡೆಯಿತು. ಆದರೆ ಈ ನಿಷೇಧವನ್ನು ಎಲ್ಲರೂ ಒಪ್ಪಿರಲಿಲ್ಲ. ಒಬ್ಬರು ಹೊಂದಿದ್ದ ದನಗಳ ಸಂಖ್ಯೆಯನ್ನು ಆಧರಿಸಿ ಸಂಪತ್ತನ್ನು ತೀರ್ಮಾನಿಸಲಾಗುತ್ತಿತ್ತು.

Not to be republished ©KTBS

ಚಿನ್ನ, ತಾಮ್ರ, ಕಬ್ಬಿಣ, ಸೀಸ, ಕಂಚು ಮತ್ತು ತವರದಂತಹ ಲೋಹಗಳ ಪ್ರಸ್ತಾಪಗಳು ವೇದಗಳಲ್ಲಿವೆ. ಬೆಳ್ಳಿಯ ಉಲ್ಲೇಖವೂ ಇದೆ. ಪುರಾತತ್ವಶಾಸ್ತ್ರದ ಪ್ರಕಾರ ಸಿಂಧೂ ಮತ್ತು ಗಂಗಾ ನದಿ ಪ್ರದೇಶಗಳಲ್ಲಿ ಅದಿರನ್ನು ಕಮ್ಮಾರಿಕೆ ಮಾಡಿ 'ಕಬ್ಬಿಣ'ವನ್ನು ಉತ್ಪಾದಿಸುವ ಹಂತ ಸಾ.ಶ.ಪೂ. 1000ಕ್ಕೂ ಮೊದಲೇ ಇತ್ತು ಎನ್ನಲು ಪುರಾವೆಗಳಿಲ್ಲ. ಇದರ ಪ್ರಕಾರ ಕಬ್ಬಿಣವನ್ನು ಉಕ್ಕಾಗಿಸುವ ವಿಧಾನ ಪಶ್ಚಿಮ ಏಷ್ಯಾದಲ್ಲಿ ಕಂಡುಹಿಡಿಯಲ್ಪಟ್ಟು, ಪೂರ್ವ ದೇಶಗಳಿಗೆ ಹಬ್ಬಿದ್ದು ಸಾ.ಶ.ಪೂ. 10ನೆಯ ಶತಮಾನದ ನಂತರ. ಉತ್ತರ ಭಾರತಕ್ಕೆ ಇದು 8ನೆಯ ಶತಮಾನಕ್ಕಿಂತ ಮುಂಚೆ ಕಾಲಿಟ್ಟಿರುವ ಸಾಧ್ಯತೆ ಕಡಿಮೆ. ಅತ್ರಂಜಿಖೇರಾದಲ್ಲಿ (ಉತ್ತರ ಪ್ರದೇಶದ ಪಶ್ಚಿಮ ಭಾಗ) ಸಿಕ್ಕಿರುವ ಕಬ್ಬಿಣದ ಹಸ್ತಕೃತಿಗಳು ಇದನ್ನು ಪುಷ್ಟೀಕರಿಸುತ್ತವೆ.

**ನಿಮಗಿದು ತಿಳಿದಿರಲಿ.**

*ರಥ ತಯಾರಿಕೆಯ ಕಾರಣದಿಂದ ಬಡಗಿ ವೃತ್ತಿ ಗೌರವಯುತವಾಗಿತ್ತು. ಒರಳು ಮತ್ತು ಒನಕೆ ಬಳಕೆಯಲ್ಲಿತ್ತು. ಲೋಹಗಳ ಬಳಕೆ ಹೆಚ್ಚಾದಂತೆ ಕಲ್ಲಿನ ಉಪಕರಣಗಳ ಬಳಕೆ ಕಡಿಮೆಯಾಗಿರಬಹುದು. ಕುಂಬಾರ ವೃತ್ತಿ ಇತ್ತು. ನೂಲು ತೆಗೆಯುವ ಕೆಲಸವನ್ನು ಬಹುಪಾಲು ಸ್ತ್ರೀಯರು ಮಾಡುತ್ತಿದ್ದರು. ಬಟ್ಟೆ ಕಸೂತಿ, ಬಟ್ಟೆಗೆ ಬಣ್ಣ ಹಾಕುವುದು, ಬಟ್ಟೆ ಒಗೆಯುವುದನ್ನು ಮಹಿಳೆಯೇ ಮಾಡುತ್ತಿದ್ದಳು.*

*ಈ ಕಾಲಘಟ್ಟದಲ್ಲಿ ವಿಶಿಷ್ಟ ವೃತ್ತಿಗಳು ಹೆಚ್ಚುತ್ತಲೇ ಹೋದದನ್ನು ಕಾಣಬಹುದು. ಬಿಲ್ಲು ಬಾಣಗಳ ತಯಾರಿಕೆ, ಹಗ್ಗದ ತಯಾರಿಕೆ, ಬಿಲ್ಲಿಗೆ ಹೆದೆ ಮಾಡುವುದು, ಬೊಂಬುಗಳನ್ನು ಸೀಳಿ ಕೆಲಸ ಮಾಡುವುದು, ಮುಲಾಮು ತಯಾರಿಸುವ ಸ್ತ್ರೀಯರು, ಕಟ್ಟಿಗೆ ಸಾಗಿಸುವವರು, ಬೆಂಕಿ ಹೊತ್ತಿಸುವವರು, ಕುದುರೆ ಪಾಲಕರು, ದನಗಾಹಿಗಳು, ಬೇಟೆಗಾರರು, ಮೀನುಗಾರರು, ಕಮ್ಮಾರರು, ಅಕ್ಕಸಾಲಿಗರು, ವ್ಯಾಪಾರಿಗಳು, ವರ್ತಕರು, ವೈದ್ಯರು, ಜ್ಯೋತಿಷಿಗಳು, ಇಂತಹ ಇನ್ನೂ ಅನೇಕ ವೃತ್ತಿಪರರು ಇದ್ದರು.*

*ಈ ಅವಧಿಯಲ್ಲಿ ಪಟ್ಟಣಗಳು ಅಥವಾ ನಗರಗಳು ಬೆಳೆದಿರಲಿಲ್ಲ. ಶತಪಥ ಬ್ರಾಹ್ಮಣದಲ್ಲಿ ಬರುವ 'ಪುರ್' ಎಂಬ ಶಬ್ದವು ಬೇಲಿಯಿಂದ ಸುತ್ತುವರೆದ, ಗೋಡೆಯಿಂದ ಆವೃತವಾದ, ರಕ್ಷಿತವಾದ ಬಹುಶಃ ಒಂದೇ ಬಾಗಿಲಿರುವ ಒಂದು ನೆಲೆಯಾಗಿತ್ತು. ಉತ್ತರ ವೇದದ ಪಠ್ಯಗಳಲ್ಲಿ ರಸ್ತೆಗಳು, ಅಂಗಡಿಗಳು ಮತ್ತು ಸಂತೆ ಅಥವಾ ನಿವಾಸ ಸ್ಥಳಗಳಿರುವ ಪಟ್ಟಣದ ವಿವರಣೆ ಅಥವಾ ಹೆಸರುಗಳು ಕಾಣುವುದಿಲ್ಲ. ಪಟ್ಟಣಗಳನ್ನು ಪೋಷಿಸುವಷ್ಟು ಆರ್ಥಿಕತೆ ಇನ್ನೂ ಬೆಳೆದಿರಲಿಲ್ಲ.*

**ರಾಜಕೀಯ ವ್ಯವಸ್ಥೆ:** ಋಗ್ವೇದದ ಅಂತಿಮ ಘಟ್ಟದಲ್ಲಿ ಯಾವುದು ಆರ್ಯರ ಆಗ್ನೇಯ ದಿಕ್ಕಿನಲ್ಲಿ ಭೌಗೋಳಿಕ ತುದಿಯಾಗಿತ್ತೋ ಅದು ಈಗ ಮಧ್ಯಪ್ರದೇಶವಾಗಿದೆ. ಈ ಪ್ರದೇಶಗಳಲ್ಲಿ ಕುರು, ಪಾಂಚಾಲ, ವಶ, ಉಶೀನ ಬುಡಕಟ್ಟುಗಳು ವಾಸವಿದ್ದವು. ಕುರುಕ್ಷೇತ್ರ ಎಂದು ಕರೆಯಲಾಗುವ ಇಂದಿನ ಪ್ರದೇಶವು ಆಗಿನ ಕುರು ಬುಡಕಟ್ಟಿನ ವಾಸಸ್ಥಳವಾಗಿತ್ತು. ಕೋಸಲ ಮತ್ತು ವಿದೇಹ ಬುಡಕಟ್ಟುಗಳು ಆರ್ಯ ಜನರಿದ್ದ ಪ್ರದೇಶದ ಪೂರ್ವ ತುದಿಯಲ್ಲಿದ್ದವು. ಅಂದರೆ ಈಗಿನ ಉತ್ತರ ಪ್ರದೇಶದ ಈಶಾನ್ಯ ಮತ್ತು ಉತ್ತರ ಬಿಹಾರಗಳಲ್ಲಿ ವಾಸವಿದ್ದರು. ಬುಡಕಟ್ಟುಗಳೇ ರಾಜಕೀಯ ವ್ಯವಸ್ಥೆಯನ್ನು ನಿಯಂತ್ರಿಸುವ ಪ್ರಧಾನ ಶಕ್ತಿ ಕೇಂದ್ರಗಳಾಗಿದ್ದವು.

ಅಥರ್ವವೇದದ ಕಾಲದಲ್ಲಿ ಪೂರ್ವ ಬಿಹಾರದಲ್ಲಿ ಅಂಗರು ಮತ್ತು ಗಂಗಾನದಿಯ ದಕ್ಷಿಣ ಭಾಗದ ಮಧ್ಯಬಿಹಾರ ಪ್ರದೇಶದಲ್ಲಿ ಮಗಧ ಬುಡಕಟ್ಟುಗಳು ವಾಸವಿದ್ದವು. ಇವರನ್ನು ಶತ್ರುಗಳೆಂದು ಋಷಿಗಳು ಕಾಣುತ್ತಿದ್ದರು. ಇನ್ನೂ ಪೂರ್ವದಲ್ಲಿದ್ದ ಪುಂಡ್ರರನ್ನು ಮತ್ತು ದಕ್ಷಿಣದ ಆಂಧ್ರರನ್ನು ಬಹಿಷ್ಕೃತರೆಂದು ಹೇಳಲಾಗಿತ್ತು. ಈ ಬುಡಕಟ್ಟುಗಳು ಇನ್ನೂ ಆರ್ಯರ ಭಾಷೆ ಮತ್ತು ಸಂಸ್ಕೃತಿಗಳಿಂದ ಪ್ರಭಾವಿತರಾಗಿರಲಿಲ್ಲ, ಎಂದರೆ ಅಥರ್ವವೇದ ಕಾಲದಲ್ಲೂ ಬುಡಕಟ್ಟುಗಳು ಸೃಷ್ಟಿಸಿಕೊಂಡಿದ್ದ ರಾಜಕೀಯ ವ್ಯವಸ್ಥೆಯೆ ಮುಂದುವರೆದಿತ್ತು.

©KTBS Not to be republished

ಇಂಡೋ–ಆರ್ಯ ಜನರ ವಲಸೆ ಗಂಗಾನದಿ ದಂಡೆಗೆ ಬಂದದ್ದು ಮತ್ತು ಇರಾನಿಯರು ಭಾರತದ ಗಡಿ ಪ್ರದೇಶ ಮತ್ತು ಪಶ್ಚಿಮ ಪಂಜಾಬಿಗೆ ಬಂದದ್ದು ಅತಿಕ್ರಮಣ ಮತ್ತು ಯುದ್ಧಗಳಿಂದ ಆಗಿರಬಹುದು. ವೈದಿಕ ಬುಡಕಟ್ಟುಗಳು ಬಿಲ್ಲು, ಬಾಣ ಮತ್ತು ಕುದುರೆ ರಥಗಳ ಸಹಾಯದಿಂದ ಗಂಗಾನದಿ ಪ್ರದೇಶದ ಆರ್ಯೇತರ ಬುಡಕಟ್ಟುಗಳ ಮೇಲೆ ತಮ್ಮ ಗೆಲುವನ್ನು ಪಡೆದರು. ಸಾ.ಶ.ಪೂ 800 ನಂತರದಲ್ಲಿ ಕಬ್ಬಿಣದ ಬಳಕೆ ಈ ಗೆಲುವಿಗೆ ಸಹಾಯ ಮಾಡಿದೆ.

ವೈದಿಕ ಬುಡಕಟ್ಟುಗಳಲ್ಲಿ ಹೆಚ್ಚುತ್ತಿದ್ದ ಸೈನಿಕ ಸಾಮರ್ಥ್ಯದಿಂದಾಗಿ ಪ್ರದೇಶಗಳ ವಿಸ್ತರಣೆಯಾಗುತ್ತಿತ್ತು. ಪರಿಣಾಮವಾಗಿ ಬಲಿಷ್ಠ ರಾಜಪ್ರಭುತ್ವಗಳು ರೂಪುಗೊಂಡವು. ಅಥರ್ವವೇದದಲ್ಲಿ, "ಎಲ್ಲಾ ಜನರನ್ನು ಆಳುವವನು, ನರರೊಳಗೆ ದೇವನಿದ್ದ ಹಾಗೆ" ಎಂದು ರಾಜನನ್ನು ವರ್ಣಿಸಲಾಗಿದೆ. ಅಧಿಕಾರ ಮತ್ತು ಸಂಪತ್ತು ಹೆಚ್ಚು ಶೇಖರಣೆಯಾದಂತೆ, ಅದನ್ನು ರಕ್ಷಿಸಿಕೊಳ್ಳಲು, ರಾಜನು ದೇವರಿಗೆ ಸಮಾನ ಅಥವಾ ದೇವರ ಪ್ರತಿನಿಧಿ ಎನ್ನುವ ಕಲ್ಪನೆಯನ್ನು ಸೃಷ್ಟಿಸಲಾಯಿತು. ಈ ಘಟ್ಟದಲ್ಲಿ ಬಲಿ, ತೆರಿಗೆ, ಕಾಣಿಕೆಗಳ ಬಗ್ಗೆ ಉಲ್ಲೇಖಗಳು ಹೆಚ್ಚೆಚ್ಚು ಬರುತ್ತವೆ. ರಾಜನ ಸುತ್ತ ಸಂಕೀರ್ಣ ಮತ್ತು ಶ್ರೀಮಂತಿಕೆಯನ್ನು ಸೂಚಿಸುವ ಆಚರಣೆಗಳು ಬೆಳೆದವು. ರಾಜನು ಅಧಿಕಾರಕ್ಕೆ ಏರಲು 'ರಾಜಸೂಯ' ಹೆಸರಿನ ಪಟ್ಟಾಭಿಷೇಕದ ಆಚರಣೆ ಹುಟ್ಟಿಕೊಂಡಿತು. ರಾಜನ ಅಧಿಕಾರದ ಪ್ರಶ್ನೆಯಾಗಿ 'ಅಶ್ವಮೇಧ'ಯಾಗ ಮಹತ್ವ ಪಡೆದುಕೊಂಡಿತು.

**ಧಾರ್ಮಿಕ ವ್ಯವಸ್ಥೆ:** ಋಗ್ವೇದದ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳ ಮುಂದುವರಿಕೆಯಾಗಿ, ಉತ್ತರ ವೇದಗಳ ಕಾಲದಲ್ಲಿ ಅನೇಕ ಬದಲಾವಣೆಗಳು ಮತ್ತು ಸೇರ್ಪಡೆಗಳೊಂದಿಗೆ ಧಾರ್ಮಿಕ ವಿಚಾರಗಳು ಮತ್ತು ಆಚರಣೆಗಳು ಬೆಳೆದವು. ಉತ್ತರ ಋಗ್ವೇದ ಕಾಲಕ್ಕೆ ವಿಷ್ಣು ಮತ್ತು ರುದ್ರ ಇಬ್ಬರು ದೇವತೆಗಳು ಪ್ರಮುಖ ಸ್ಥಾನವನ್ನು ಹೊಂದಿದ್ದರು. ವೇದಗಳಿಗೆ ಅನುಬಂಧವಾಗಿ ಬಂದ 'ಬ್ರಾಹ್ಮಣ'ಗಳ ಕಾಲಕ್ಕೆ ಇವರು ವೈದಿಕ ದೇವತೆಗಳ ಸಾಲಿನಲ್ಲಿ ಪ್ರಮುಖರಾದರು. ವಿಷ್ಣುವಿನ ಅವತಾರಗಳ ಬಗ್ಗೆ ನೇರ ಉಲ್ಲೇಖಗಳಿಲ್ಲ. ರುದ್ರನು ಸ್ಥಳೀಯ ದೇವತೆಗಳನ್ನು ಒಳಗೊಳ್ಳುವ ಮೂಲಕ ಅವುಗಳಿಗಿದ್ದ ಪುರಾಣ ಕಥನಗಳನ್ನು ಮತ್ತು ಶಕ್ತಿಗಳನ್ನು ತನ್ನದಾಗಿಸಿಕೊಂಡ ಎನ್ನಲಾಗಿದೆ. ಜಗತ್ತಿನ ಎಲ್ಲಾ ಆಗುಹೋಗುಗಳೂ ಒಂದಲ್ಲ ಒಂದು ಯಜ್ಞದ ಫಲ ಎನ್ನುವ ವಿಧಿ ವಿಧಾನಗಳನ್ನು ಪುರಾಣಗಳಲ್ಲಿ ತರಲಾಯಿತು.

'ಉಪನಿಷದ್'ಗಳಲ್ಲಿ 'ಕರ್ಮ' ಮತ್ತು 'ಆತ್ಮಗಳ ಪುನರ್ಜನ್ಮ' ಎಂಬ ಹೊಸ ಕಲ್ಪನೆಗಳನ್ನು ಹುಟ್ಟುಹಾಕಲಾಯಿತು. ಹುಟ್ಟಿನಿಂದಲೇ ಸ್ಥಾನ ನಿರ್ಣಯ ಮಾಡುವ ಜಾತಿ ವ್ಯವಸ್ಥೆಯ ಮುಂದುವರಿಕೆಗೆ ಇದು ಸಹಾಯ ಮಾಡಿತು. ಜಾತಿ ವ್ಯವಸ್ಥೆಯು ಸಾಂಸ್ಥಿಕ ರೂಪದಲ್ಲಿ ಬೆಳೆಯಲು ಇದು ಅತಿ ಮುಖ್ಯ ತಾತ್ವಿಕ ಆಧಾರವಾಯಿತು.

Not to be republished ©KTBS

**ಅಶ್ವಮೇಧಯಾಗ**

ಅಶ್ವಮೇಧಯಾಗದ ಪ್ರಾರಂಭದಲ್ಲಿ ರಾಜನ ವಿಶೇಷ ಕುದುರೆಯೊಂದನ್ನು ಮುಕ್ತವಾಗಿ ಬಿಡಲಾಗುತ್ತಿತ್ತು. ಅದರ ಹಿಂದೆ ವಿಶೇಷ ಯೋಧರ ದಂಡೊಂದು ಹೋಗುತ್ತಿತ್ತು. ಅದು ಪ್ರವೇಶಿಸಿದ ಪ್ರದೇಶಗಳ ರಾಜರು ಸಾರ್ವಭೌಮತ್ವವನ್ನು ಒಪ್ಪಿ ಅಶ್ವಮೇಧದ ಒಡೆಯನಿಗೆ ಅಧೀನರಾಗಿ ಕಪ್ಪವನ್ನು ನೀಡುತ್ತಿದ್ದರು. ಯಾರಾದರೂ ಕುದುರೆಯನ್ನು ಕಟ್ಟಿಹಾಕಿದರೆ ಅದು ರಾಜನ ಸಾರ್ವಭೌಮತ್ವಕ್ಕೆ ಸವಾಲಾಗುತ್ತಿತ್ತು ಹಾಗೂ ಅದು ಮುಂದಿನ ಸಮರಕ್ಕೆ ನಾಂದಿಯಾಗುತ್ತಿತ್ತು. ಹೀಗೆ ಪ್ರದೇಶಗಳನ್ನೆಲ್ಲ ಜಯಿಸಿಕೊಂಡು ಅಧೀನಗೊಳಿಸಿದ ನಂತರ ಅಶ್ವಮೇಧಯಾಗವನ್ನು ಮಾಡಲಾಗುತ್ತಿತ್ತು. ಬಹುತೇಕ ಎಲ್ಲ ಪ್ರಮುಖ ಅರಸರ ಮಹದಾಸೆ ಇದಾಗಿತ್ತು.

## ಅಭ್ಯಾಸಗಳು

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಬೊಲನ್ ಪಾಸಿನ ಫಲವತ್ತಾದ ಮೈದಾನದ ಸಮೀಪದಲ್ಲಿ ಇರುವ ನೆಲೆ ____________ .
2. ಹರಪ್ಪ ನೆಲೆಯು ಪಂಜಾಬಿನ ______________ ಕಣಿವೆ ಪ್ರದೇಶದಲ್ಲಿ ಕಂಡುಬಂದಿದೆ.
3. ಹರಪ್ಪ ಸಂಸ್ಕೃತಿಯ ಜನ ಕೃಷಿ ಮತ್ತು ________________ ಅವಲಂಬಿಸಿದ್ದರು.
4. ಅತ್ಯಂತ ಹಳೆಯ ವೇದ ________________ .
5. ಋಗ್ವೇದದಲ್ಲಿ ಯಜ್ಞಗಳನ್ನು ನಡೆಸಿಕೊಡುವ ಪುರೋಹಿತನನ್ನು ____________ ಎಂದು ಕರೆಯಲಾಗುತ್ತಿತ್ತು.

**II. ಸಂಕ್ಷಿಪ್ತವಾಗಿ ಉತ್ತರಿಸಿ.**

1. ಹರಪ್ಪ ನಗರದ ವಿಶೇಷತೆಯನ್ನು ಬರೆಯಿರಿ.
2. ಮೊಹೆಂಜೋದಾರೊವಿನ ಈಜು ಸ್ನಾನ ಕೊಳದ ಬಗ್ಗೆ ಬರೆಯಿರಿ.
3. ನಗರ ಯೋಜನೆ ಯಾವ ರೀತಿಯದಾಗಿತ್ತು?
4. ವೇದಗಳನ್ನು ಹೆಸರಿಸಿ.
5. ವೇದಗಳ ಕಾಲದಲ್ಲಿ ಯಾವ ಯಜ್ಞ ಯಾಗಾದಿಗಳು ಪ್ರಮುಖವಾಗಿದ್ದವು?
6. ಉತ್ತರ ಋಗ್ವೇದ ಕಾಲದ ವೃತ್ತಿಗಳ ಬಗ್ಗೆ ವಿವರಿಸಿ.

**III. ಚಟುವಟಿಕೆಗಳು.**

1. ಮೊಹೆಂಜೋದಾರೋ–ಹರಪ್ಪ ನಾಗರಿಕತೆಯ ಯಾವುದಾದರೊಂದು ಯೋಜನೆಯನ್ನು ತಯಾರಿಸಿ.
2. ಉಪನಿಷತ್ತುಗಳಲ್ಲಿನ ಕೆಲವು ಕಥೆಗಳನ್ನು ಓದಿರಿ.

*****

©KTBS Not to be republished

## ಅಧ್ಯಾಯ – 4

# ಜಗತ್ತಿನ ಪ್ರಾಚೀನ ನಾಗರಿಕತೆಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಜಗತ್ತಿನ ಪ್ರಮುಖ ನಾಗರಿಕತೆಗಳಾದ ಈಜಿಪ್ಟ್, ಮೆಸಪಟೊಮಿಯಾ ಮತ್ತು ಚೀನಾದ ನಾಗರಿಕತೆಗಳು.*
- *ಆಯಾ ಕಾಲದ ನಾಗರಿಕತೆಗಳ ಕಾಲದಲ್ಲಿನ ಜನಜೀವನ ಕಲೆ, ವಾಸ್ತುಶಿಲ್ಪ, ಜೀವನಶೈಲಿಗಳು.*

ಸಿಂಧೂ ಕಣಿವೆಯ ನಾಗರಿಕತೆಯಂತೆಯೆ ಜಗತ್ತಿನ ವಿವಿಧೆಡೆಯಲ್ಲಿಯೂ ಪ್ರಾಚೀನ ನಾಗರಿಕತೆಗಳನ್ನು ಅದರ ಸಮಕಾಲೀನ ಸಂದರ್ಭಗಳಲ್ಲಿ ನಾವು ಕಾಣುತ್ತೇವೆ. ಈಜಿಪ್ಟ್‌ನ ನಾಗರಿಕತೆ, ಮೆಸಪಟೊಮಿಯಾದ ನಾಗರಿಕತೆ, ಚೀನಾದ ನಾಗರಿಕತೆಗಳನ್ನು ನಾವು ಏಷ್ಯ ಮತ್ತು ಆಫ್ರಿಕಾ ಖಂಡಗಳಲ್ಲಿ ಕಾಣುತ್ತೇವೆ.

### ಈಜಿಪ್ಟಿನ ನಾಗರಿಕತೆ

ಸಾಮಾನ್ಯವಾಗಿ ಎಲ್ಲ ನಾಗರಿಕತೆಗಳು ನದಿಯ ಬಯಲುಸೀಮೆ ಪ್ರದೇಶಗಳಲ್ಲಿಯೇ ಹುಟ್ಟಿಕೊಂಡಿವೆ. ಈಜಿಪ್ಟಿನ ನಾಗರಿಕತೆಯು ಚಿಗುರೊಡೆದದ್ದು ಇಲ್ಲಿ ಹರಿಯುವ ನೈಲ್ ನದಿಯಿಂದಾಗಿ. ಇಲ್ಲಿ ದೊರೆತಿರುವ ಅವಶೇಷಗಳು ಈಜಿಪ್ಟಿನ ವೈಭವವನ್ನು ಸಾರುವಂತಹವು. ಅಗಾಧವಾದ ಪಿರಮಿಡ್ಡುಗಳು, ಮೂರ್ತಿಶಿಲ್ಪಗಳು, ದೇವಾಲಯಗಳು ಹಾಗೂ ಅದರೊಳಗೆ ದೊರೆತಿರುವ ಬರಹಗಳು ಇಲ್ಲಿನ ಸಂಸ್ಕೃತಿ ಹಾಗೂ ಚರಿತ್ರೆಯನ್ನು ಸಾರುತ್ತವೆ.

### ಈಜಿಪ್ಟಿಯನ್ನರ ಕೊಡುಗೆ

ಈಜಿಪ್ಟಿಯನ್ನರು ಅತ್ಯುತ್ತಮ ಕೃಷಿಕರಾಗಿದ್ದರು. ನೀರಾವರಿಯ ಬಗ್ಗೆ ಅವರಿಗೆ ಅಪಾರವಾದ ತಿಳುವಳಿಕೆಯಿತ್ತು. ಅವರು ದೇವಾಲಯಗಳನ್ನು ಕಟ್ಟಿದ್ದರು. ಅವರು ಹುಟ್ಟುಹಾಕಿದ ಕ್ಯಾಲೆಂಡರ್ ಸಮಯ ಮಾಪನ ಮಾಡಲು ಅತ್ಯಂತ ಉಪಯುಕ್ತವಾಗಿತ್ತು. ಇದೆಲ್ಲದಕ್ಕೂ ಮಿಗಿಲಾಗಿ ಅವರು ಬರವಣಿಗೆಯ ಕಲೆಯನ್ನು ರೂಪಿಸಿಕೊಂಡಿದ್ದರು. ಇದು ಸಂಕೇತಗಳ ಭಾಷೆಯಾಗಿತ್ತು. ಸಣ್ಣ ಚಿತ್ರಗಳನ್ನು ಒಳಗೊಂಡ ಇದನ್ನು ಹಿರೋಗ್ಲೈಫಿಕ್ಸ್ (ಪವಿತ್ರ ಬರವಣಿಗೆ) ಎಂದು ಕರೆಯುತ್ತಾರೆ.

### ನೈಲ್ ಕಣಿವೆ

ಪ್ರತಿವರ್ಷವು ಮಳೆಗಾಲದಲ್ಲಿ ನೈಲ್‌ನದಿಯು ಕಣಿವೆಯನ್ನು ಕೆರೆಯನ್ನಾಗಿಸುತ್ತಿತ್ತು. ನೀರು ಬತ್ತಿದ ಮೇಲೆ ಹೊಲಗದ್ದೆ ಹಾಗೂ ಹುಲ್ಲುಗಾವಲುಗಳೆಲ್ಲ ಉತ್ಕೃಷ್ಟವಾದ ಜೇಡಿಮಣ್ಣಿನಿಂದ ಆವೃತವಾಗುತ್ತಿದ್ದವು. ನೂರಾರು ಜನರಿಂದ ಆಗುವ ಈ ಕೆಲಸವನ್ನು ಸಹೃದಯಿಯಾದ ಈಜಿಪ್ಟಿನ ನದಿಯೊಂದು ಮಾಡುತ್ತಿತ್ತು. ಹೀಗೆ ಮೊಟ್ಟಮೊದಲು ನಗರದ ಜನರಿಗೆ ಅದು ಆಹಾರವನ್ನು ಒದಗಿಸುತ್ತಿತ್ತು. ಬೇಸಾಯಕ್ಕೆ ಒಳಗಾದ ಎಲ್ಲ ಪ್ರದೇಶಗಳು ಕಣಿವೆಯಲ್ಲಿರಲಿಲ್ಲ. ಆದ್ದರಿಂದ ಇವರು ಸಣ್ಣಕಾಲುವೆಗಳು, ಬಾವಿಗಳ ಮೂಲಕ ಸಂಕೀರ್ಣವಾದ ನೀರಾವರಿ ವ್ಯವಸ್ಥೆಯನ್ನು ನಾಡಿನ ತುಂಬ ರೂಪಿಸಲು ಕಾರಣರಾದರು.

ಸಮೃದ್ಧ ಮತ್ತು ಸುಭೀಕ್ಷವಾಗಿದ್ದ ಈಜಿಪ್ಟಿನ ಕೃಷಿಕರು ಹಾಗೂ ಅಲ್ಲಿನ ನಗರವಾಸಿಗಳು ಬಿಡುವಿನ ವೇಳೆಯಲ್ಲಿ ಅನೇಕ ಕಲಾತ್ಮಕ ವಸ್ತುಗಳ ರಚನೆಯಲ್ಲಿಯೂ ತೊಡಗಿದ್ದರು. ಪ್ರಕೃತಿಯ ವಿಷಯವನ್ನು ವಿವರಿಸಲು ವ್ಯವಸ್ಥೆಯು ಪುರೋಹಿತನ ಸ್ಥಾನವನ್ನು ರೂಪಿಸಿತು. ಇವರು ವಿದ್ವಾಂಸರಾಗಿದ್ದು ಬರವಣಿಗೆಯ ದಾಖಲೆಗಳ ಸಂರಕ್ಷಣೆಯ ಗುರುತರ ಜವಾಬ್ದಾರಿಯನ್ನು ಹೊತ್ತಿದ್ದರು. ಮರಣದ ನಂತರದ ಮನುಷ್ಯನ

©KTBS Not to be republished

ಬದುಕಿನ ಬಗ್ಗೆ ಅವರಿಗೆ ನಂಬಿಕೆಯಿತ್ತು. ಮನುಷ್ಯನು ಪರಲೋಕದಲ್ಲಿ ಇಹಲೋಕದ ತನ್ನ ಕೃತ್ಯಗಳ ವರದಿಯನ್ನು ಬದುಕು ಮತ್ತು ಸಾವಿನ ಅಧಿಪತಿಯಾದ ಪ್ರಬಲ ದೈವ ಒಸಿರಿಸ್‌ನಿಗೆ ನೀಡಬೇಕು ಎಂಬ ನಂಬಿಕೆಯಿತ್ತು. ಇವರು ಇಲ್ಲಿನ ಬದುಕನ್ನು ಕೇವಲ ಕ್ಷಣಿಕ ಎಂದು ಪರಿಗಣಿಸಿ ನಂತರದ ಬದುಕಿಗಾಗಿ ಸುದೀರ್ಘ ತಯಾರಿ ನಡೆಸಿದ ಪರಿಣಾಮವಾಗಿ ನೈಲ್ ಪ್ರದೇಶವನ್ನೆಲ್ಲ ಸತ್ತವರಿಗಾಗಿ ಮೀಸಲಿಟ್ಟರು. ಈ ನಿಟ್ಟಿನ ತಯಾರಿಯಲ್ಲಿ ಸತ್ತ ದೇಹವನ್ನು ವಿವಿಧ ರಾಸಾಯನಿಕಗಳಿಂದ ಲೇಪಿಸಿ ತೆಳುವಾದ ಬಟ್ಟೆಯಿಂದ ಸುತ್ತಿಡುತ್ತಿದ್ದರು. ಇಡೀ ದೇಹವನ್ನೆಲ್ಲ ಆವರಿಸುವಂತೆ ಅವುಗಳನ್ನು ಸಂರಕ್ಷಿಸಲಾಯಿತು. ಹೀಗೆ ಸಂರಕ್ಷಿಸಲ್ಪಟ್ಟ ದೇಹವನ್ನು 'ಮಮ್ಮಿ' ಎಂದು ಕರೆಯಲಾಗಿದೆ. ಈ ದೇಹವನ್ನು ವಿಶೇಷವಾಗಿ ತಯಾರಿಸಿದ ಶವಪೆಟ್ಟಿಗೆಯಲ್ಲಿ ಇಡಲಾಗುತ್ತಿತ್ತು. ಈಜಿಪ್ಟಿಯನ್ನರ ಸಮಾಧಿಯೇ ಅವರ ವಾಸ್ತವಿಕ ನೆಲೆ. ಆದ್ದರಿಂದ ದೇಹದ ಸುತ್ತ ದಿನ ನಿತ್ಯದ ಬಳಕೆಯ ವಸ್ತುಗಳು, ಅಡುಗೆಯವನ ಮತ್ತು ಕ್ಷೌರಿಕನ ಸಣ್ಣ ಗೊಂಬೆಗಳನ್ನು ಮಾಡಿ ಮುಂದಿನ ಅಗತ್ಯಕ್ಕಾಗಿ ಸಕಲ ಸಿದ್ಧತೆಗಳನ್ನು ಮಾಡಲಾಗಿತ್ತು.


ಪಿರಮಿಡ್

ಪ್ರಾರಂಭದಲ್ಲಿ ಸಮಾಧಿಗಳನ್ನು ಬೆಟ್ಟಗಳ ಬಂಡೆಯನ್ನು ಕೊರೆದು ರಚಿಸಲಾಗುತ್ತಿತ್ತು. ಕ್ರಮೇಣವಾಗಿ ಈಜಿಪ್ಟಿಯನ್ನರು ಉತ್ತರಕ್ಕೆ ಸಾಗಿದಂತೆಲ್ಲ ಮರುಭೂಮಿಯಲ್ಲಿಯೇ ಸಮಾಧಿಯನ್ನು ಕಟ್ಟಬೇಕಿತ್ತು. ಚಿರ ನಿದ್ರೆಯಲ್ಲಿರುವವರನ್ನು ಯಾರೂ ಬಾಧಿಸದಂತೆ ಬೃಹತ್ ಶಿಲೆಗಳನ್ನು ಬಳಸಿ ಗೋಪುರದಂತೆ ಸಮಾಧಿಯ ಮೇಲೆ ಕಟ್ಟಡವನ್ನು ಕಟ್ಟಲಾಯಿತು. ಸ್ಪರ್ಧೆಯಂತೆ ಶ್ರೀಮಂತರು ಹಾಗೂ ದೊರೆಗಳು ಅತ್ಯಂತ ಎತ್ತರದ ಗೋಪುರದ ಶಿಖರವನ್ನು ಕಟ್ಟಿದರು. ಗ್ರೀಕರು ಇದನ್ನು 'ಪಿರಮಿಡ್' ಎಂದು ಕರೆದರು. ಈಜಿಪ್ಟನ್ನು ಆಳುತ್ತಿದ್ದ ರಾಜರುಗಳನ್ನು 'ಫ್ಯಾರೊ'ಗಳೆಂದು ಕರೆಯುತ್ತಾರೆ. ಫ್ಯಾರೋ ಎಂದರೆ 'ದೊಡ್ಡ ಮನೆಯಲ್ಲಿ ವಾಸಿಸುವ ಮನುಷ್ಯ' ಎಂದರ್ಥ. ಕೃಷಿಕರು ಪ್ರಬಲನಾದ ಒಸ್ಸಿರಿಸ್ಸನ ಆಳ್ವಿಕೆಯನ್ನು ಸಮ್ಮತಿಸಿದ್ದಂತೆ ಫ್ಯಾರೋಗಳ ಆಳ್ವಿಕೆಯನ್ನು ಒಪ್ಪಿಕೊಂಡಿದ್ದರು.

ಇಪ್ಪತ್ತು ಶತಮಾನಗಳ ಸ್ವತಂತ್ರ ಬದುಕಿನ ನಂತರ ಹೈಕ್‌ಸೋಸ್ ಎಂದು ಕರೆಸಿಕೊಂಡ ಅರೇಬಿಯಾದ ಕುರಿಕಾಯುವ ಬುಡಕಟ್ಟು ಸಮುದಾಯವೊಂದು ಈಜಿಪ್ಟಿನ ಮೇಲೆ ದಾಳಿ ನಡೆಸಿ ಐನೂರು ವರ್ಷಗಳವರೆಗೆ ಆಳ್ವಿಕೆ ನಡೆಸಿದರು. ಅವರು ಅಲ್ಲಿನ ಜನರ ಸಂಪತ್ತನ್ನೆಲ್ಲ ದೋಚಿದರು. ಈ ಕಾರಣದಿಂದಾಗಿ ಅವರು ಜನಪ್ರಿಯರಾಗಿರಲಿಲ್ಲ. ಆಶ್ರಯವನ್ನು ಹುಡುಕುತ್ತ ಮರಳುಗಾಡಿನಲ್ಲಿ ಅಲೆಯುತ್ತ ಬಂದ ಯಹೂದಿಗಳನ್ನೂ ಕೂಡ ಜನ ದ್ವೇಷಿಸತೊಡಗಿದರು. ವಿದೇಶಿ ಆಳ್ವಿಕೆಗೆ ಸಹಕರಿಸಿದ ಇವರು ತೆರಿಗೆ ವಸೂಲಿ ಹಾಗೂ ಅವರ ಆಡಳಿತ ಸೇವೆಯಲ್ಲಿ ನೆರವಾದರು.

ಸಾ.ಶ.ಪೂ. 1700ರಲ್ಲಿ ತೇಬಿಸ್ಸಿನ ಜನ ವಿದೇಶಿಯರ ವಿರುದ್ಧ ದಂಗೆ ಎದ್ದರು. ಅವರು ಒಂದು ಸುದೀರ್ಘ ಸಂಘರ್ಷದ ನಂತರ ಹೈಕ್‌ಸೋಸರನ್ನು ಅವರ ದೇಶದಿಂದ ಹೊರಕ್ಕೆ ಬಡಿದಟ್ಟಿದರು. ಈಜಿಪ್ಟ್ ಮತ್ತೊಮ್ಮೆ ಸ್ವತಂತ್ರವಾಯಿತು. ಸಾವಿರ ವರ್ಷಗಳ ತರುವಾಯ ಅಸಿರಿಯದ ಸಾರ್ಡಾನಫಲಸ್ಸನ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿತು.

ಸಾ.ಶ.ಪೂ. 6ನೆಯ ಶತಮಾನದಲ್ಲಿ ಪರ್ಷಿಯನ್ನರ ದೊರೆ ಕ್ಯಾಂಬೆಸಿಸ್ಸನು ಈಜಿಪ್ಟನ್ನು ವಶಪಡಿಸಿಕೊಂಡನು. ಸಾ.ಶ.ಪೂ. 4ನೆಯ ಶತಮಾನದಲ್ಲಿ ಅಲೆಗ್ಸಾಂಡರನು ಪರ್ಷಿಯಾವನ್ನು ವಶಪಡಿಸಿಕೊಂಡನು. ಈಜಿಪ್ಟ್,



©KTBS Not to be republished

ಮೆಸಡೋನಿಯಾದ ಪ್ರಾಂತ್ಯವಾಯಿತು. ಅಲೆಗ್ಸಾಂಡರನ ಸೇನಾಪತಿಯೊಬ್ಬ ಈಜಿಪ್ಟಿನ ರಾಜ್ಯದ ದೊರೆಯೆಂದು ಘೋಷಿಸಿಕೊಂಡು ಟಾಲಮಿ ರಾಜ ಮನೆತನವನ್ನು ಸ್ಥಾಪಿಸಿದನು. ಅಲೆಗ್ಸಾಂಡ್ರಿಯ ನಗರವನ್ನು ನಿರ್ಮಿಸಿದ್ದು ಈತನೇ. ಕಟ್ಟಕಡೆಯದಾಗಿ ಸಾ.ಶ.ಪೂ. 39ರಲ್ಲಿ ರೋಮನ್ನರು ಬಂದರು. ಈಜಿಪ್ಟಿನ ಕಡೆಯ ರಾಣಿ ಕ್ಲಿಯೋಪಾತ್ರ ದೇಶವನ್ನು ರಕ್ಷಿಸಲು ಸಾಧ್ಯವಾದಷ್ಟು ಪ್ರಯತ್ನಿಸಿದಳು. ಅವರ ತುಕಡಿ ಸೈನ್ಯಕ್ಕಿಂತ ಅವಳ ಸೌಂದರ್ಯಕ್ಕೆ ರೋಮನ್ನರು ಹೆಚ್ಚು ಹೆದರುತ್ತಿದ್ದರು ಎನ್ನುವ ಮಾತಿದೆ. ಅವಳು ಅತ್ಯಂತ ಯಶಸ್ವಿಯಾಗಿ ಎರಡು ಬಾರಿ ಆಕ್ರಮಣ ನಡೆಸಿದ ರೋಮನ್ನರ ಹೃದಯದ ಮೇಲೆ ದಾಳಿನಡೆಸಿದ್ದಳು. ಆದರೆ ಸಾ.ಶ.ಪೂ. 30ರಲ್ಲಿ ಸೀಜರ್ ಉತ್ತರಾಧಿಕಾರಿ ಅಳಿಯ 'ಅಗಸ್ಟ'ಸ್‌ನು ತನ್ನ ಮಾವನಂತೆ ಸೌಂದರ್ಯಕ್ಕೆ ಮೋಹಿತನಾಗದೆ ಆಕೆಯ ಸೈನ್ಯವನ್ನು ಪರಾಭವಗೊಳಿಸಿದ. ಆದರೆ ಆಕೆಯನ್ನು ಕೊಲ್ಲದೆ ಜೀವ ಉಳಿಸಿದನು. ಆದರೆ ತನ್ನನ್ನು ಯುದ್ಧ ಸಂಪತ್ತಾಗಿ ಕೊಂಡ್ಯೊಯುವ ಉದ್ದೇಶವನ್ನು ತಿಳಿದು ಕ್ಲಿಯೊಪಾತ್ರ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಳು. ಈಜಿಪ್ಟ್ ಅಂದಿನಿಂದ ರೋಮನ್ನರ ಪ್ರಾಂತ್ಯವಾಯಿತು.

**ಮೆಸಪಟೋಮಿಯಾದ ನಾಗರಿಕತೆ**

ಮೆಸಪಟೋಮಿಯವು ಎರಡು ನದಿಗಳ ನಡುವಿನ ಕಣಿವೆ ಪ್ರದೇಶ. ಬೈಬಲಿನ ಹಳೆಯ ಒಡಂಬಡಿಕೆಯು ವಿವರಿಸುವ ಪ್ರದೇಶಗಳು ಇಲ್ಲಿವೆ. ವಿಸ್ಮಯ ಮತ್ತು ಅಚ್ಚರಿಗಳ ನಾಡಾದ ಇದನ್ನು ಗ್ರೀಕರು ಮೆಸಪಟೋಮಿಯಾ ಅಥವಾ 'ನದಿಗಳ ನಡುವಿನ ನಾಡು' ಎಂದು ಕರೆದರು. ಇಲ್ಲಿ ಹರಿಯುವ ಎರಡು ನದಿಗಳಾದ ಯುಪ್ರೆಟಿಸ್ ಮತ್ತು ಟೈಗ್ರಿಸ್ ನದಿಗಳು ಪಶ್ಚಿಮ ಏಷ್ಯಾದ ಬರಡು ಭೂಮಿಯನ್ನು ಫಲವತ್ತಾಗಿಸಿವೆ. ಈ ಎರಡು ನದಿಗಳ ನಡುವಿನ ಪ್ರದೇಶದ ಜನರನ್ನು ಆಕರ್ಷಿಸಿದ್ದು ಈ ಪ್ರದೇಶದ ಫಲವತ್ತತೆ. ಅಲ್ಪ ಶ್ರಮದಿಂದ ಅವು ಒದಗಿಸುತ್ತಿದ್ದ ಆಹಾರದಿಂದಾಗಿ ಉತ್ತರದ ಗುಡ್ಡವಾಸಿಗಳು ಹಾಗೂ ದಕ್ಷಿಣದ ಮರುಭೂಮಿಯಲ್ಲಿ ಅಲೆದಾಡುತ್ತಿರುವ ಬುಡಕಟ್ಟುಗಳು ಈ ಪ್ರದೇಶವನ್ನು ತಮ್ಮದಾಗಿಸಿಕೊಳ್ಳುವ ನಿರಂತರ ಪ್ರಯತ್ನದಲ್ಲಿದ್ದವು. ಬೆಟ್ಟಗುಡ್ಡಗಳ ಜನ ಹಾಗೂ ಮರುಭೂಮಿಯ ಅಲೆಮಾರಿಯ ಜನರ ನಡುವಿನ ನಿರಂತರ ವೈಷಮ್ಯ ಇವರ ನಡುವೆ ಕೊನೆಯಿಲ್ಲದ ಸಂಘರ್ಷಕ್ಕೆ ಎಡೆಮಾಡಿತ್ತು. ಈ ಸಂಘರ್ಷಗಳ ನಡುವೆ ಚಿಗುರೊಡೆದದ್ದು ಪ್ರಬಲ ಜನಾಂಗವೊಂದರ ನಾಗರಿಕತೆ. ಮೆಸಪಟೋಮಿಯದ ಮೊಟ್ಟಮೊದಲ ಬರವಣಿಗೆಯನ್ನು ಅಭಿವೃದ್ಧಿಪಡಿಸಿದವರು ಸುಮೇರಿಯನ್ನರು. ಸುಮಾರು 30 ಶತಮಾನಗಳವರೆಗೆ ಫಲವತ್ತಾದ ಕಣಿವೆಗೆ ಧಾವಿಸಿಬಂದ ಸುಮೇರಿಯನ್ನರು, ಬ್ಯಾಬಿಲೋನಿಯರು, ಅಸ್ಸೀರಿಯನರು ಹಾಗೂ ಪರ್ಶಿಯನ್ನರು ಇದೇ ಬರವಣಿಗೆಯನ್ನು ಬಳಸಿದರು. ಈ ಲಿಪಿಯನ್ನು ಕ್ಯೂನಿಫಾರ್ಮ್ ಎಂದು ಕರೆಯುತ್ತಾರೆ.

ಈ ನಾಗರಿಕತೆಯ ಕೇಂದ್ರ ಸ್ಥಳ ಯುಪ್ರೆಟಿಸ್ ಹಾಗೂ ಟೈಗ್ರಿಸ್ ನದಿಗಳ ನಡುವಿನ ಕಣಿವೆ ಪ್ರದೇಶದ ದಕ್ಷಿಣ ಭಾಗ. ಪ್ರಾಚೀನ ಕಾಲದಿಂದಲೂ ಇದನ್ನು ಬ್ಯಾಬಿಲೋನಿಯ ಎಂದು ಕರೆಯುತ್ತಿದ್ದರು. ಬ್ಯಾಬಿಲೋನಿಯದ ಉತ್ತರ ಭಾಗವನ್ನು ಅಖಡ್ ಎಂದು ಹಾಗೂ ದಕ್ಷಿಣ ಭಾಗವನ್ನು ಸುಮೇರ್ ಎಂದು ಗುರುತಿಸಲಾಗುತ್ತಿತ್ತು. ಮೆಸಪಟೊಮಿಯಾದ ಉತ್ತರ ಭಾಗವನ್ನು ಆಸ್ಸೀಲಿಯಾ ಎಂದು ಕರೆಯುತ್ತಿದ್ದರು.

ಮೆಸಪಟೋಮಿಯಾದ ಚರಿತ್ರೆಯು ಒಂದು ಕೊನೆಯಿಲ್ಲದ ಹಗೆತನ ಹಾಗೂ ಸಂಘರ್ಷಗಳ ಕಥೆ. ಉತ್ತರದ ಗುಡ್ಡವಾಸಿಗಳಾದ ಸುಮೇರಿಯನ್ನರು ಇಲ್ಲಿಗೆ ಬಂದ ಮೊದಲಿಗರು. ತಮ್ಮ ದೇವರುಗಳನ್ನು ಬೆಟ್ಟದ ತಪ್ಪಲಿನ ಮೇಲೆ ಆರಾಧಿಸುತ್ತಿದ್ದ ಇವರು, ಸಮತಟ್ಟಾದ ಪ್ರದೇಶಕ್ಕೆ ಬಂದು ನೆಲಸಿದ ಮೇಲೆ ಕೃತಕವಾದ ಬೆಟ್ಟಗಳನ್ನು ಕಟ್ಟಿ ಅದರ ಮೇಲೆ ಆರಾಧನಾ ಸ್ಥಳಗಳನ್ನು ಕಟ್ಟಿಕೊಂಡರು. ಅವುಗಳನ್ನು 'ಜಿಗ್ಗುರಾತ್' ಎಂದು ಕರೆಯುತ್ತಾರೆ. ಮೆಟ್ಟಿಲುಗಳನ್ನು ಕಟ್ಟಲು ಬರದ ಅವರು ಸುತ್ತಲೂ ಇಳಿಜಾರುಗಳನ್ನು ನಿರ್ಮಿಸಿಕೊಂಡಿದ್ದರು. ಯಹೂದಿಗಳು ಈ ಗೋಪುರಗಳನ್ನು ಬೆಬೆಲ್‌ನ ಗೋಪುರಗಳೆಂದು ಕರೆದರು.

©KTBS Not to be republished

**ಬ್ಯಾಬಿಲೋನಿಯಾದ ತೂಗುವ ಉದ್ಯಾನ**

ದಂತ ಕಥೆಯಾದ ಈ ಉದ್ಯಾನವನವನ್ನು ಯುಪ್ರಿಟೆಸ್ ನದಿಯ ದಂಡೆಯ ಮೇಲೆ ಸುಮಾರು ಸಾ.ಶ.ಪೂ. 7ನೆಯ ಶತಮಾನದಲ್ಲಿ ನಿರ್ಮಿಸಲಾಯಿತು. ಇದು ಪ್ರಾಚೀನ ಜಗತ್ತಿನ ಏಳು ವಿಸ್ಮಯಗಳಲ್ಲಿ ಒಂದು. ಸೋಜಿಗವೆಂದರೆ, ಬ್ಯಾಬಿಲೋನಿನ ಕ್ಯೂನಿಫಾರ್ಮ್ ದಾಖಲೆಗಳು ಅಲ್ಲಿನ ಅರಮನೆ, ಬ್ಯಾಬಿಲೋನ್‌ನ ನಗರ ಮತ್ತು ಅದರ ಗೋಡೆಗಳನ್ನು ಉಲ್ಲೇಖಿಸುವಂತೆ ತೂಗುವ ಉದ್ಯಾನವನದ ಬಗ್ಗೆ ಎಳ್ಳಷ್ಟು ಉಲ್ಲೇಖಿಸದಿರುವುದು ಅಚ್ಚರಿಯನ್ನು ಮೂಡಿಸಿದೆ. ಬಹುತೇಕ ವಿದ್ವಾಂಸರು ತೂಗುವ ಉದ್ಯಾನವನ್ನು ಕಟ್ಟಿದವನು ದೊರೆ ಎರಡನೆ ನೆಬುಕಡ್ನೀಜರ್ ಎಂದು ಅಭಿಪ್ರಾಯಪಡುತ್ತಾರೆ. ನೆಬುಕಡ್ನೀಜರ್‌ನ ಪತ್ನಿಯಾದ ಅಮೈಟಿಸ್, ಮೀಡ್ ಪ್ರದೇಶದವಳು. ಅವಳ ತಾಯ್ನಾಡಿನ ಬೆಟ್ಟ, ಮರ–ಗಿಡಗಳ ಹಸಿರಿನ ಸುಂದರ ಪರಿಸರದ ಅಗಲಿಕೆಯಲ್ಲಿದ್ದ ಈಕೆಯನ್ನು ಸಂತೈಸಲು ನೆಬುಕಡ್ನೀಜರ್ ಇದನ್ನು ಕಟ್ಟಿದನು ಎನ್ನಲಾಗಿದೆ. ಮತ್ತೆ ಕೆಲವರು ಇದು ಅಸ್ಸಾರಿಯದ ರಾಣಿಯಾಗಿದ್ದ ಸಮ್ಮು–ರಾಮತ್‌ಳಿಂದ ರಚಿಸಲಾಯಿತು ಎಂದು ಅಭಿಪ್ರಾಯಪಡುತ್ತಾರೆ. ಉದ್ಯಾನವನವು ವಾಸ್ತವದಲ್ಲಿ ಗಾಳಿಯಲ್ಲೇನು ತೂಗಿದ್ದಿಲ್ಲ. ಮರ–ಗಿಡಗಳನ್ನು ಜಿಗ್ಗುರಟ್ಟಿನ ವಿವಿಧ ಹಂತಗಳಲ್ಲಿ ಕೃಷಿಮಾಡಲಾಗಿತ್ತು. ಅವು ಹಂತಗಳಲ್ಲಿ ಜೋತು ಬಿದ್ದು ತೂಗುತ್ತಿದ್ದ ಕಾರಣ ನೋಡುಗರಿಗೆ ತೂಗುವ ಉದ್ಯಾನದಂತೆ ಕಾಣುತ್ತಿತ್ತು. ಯುಪ್ರಿಟೆಸ್ ನದಿಯಿಂದ ಇವುಗಳಿಗೆ ನೀರನ್ನು ಹಾಯಿಸಲಾಗುತ್ತಿತ್ತು.



ಜಿಗ್ಗುರಟ್

**ಹಮ್ಮುರಬಿಯ ಕಾನೂನು**

ಹಮ್ಮುರಬಿ ಸಂಹಿತೆಯ ನಿಯಮಗಳಿಗೆ ಮುಖ್ಯ ಆಧಾರವೆಂದರೆ ಸಾ.ಶ.ಪೂ. 1901ರಲ್ಲಿ ಪತ್ತೆಮಾಡಲಾದ ಶಿಲಾಶಾಸನ. ಇದನ್ನು ಇಂದು ಪ್ಯಾರಿಸ್ಸಿನ 'ಲೋರ್' ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಹಮ್ಮುರಬಿಯ ಸಂಹಿತೆ 'ಕಣ್ಣಿನ ಬದಲು ಕಣ್ಣು ಮತ್ತು ಹಲ್ಲಿನ ಬದಲು ಹಲ್ಲು' ಎನ್ನುವ ತರ್ಕವನ್ನು ಪ್ರತಿಪಾದಿಸುತ್ತಿತ್ತು. ಹಮ್ಮುರಬಿಯ ಸಂಹಿತೆಯು ನಮಗೆ ಲಭ್ಯವಿರುವ ಅತ್ಯಂತ ಪುರಾತನ ನಿಯಮಗಳಲ್ಲಿ ಒಂದೆನಿಸಿದೆ. ಮಹಿಳೆ ಹಾಗೂ ಗುಲಾಮರುಗಳನ್ನು ಒಳಗೊಂಡಂತೆ ಬ್ಯಾಬಿಲೋನಿನ ಸಮಾಜದ ಎಲ್ಲ ವರ್ಗಗಳ ರಕ್ಷಣೆಗಾಗಿಯೆ ಈ ನಿಯಮಗಳನ್ನು ರಚಿಸಿರಬೇಕು.

ಸಾ.ಶ.ಪೂ. 4000 ವರ್ಷದಲ್ಲಿ ಸುಮೇರಿಯನ್ನರು ಮೆಸಪಟೋಮಿಯಾವನ್ನು ಪ್ರವೇಶಿಸಿದ್ದರು. ತದನಂತರದಲ್ಲಿ ಇವರನ್ನು ಅರೇಬಿಯಾ ಮರುಭೂಮಿಯ ಬುಡಕಟ್ಟಿನಲ್ಲೊಂದಾದ ಅಕಾಡಿಯನ್ನರು ಪರಾಭವಗೊಳಿಸಿದರು. ಇವರು ಸಿಮೈಟ್ಸ್ ಎಂದೇ ಪ್ರಚಲಿತರು. ಸಾವಿರ ವರ್ಷಗಳ ನಂತರ ಮತ್ತೊಂದು

© KTBS Not to be republished

ಸೆಮಿಟಿಕ್ ಬುಡಕಟ್ಟಾದ ಅಮೊರೈಟರ ಆಳ್ವಿಕೆಗೆ ಅಕಾಡಿಯನರು ಗುರಿಯಾಗಬೇಕಾಯಿತು. ಅಮೊರೈಟರ ಸುಪ್ರಸಿದ್ಧ ದೊರೆ ಹಮ್ಮುರಬಿ. ಪವಿತ್ರ ನಗರವಾದ ಬ್ಯಾಬಿಲೋನ್‌ನಲ್ಲಿ ಅದ್ವಿತೀಯವಾದ ಅರಮನೆಯೊಂದನ್ನು ತನಗಾಗಿ ಕಟ್ಟಿಸಿಕೊಂಡನು. ತನ್ನ ಜನತೆಗೆ ಕೆಲವು ನಿಯಮಗಳನ್ನು ರೂಡಿಸಿ ಪ್ರಾಚೀನ ವಿಶ್ವದಲ್ಲೇ ಬ್ಯಾಬಿಲೋನಿಯಾದ ರಾಜ್ಯವು ಅತ್ಯುತ್ತಮ ಆಡಳಿತಕ್ಕೆ ಒಳಗಾದ ಸಾಮ್ರಾಜ್ಯ ಎಂಬ ಖ್ಯಾತಿಗೆ ಗುರಿಯಾಗಲು ಕಾರಣವಾಯಿತು. ನಂತರದಲ್ಲಿ ಬಂದ ಹಿಟೈಟರು ಫಲವತ್ತಾದ ಕಣಿವೆಯನ್ನು ವಶಪಡಿಸಿಕೊಂಡು ಕೊಂಡೊಯ್ಯಲಾಗದ ಎಲ್ಲವನ್ನೂ ನಾಶಪಡಿಸಿದರು. ಅಶುರ ಎಂಬ ಮಹಾನ್ ಮರುಭೂಮಿಯ ದೇವರ ಅನುಯಾಯಿಗಳಾದ ಅಸ್ಸಿರಿಯನ್ನರು ಹಿಟೈಟರನ್ನು ಪರಾಭವಗೊಳಿಸಿದರು. ಇವರು ಇಡೀ ಪಶ್ಚಿಮ ಏಷಿಯ ಮತ್ತು ಈಜಿಪ್ಟಿನ ಪ್ರದೇಶವನ್ನು ಆಕ್ರಮಿಸಿಕೊಂಡು ಸಾ.ಶ.ಪೂ. 7ನೆಯ ಶತಮಾನದವರೆವಿಗೆ ಅಲ್ಲಿನ ಸಮಸ್ತ ಜನಾಂಗಗಳಿಂದ ತೆರಿಗೆಯನ್ನು ಸಂಗ್ರಹಿಸಿದರು. ಸಾ.ಶ.ಪೂ. 7ನೆಯ ಶತಮಾನದಲ್ಲಿ ಮತ್ತೊಂದು ಸೆಮಿಟಿಕ್ ಬುಡಕಟ್ಟಾದ ಚಾಲ್ಡಿಯನರು ಬ್ಯಾಬಿಲೋನ್‌ನನ್ನು ಮರು ಸ್ಥಾಪಿಸಿ ಅದನ್ನು ಆ ಕಾಲದ ಅತ್ಯಂತ ಪ್ರಮುಖ ರಾಜಧಾನಿಯನ್ನಾಗಿಸಿದರು ಅವರುಗಳಲ್ಲಿನ ಸರ್ವಶ್ರೇಷ್ಠ ದೊರೆ ನೆಬುಕಡ್ನೇಜರ್ ವೈಜ್ಞಾನಿಕ ಅಧ್ಯಯನಕ್ಕೆ ಸಾಕಷ್ಟು ಉತ್ತೇಜನವನ್ನು ನೀಡಿದನು. ಸಾ.ಶ.ಪೂ. 6ನೆಯ ಶತಮಾನದಲ್ಲಿ ಪರ್ಶಿಯನ್ನರ ಆಕ್ರಮಣಕ್ಕೆ ಪರಾಧೀನರಾದರು. 200 ವರ್ಷಗಳ ನಂತರ ಅಲೆಗ್ಸಾಂಡರನು ಸೆಮಿಟಿಕ್ ಜನಾಂಗಗಳಿಂದ ಆವೃತವಾದ ಈ ಪ್ರದೇಶವನ್ನು ಗ್ರೀಕರ ಒಂದು ಪ್ರಾಂತ್ಯವನ್ನಾಗಿಸಿದ. ಇವರ ತರುವಾಯ ಬಂದ ರೋಮನ್ನರು ಹಾಗೂ ಟರ್ಕರ ನಂತರ ಈ ನಾಗರಿಕತೆಯು ಬೋರೆಗಳನ್ನು ತುಂಬಿಕೊಂಡ ಬೆಂಗಾಡಾಯಿತು.

**ಚೀನಾ ದೇಶದ ನಾಗರಿಕತೆ**

ಎಲ್ಲಾ ಪ್ರಾಚೀನ ನಾಗರಿಕತೆಗಳು ನದಿಯ ಬಯಲುಗಳಲ್ಲಿ ಕಂಡುಬಂದಿರುವುದು ವಿಶೇಷವಾಗಿದೆ. ಚೀನಾ ನಾಗರಿಕತೆಯ ಬೆಳವಣಿಗೆ ಕೂಡ ಇದರಿಂದ ಹೊರತೇನಿಲ್ಲ. ಆದರೆ ಚೀನಾದ ನಾಗರಿಕತೆಗೆ ಕಾರಣವಾದ ನದಿಯೊಂದು ಮಾತ್ರ 'ಚೀನಾದ ದುಗುಡ'ವೆಂದು ಕರೆಯಲ್ಪಟ್ಟಿದೆ. ಇದು ಇಲ್ಲಿನ ಹವಾಂಗೊ ನದಿಯನ್ನು ಕುರಿತದ್ದು. ಪ್ರವಾಹದ ನಂತರ ಈ ನದಿಯು ಆಗಿಂದಾಗ್ಗೆ ತನ್ನ ಹಾದಿಯನ್ನು ಬದಲಿಸುವುದರಿಂದ ಮನೆಗಳು ಹಾಗೂ ಕೃಷಿಭೂಮಿ ಈ ನೆರೆಗೆ ಆಹುತಿಯಾಗುತ್ತಿದ್ದವು. ಇದು ಅಲ್ಲಿನ ಕಾಲುವೆಗಳನ್ನೆಲ್ಲ ನಿಷ್ಕ್ರಿಯಗೊಳಿಸುತಿತ್ತು. ಈ ಕಾರಣಕ್ಕಾಗಿಯೆ ಅಲ್ಲಿನ ಜನ ಇದನ್ನು ದುಃಖದ ಪ್ರತೀಕವೆಂದು ಕರೆಯುತ್ತಾರೆ.

ಪ್ರಾಕ್ತನಶಾಸ್ತ್ರದ ಆಧಾರದ ಮೇಲೆ ಚೀನಾದಲ್ಲಿ ಕಂಡು ಬಂದಿರುವ ನಾಗರಿಕತೆಯ ಪ್ರಥಮ ರಾಜಮನೆತನ ಶಾಂಗ್ ಎಂಬ ಹೆಸರಿನದು. ಇವರು ಸಾ.ಶ.ಪೂ. 18ನೆಯ ಶತಮಾನ ಮತ್ತು 12ನೆಯ ಶತಮಾನಗಳ ನಡುವೆ ಆಳ್ವಿಕೆಯನ್ನು ನಡೆಸಿದವರು. ಸಾ.ಶ.ಪೂ. 14ನೆಯ ಶತಮಾನದ ಹೊತ್ತಿಗೆ ಶಾಂಗ್‌ನ ಜನತೆಯು ಅತ್ಯುತ್ತಮ ಸಂಸ್ಕೃತಿಯೊಂದನ್ನು ಕಟ್ಟಿಕೊಂಡಿದ್ದರು. ಶಾಂಗ್ ರಾಜಮನೆತನವನ್ನು ಅವರ ನೆರೆಯ ಚೌ ಮನೆತನವು ಪರಾಭವಗೊಳಿಸಿ ಅಧಿಕಾರವನ್ನು ಪಡೆದುಕೊಂಡಿತು. ಚೌ ರಾಜಮನೆತನವು ಶಾಂಗ್ ಸಂಸ್ಕೃತಿಯ ಅತ್ಯುತ್ತಮ ಅಂಶಗಳನ್ನು ಮುಂದುವರಿಸಿ ಸಾ.ಶ.ಪೂ. 250ರವರೆಗೆ ಆಳ್ವಿಕೆ ನಡೆಸಿದರು.

ಇವರ ಆಡಳಿತದಲ್ಲಿ ರಾಜರುಗಳ ಕೆಳಗೆ ಅಧಿಕಾರ ವರ್ಗವಿತ್ತು. ಅಧಿಕಾರಿಗಳಿಗೆ ರಾಜನು ಭೂಮಿಯ ಹಂಚಿಕೆ ಮಾಡುತ್ತಿದ್ದನು. ಅದರ ಪ್ರತಿಯಾಗಿ ಇವರುಗಳು ರಾಜನಿಗೆ ಯುದ್ಧಗಳಲ್ಲಿ ಸಹಕರಿಸುತ್ತಿದ್ದರು. ಸಾಮಾಜಿಕ ವರ್ಗೀಕರಣದಲ್ಲಿ ಮುಂದಿನ ಹಂತದಲ್ಲಿದ್ದವರು ವ್ಯಾಪಾರಿಗಳು ಹಾಗೂ ಕುಶಲಕರ್ಮಿಗಳು. ಇವರಲ್ಲದೆ ಇಲ್ಲಿ ಬಹುತೇಕ ಮಂದಿ ಕೃಷಿಕರನ್ನು ಕಾಣಬಹುದಿತ್ತು. ಸಾಮಾಜಿಕ ಶ್ರೇಣೀಕರಣದ ಕಟ್ಟಕಡೆಯ ವರ್ಗವಾಗಿ ಗುಲಾಮರಿದ್ದರು. ರಾಜರು ಯುದ್ಧ ಕೈದಿಗಳನ್ನು ಗುಲಾಮರನ್ನಾಗಿ ಮಾಡಿಕೊಳ್ಳುತ್ತಿದ್ದರು.

©KTBS Not to be republished

**ಚೀನಾದ ಮಹಾಗೋಡೆ**



**ಚೀನಾದ ಮಹಾಗೋಡೆ**

*ಚೀನಾದ ಸಾಮ್ರಾಜ್ಯವು ಹಲವು ಸಣ್ಣ ಸಂಸ್ಥಾನಗಳನ್ನು ಒಳಗೊಂಡಿತ್ತು. ಸಣ್ಣ ಸಂಸ್ಥಾನಗಳನ್ನು ಒಗ್ಗೂಡಿಸಿ ಏಳು ದೊಡ್ಡ ರಾಜ್ಯಗಳನ್ನು ನಿರ್ಮಿಸಲಾಯಿತು. ಹೀಗೆ ಸೃಷ್ಟಿಯಾದ ಪ್ರತಿಯೊಂದು ರಾಜ್ಯವು ತನ್ನ ರಕ್ಷಣೆಗಾಗಿ ಗಡಿ ಯುದ್ಧಕ್ಕೂ ಸ್ವತಂತ್ರವಾದ ಗೋಡೆಗಳನ್ನು ಕಟ್ಟಿಕೊಂಡಿತ್ತು. ಉತ್ತರ ಚೀನಾದ ರಾಜ್ಯಗಳು ತಮ್ಮ ಗಡಿಗೋಡೆಗಳನ್ನು ಒಂದುಗೂಡಿಸುವಂತೆ ಕ್ವಿನ್ ಷಿಹುಯಾಂಗ್‌ಟಿ ಎನ್ನುವ ಚಕ್ರವರ್ತಿಯು ಆದೇಶವಿತ್ತನು. ಉತ್ತರದ ಭಾಗದಿಂದ ಆಕ್ರಮಣ ಮಾಡುತ್ತಿದ್ದ ದಾಳಿಕೋರರ ದೌರ್ಜನ್ಯವನ್ನು ಹತ್ತಿಕ್ಕಲು ಉತ್ತರದ ಗೋಡೆಗಳನ್ನು ಒಂದುಗೂಡಿಸಲಾಯಿತು. ಮಹಾಗೋಡೆಯನ್ನು ಸಾ.ಶ.ಪೂ. 7ನೆಯ ಶತಮಾನದಲ್ಲಿ ಕಟ್ಟಲು ಪ್ರಾರಂಭಿಸಲಾಯಿತು. ಈ ಗೋಡೆಯನ್ನು ಸಾ.ಶ. 16ನೆಯ ಶತಮಾನದವರೆಗೂ ಕಟ್ಟಲಾಯಿತು. ಮಹಾಗೋಡೆಯ ಶಿಥಿಲಗೊಂಡ ಭಾಗಗಳನ್ನು ಮತ್ತಷ್ಟು ದುರಸ್ಥಿಮಾಡಲಾಗುತಿತ್ತು. ಗೋಡೆಯು ಪೂರ್ಣಗೊಂಡಾಗ 5000ಕಿ.ಮೀ ಗಿಂತ ಉದ್ದವಾಗಿತ್ತು. ಜಗತ್ತಿನ ವಿಸ್ಮಯಗಳಲ್ಲಿ ಒಂದೆನಿಸಿದೆ.*

ಶಾಂಗ್ ದೊರೆಗಳು ಸಾಕಷ್ಟು ಸಮಯವನ್ನು ಯುದ್ಧಗಳಲ್ಲಿ ಹಾಗೂ ಆಕ್ರಮಣಗಳಲ್ಲಿ ಕಳೆದಿದ್ದರು. ಹೀಗಾಗಿ ಸೇನೆಯು ಪ್ರಾಮುಖ್ಯತೆಯನ್ನು ಹೊಂದಿತ್ತು. ಸಮಾಜದಲ್ಲಿ ಸೈನಿಕನಿಗೆ ಉತ್ತಮ ಸ್ಥಾನಮಾನವಿತ್ತು. ಸೈನಿಕರು ಕಂಚಿನ ತಲೆರಕ್ಷಾ ಕವಚ ಹಾಗೂ ಲೋಹದ ದೇಹಕವಚವನ್ನು ಧರಿಸುತ್ತಿದ್ದರು. ಇವರು ಬಳಸುತ್ತಿದ್ದ ಕಂಚಿನ ಚೂರಿಗಳು, ಕೊಡಲಿಗಳು, ಬಿಲ್ಲು ಹಾಗೂ ಲೋಹ ತುದಿಯನ್ನು ಹೊಂದಿದ ಬಾಣಗಳು ದೊರೆತಿವೆ. ಶಾಂಗ್‌ನ ಜನತೆ ಕೃಷಿಯನ್ನು ಅವಲಂಬಿಸಿದ್ದರು. ಚೀನಿಯರು ಸುವ್ಯವಸ್ಥಿತವಾದ ನೀರಾವರಿ ವ್ಯವಸ್ಥೆಯನ್ನು ನಿರ್ಮಿಸಿಕೊಂಡಿದ್ದರು. ಇವರು ಯಥೇಚ್ಛವಾಗಿ ಭತ್ತವನ್ನು ಬೆಳೆಯುತ್ತಿದ್ದರು.

***ಪಿಂಗಾಣಿ***

*ಪಿಂಗಾಣಿಯು ಚೀನಾದಲ್ಲಿ ಉಗಮವಾಯಿತು ಎಂಬ ಸಾಮಾನ್ಯ ನಂಬಿಕೆಯಿದೆ. ಅರೆ-ಪಿಂಗಾಣಿಯ ಸಲಕರಣೆ ವಸ್ತುಗಳನ್ನು ಸುಮಾರು ಸಾ.ಶ.ಪೂ. 1600 ವರ್ಷಗಳಿಂದಲೂ ಬಳಸಲಾಗುತ್ತಿದೆ. ಪೂರ್ವಚೀನಾದ ಹ್ಯಾನ್ ಮನೆತನದ ಆಳ್ವಿಕೆಯಷ್ಟೊತ್ತಿಗೆ (ಸಾ.ಶ.ಪೂ. 2ನೆಯ ಶತಮಾನ) ಹೊಳಪಿನ ಪಿಂಗಾಣಿಯ ಅಭಿವೃದ್ಧಿಯಾಗಿತ್ತು. ಈ ಸಂದರ್ಭದಿಂದ ಅದೊಂದು ಉತ್ಕೃಷ್ಟವಾದ ಕಲೆಯಾಗಿ ಅಭಿವೃದ್ಧಿಪಡಿಸಲಾಗಿತ್ತು. ಪ್ರಾಚೀನ ಚೀನಿಯರು ಸತ್ತವರ ಜೊತೆಯಲ್ಲಿ ಪಿಂಗಾಣಿಯ ಮಡಿಕೆಗಳು, ಪ್ರಾಣಿಗಳು ಹಾಗೂ ಅವರು ಬದುಕಿದ್ದ ವೇಳೆಯಲ್ಲಿ ಅವರಿಗೆ ಪ್ರಿಯವಾಗಿದ್ದ ವಸ್ತುಗಳನ್ನು ಹೂಳುತ್ತಿದ್ದರು.*

ಚೀನಿಯರು ತೆಳುವಾದ ನೂಲಿನ ಉಡುಪನ್ನು ಧರಿಸುತ್ತಿದ್ದರು. ಶಾಂಗ್‌ನ ಜನತೆ ರೇಷ್ಮೆಯನ್ನು ಸಹ ಬಳಸುತ್ತಿದ್ದರು. ರೇಷ್ಮೆ ಹುಳುಗಳ ಬೇಸಾಯದಲ್ಲೂ ತೊಡಗಿದ್ದರು. ರೇಷ್ಮೆ ಉತ್ಪಾದನೆಯು ಪ್ರಮುಖ ಉದ್ಯಮವಾಗತೊಡಗಿತ್ತು. ಚೀನಾದವರು ಅತ್ಯುತ್ತಮವಾದ ಮಡಿಕೆಗಳನ್ನು ತಯಾರಿಮಾಡಿದ್ದರು. ಪಿಂಗಾಣಿಯ ವಿವಿಧ ವಸ್ತುಗಳನ್ನು ತಯಾರಿಸುವುದನ್ನು ಕಲಿತಿದ್ದರು. ಪೂರ್ವಿಕರನ್ನು ಪೂಜಿಸುವ ಅಭ್ಯಾಸವು ಇವರಲ್ಲಿ ಜನಪ್ರಿಯವಾಗಿತ್ತು. ಸತ್ತ ಮನುಷ್ಯನು ಆತ್ಮವಾಗಿ ಪರಿವರ್ತಿತವಾಗುವುದು ಹಾಗೂ ಆ ಆತ್ಮಕ್ಕೆ ವಿಶೇಷ

©KTBS Not to be republished

ಶಕ್ತಿಗಳಿದ್ದವು ಎಂಬ ನಂಬಿಕೆ ಅವರದು. ಸತ್ತ ಮನುಷ್ಯನ ದೇಹವನ್ನು ಶವಸಂಸ್ಕಾರ ಮಾಡಿ ಅದರೊಂದಿಗೆ ಮರದ ವಸ್ತುಗಳು, ಮಡಿಕೆ, ಕಂಚಿನ ಪಾತ್ರೆಗಳು ಇತ್ಯಾದಿಗಳನ್ನು ಸಹ ಸಮಾಧಿಯಲ್ಲಿ ಇಡುತ್ತಿದ್ದರು. ರಾಜರುಗಳ ಶವಾಗಾರ ಸಾಕಷ್ಟು ವಿಶಾಲವಾಗಿತ್ತು. ಚೀನಿಯರ ಲಿಖಿತ ಪರಂಪರೆಯು ಚಿತ್ರಲಿಪಿಯಿಂದ ಪ್ರಾರಂಭವಾಗಿ ವೈಚಾರಿಕ ಸಂದೇಶವನ್ನು ನೀಡುವ ಲಿಪಿಯಾಗಿ ಪರಿವರ್ತಿತವಾಯಿತು. ಬರಹಗಾರರು ರೇಷ್ಮೆ ಹಾಗೂ ಬಿದಿರಿನ ಚಕ್ಕೆಗಳ ಮೇಲೆ ಲಿಪಿಯನ್ನು ಮೂಡಿಸುತ್ತಿದ್ದರು. ಪಿಂಗಾಣಿ ಹಾಗೂ ಚೀನಾದ ಮಹಾಗೋಡೆಯು ಈ ಸಂಸ್ಕೃತಿಯ ವಿಶಿಷ್ಟ ಕೊಡುಗೆ.

## ಅಭ್ಯಾಸಗಳು

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಹಿರೋಗ್ಲೈಫಿಕ್ಸ್‌ನ್ನು ____________ ಎಂದು ಕರೆಯುತ್ತಾರೆ.
2. ಈಜಿಪ್ಟನ್ನು ಆಳಿದ ರಾಜರುಗಳನ್ನು ____________ ಎಂದು ಕರೆಯುತ್ತಿದ್ದರು.
3. ಗ್ರೀಕರು ಮೆಸಪಟೋಮಿಯವನ್ನು ____________ ಎಂದು ಕರೆದರು.
4. ಅಮೊರೈಟರ ಸುಪ್ರಸಿದ್ಧ ದೊರೆ ____________ .

**II. ಹೊಂದಿಸಿ ಬರೆಯಿರಿ.**

| ಎ ಪಟ್ಟಿ | ಬಿ ಪಟ್ಟಿ |
|---|---|
| 1. ಹವಾಂಗೋ ನದಿ | ಎ. ಮೆಸಪಟೋಮಿಯ |
| 2. ಕ್ಯೂನಿಫಾರ್ಮ್ | ಬಿ. ಅಮೊರೈಟರ ದೊರೆ |
| 3. ಕ್ಲಿಯೋಪಾತ್ರ | ಸಿ. ಶಾಂಗ್ |
| 4. ಹಮ್ಮುರಬಿ | ಡಿ. ಚೀನಾ |
| 5. ಚೀನಾದ ಮನೆತನ | ಇ. ಈಜಿಪ್ಟಿನ ಕಡೆಯ ರಾಣಿ |

**III. ಸಂಕ್ಷಿಪ್ತವಾಗಿ ಉತ್ತರಿಸಿ.**

1. 'ಮಮ್ಮಿ'ಗಳನ್ನು ಹೇಗೆ ಸಂರಕ್ಷಿಸುತ್ತಿದ್ದರು?
2. ಪಿರಮಿಡ್‌ಗಳ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.
3. ಹವಾಂಗೋ ನದಿಯು 'ಚೀನಾದ ದುಗಡ' ಹೇಗೆ?

**IV. ಚಟುವಟಿಕೆ.**

1. ನೈಲ್ ನದಿಯ ಬಗ್ಗೆ ವಿಷಯ ಸಂಗ್ರಹಿಸಿ.

*****

©KTBS Not to be republished

ಅಧ್ಯಾಯ-5

# ಗ್ರೀಕ್, ರೋಮನ್ ಹಾಗೂ ಅಮೆರಿಕದ ನಾಗರಿಕತೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಗ್ರೀಕರ ನಾಗರಿಕತೆಯ ಬೆಳವಣಿಗೆ, ಕೊಡುಗೆಗಳು.*
- *ರೋಮನ್ನರ ನಾಗರಿಕತೆಯ ಬೆಳವಣಿಗೆ ಮತ್ತು ಕೊಡುಗೆಗಳು.*
- *ಅಮೆರಿಕಾದಲ್ಲಿನ ಪ್ರಾಚೀನ ಕೊಲಂಬಿಯಾ ನಾಗರಿಕತೆಗಳಾದ ಮಾಯ, ಆಸ್ಟೆಕ್ ಮತ್ತು ಇಂಕಾ ನಾಗರಿಕತೆಗಳು.*

## ಗ್ರೀಕರ ನಾಗರಿಕತೆ

ಗ್ರೀಕ್ ಮೆಡಿಟರೇನಿಯನ್ ಸಮುದ್ರದಲ್ಲಿರುವ ಒಂದು ಪರ್ಯಾಯ ದ್ವೀಪ. ಏಜಿಯನ್ ಸಮುದ್ರವು ಗ್ರೀಕ್‌ನ್ನು ಏಷ್ಯಾ ಮೈನರ್‌ನಿಂದ ಪ್ರತ್ಯೇಕಿಸಿದೆ. ಗ್ರೀಕ್‌ನ ಮಧ್ಯ ಭಾಗದಲ್ಲಿ ಬಾಲ್ಕನ್ ಪರ್ವತಗಳು ಹಾದುಹೋಗಿರುವುದರಿಂದ ಸಣ್ಣಪುಟ್ಟ ಪರ್ವತ ಮತ್ತು ಕಣಿವೆಗಳು ಗ್ರೀಕನ್ನು ವಿಭಜಿಸಿವೆ. ಆದರೂ ಎಲ್ಲಾ ಭಾಗಗಳಿಗೂ ಸಮುದ್ರದ ಸಂಪರ್ಕವಿರುವುದರಿಂದ ಗ್ರೀಕರು ತಮ್ಮ ನೌಕಾಬಲವನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಯಿತು.

ಗ್ರೀಕರು ಇಂಡೋ-ಯೂರೋಪಿಯನ್ ಜನಾಂಗಕ್ಕೆ ಸೇರಿದವರು. ಪ್ರಾಚೀನ ಗ್ರೀಕನ್ನು ಹೆಲ್ಲೆನೀಸ್ ಎಂದು ಕರೆಯುತ್ತಿದ್ದರು. ಏಕೆಂದರೆ ಇವರ ಪೂರ್ವಿಕ ಹೆಲ್ಲೆನ್ ಆದ್ದರಿಂದ ಈ ಹೆಸರು ಬಂದಿತ್ತು. ಮುಂದೆ ಇಟಾಲಿಯನ್ನರು ಹೆಲ್ಲೆನೀಸನ್ನು ಗ್ರೀಕ್ ಎಂದು ಕರೆದರು. ಪ್ರಾಚೀನ ಗ್ರೀಕರಲ್ಲಿ ಅಯೋಲಿಯನ್, ಅಯೋನಿಯನ್, ಡೋರಿಯಸ್ ಎಂಬ ಪಂಗಡಗಳಿದ್ದವು. ಇವರು ಗ್ರೀಕ್‌ನ ವಿವಿಧ ಭಾಗಗಳಲ್ಲಿ ನೆಲೆಸಿದ್ದರು.

**ನಗರ ರಾಜ್ಯಗಳು:** ಮೂರು ಸಾವಿರ ವರ್ಷಗಳ ಹಿಂದೆ ಗ್ರೀಕಿನ ಪ್ರತಿ ಪಂಗಡಕ್ಕೆ ಒಬ್ಬ ರಾಜ, ಅವನಿಗೆ ಹಿರಿಯರ ಸಲಹಾ ಮಂಡಳಿ ಇರುತ್ತಿತ್ತು. ಕೈಗಾರಿಕೆ ಮತ್ತು ವ್ಯಾಪಾರ ವೃದ್ಧಿಸಿದಂತೆ ಈ ಪಂಗಡಗಳು ನೆಲೆಸಿದ್ದ ಗ್ರಾಮಗಳು ನಿಧಾನವಾಗಿ ಪಟ್ಟಣ, ನಗರಗಳಾಗಿ ವಿಕಾಸಗೊಂಡವು. ಮುಂದೆ ಇವುಗಳೇ ನಗರ ರಾಜ್ಯಗಳೆನಿಸಿದವು. ನಗರ ರಾಜ್ಯಗಳನ್ನು ಗ್ರೀಕ್ ಭಾಷೆಯಲ್ಲಿ 'ಪೋಲಿಸ್' ಎನ್ನುತ್ತಾರೆ. ಗ್ರೀಕರು ತಮ್ಮ ನಗರರಾಜ್ಯಗಳಿಗೆ ನಿಷ್ಠರಾಗಿದ್ದರೆ ವಿನಃ ತಮ್ಮ ದೇಶಕ್ಕಲ್ಲ. ಪ್ರತಿಯೊಂದು ನಗರರಾಜ್ಯಗಳೂ ತನ್ನದೇ ಆದ ಸೇನೆ, ಆಡಳಿತ, ನಗರದೇವತೆ ಮೊದಲಾದವುಗಳನ್ನು ಹೊಂದಿದ್ದವು. ಹೀಗೆ ಗ್ರೀಕ್‌ನ ನಗರರಾಜ್ಯಗಳು ಪ್ರತ್ಯೇಕತೆಯನ್ನು ಕಾಪಾಡಿಕೊಂಡಿದ್ದರೂ ಸಾಂಸ್ಕೃತಿಕವಾಗಿ ಒಂದಾಗಿದ್ದವು. ಗ್ರೀಕ್ ಭಾಷೆ, ಹೋಮರನ ಮಹಾಕಾವ್ಯಗಳು, ಒಲಂಪಿಕ್ ಕ್ರೀಡೆಗಳು, ಗ್ರೀಕ್ ದೇವತೆಗಳು ಇವುಗಳನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾಗಿದ್ದವು. ಗ್ರೀಕ್‌ನ ನಗರ ರಾಜ್ಯಗಳಲ್ಲಿ ಅಥೆನ್ಸ್ ಮತ್ತು ಸ್ಪಾರ್ಟಾ ಅತ್ಯಂತ ಪ್ರಮುಖವಾದುವು.

**ಅಥೆನ್ಸ್:** ಅಥೆನ್ಸ್ ಅಟ್ಟಿಕಾ ರಾಜ್ಯದ ರಾಜಧಾನಿ. ಇದು ಗ್ರೀಕ್‌ನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿದ ಆದರ್ಶ ನಗರರಾಜ್ಯ. ಮೊದಲು ಇಲ್ಲಿ ರಾಜಪ್ರಭುತ್ವ ನಂತರ ಶ್ರೀಮಂತ ಪ್ರಭುತ್ವ ಜಾರಿಗೆ ಬಂದಿತು. ಅರ್ಕನ್ ಎಂಬ ಆಡಳಿತಗಾರನನ್ನು ಶ್ರೀಮಂತರು ಚುನಾಯಿಸುತ್ತಿದ್ದರು. ಡ್ರಾಕೋ ಎಂಬಾತನು ಅಥೆನ್ಸ್‌ನಲ್ಲಿ ನಿರ್ದಯ ಕಾನೂನುಗಳನ್ನು ಜಾರಿಗೆ ತಂದನು. ನಂತರ ಸೋಲಾನ್ ಎಂಬಾತನು ಈ ಕಾನೂನುಗಳನ್ನು ಸುಧಾರಿಸಿ ಹೆಚ್ಚು ಜನಸ್ನೇಹಿಗೊಳಿಸಿದನು. ಸೋಲಾನ್ ನಂತರ ಅಥೆನ್ಸ್‌ನಲ್ಲಿ ಅರಾಜಕತೆಯ ವಾತಾವರಣ ನಿರ್ಮಾಣವಾಯಿತು. ವ್ಯಾಪಾರ, ವಾಣಿಜ್ಯ ಮತ್ತು ಉದ್ಯಮಗಳಿಂದಾಗಿ ನಗರಗಳಲ್ಲಿ ಹುಟ್ಟಿದ್ದ ಮಧ್ಯಮ ವರ್ಗ ಮತ್ತು ಬಡ ರೈತರು

©KTBS Not to be republished

ಸೇರಿ ಈ ಅರಾಜಕತೆಯ ಕಾಲದಲ್ಲಿ ಹುಟ್ಟಿಕೊಂಡಿದ್ದ ಸರ್ವಾಧಿಕಾರಿಗಳನ್ನು ಪದಚ್ಯುತಗೊಳಿಸಿ ಅಥೆನ್ಸ್‌ನಲ್ಲಿ ಪ್ರಜಾಪ್ರಭುತ್ವವನ್ನು ನೆಲೆಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ನಂತರ ಅಥೆನ್ಸ್‌ನಲ್ಲಿ ಪೆರಿಕ್ಲಿಸ್‌ನ ಕಾಲ ಆರಂಭವಾಯಿತು. ಇವನ ಕಾಲವನ್ನು ಗ್ರೀಕ್‌ನ ಸುವರ್ಣಯುಗವೆಂದೇ ಕರೆಯಲಾಗುತ್ತದೆ. ಏಕೆಂದರೆ ಪೆರಿಕ್ಲಿಸನ ಕಾಲದಲ್ಲಿ ಕಲೆ, ಸಾಹಿತ್ಯ, ವಿಜ್ಞಾನ, ತತ್ವಜ್ಞಾನ ಮುಂತಾದ ಕ್ಷೇತ್ರಗಳ ಪ್ರಗತಿಯು ಉತ್ತುಂಗಕ್ಕೇರಿತು. ಆದ್ದರಿಂದ ಅಥೆನ್ಸನ್ನು 'ಹೆಲ್ಲಾಸ್‌ನ ಶಾಲೆ' (School of Hellas) ಎಂದು ಪೆರಿಕ್ಲಿಸ್ ಕರೆದಿದ್ದಾನೆ. ಸಾಕ್ರಟೀಸ್, ಪ್ಲೇಟೋ, ಅರಿಸ್ಟಾಟಲ್ ಮೊದಲಾದ ದಾರ್ಶನಿಕರು ಅಥೆನ್ಸ್‌ಗೆ ಸೇರಿದವರು.

**ಸ್ಪಾರ್ಟಾ:** ಡೇರಿಯನ್ ಪಂಗಡದ ನಗರರಾಜ್ಯವಾದ ಸ್ಪಾರ್ಟಾವು ಗ್ರೀಕ್‌ನ ಸೈನಿಕ ರಾಜ್ಯವಾಗಿತ್ತು. ಬಾಲಕನಿಗೆ ಏಳುವರ್ಷ ತುಂಬಿದ ಕೂಡಲೆ ಸರ್ಕಾರವು ಅವನನ್ನು ಕುಟುಂಬದಿಂದ ಬೇರ್ಪಡಿಸಿ ಕಠಿಣ ಸೈನಿಕ ತರಬೇತಿಯನ್ನು ನೀಡುತ್ತಿತ್ತು. ಹನ್ನೆರಡು ವರ್ಷಗಳ ತರಬೇತಿಯ ನಂತರ ಸೈನ್ಯಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು. ಹೀಗೆ ಬಲಿಷ್ಠ ಸೈನಿಕ ಶಕ್ತಿಯನ್ನು ಸ್ಪಾರ್ಟಾ ನಗರರಾಜ್ಯವು ಹೊಂದಿತ್ತು.

ಪರ್ಶಿಯಾದ ಸಾಮ್ರಾಟ ಡೇರಿಯಸ್ಸನು ಗ್ರೀಕ್‌ನ ಮೇಲೆ ದಾಳಿ ಮಾಡಿದಾಗ ಅಥೆನ್ಸ್ ಮತ್ತು ಸ್ಪಾರ್ಟಾ ನಗರರಾಜ್ಯಗಳು ಒಗ್ಗೂಡಿ ಪರ್ಶಿಯವನ್ನು ಮ್ಯಾರಾಥಾನ್ ಕದನದಲ್ಲಿ ಮಣಿಸಿದವು. ಮುಂದೆ ಅಥೆನ್ಸ್ ರಾಜ್ಯವು 'ಕಾನ್ಫೆಡರಸಿ ಆಫ್ ಡೀಲಾಸ್' ಎಂಬ ನಗರರಾಜ್ಯಗಳ ಒಕ್ಕೂಟವನ್ನು ಸಂಘಟಿಸಿ ಸಾಮ್ರಾಜ್ಯದ ರೂಪ ಪಡೆಯಿತು. ಇದರಿಂದಾಗಿ ಅಥೆನ್ಸ್ ಮತ್ತು ಸ್ಪಾರ್ಟಾಗಳ ನಡುವೆ ವೈರತ್ವ ಬೆಳೆಯಿತು. ಪರಿಣಾಮವಾಗಿ ಈ ಎರಡು ಗಣರಾಜ್ಯಗಳ ನಡುವೆ ಪೆಲೊಪೊನೀಷಿಯನ್ ಯುದ್ಧಗಳು ಜರುಗಿದವು. ಅಂತಿಮವಾಗಿ ಅಥೆನ್ಸ್ ಸೋತು ಸ್ಪಾರ್ಟಾದ ಅಧೀನ ರಾಜ್ಯವಾಯಿತು. ಸ್ಪಾರ್ಟಾ ವಿರುದ್ಧ ಅಥೆನ್ಸ್ ಸೈನಿಕವಾಗಿ ಸೋತಿತು. ಆದರೆ ಸಾಂಸ್ಕೃತಿಕವಾಗಿ ಪ್ರಗತಿಯನ್ನು ಸಾಧಿಸಿತು. ಸಾ.ಶ.ಪೂ. 5ನೆಯ ಶತಮಾನದ ವೇಳೆಗೆ ಪರ್ಶಿಯನ್ನರ ಆಕ್ರಮಣ, ಸ್ಪಾರ್ಟಾ ಮತ್ತು ಅಥೆನ್ಸ್‌ಗಳ ನಡುವಿನ ಸಂಘರ್ಷದಿಂದ ಗ್ರೀಕ್ ನಾಗರಿಕತೆ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು.

**ಧರ್ಮ:** ಗ್ರೀಕರ ದೇವರುಗಳು ಮಾನವರಂತೆ ಆಸೆ ಆಕಾಂಕ್ಷೆಯುಳ್ಳವರು. ಈ ದೇವರುಗಳು ಒಲಂಪಸ್ ಪರ್ವತದ ಮೇಲೆ ವಾಸವಾಗಿದ್ದರೆಂದು ಗ್ರೀಕರು ನಂಬಿದ್ದರು. ಜ್ಯೂಸ್ (Zeus) ಪ್ರಮುಖ ದೇವರು. ಇವನ ಪತ್ನಿ ಹೀರಾ(Hera). ಇವರಲ್ಲದೆ ಅಪೊಲೊ (Apollo), ಅಫ್ರೋಡೈಟ್ (Aphrodite), ಅಥೆನಾ, ಅರಿಸ್(Ares) ಮೊದಲಾದ ದೇವಾನುದೇವತೆಗಳನ್ನು ಪೂಜಿಸುತ್ತಿದ್ದರು. ಅಥೆನಾ ಅಥೆನ್ಸ್ ನಗರದ ಅಧಿದೇವತೆ. ಒಲಂಪಿಯಾದಲ್ಲಿ ಜ್ಯೂಸ್‌ನ ದೇವಾಲಯವಿದೆ. ಇಲ್ಲಿ ನಡೆಯುತ್ತಿದ್ದ ಪ್ರಾಚೀನ ಒಲಂಪಿಕ್ ಕ್ರೀಡೆಗಳಲ್ಲಿ ಗ್ರೀಕ್‌ನ ಎಲ್ಲ ನಗರರಾಜ್ಯಗಳು ಪಾಲ್ಗೊಳ್ಳುತ್ತಿದ್ದವು.

**ಶಿಕ್ಷಣ ಮತ್ತು ಸಾಹಿತ್ಯ:** ಶ್ರೇಷ್ಠ ತತ್ವಜ್ಞಾನಿ ಸಾಕ್ರಟಿಸ್ ಅವನ ಶಿಷ್ಯ ಪ್ಲೇಟೋ, ಅವನ ಶಿಷ್ಯ ಅರಿಸ್ಟಾಟಲ್ ಅವನ ಶಿಷ್ಯ ಮ್ಯಾಸಿಡೋನಿಯಾದ ರಾಜನಾದ ಅಲೆಕ್ಸಾಂಡರ್ ಮಹಾಶಯ. ಇದೊಂದು ಶ್ರೇಷ್ಠ ಗುರುಪರಂಪರೆಯಾಗಿದೆ. ಪ್ಲೇಟೊ 'ಅಕಾಡೆಮಿ' ಎಂಬ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸಿದರೆ, ಅರಿಸ್ಟಾಟಲನು 'ಲೀಸಿಯಂ' ಎಂಬ ಶೈಕ್ಷಣಿಕ ಸಂಸ್ಥೆಯನ್ನು ಆರಂಭಿಸಿದನು. ಡೆಮೊಸ್ತನಿಸ್ ಅತ್ಯುತ್ತಮ ಭಾಷಣಕಾರನಾಗಿದ್ದನು. ಹೋಮರ್ ಎಂಬ ಅಂಧ ಕವಿಯು 'ಈಲಿಯಾಡ್' ಮತ್ತು 'ಒಡಿಸ್ಸಿ' ಎಂಬ ಮಹಾಕಾವ್ಯಗಳನ್ನು ರಚಿಸಿದನು. ಈ ಎರಡು ಮಹಾಕಾವ್ಯಗಳು ಗ್ರೀಕರ ಅಂದಿನ ಜೀವನ ವಿಧಾನ, ಸಾಮಾಜಿಕ, ಧಾರ್ಮಿಕ ವ್ಯವಸ್ಥೆಗಳ ಬಗ್ಗೆ ವಿವರಗಳನ್ನು ನೀಡುತ್ತವೆ. ಈಲಿಯಾಡ್ ಗ್ರೀಕರು ಟ್ರಾಯ್ ನಗರದ ಮೇಲೆ ವಿಜಯ ಸಾಧಿಸಿದ್ದನ್ನು ಮತ್ತು ಒಡಿಸ್ಸಿಯು ಗ್ರೀಕ್ ವೀರ ಒಡಿಸ್ಯೂಸನು ಟ್ರಾಯ್‌ನಿಂದ ಹಿಂತಿರುಗಿ ಬರುವಾಗಿನ ಸಾಹಸದ ಚಿತ್ರಣವನ್ನು ನೀಡುತ್ತದೆ. ಹೆರೋಡೊಟಸ್ ಮತ್ತು ಥುಸಿಡೈಡಿಸ್ ಪ್ರಮುಖ ಇತಿಹಾಸಕಾರರು. ಹೆರೋಡೊಟಸ್‌ನನ್ನು ಇತಿಹಾಸದ ಪಿತಾಮಹನೆಂದು ಕರೆಯಲಾಗಿದೆ. ಈಸ್ಕಿಲಸ್, ಸೊಫೋಕ್ಲಿಸ್ ಮತ್ತು ಯುರಿಪಿಡಿಸ್

©KTBS Not to be republished

ಪ್ರಮುಖ ನಾಟಕಕಾರರು. ಸೊಫೋಕ್ಲಿಸ್ ಜಗತ್ತಿನ ಸುಪ್ರಸಿದ್ಧ ನಾಟಕಗಳಲ್ಲಿ ಒಂದಾದ 'ಇಡಿಪಸ್ ಮತ್ತು ಅಂತಿಗೋನೆ'ಯನ್ನು ಬರೆದಿದ್ದಾನೆ.

**ಕಲೆ ಮತ್ತು ವಾಸ್ತುಶಿಲ್ಪ:** ಗ್ರೀಕ್‌ನಲ್ಲಿ ಗುಲಾಮಗಿರಿ ಸರ್ವವ್ಯಾಪಿಯಾಗಿತ್ತು. ಇದು ಗ್ರೀಕರಿಗೆ ಸಾಕಷ್ಟು ಬಿಡುವಿನ ಸಮಯವನ್ನು ಕಲ್ಪಿಸಿ ವಿವಿಧ ಕಲೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸಿತು. ಗ್ರೀಕರು ಲೈರ್ ಎಂಬ ತಂತಿ ವಾದ್ಯದೊಂದಿಗೆ ಹಾಡುತ್ತಿದ್ದರು. ಗ್ರೀಕರು ಸಂಗೀತ, ನಾಟಕ ಮತ್ತು ನೃತ್ಯ ಕ್ಷೇತ್ರಗಳಲ್ಲಿ ಸಾಧನೆ ಮೆರೆದರು. ವಾಸ್ತುಶಿಲ್ಪ, ಮೂರ್ತಿಶಿಲ್ಪ ಮತ್ತು ಚಿತ್ರಕಲೆಗಳಲ್ಲಿಯೂ ಅಪಾರ ಸಾಧನೆ ಗೈದಿದ್ದಾರೆ. ಪೆರಿಕ್ಲಿಸನು ಅಥೆನ್ಸ್‌ನ ಪಾರ್ಥೆನಾನ್ ದೇವಾಲಯವನ್ನು ಅಮೃತ ಶಿಲೆಗಳಿಂದ ನಿರ್ಮಾಣ ಮಾಡಿಸಿದನು. ಇದು ಸುಂದರ ವಾಸ್ತುಶಿಲ್ಪಕ್ಕೆ ಉದಾಹರಣೆಯಾಗಿದೆ. ಚಕ್ರವೆಸೆಯುತ್ತಿರುವ ಕ್ರೀಡಾಪಟು 'ಡಿಸ್ಕೋಬಲಸ್' ಎಂಬ ಅದ್ಭುತ ಶಿಲ್ಪವನ್ನು ಮೈರನ್ ಎಂಬುವನು ಕಡೆದಿದ್ದಾನೆ. ಗ್ರೀಕ್ ಶಿಲ್ಪಿಗಳು ಮಾನವನ ದೇಹ ರಚನೆಯನ್ನು ನೈಜವಾಗಿ ಚಿತ್ರಿಸುತ್ತಿದ್ದುದಕ್ಕೆ ಉದಾಹರಣೆಯಾಗಿದೆ. ಪಾಲಿಗ್ನಾಟಸ್ ಅಂದಿನ ಪ್ರಮುಖ ಚಿತ್ರಕಾರನಾಗಿದ್ದನು.

**ವಿಜ್ಞಾನ:** ಥೇಲ್ಸ್, ಪೈಥಾಗರಸ್ ಗಣಿತ ಕ್ಷೇತ್ರದ ದಿಗ್ಗಜರು. ಅಣು ಸಿದ್ಧಾಂತವನ್ನು ಅಸ್ಪಷ್ಟವಾಗಿ ಪ್ರತಿಪಾದಿಸಿದ ಡೆಮಾಕ್ರಿಟಸ್, ಮೀನಿನಿಂದ ಮಾನವ ಎಂಬ ವಿಕಾಸವಾದ ತತ್ವವನ್ನು ಸಾರಿದ ಅನಾಕ್ಸಿಮಿಂಡರ್ (Anaximinder) ಪ್ರಮುಖ ವಿಜ್ಞಾನಿಗಳು. ರೋಗಗಳಿಗೆ ವೈಜ್ಞಾನಿಕವಾಗಿ ಔಷಧ ಹುಡುಕುವ ಸಾಧನೆ ಮಾಡಿದ 'ವೈದ್ಯಶಾಸ್ತ್ರದ ಪಿತಾಮಹ' ಹಿಪ್ಪೋಕ್ರಿಟಿಸ್ ಕೂಡ ಗ್ರೀಕ್ ದೇಶದವನು.

**ಕ್ರೀಡೆ :** ಗ್ರೀಕರು ಮನೋವಿಕಾಸಕ್ಕೆ ಆದ್ಯತೆ ಕೊಟ್ಟಂತೆಯೇ, ದೈಹಿಕ ವಿಕಾಸಕ್ಕೂ ಗಮನ ಕೊಟ್ಟಿದ್ದರು. ಆದ್ದರಿಂದ ಕ್ರೀಡೆಗೆ ಗ್ರೀಕರಲ್ಲಿ ವಿಶೇಷ ಮಾನ್ಯತೆ ಇತ್ತು. ಕ್ರೀಡಾಪಟುಗಳಿಗೆ ಸಮಾಜದಲ್ಲಿ ವಿಶೇಷ ಗೌರವವಿತ್ತು. ವಿವಿಧ ದರ್ಜೆಯ ಕ್ರೀಡಾಕೂಟಗಳು ಜರುಗುತ್ತಿದ್ದವು. ಅವುಗಳಲ್ಲಿ ವಿಶೇಷವಾದುದು ಒಲಂಪಿಕ್ ಕ್ರೀಡೆ. ಇದು 2750 ವರ್ಷಗಳ ಹಿಂದೆ ಒಲಂಪಿಯಾದಲ್ಲಿ ಆರಂಭವಾಯಿತು. ಈ ಕ್ರೀಡಾಕೂಟದಲ್ಲಿ ಎಲ್ಲ ನಗರ ರಾಜ್ಯಗಳ ಕ್ರೀಡಾಪಟುಗಳು ಇದರಲ್ಲಿ ಸಂತೋಷ ಮತ್ತು ಹೆಮ್ಮೆಯಿಂದ ತಮ್ಮ ರಾಜ್ಯವನ್ನು ಪ್ರತಿನಿಧಿಸುತ್ತಿದ್ದರು.

> ***ಒಲಂಪಿಕ್ ಆಟ :*** *ಸಾ.ಶ.ಪೂ. 776ರಲ್ಲಿ ಪ್ರಥಮ ಒಲಂಪಿಕ್ ಕ್ರೀಡೆಗಳು ಗ್ರೀಸ್‌ನಲ್ಲಿ ಪ್ರಾರಂಭವಾಯಿತು. ಒಲಂಪಿಕ್ ಆಟಗಳನ್ನು ಇಲಿಸ್ ಪ್ರದೇಶದ ಒಲಂಪಿಯಾದಲ್ಲಿ ಏರ್ಪಡಿಸಲಾಗುತಿತ್ತು. ಇದು ಒಲಂಪಿಕ್ ಹಬ್ಬದ ಭಾಗವಾಗಿತ್ತು. ಇಲಿಸ್ ಮತ್ತು ಪಿಸಾಗಳೆಂಬ ನಗರ-ರಾಜ್ಯಗಳ ನಡುವೆ ಏರ್ಪಟ್ಟ ಶಾಂತಿ ಒಪ್ಪಂದದ ಪ್ರಯುಕ್ತ ಈ ಹಬ್ಬವನ್ನು ಆಚರಿಸಲಾಗುತ್ತಿತ್ತು. ನಾಲ್ಕು ವರ್ಷಕ್ಕೊಮ್ಮೆ ನಡೆಯುತ್ತಿದ್ದ ಈ ಆಟವನ್ನು ಕಾಲಮಾಪನಕ್ಕಾಗಿಯೂ ಗ್ರೀಕರು ಬಳಸುತ್ತಿದ್ದರು.*
>
> *ಪ್ರಾರಂಭದಲ್ಲಿ ಓಟವೊಂದನ್ನೆ ಆಯೋಜಿಸಲಾಯಿತು. ಇನ್ನೂರು ಮೀಟರಿನ ಈ ಓಟವೊಂದಕ್ಕೆ 'ಸ್ಟೇಡಿಯಮ್' ಎಂದು ಕರೆಯುತ್ತಿದ್ದರು. ಹೀಗಾಗಿಯೆ ಗ್ರೀಕರ ದೂರ ಮಾಪನ ಅಥವಾ ಅಂತರ ಮಾಪನವನ್ನು 'ಸ್ಟೇಡಿಯ' ಎಂದರು. ಆಟದಲ್ಲಿ ವಿಜಯಿಯಾದವನ ತಲೆಯ ಮೇಲೆ ಆಲಿವ್ ಮರದ ಗುಚ್ಛವೊಂದನ್ನು ಇಡಲಾಗುತಿತ್ತು. ಒಲಂಪಿಕ್ ಆಟಗಳು ಸುಮಾರು ಸಾವಿರಕ್ಕೂ ಹೆಚ್ಚುಕಾಲ ಆಯೋಜಿಸಲ್ಪಟ್ಟಿತು. ಸಾ.ಶ. 4ನೆಯ ಶತಮಾನದಲ್ಲಿ ಕ್ರಿಶ್ಚಿಯನ್ ಬೈಜಾಂಟೈನ್ ಚಕ್ರವರ್ತಿಯಾದ ತಿಯೆಡೊಸಿಯಸ್ಸನು ಈ ಆಟವನ್ನು ನಿರ್ಬಂಧಿಸಿದನು. ಇದರೊಂದಿಗೆ ಒಲಂಪಿಕ್ ಆಟವು ಕೊನೆಯಾಯಿತು. ಹತ್ತೊಂಬತ್ತನೆಯ ಶತಮಾನದಲ್ಲಿ ಫ್ರಾನ್ಸ್ ದೇಶದ ನೇತೃತ್ವದಲ್ಲಿ ಮತ್ತೆ ಒಲಂಪಿಕ್ ಆಟವನ್ನು ಆರಂಭಿಸಲಾಯಿತು. ಇಂದಿಗೂ ಒಲಂಪಿಕ್ಸ್ ಆಟಗಳು ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತಿವೆ.*

ಗ್ರೀಕರಿಗೂ ಪರ್ಶಿಯನ್ನರಿಗೂ 2500 ವರ್ಷಗಳ ಹಿಂದೆ ನಡೆದ ಮ್ಯಾರಥಾನ್ ಕದನದಲ್ಲಿ ಗ್ರೀಕರು ಜಯಗಳಿಸಿದರು. ಈ ಸಂತೋಷದ ಸುದ್ದಿಯನ್ನು ಯುದ್ಧಭೂಮಿಯಿಂದ 24 ಮೈಲು ದೂರದಲ್ಲಿದ್ದ ಅಥೆನ್ಸ್‌ಗೆ ಮುಟ್ಟಿಸಲು ಪೆಯ್ಡಿ ಪೈಡಸ್ ಎಂಬ ಸೈನಿಕ ಓಡಿದ. ಅಂತಿಮವಾಗಿ ವಿಜಯದ ಸುದ್ದಿಯನ್ನು

©KTBS Not to be republished

ಅಥೆನ್ಸ್‌ಗೆ ಮುಟ್ಟಿಸಿ ಕುಸಿದು ಬಿದ್ದು ಸತ್ತನು. ಅವನ ಸ್ಮರಣಾರ್ಥ ಒಲಂಪಿಕ್ ಕ್ರೀಡೆಗಳಲ್ಲಿ ಮ್ಯಾರಥಾನ್ ಓಟ ಸೇರಿಸಿದರು.

ಗ್ರೀಕ್‌ನ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉತ್ತರ ಗ್ರೀಕ್‌ನ ಮ್ಯಾಸಿಡೋನಿನ ದೊರೆ ಫಿಲಿಪ್ ನಾಶಪಡಿಸಿದನು. ಅಖಂಡ ಗ್ರೀಕ್‌ನ್ನು ತನ್ನ ಆಳ್ವಿಕೆಗೆ ಒಳಪಡಿಸಿದನು. ಇವನ ಮಗನೇ ಅಲೆಕ್ಸಾಂಡರ್. ಈತನು ಮಹಾನ್ ದಿಗ್ವಿಜಯಿ. ಇವನ ಗುರು ಅರಿಸ್ಟಾಟಲ್. ಚಿಕ್ಕವಯಸ್ಸಿನಲ್ಲಿಯೇ ಜಗತ್ತನ್ನು ಗೆಲ್ಲಲು ದಂಡಯಾತ್ರೆ ಕೈಗೊಂಡನು. ಪರಿಣಾಮವಾಗಿ ಈಜಿಪ್ಟ್, ಬ್ಯಾಬಿಲಾನ್, ಪರ್ಶಿಯಾಗಳನ್ನು ಗೆದ್ದು ಭಾರತದವರೆಗೂ ಬಂದನು. ನಂತರ ತನ್ನ ದೇಶಕ್ಕೆ ಹಿಂತಿರುಗುವ ಮಾರ್ಗದಲ್ಲಿ ಮಡಿದನು. ಈಜಿಪ್ಟ್‌ನಲ್ಲಿ ಅಲೆಕ್ಸಾಂಡ್ರಿಯಾ ಎಂಬ ನಗರವನ್ನು ಕಟ್ಟಿಸಿದನು.

**ಅಲೆಗ್ಸಾಂಡರ್**

*ಈತ ಗ್ರೀಸ್ ದೇಶದ ಮೆಸಿಡೊನಿಯಾದ ರಾಜ. ತನ್ನ ಅತ್ಯಲ್ಪ ಜೀವಾವಧಿಯಲ್ಲಿ ಜಗತ್ತನ್ನು ಗೆಲ್ಲಲು ಹೊರಟನು. ಈತನು ಬೃಹತ್ ಸಾಮ್ರಾಜ್ಯವೊಂದನ್ನು ರೂಪಿಸುವಲ್ಲಿ ಸಫಲನಾದನು. ಇವನು ಪರ್ಶಿಯನ್ ಸಾಮ್ರಾಜ್ಯವನ್ನು ಪರಾಭವಗೊಳಿಸಿ ಭಾರತದ ಮೇಲೆ ದಾಳಿಯನ್ನು ಮುಂದುವರಿಸಲು ಬಂದನು. ಗ್ರೀಕರಲ್ಲಿನ ಸರ್ವಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬನಾಗಿದ್ದ ಅರಿಸ್ಟಾಟಲ್ ಇವನ ಗುರುವಾಗಿದ್ದನು. ಭಾರತದ ಗಡಿಯಲ್ಲಿ ಹೋರಾಡಿ ಹಿಂದಿರುಗುವಾಗ ಬ್ಯಾಬಿಲೋನಿಯದಲ್ಲಿ ಸಾ.ಶ.ಪೂ. 323ರಲ್ಲಿ ಅಲೆಗ್ಸಾಂಡರನು ಮೃತನಾದನು.*

**ಸಾಕ್ರಟೀಸ್**

*ಸಾಕ್ರಟೀಸನ ಬೌದ್ಧಿಕತೆಯನ್ನು ಸೂಚಿಸುವ ಅನೇಕ ಐತಿಹ್ಯಗಳಿವೆ. ಅದರಲ್ಲಿ ಒಂದು ಈ ಕೆಳಕಂಡಂತಿದೆ. ಅಥೆನ್ಸ್ ನಗರ ಬುದ್ಧಿವಂತರ ನಗರವೆಂದು ಪ್ರಸಿದ್ಧಿಯನ್ನು ಪಡೆದಿತ್ತು. ಒಮ್ಮೆ ಅಲ್ಲಿಯ ಬುದ್ಧಿವಂತ ವರ್ಗದಲ್ಲಿ ಒಂದು ಪ್ರಶ್ನೆ ಮೂಡಿತು. ನಾವು ಇಷ್ಟೊಂದು ಜನ ಬುದ್ಧಿವಂತರಿದ್ದೇವೆ. ಆದರೆ ನಮ್ಮಲ್ಲಿ ಅತೀ ಬುದ್ಧಿವಂತರು ಯಾರು? ಎಂಬುದು ಅವರ ಪ್ರಶ್ನೆಯಾಗಿತ್ತು. ತಮ್ಮಲ್ಲಿಯೇ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲಾಗದೆ ಆ ನಗರದ ದೇವತೆಯಾದ ಅಥೇನಿಯ ಬಳಿ ತಮ್ಮ ಪ್ರಶ್ನೆಯನ್ನು ನಿವೇದಿಸಿಕೊಳ್ಳುತ್ತಾರೆ. ಅದಕ್ಕೆ ದೇವತೆಯು ಅಥೆನ್ಸ್ ನಗರದ ಬುದ್ಧಿವಂತನೆಂದರೆ ಸಾಕ್ರಟೀಸ್ ಎಂದು ಹೇಳುತ್ತಾಳೆ. ಸಾಕ್ರಟೀಸ್‌ನನ್ನು ಹುಡುಕಿಕೊಂಡು ಹೊರಟ ಈ ಬುದ್ಧಿವಂತರು ಅವನ ಬಳಿ ಹೋಗಿ ಅವನ ಬುದ್ಧಿವಂತಿಕೆಯ ಮೂಲವೇನು ಮತ್ತು ಹೇಗೆ ಅವನು ಇವರಿಗಿಂತ ಬುದ್ಧಿವಂತ ಎಂದು ಕೇಳುತ್ತಾರೆ. ಅದಕ್ಕೆ ಅವನು ಕೊಡುವ ಉತ್ತರ ಹೀಗಿದೆ. 'ನನಗೂ ಏನೂ ಗೊತ್ತಿಲ್ಲ. ಹಾಗೆಯೇ ನಿಮಗೂ ಏನೂ ಗೊತ್ತಿಲ್ಲ. ಆದರೆ ನನಗೆ ಗೊತ್ತಿಲ್ಲವೆಂದು ನನಗೆ ಗೊತ್ತಿದೆ. ನಿಮಗೆ ಗೊತ್ತಿಲ್ಲವೆಂದು ನಿಮಗೆ ಗೊತ್ತಿಲ್ಲ.' ಎಂದು ಹೇಳುತ್ತಾನೆ. ಅರಿವಿಗಿರುವ ವಿಸ್ತಾರವನ್ನು ತೆರೆದಿಡುತ್ತಾನೆ.*

*ಪಾಶ್ಚಾತ್ಯ ಪ್ರಪಂಚಕ್ಕೆ ತರ್ಕಬದ್ಧವಾಗಿ ಆಲೋಚನೆ ಮಾಡುವ ಕ್ರಮವನ್ನು ತಿಳಿಸಿದ ತತ್ವಜ್ಞಾನಿಯೆಂದರೆ ಸಾಕ್ರಟೀಸ್. ಬೌದ್ಧಿಕತೆಗೆ, ವೈಚಾರಿಕತೆಗೆ ಮತ್ತೊಂದು ಹೆಸರೇ ಸಾಕ್ರಟೀಸ್. ಇವನು ಆರಂಭಿಕ ಗ್ರೀಕ್ ಚಿಂತನೆಗಳಿಗೆ ಒಂದು ತಾತ್ವಿಕ ನೆಲೆಯನ್ನು ರೂಪಿಸಿದನು. ರಾಜಕೀಯ, ಸಾಮಾಜಿಕ, ನ್ಯಾಯ, ನೀತಿ, ಧರ್ಮ, ದೇಶಪ್ರೇಮ, ಪ್ರಜಾಪ್ರಭುತ್ವ, ಮಾನವೀಯತೆ, ನೈತಿಕತೆ ಮುಂತಾದವುಗಳಲ್ಲಿ ನಂಬಿಕೆಯುಳ್ಳವನಾಗಿದ್ದನು. ಅವನ ಜೀವನ ಒಂದು ಸಂಕಷ್ಟಗಳ, ನೋವಿನ ಹಾಗೂ ಸಾಹಸಗಳ ಹೋರಾಟವಾಗಿತ್ತು. ಸಾಕ್ರಟೀಸನ ತಾತ್ವಿಕ ಚಿಂತನೆ, ಪ್ರಧಾನವಾಗಿ ನೈತಿಕವಾದುದಾಗಿತ್ತು. ಜ್ಞಾನವೇ ಸದ್ಗುಣ; ಸದ್ಗುಣವೇ ಜ್ಞಾನ' ಇದು ಸಾಕ್ರಟೀಸನ ತತ್ವ ಚಿಂತನೆಯ ಬೆನ್ನೆಲುಬು. ಅವನು ತನ್ನ ತಾತ್ವಿಕ ಚಿಂತನೆಯನ್ನು ನಾಲ್ಕು ಗೋಡೆಗಳ ಮಧ್ಯೆ ಬೆಳೆಸಲಿಲ್ಲ. ಅಪಾರ ಸಂಖ್ಯೆಯಲ್ಲಿ ಜನ ಸೇರುತ್ತಿದ್ದ ಪೇಟೆ, ಬಜಾರುಗಳಲ್ಲಿ, ಅಂಗಡಿ ಬೀದಿಗಳಲ್ಲಿ ಹೋಗಿ ತನಗೆ ಪರಿಚಯವಿಲ್ಲದಿದ್ದರೂ ಜನರನ್ನು ಕುರಿತು ಸಾಮಾಜಿಕ ಸಮಸ್ಯೆಗಳು, ಜ್ಞಾನಕ್ಕೆ ಸಂಬಂಧಿಸಿದ ವಿಚಾರಗಳನ್ನು ಪ್ರಶ್ನೆ-ಉತ್ತರ ಸಂವಾದದ ವಿಧಾನದ ಮೂಲಕ ತಾತ್ವಿಕ ಚಿಂತನೆಯನ್ನು ಮಾಡುತ್ತಿದ್ದನು.*

©KTBS Not to be republished

ಈ ರೀತಿಯ ಸಾಕ್ರಟೀಸನ ಚಿಂತನೆಯು ಅಥೆನ್ಸಿನ ಕೆಲವು ಜನರ ಕೋಪಕ್ಕೆ, ದ್ವೇಷಕ್ಕೆ ಗುರಿಯಾಯಿತು. ಅಥೆನ್ಸಿನ ಪೂರ್ವಗ್ರಹ ಪೀಡಿತರಾದ ಕೆಲವರು ಅವನನ್ನು ಶಿಕ್ಷಿಸಲು ಅನೇಕ ಆರೋಪಗಳನ್ನು ಹೊರಿಸಿದರು. ಅವರು ಹೊರಿಸಿದ ಆರೋಪಗಳಿಗಾಗಿ ಸಾಕ್ರಟೀಸನಿಗೆ ನ್ಯಾಯಾಲಯ ಮರಣದಂಡನೆಯನ್ನು ವಿಧಿಸಿ ಸೆರೆಮನೆಯಲ್ಲಿರಿಸಿತು. ಒಂದು ತಿಂಗಳ ನಂತರ ವಿಷಪಾನ ಮಾಡಿಸಲು ನ್ಯಾಯಾಲಯವು ತೀರ್ಮಾನಿಸಿತು. 'ನಾನು ಮರಣಕ್ಕೆ ಎಳ್ಳಷ್ಟೂ ಅಂಜುವವನಲ್ಲ, ಧರ್ಮಕ್ಕೂ, ಸತ್ಯಕ್ಕೂ ವಿರೋಧವಾಗಿ ನಡೆಯಲು ಮಾತ್ರ ಅಂಜುವೆನು' ಎಂದು ತನ್ನ ಶಿಷ್ಯರಿಗೆ ಹೇಳುತ್ತಾನೆ. ಸೆರೆಮನೆಯಲ್ಲಿದ್ದ ಸಾಕ್ರಟೀಸ್‌ನಿಗೆ ಕೊನೆಯದಿನ ಜೈಲು ಸೇವಕನು ವಿಷದ ಬಟ್ಟಲನ್ನು ತಂದುಕೊಟ್ಟನು. ಆ ವಿಷವನ್ನು ಸಾಕ್ರಟೀಸನು ಕುಡಿದು ಇಹಲೋಕವನ್ನು ತ್ಯಜಿಸಿದನು.

**ಪ್ಲೇಟೋ :** ಇವನು ಜಗತ್ಪ್ರಸಿದ್ಧ ತತ್ವಜ್ಞಾನಿಗಳಲ್ಲಿ ಒಬ್ಬನಾಗಿದ್ದಾನೆ. ಸಾಕ್ರಟೀಸನ ಶಿಷ್ಯನಾದ ಈತ ಸಾಮಾಜಿಕ ನ್ಯಾಯ, ನೀತಿ ಮುಂತಾದ ವಿಚಾರಗಳನ್ನು ಪ್ರತಿಪಾದಿಸಿದನು. ಇವನು 'ಆದರ್ಶರಾಜ್ಯ' ಎಂಬ ಕಲ್ಪನೆಯ ರೂವಾರಿ. ಅಥೆನ್ಸ್ ನಗರ ಅಪಾಯದ ಸ್ಥಿತಿಯಲ್ಲಿದ್ದಾಗ ತನ್ನ ಸುತ್ತ ಮುತ್ತಲಿನ ಇಡೀ ಬದುಕು ಆತನನ್ನು ಆತಂಕಗೊಳಿಸಿತು. ಈ ಸಂದರ್ಭದಲ್ಲಿ ಸಾಮಾಜಿಕ ಮತ್ತು ರಾಜಕೀಯ ಜೀವನದ ಅವನತಿಯನ್ನು ತಡೆಯಲು ಸಾಮಾಜಿಕ, ರಾಷ್ಟ್ರೀಯ ಜೀವನಕ್ಕೆ ಸಂಬಂಧಿಸಿದಂತೆ ನೀತಿ, ತತ್ವ, ವಿದ್ಯಾಭ್ಯಾಸದಂತಹ ವಿಚಾರಗಳನ್ನು ಅವನು ಪ್ರತಿಪಾದಿಸಿದನು. ವಿದ್ಯಾ ಪಕ್ಷಪಾತಿಯಾದ ಇವನು 'ದಿ ಅಕಾಡೆಮಿ' ಎಂಬ ಶಾಲೆಯನ್ನು ಅಥೆನ್ಸಿನಲ್ಲಿ ಪ್ರಾರಂಭಿಸಿದನು. ಇದು ಯುರೋಪಿನ ಮೊಟ್ಟಮೊದಲನೆಯ ವಿಶ್ವವಿದ್ಯಾಲಯವೆಂದು ಖ್ಯಾತಿಹೊಂದಿತು. ಪ್ಲೇಟೋನು ರಚಿಸಿದ ಕೃತಿಗಳಲ್ಲಿ ಮುಖ್ಯವಾದವುಗಳೆಂದರೆ, 'ರಿಪಬ್ಲಿಕ್' ಮತ್ತು 'ದಿ ಟೆಕ್ಸ್ಟ್ ಅಂಡ್ ಹಿಸ್ಟರಿ' ಎಂಬುವುಗಳಾಗಿವೆ. ಸಾಕ್ರಟೀಸ್, ಪ್ಲೇಟೋ, ಅರಿಸ್ಟಾಟಲ್ ಇವರು ಪ್ರಾಚೀನ ಗ್ರೀಸಿನ ಮೂವರು ಬಹುಮುಖ್ಯ ತತ್ವಶಾಸ್ತ್ರಜ್ಞರು. 20ನೆಯ ಶತಮಾನದ ಪ್ರಮುಖ ರಾಜಕೀಯ ಚಿಂತನೆಗಳನ್ನೂ ಪ್ರೇರೇಪಿಸುವ ಪ್ರಭಾವಶಾಲಿ ಪ್ಲೇಟೋ. ಸಾಕ್ರಟೀಸನ ಕೊಲೆಯ ನಂತರ ಊರು ಬಿಟ್ಟ ಪ್ಲೇಟೋ ಗ್ರೀಸ್, ಈಜಿಪ್ಟ್ ಇಟಲಿಗಳಲ್ಲಿ ಸಂಚರಿಸಿದ. ರಾಜಕೀಯ ಶಾಸ್ತ್ರದಲ್ಲಿ ಮಾತ್ರವಲ್ಲ ಗಣಿತಶಾಸ್ತ್ರ ಹಾಗೂ ನ್ಯಾಯಾಂಗದಲ್ಲಿಯೂ ಇವನು ಪಂಡಿತನಾಗಿದ್ದನು.

**ಅರಿಸ್ಟಾಟಲ್ :** ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಪ್ಲೇಟೋವಿನಷ್ಟೇ ಮಹತ್ವವುಳ್ಳ ಗ್ರೀಕ್ ಚಿಂತಕನೆಂದರೆ ಅರಿಸ್ಟಾಟಲ್. ಇವನು ಪ್ಲೇಟೋವಿನ ಶಿಷ್ಯ. ಇವನ ವಿಚಾರಧಾರೆಗಳ ಮೇಲೆ ಸಾಕ್ರಟೀಸ ಮತ್ತು ಪ್ಲೇಟೋರವರ ಗಾಢವಾದ ಪ್ರಭಾವವಿದೆ. ರಾಜ್ಯಶಾಸ್ತ್ರದ ಪಿತಾಮಹ ಎಂಬ ಖ್ಯಾತಿಯನ್ನು ಹೊಂದಿದ್ದಾನೆ. ಅರಿಸ್ಟಾಟಲ್‌ನು ಅಲೆಗ್ಸಾಂಡರನ ಗುರು ಮತ್ತು ಅಭಿಮಾನಿಯಾಗಿದ್ದರಿಂದ ಅಲ್ಲಿಯ ಕೆಲವು ಪೂರ್ವಗ್ರಹ ಪೀಡಿತ ಜನರು ಈತನನ್ನು ವಿರೋಧಿಸತೊಡಗಿದರು. ಶತ್ರುಗಳ ಸಂಖ್ಯೆ ಅಧಿಕವಾಗತೊಡಗಿತು. ಕೊನೆಗೆ ಅನ್ಯಮಾರ್ಗವಿಲ್ಲದೆ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡನು. ಅತ್ಯುತ್ತಮ ರಾಜ್ಯದ ರಚನೆ ಮತ್ತು ಸ್ವರೂಪ, ಸ್ತ್ರೀಯರ ಸ್ಥಾನಮಾನ, ಗುಲಾಮಗಿರಿ, ಆಸ್ತಿಯ ಪ್ರಮಾಣ, ನಾಗರಿಕತ್ವ, ಶಿಕ್ಷಣ, ಕ್ರಾಂತಿ, ಸಮಾಜವಾದ, ಪ್ರಜಾಪ್ರಭುತ್ವ ಮುಂತಾದವುಗಳ ವಿಚಾರಗಳನ್ನು ಅವನು ಚರ್ಚಿಸಿದ್ದಾನೆ. ಇವನ ತತ್ವ ಚಿಂತನೆ ಪ್ಲೇಟೋವಿನ ಚಿಂತನೆಯ ಬೆಳವಣಿಗೆ ಎನ್ನಬಹುದು. ಪ್ಲೇಟೋವಿನ ವಿದ್ಯಾಲಯಕ್ಕೆ ಪೂರಕವಾಗಿ ಅಥೆನ್ಸ್‌ನಲ್ಲಿ 'ಲೈಷಿಯಮ್' ಎಂಬ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದನು. 'ನಾನು ನನ್ನ ಗುರುವನ್ನು ಗೌರವಿಸುತ್ತೇನೆ ಆದರೆ ಸತ್ಯವನ್ನು ಅದಕ್ಕಿಂತಲೂ ಹೆಚ್ಚು ಗೌರವಿಸುತ್ತೇನೆ.' ಎಂದು ಅವನು ತನ್ನ ಶಿಷ್ಯರಿಗೆ ಬೋಧಿಸಿರುವುದು ಗಮನಾರ್ಹವಾಗಿದೆ. ಗ್ರೀಕ್ ವೈದ್ಯಶಾಸ್ತ್ರ ಹಾಗೂ ಸಸ್ಯಶಾಸ್ತ್ರವನ್ನು ಅಧ್ಯಯನ ಮಾಡಿದನು. ಸಂಶೋಧನೆಯಲ್ಲಿ ತನಿಖಾ ಪ್ರವೃತ್ತಿಯ ಬಗ್ಗೆ ಇವನು ಆಳವಾದ ಅಧ್ಯಯನ ಮಾಡಿದ್ದನು. ತನ್ನ 17ನೆಯ ವಯಸ್ಸಿನಲ್ಲಿ ಇವನು ಪ್ಲೇಟೋನ ವಿದ್ಯಾರ್ಥಿಯಾಗಿದ್ದನು. ಪ್ಲೇಟೋವಿನಿಂದ ಪ್ರಭಾವಿತನಾದ ಈತನಿಗೆ ನೈತಿಕಶಾಸ್ತ್ರ, ಸೌಂದರ್ಯಶಾಸ್ತ್ರ ಮತ್ತು ಗ್ರೀಕರ ಆರಂಭದ ತತ್ವಶಾಸ್ತ್ರಗಳು ತಿಳಿದಿದ್ದವು. ಈ ಕಾರಣದಿಂದ ಅವನು ಅಲೆಗ್ಸಾಂಡರ್ ಚಕ್ರವರ್ತಿಯ ಸಹವರ್ತಿಯಾಗಿದ್ದನು.

©KTBS Not to be republished

## ರೋಮನ್ ನಾಗರಿಕತೆ

ಯೂರೋಪಿನ ದಕ್ಷಿಣಕ್ಕೆ ಮೆಡಿಟರೇನಿಯನ್ ಸಮುದ್ರದಲ್ಲಿ ನೀಳವಾಗಿ ಚಾಚಿಕೊಂಡಿರುವ ಪರ್ಯಾಯ ದ್ವೀಪವೇ ಇಟಲಿ. ಇಟಲಿಯ ಉತ್ತರದಲ್ಲಿ ಆಲ್ಪ್ಸ್ ಪರ್ವತ ಶ್ರೇಣಿಗಳು ಮತ್ತು ಮಧ್ಯ ಭಾಗದಲ್ಲಿ ಅಪೆನೈನ್ ಪರ್ವತ ಶ್ರೇಣಿಗಳು ಹಬ್ಬಿವೆ. ಇಲ್ಲಿಯೇ ಹರಿಯುವ ಟೈಬರ್ ನದಿಯ ದಡದಲ್ಲಿ ರೋಮ್ ನಗರವಿದೆ. ಇದು ಮೆಡಿಟರೇನಿಯನ್ ಸಮುದ್ರದಿಂದ 25 ಕಿ.ಮೀ ದೂರದಲ್ಲಿದೆ. ಅಪೆನೈನ್ ಪರ್ವತ ಮತ್ತು ಸಮುದ್ರದ ನಡುವಿನ ಬಯಲು ಪ್ರದೇಶದಲ್ಲಿ ಲ್ಯಾಟಿನ್ನರು ಎಂಬ ಬುಡಕಟ್ಟು ಸಮುದಾಯ ವಾಸಿಸುತ್ತಿತ್ತು. 2700 ವರ್ಷಗಳ ಹಿಂದೆ ಟೈಬರ್ ನದಿಯ ದಂಡೆಯಲ್ಲಿ ರೋಮ್ ಎಂಬ ಜನವಸತಿ ಪ್ರದೇಶ ಹುಟ್ಟಿಕೊಂಡಿತು. ರೋಮ್‌ನ ಅತ್ಯಂತ ಪುರಾತನ ನಿವಾಸಿಗಳ ವಂಶಿಯರನ್ನು ಪೇಟ್ರೀಷಿಯನ್ನರು ಎಂದು ಕರೆಯಲಾಗುತ್ತಿತ್ತು. ಪೇಟ್ರೀಷಿಯನ್ ಎಂಬ ಪದವು ಲ್ಯಾಟಿನಿನ 'ಪಾಟೆರ್' (ಪಿತೃ = ತಂದೆ) ಎಂಬ ಪದದಿಂದ ಬಂದಿದೆ. ರೋಮನ್ನರು ತಮ್ಮ ಮೂಲ ಪುರುಷರು ರೋಮುಲಸ್ ಮತ್ತು ರೀಮಸ್ ಎಂದು ನಂಬಿದ್ದರು.

ರೋಮ್ ದೇಶವು ರಾಜಾಡಳಿತಕ್ಕೆ ಒಳಗಾಗಿತ್ತು. ರೋಮನ್ನರಿಗೆ 'ಅಸೆಂಬ್ಲಿ' ಹಾಗೂ 'ಸೆನೆಟ್' ಎಂಬ ಎರಡು ರಾಜಕೀಯ ಸಲಹಾ ಸಂಸ್ಥೆಗಳಿದ್ದವು. ಅಸೆಂಬ್ಲಿಯು ಎಲ್ಲ ಮಧ್ಯವಯಸ್ಸಿನ ಪುರುಷರನ್ನು ಹೊಂದಿತ್ತು. ಸೆನೆಟ್ ಪ್ರತಿಷ್ಠಿತರ ಸಭೆಯಾಗಿತ್ತು. ಇದು ಅತ್ಯಂತ ಪ್ರಭಾವಿ ಸಂಸ್ಥೆಯಾಗಿತ್ತು. ಅಸೆಂಬ್ಲಿ ಹಾಗೂ ರಾಜನ ಪ್ರಸ್ತಾಪಗಳನ್ನು ತಿರಸ್ಕರಿಸುವ ಹಕ್ಕು ಕೂಡ ಸೆನೆಟಿಗಿತ್ತು. ಸಾ.ಶ.ಪೂ. 6ನೆಯ ಶತಮಾನದಲ್ಲಿ ರಾಜತ್ವವನ್ನು ಅಳಿಸಿ ಗಣರಾಜ್ಯವನ್ನು ಸ್ಥಾಪಿಸಲಾಯಿತು. ಸಾ.ಶ.ಪೂ 3ನೆಯ ಶತಮಾನದ ಅವಧಿಗೆ ಸಮಗ್ರ ಇಟಲಿಯ ಆಡಳಿತವು ಗಣರಾಜ್ಯಗಳ ಕೈಗೆ ಬಂದಿತು. ರೋಮನ್ ಗಣರಾಜ್ಯದಡಿಯಲ್ಲಿ ಸೆನೆಟ್ ಹಾಗೂ ಅಸೆಂಬ್ಲಿ ಸಲಹಾ ಸಂಸ್ಥೆಗಳಾಗಿ ಮುಂದುವರಿದವು. ಈ ಸಂಸ್ಥೆಗಳ ಸದಸ್ಯರುಗಳೇ ಯುದ್ಧಗಳಲ್ಲಿ ಸೇನೆಯನ್ನು ನಡೆಸಿದರು. ಇವರು ಕಾನೂನನ್ನು ನಿಭಾಯಿಸಿದರು ಹಾಗೂ ನ್ಯಾಯವನ್ನು ಪ್ರತಿಪಾದಿಸಿದರು.

ರೋಮನ್ ಸಮಾಜದಲ್ಲಿ ಪೇಟ್ರಿಷಿಯನರು ಹಾಗೂ ಪ್ಲೇಬಿಯನರೆಂಬ ಎರಡು ವರ್ಗಗಳಿದ್ದವು. ಪೇಟ್ರಿಷಿಯನರು ಸಮಾಜದ ಪ್ರತಿಷ್ಠಿತರು. ಇವರು ಮೇಲು ವರ್ಗದವರು ಹಾಗೂ ಭೂ ಮಾಲೀಕರು. ಇವರು ಸೆನೆಟನ್ನು ನಿಯಂತ್ರಿಸುತ್ತಿದ್ದವರು. ಪ್ಲೇಬಿಯನರು ಜನಸಾಮಾನ್ಯರು. ಇವರು ಸಾಮಾನ್ಯ ಕೆಲಸಗಾರರು, ಸಣ್ಣ ಭೂ ಹಿಡುವಳಿದಾರರು, ಕುಶಲಕರ್ಮಿಗಳು, ಸಣ್ಣವ್ಯಾಪಾರಿಗಳು ಹಾಗೂ ಸೈನಿಕರು. ಇವರ ಹಕ್ಕುಗಳು ಸೀಮಿತವಾಗಿದ್ದವು. ತೆರಿಗೆಗಳನ್ನು ಪಾವತಿಸುವುದಕ್ಕೆ ಹಾಗೂ ಶಿಕ್ಷೆಗಳಿಗೆ ಒಳಗಾಗುವುದಕ್ಕೆ ಇವರು ಮೀಸಲಾಗಿದ್ದರು. ಕೌನ್ಸಿಲ್ ಹಾಗೂ ಸೆನೆಟ್‌ಗಳು ಪ್ಲೇಬಿಯನ್ನರ ವಿಚಾರವಾಗಿ ತೆಗೆದುಕೊಂಡ ನಿರ್ಧಾರಗಳನ್ನು ಟ್ರಿಬ್ಯೂನ್‌ಗಳು ತಿರಸ್ಕರಿಸಬಹುದಿತ್ತು. ಸಾ.ಶ.ಪೂ. 5ನೆಯ ಶತಮಾನದಲ್ಲಿ ಇವರು ವ್ಯವಸ್ಥೆಯ ವಿರುದ್ಧ ದಂಗೆಯೆದ್ದರು. ಇದರಿಂದಾಗಿ ಪೇಟ್ರಿಷಿಯನರು ಇವರುಗಳಿಗೆ ಕೆಲವು ರಿಯಾಯಿತಿಗಳನ್ನು ನೀಡಿದರು. ಹೀಗಾಗಿ ಟ್ರಿಬ್ಯೂನ್‌ಗಳ ಸದಸ್ಯರನ್ನು ಆರಿಸುವ ಹಕ್ಕನ್ನು ಪಡೆದುಕೊಂಡರು. ಇದೇ ಸಂದರ್ಭದಲ್ಲಿ 'ರೋಮನ್ ಲಾ' ಎಂಬ ಕಾನೂನುಗಳಿಂದ ಶಾಸನಬದ್ಧ ಆಳ್ವಿಕೆಯನ್ನು ತಂದರು. ಇದರಿಂದ ಪ್ರಜೆಗಳ ಹಕ್ಕುಗಳನ್ನು ಪರಿಚಯಿಸಿದಲ್ಲದೆ ಅದರ ಉಲ್ಲಂಘನೆಯನ್ನು ವಿರೋಧಿಸುವುದನ್ನು ಕಲಿತರು.

ಹೊಸ ಪ್ರದೇಶಗಳ ವಿಸ್ತರಣೆಯ ಅಭಿಲಾಷೆಯು ರೋಮನ್ನರನ್ನು ಹೊಸ ಸಂಘರ್ಷಕ್ಕೆ ಎಡೆಮಾಡಿತು. ಹೀಗಾಗಿ ಇವರು ಉತ್ತರ ಆಫ್ರಿಕಾದ ಕರಾವಳಿಯಲ್ಲಿರುವ ಕಾರ್ಥೇಜ್ ಎಂಬ ನಗರದ ಜೊತೆ ಕಾದಾಡಿದರು. ಸಿಸಿಲ್ಲಿ ಎಂಬುದೊಂದು ಫಲವತ್ತಾದ ಪ್ರದೇಶ. ಇದರ ಹಿಡಿತಕ್ಕಾಗಿಯೇ ಇವರು 118 ವರ್ಷಗಳ ಕಾಲ ಕಾದಾಡಿದರು. ಇದನ್ನೇ 'ಪ್ಯೂನಿಕ್‌ಯುದ್ಧ'ಗಳೆಂದು ಕರೆಯಲಾಗಿದೆ. ಈ ಯುದ್ಧದಲ್ಲಿ ಕಾರ್ಥೇಜಿಯನರು ಪರಾಭವಗೊಂಡರು. ಸಾ.ಶ.ಪೂ. 1ನೆಯ ಶತಮಾನದ ಪ್ರಾರಂಭದ ಹೊತ್ತಿಗೆ ರೋಮನ್ನರು ಗ್ರೀಸ್, ಏಷ್ಯ ಹಾಗೂ ಈಜಿಪ್ಟಿನ ಭೂ ಭಾಗಗಳನ್ನು ಹೊಂದಿದ್ದರು. ಆಕ್ರಮಣ ಹಾಗೂ ವಿಜಯಗಳ ಕಾರಣವಾಗಿ


©KTBS Not to be republished

ರೋಮ್ ವ್ಯಾಪಕ ಸಂಪತ್ತು, ಸಿರಿವಂತಿಕೆಯನ್ನು ಪಡೆದುಕೊಂಡಿತ್ತು. ಹಾಗೆಯೇ ರೋಮ್ ಬಂಗಾರ ಮತ್ತು ಗುಲಾಮರುಗಳನ್ನು ಗಳಿಸಿಕೊಂಡಿತು. ರೋಮ್ ಪೇಟ್ರೇಷಿಯನರು ಹಾಗೂ ಪ್ಲೇಬಿಯನರಲ್ಲದೆ ಬಹುತೇಕ ಗುಲಾಮರನ್ನು ಒಳಗೊಂಡಿತ್ತು. ಗುಲಾಮರಿಗೆ ನಾಗರಿಕ ಹಕ್ಕಿರಲಿಲ್ಲ. ಇವರು ತಮ್ಮ ತಮ್ಮ ಯಜಮಾನರುಗಳ ಖಾಸಗಿ ಆಸ್ತಿಯಾಗಿದ್ದರು. ಗುಲಾಮರನ್ನು ಮಾರಾಟಕ್ಕೂ ಇಡುತ್ತಿದ್ದರು. ಕೆಲವು ನಿರ್ಬಂಧಗಳಿಗೆ ಒಳಪಟ್ಟು ಕೆಲವೊಮ್ಮೆ ಅವರು ಸ್ವಾತಂತ್ರ್ಯವನ್ನು ಪಡೆದದ್ದು ಇದೆ. ಅಂತಸ್ತುಗಳ ದರ್ಪದಲ್ಲಿ ಮುಳುಗಿದ್ದ ರೋಮನ್ನರು ಗುಲಾಮರನ್ನು ಗ್ಲ್ಯಾಡಿಯೇಟರ್‌ಗಳಾಗಿ ಬಳಸುತ್ತಿದ್ದರು. ಗ್ಲ್ಯಾಡಿಯೇಟರ್‌ಗಳ ಸೆಣಸಾಟದ ಪೈಪೋಟಿಯನ್ನು ಎಂಪಿಥಿಯೇಟರ್‌ನಿಂದ ವೀಕ್ಷಿಸಿ ಮನರಂಜನೆ ಪಡೆಯುತ್ತಿದ್ದರು. ಬಹುತೇಕ ಗುಲಾಮರು ಹಾಗೂ ಸೆರೆಯಾಳುಗಳು ಇಂತಹ ಆಟಗಳಲ್ಲಿ ತಮ್ಮ ಪ್ರಾಣಗಳನ್ನು ಕಳೆದುಕೊಂಡರು.

**ಗ್ಲ್ಯಾಡಿಯೇಟರ್**

ಪ್ರಾಚೀನ ರೋಮಿನ ಕುಸ್ತಿಪಟುಗಳನ್ನು 'ಗ್ಲ್ಯಾಡಿಯೇಟರ್' ಎಂದು ಕರೆಯುತ್ತಿದ್ದರು. ಇವರುಗಳಲ್ಲಿ ನುರಿತ ಹಾಗು ಪೂರ್ವಭಾವಿ ಸಿದ್ಧತೆ ಇಲ್ಲದವರೂ ಇದ್ದರು. ಪ್ರೇಕ್ಷಕರ ಮನೋರಂಜನೆಗಾಗಿ ಕುಸ್ತಿಗಳನ್ನು ಏರ್ಪಡಿಸಲಾಗುತ್ತಿತ್ತು. ಮನುಷ್ಯ–ಮನುಷ್ಯರ ಹಾಗೂ ಮನುಷ್ಯ–ಮೃಗಗಳ ನಡುವೆ ನಡೆಯುತ್ತಿದ್ದ ಈ ಸಮರಗಳು ಕೆಲವೊಮ್ಮೆ ಆಟಗಾರರ ದಾರುಣ ಮರಣದಲ್ಲಿ ಅಂತ್ಯವಾಗುತಿತ್ತು. ಗ್ಲ್ಯಾಡಿಯೇಟರ್‌ಗಳ ಸಮರಗಳು ನಡೆಯುತ್ತಿದ್ದ ಸ್ಥಳಗಳನ್ನು 'ಆ್ಯಂಪಿಥಿಯೇಟರ್' ಹಾಗೂ 'ಕಲೋಸ್ಸಿಯಂ'ಗಳೆಂದು ಕರೆಯುತ್ತಿದ್ದರು. ನಾಗರಿಕ ಹಕ್ಕನ್ನು ಕಳೆದುಕೊಂಡ ಅಪರಾಧಿಗಳು, ಗುಲಾಮರು ಮತ್ತು ಯುದ್ಧಕೈದಿಗಳನ್ನು ಗ್ಲ್ಯಾಡಿಯೇಟರ್‌ಗಳಾಗಿ ಭರ್ತಿ ಮಾಡಿಕೊಳ್ಳಲಾಗುತ್ತಿತ್ತು. ಗ್ಲ್ಯಾಡಿಯೇಟರ್‌ಗಳು ಕೆಲವೊಮ್ಮೆ ಪ್ರಸಿದ್ಧಿ ಹಾಗೂ ಐಶ್ವರ್ಯಗಳನ್ನು ಗಳಿಸಿ ತಮ್ಮ ಸ್ವಾತಂತ್ರ್ಯವನ್ನು ಪಡೆದುಕೊಳ್ಳುತ್ತಿದ್ದರು. ಇತ್ತೀಚೆಗೆ 'ಗ್ಲ್ಯಾಡಿಯೇಟರ್' ಎಂಬ ಹೆಸರಿನ ಇಂಗ್ಲಿಷ್ ಭಾಷೆಯ ಸಿನಿಮಾ ಜಗದ್ವಿಖ್ಯಾತವಾಗಿದೆ.

ಕಾಲಾಂತರದಲ್ಲಿ ರೋಮನ್ ರಾಜ್ಯವು ಅವ್ಯವಸ್ಥೆಗಳ ಆಗರವಾಯಿತು. ದಂಗೆಗಳು, ಕಗ್ಗೊಲೆಗಳು ಈ ಸಂದರ್ಭದಲ್ಲಿ ನಡೆದವು. ಲಂಚ, ಭ್ರಷ್ಟಾಚಾರವು ಚುನಾವಣೆಗಳಲ್ಲಿ ಸಹಜವಾಯಿತು. ಇಂತಹ ಸಂದರ್ಭದಲ್ಲಿ ಸ್ಪಾರ್ಟಕಸ್ಸನ ನೇತೃತ್ವದಲ್ಲಿ ಸುಮಾರು 60,000 ದಷ್ಟು ಬಡಜನ ಹಾಗೂ ಶೋಷಿತ ಗುಲಾಮರು ಬಂಡೆದ್ದರು. ಒಂದು ವರ್ಷದ ಕಾಲ ಹೋರಾಡಿದ ಇವರನ್ನು ಅಮಾನುಷವಾಗಿ ಹತ್ತಿಕ್ಕಲಾಯಿತು. ಸುಮಾರು 60,000 ಜನರನ್ನು ಈ ಸಂದರ್ಭದಲ್ಲಿ ಶಿಲುಬೆಗೇರಿಸಿದರು.



ವೃತ್ತಾಕಾರದ ಬೃಹತ್ ರಂಗ ಮಂದಿರ

ನಿರಂತರ ಯುದ್ಧಗಳಿಂದಾಗಿ ಸೇನಾ ಅಧಿಕಾರಿಗಳು ಸೆನೆಟ್ಟಿನ ಅಧಿಕಾರವನ್ನೇ ಗೌಣವಾಗಿಸಿದರು. ಸಹಸ್ರಾರು ಸೇನಾಧಿಕಾರಿಗಳಲ್ಲಿ ಪಾಂಪೆ ಮತ್ತು ಜೂಲಿಯಸ್ ಸೀಸರ್ ಪ್ರಮುಖರು.

**ಜೂಲಿಯಸ್ ಸೀಸರ್:** ಮುಂದೆ ರೋಮಿನಲ್ಲಿ ಕ್ರಾಸಸ್, ಪಾಂಪೆ ಮತ್ತು ಜೂಲಿಯಸ್ಸರನ್ನು ಒಳಗೊಂಡ ಮೊದಲ ತ್ರಿಮೂರ್ತಿಗಳ ಆಡಳಿತ (First Triumvirate) ಆರಂಭವಾಯಿತು. ದಂಡನಾಯಕರಾಗಿ

©KTBS Not to be republished

ಜೂಲಿಯಸ್ ಸೀಸರ್ ಫ್ರಾನ್ಸ್ (ಗಾಲ್), ಇಂಗ್ಲೆಂಡ್‌ಗಳನ್ನು ಗೆದ್ದರೆ, ಪಾಂಪೆಯು ಸಿರಿಯಾ, ಟರ್ಕಿಗಳನ್ನು ಗೆದ್ದನು. ಕ್ರಾಸಸ್ ಪಾರ್ಥಿಯವನ್ನು ಗೆದ್ದು ಅಲ್ಲಿಯೇ ಅಸುನೀಗಿದನು. ಹೀಗೆ ನಗರ ರಾಜ್ಯವಾಗಿದ್ದ ರೋಮ್ ಸಾಮ್ರಾಜ್ಯವಾಗಿ ಮಾರ್ಪಟ್ಟಿತು. ತನ್ನ ಪ್ರತಿಸ್ಪರ್ಧಿಯಾಗಿ ಕಂಡ ಪಾಂಪೆಯನ್ನು ಜೂಲಿಯಸ್ ಸೋಲಿಸಿ ಕೊಂದನು. ನಂತರ ಈಜಿಪ್ಟ್ ಪ್ರವೇಶಿಸಿ ಅಲ್ಲಿನ ರಾಣಿ ಕ್ಲಿಯೋಪಾತ್ರಳ ಪ್ರೀತಿಗಳಿಸಿದನು. ಬಲಿಷ್ಠನಾದ ಜೂಲಿಯಸ್ ಸೀಸರ್‌ನು ತನ್ನನ್ನು 'ಡಿಕ್ಟೇಟರ್' (ಸರ್ವಾಧಿಕಾರಿ) ಎಂದು ಘೋಷಿಸಿಕೊಳ್ಳುವ ಮೂಲಕ ರೋಮ್‌ನ ಗಣರಾಜ್ಯ ವ್ಯವಸ್ಥೆಯನ್ನು ಶಿಥಿಲಗೊಳಿಸಿದನು. ಈ ಸಂದರ್ಭದಲ್ಲಿಯೇ ಜೂಲಿಯಸ್ ಹತ್ಯೆಗೀಡಾದನು. ಆ ವೇಳೆಗೆ ಈತನ ಕಾಲದಲ್ಲಿ ರೋಮಿನ ಕೃಷಿ, ಕೈಗಾರಿಕೆ ಮತ್ತು ವ್ಯಾಪಾರ ಕ್ಷೇತ್ರಗಳು ಸಾಕಷ್ಟು ಪ್ರಗತಿ ಸಾಧಿಸಿದವು. ಜ್ಯೂಲಿಯಸ್ ಪಂಚಾಂಗವನ್ನೂ ಜಾರಿಗೆ ತಂದನು. ಈ ಜೂಲಿಯಸ್‌ನ ಎಲ್ಲಾ ಕಾರ್ಯಗಳನ್ನು ಅಗಸ್ಟಸ್ ಸೀಸರ್ ಮುಂದುವರೆಸಿದನು.

**ಅಗಸ್ಟಸ್ ಸೀಸರ್:** ಅಗಸ್ಟಸ್‌ನ ಮೊದಲ ಹೆಸರು ಆಕ್ಟೇವಿಯಸ್. ಅವನು ಮಾರ್ಕ್ ಆಂಟೋನಿ, ಲೆಪಿಡಸ್ ಜೊತೆಗೆ ಸೇರಿ ಎರಡನೇ ತ್ರಿಮೂರ್ತಿಗಳ ಆಡಳಿತವನ್ನು (Second Triumvirate) ಆರಂಭಿಸಿದನು. ಲೆಪಿಡಸ್ಸನನ್ನು ಓಡಿಸಿ ಆಂಟೋನಿಯ ಜೊತೆಗೆ ರಾಜ್ಯವನ್ನು ಹಂಚಿಕೊಂಡನು. ಆಂಟೋನಿಯು ಕ್ಲಿಯೋಪಾತ್ರಳ ಪಕ್ಷ ಸೇರಿದ್ದರಿಂದ ಅವನನ್ನು ಅಗಸ್ಟಸ್ ಆಕ್ಟೇವಿಯಂ ಕದನದಲ್ಲಿ ಸೋಲಿಸಿದನು. ಅಂತಿಮವಾಗಿ ಆಂಟೋನಿ ಮತ್ತು ಕ್ಲಿಯೋಪಾತ್ರ ಆತ್ಮಹತ್ಯೆಗೆ ಶರಣಾದರು. ನಂತರ ಅಗಸ್ಟಸ್‌ನು 'ಇಂಪರೇಟರ್' ಎಂಬ ಬಿರುದನ್ನು ಹೊಂದಿದನು. ಎಲ್ಲಾ ಅಧಿಕಾರಗಳನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡು ಆಳಲಾರಂಭಿಸಿದನು. ಅಗಸ್ಟಸ್ ಸೀಸರ್‌ನ ಕಾಲವನ್ನು ರೋಮಿನ ಸುವರ್ಣಯುಗವೆಂದು ಕರೆಯಲಾಗುವುದು. ಅಗಸ್ಟಸ್‌ನು ಅನೇಕ ಲೋಕೋಪಯೋಗಿ ಕಾರ್ಯಗಳನ್ನು ಕೈಗೊಂಡನು. ಇಟ್ಟಿಗೆಗಳ ನಗರವಾಗಿದ್ದ ರೋಮನ್ನು ಅಮೃತಶಿಲೆಯ ನಗರವನ್ನಾಗಿ ತಾನು ಪರಿವರ್ತಿಸಿದ್ದಾಗಿ ಸ್ವತಃ ಅಗಸ್ಟಸ್ ಹೇಳಿಕೊಂಡಿದ್ದಾನೆ. ಈ ಅವಧಿಯಲ್ಲಿ ರೋಮ್ ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಗತಿ ಸಾಧಿಸಿತು.

'ಪ್ಯಾಕ್ಸ್ ರೊಮಾನ' ಸ್ಥಾಪಿತವಾಯಿತು. ಪ್ಯಾಕ್ಸ್ ರೊಮಾನ ಎಂದರೆ ರೋಮಿನ ಶಾಂತಿಯ ಕಾಲ.

ಅಗಸ್ಟಸ್ ನಂತರ ಮಾರ್ಕಸ್ ಅರಿಲಿಯಸ್, ಕಾನ್‌ಸ್ಟಂಟೈನ್ ಹೊರತುಪಡಿಸಿದರೆ ರೋಮಿನ ಕೊನೆಯ ದೊರೆಗಳು ಅಸಮರ್ಥರಾಗಿದ್ದರು. ಇದೇ ವೇಳೆ ಒಡೊಸರ್ ಎಂಬ ಬರ್ಬರ ಜನಾಂಗದ ಆಕ್ರಮಣ ನಡೆದು ಅಂತಿಮವಾಗಿ 1500ವರ್ಷಗಳ ಹಿಂದೆ ಪ್ರಾಚೀನ ರೋಮನ್ ಸಾಮ್ರಾಜ್ಯ ಕಣ್ಮರೆಯಾಯಿತು.

**ಸಾಹಿತ್ಯ:** ರೋಮನ್ನರು ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದರು. ವರ್ಜಿಲ್ ರೋಮಿನ ಶ್ರೇಷ್ಠ ಕವಿ. 'ಈನಿಯಡ್' ಅವನ ಮಹಾಕಾವ್ಯ. ಒವಿಡ್ ಮತ್ತೊಬ್ಬ ಶ್ರೇಷ್ಠ ಕವಿ. ಇವನು 'ಮೆಟಮಾರ್ಫಸಿಸ್' ಎಂಬ ಕೃತಿಯಲ್ಲಿ ಗ್ರೀಕ್ ಪುರಾಣ ಕಥನಗಳನ್ನು ದಾಖಲಿಸಿದ್ದಾನೆ. ಇವರಲ್ಲದೆ ಸಿಸಿರೊ, ಪ್ಲೌಟಸ್, ಟಾರೆನ್ಸ್ ಮೊದಲಾದವರು ಖ್ಯಾತನಾಮರಾಗಿದ್ದರು. ಜೂಲಿಯಸ್ ಸೀಸರ್ ಒಳ್ಳೆಯ ಇತಿಹಾಸಕಾರ ಕೂಡ ಆಗಿದ್ದನು. ಇವನು ಗಾಲಿಕ್ ಯುದ್ಧಗಳನ್ನು ಏಳು ಸಂಪುಟಗಳಲ್ಲಿ ದಾಖಲಿಸಿದ್ದಾನೆ. ಲಿವಿ, ಟಾಸಿಟಸ್ ರೋಮಿನ ಪ್ರಮುಖ ಇತಿಹಾಸಕಾರರು.

**ತತ್ವಜ್ಞಾನ:** ರೋಮನ್ನರು ಹೊಸ ಚಿಂತನೆಗಳನ್ನು ಹುಟ್ಟುಹಾಕದೆ ಗ್ರೀಕಿನ ತತ್ವ, ಚಿಂತನೆಗಳನ್ನೇ ಮುಂದುವರೆಸಿದರು. ಪಶ್ಚಿಮದ ಸಾಕ್ರಟಿಸ್ ಎಂದೇ ಪ್ರಸಿದ್ಧನಾದ ಕ್ಯಾಟೊ ಪ್ರಮುಖನಾದವನು. ಸಿಸೆರೊ, ಸೆನೆಕಾ, ಚಕ್ರವರ್ತಿ ಮಾರ್ಕಸ್ ಅರಿಲಿಯಸ್ ಅವರುಗಳು ಸ್ಟೋಯಿಕ್ ತತ್ವ (Stoicism) ಪ್ರತಿಪಾದಿಸಿದರು. ಇದು 'ನಿಸರ್ಗದೊಂದಿಗೆ ಹೊಂದಿಕೊಂಡು ಬಾಳಿ' ಎಂದು ಸಾರಿತು.

©KTBS Not to be republished

**ಕಲೆ ಮತ್ತು ವಾಸ್ತುಶಿಲ್ಪ:** ರೋಮಿನ ಶ್ರೇಷ್ಠ ವಾಸ್ತುಶಿಲ್ಪಕ್ಕೆ ಕಲೋಸಿಯಂ ಮತ್ತು ಎಂಪಿಥಿಯೇಟರ್ ಉತ್ತಮ ಉದಾಹರಣೆ. ಪ್ಯಾಂಥಿಯೊನ್ ರೋಮ್‌ನ ವಿಶಾಲ ಕಟ್ಟಡವಾಗಿದ್ದು, ಅತಿ ದೊಡ್ಡ ಗುಮ್ಮಟವನ್ನು ಹೊಂದಿದೆ. ಕ್ಯುಪಿಡ್‌ನ ಪ್ರತಿಮೆ, ಅರಾ ಪೆಸಿಸ್ ಶಿಲ್ಪಗಳು ರೋಮಿನ ಶಿಲ್ಪಕಲೆಗೆ ಉದಾಹರಣೆಗಳಾಗಿವೆ.

**ವಿಜ್ಞಾನ:** ರೋಮನ್ನರಿಗೆ ವಿಜ್ಞಾನ ಮತ್ತು ಗಣಿತ ಕ್ಷೇತ್ರದಲ್ಲಿ ಆಳವಾದ ಜ್ಞಾನವಿತ್ತು. ಹಿರಿಯ ಪ್ಲಿನಿಯು 'ನ್ಯಾಚುರಲ್ ಹಿಸ್ಟರಿ' ಎಂಬ ವಿಶ್ವಕೋಶವನ್ನೇ ರಚಿಸಿದ್ದನು. ಸೀಜೆರಿಯನ್ (ಶಸ್ತ್ರಚಿಕಿತ್ಸೆಯ ಮೂಲಕ ಪ್ರಸೂತಿ ಮಾಡಿಸುವುದು), ಕಣ್ಣುಪೊರೆಯ ಶಸ್ತ್ರಚಿಕಿತ್ಸೆ ನಡೆಸುತ್ತಿದ್ದರು. ಗ್ಯಾಲನ್ ರೋಮಿನ ಪ್ರಸಿದ್ಧ ತಜ್ಞ ವೈದ್ಯ. ಸ್ಟ್ರಾಬೋ, ಟಾಲೆಮಿ ಅಂದಿನ ಕಾಲದ ಖ್ಯಾತ ಭೂಗೋಳ ತಜ್ಞರಾಗಿದ್ದರು.

ರೊಮನ್ನರ ಕಾನೂನುಗಳು ಮುಂದಿನ ಎಲ್ಲಾ ಕಾನೂನುಗಳಿಗೆ ಬುನಾದಿಯಾಗಿವೆ. ಇದು ಕಾನೂನು ಕ್ಷೇತ್ರಕ್ಕೆ ಅವರು ಕೊಟ್ಟ ಅಮೂಲ್ಯವಾದ ಕೊಡುಗೆಯಾಗಿದೆ.

**ಅಮೆರಿಕದ ನಾಗರಿಕತೆಗಳು**

ಮಾಯ, ಆಸ್ಟೆಕ್ ಮತ್ತು ಇಂಕಾ ಇವು ಅಮೆರಿಕದಲ್ಲಿನ ಪ್ರಾಚೀನ ಕೊಲಂಬಿಯಾದ ನಾಗರಿಕತೆಗಳು. ಇವು ಅಮೆರಿಕಾದಲ್ಲಿನ ಇಂಡಿಯನ್ ಮೂಲನಿವಾಸಿಗಳ ಸಂಸ್ಕೃತಿಯನ್ನು ಸೂಚಿಸುತ್ತವೆ. ಮಧ್ಯಕಾಲೀನ ಯುರೋಪಿನ ದೇಶಗಳು ಭಾರತಕ್ಕೆ ಹೊಸ ಜಲಮಾರ್ಗಗಳನ್ನು ಅನ್ವೇಷಿಸುವ ಪ್ರಯತ್ನದಲ್ಲಿ ಹೊಸ ಭೂಖಂಡಗಳನ್ನು ಪತ್ತೆ ಮಾಡಿದರು. ಹೀಗೆ ಪತ್ತೆಯಾದ ಅಮೆರಿಕ ಹಾಗೂ ಆಸ್ಟ್ರೇಲಿಯಾವನ್ನು ಭಾರತವೆಂದು ಪರಿಭಾವಿಸಿ ಅಲ್ಲಿನ ಜನರನ್ನು ಇಂಡಿಯನ್ನರೆಂದು ಕರೆದರು. ಹೀಗಾಗಿಯೆ ಅಮೆರಿಕದ ಮೂಲ ನಿವಾಸಿಗಳು ಹಾಗೂ ಆಸ್ಟ್ರೇಲಿಯಾದ ಮೂಲ ನಿವಾಸಿಗಳು ಇಂಡಿಯನ್ನರೆಂದೇ ಕರೆಸಿಕೊಂಡರು. ನಂತರದ ಚರಿತ್ರೆಯಲ್ಲಿ, ಪರಿಚಿತವಾದ ದೇಶಗಳಿಗೆ ಹಳೆಯ ಜಗತ್ತು ಹಾಗೂ ಹೊಸದಾಗಿ ಪತ್ತೆಯಾದ ಭೂಖಂಡಗಳಿಗೆ ಹೊಸ ಜಗತ್ತು ಎಂದು ಕರೆದರು. ಅಮೆರಿಕಾದಲ್ಲಿ ಕಾಣುವ ಪ್ರಾಚೀನ ಕೊಲಂಬಿಯಾದ ನಾಗರಿಕತೆಗಳು ಹಳೆಯ ಜಗತ್ತಿನ ನಾಗರಿಕತೆಗಳಾದ ಈಜಿಪ್ಟ್, ಮೆಸಪಟೊಮಿಯ ಹಾಗೂ ಚೀನಾದ ನಾಗರಿಕತೆಯಂತೆಯೇ ವಿಶಿಷ್ಟವಾದವು. ಈ ಹೊಸ ಜಗತ್ತಿನ ನಾಗರಿಕತೆಗಳಲ್ಲಿಯೂ ಸಂಸ್ಥಾನಗಳು, ಸಾಮ್ರಾಜ್ಯಗಳು, ಅದ್ಭುತವಾದ ಸ್ಮಾರಕಗಳು, ನಗರಗಳು ಹಾಗೂ ಕಲೆ, ಲೋಹ ತಂತ್ರಜ್ಞಾನ ಮತ್ತು ಬರವಣಿಗೆಯನ್ನು ಕಾಣುತ್ತೇವೆ.

ಈ ಪ್ರದೇಶದ ಜನರ ಬದುಕು ಸ್ಥಿರಗೊಂಡದ್ದು ಸಾ.ಶ.ಪೂ. 1500ರ ಸುಮಾರಿಗೆ. ಆಗ ಇವರು ಜೋಳ, ಕಾಳುಗಳು, ಹಣ್ಣುಗಳು, ಮೆಣಸು ಹಾಗೂ ಹತ್ತಿಯನ್ನು ಬೆಳೆಯುತ್ತಿದ್ದರು. ಪ್ರಾರಂಭದ ಹಳ್ಳಿಗರು ಬಟ್ಟೆ (ಉಡುಪು) ಹೆಣೆಯುವ, ಮಡಿಕೆ ಮಾಡುವ ಹಾಗೂ ಇನ್ನಿತರ ನವಶಿಲಾಯುಗದ ತಿಳಿವನ್ನು ಪಡೆದಿದ್ದರು. ಸಾ.ಶ.ಪೂ. 1200 ರಿಂದ 900ರ ಕಾಲಾವಧಿಯಲ್ಲಿ ಪಿರಮಿಡ್‌ಗಳು ಹಾಗೂ ಶಿಲಾಪ್ರತಿಮಾ ಸ್ಮಾರಕಗಳ ನಿರ್ಮಾಣದ ಪ್ರಾರಂಭವು ಅಲ್ಲಿಯವರ ಸರಳ ಬದುಕಿನಲ್ಲಿ ಹೊಸ ಬದಲಾವಣೆಯ ಸೂಚನೆಗಳಾದವು. ಈ ಬದಲಾವಣೆಗಳು ಮೊದಲು ಕಾಣಿಸಿದ್ದು ಮೆಕ್ಸಿಕೋದ ಕರಾವಳಿಯಲ್ಲಿ. ಇಲ್ಲಿ ಮೂಡಿಬಂದ ಪ್ರತಿಮಾ ಸ್ಮಾರಕಗಳು ಮುಖ್ಯಸ್ಥರುಗಳನ್ನು ಹಾಗೂ ರಾಜರುಗಳನ್ನು ಚಿತ್ರಿಸುತ್ತವೆ. ಇವುಗಳನ್ನು ಒಲ್‌ಮೆಕ್ ಎಂದು ಕರೆಯಲಾಗಿದೆ. ಇಲ್ಲಿ ದೊರೆತಿರುವ ಆಧಾರಗಳು ಹಾಗೂ ಉತ್ಖನನಗಳು ಶ್ರೇಣೀಕೃತ ವ್ಯವಸ್ಥೆಯನ್ನು ಒಳಗೊಂಡ ಕೇಂದ್ರೀಕೃತ ಸಮಾಜವೊಂದರ ಸೂಚನೆಯನ್ನು ನೀಡುತ್ತವೆ. ಕ್ರಮೇಣವಾಗಿ ಈ ಪ್ರದೇಶದ ಸುತ್ತಲು ಹಲವು ದೊಡ್ಡ ರಾಜಧಾನಿ, ಗ್ರಾಮಗಳು ಮತ್ತು ನಗರಗಳು (Capital Cities) ಹುಟ್ಟಿಕೊಂಡವು ಇಲ್ಲಿಯೂ ಸಹ ಒಲ್‌ಮೆಕ್ ಕಲಾಶೈಲಿಯನ್ನು ಬಳಸಲಾಯಿತು. ಹೀಗೆ ಈ ಸಂದರ್ಭದಲ್ಲಿ ಸಾಂಸ್ಕೃತಿಕ ಎಲ್ಲೆಯೊಂದರ ರಚನೆಯಾಗಿ ಮೊಟ್ಟಮೊದಲ ಐಕ್ಯತೆಯು ಮೂಡಿಬಂತು. ಸಾ.ಶ.ಪೂ. 500ರ ನಂತರ ಒಲ್‌ಮೆಕ್ ಐಕ್ಯತೆಯು ಪ್ರತ್ಯೇಕವಾದ ಸ್ಥಳೀಯ ಶೈಲಿಗಳಿಗೆ ಹಾಗೂ ಸಂಸ್ಥಾನಗಳಿಗೆ ಎಡೆಮಾಡಿತು. ಇವೇ ಮಾಯ, ಆಸ್ಟೆಕ್, ಇಂಕಾ ಹಾಗೂ ಮತ್ತಿತರ ನಾಗರಿಕತೆಗಳು.

©KTBS Not to be republished

## ಮಾಯ ನಾಗರಿಕತೆ

ಮೆಕ್ಸಿಕೊದ ಯುಕಟೆನ್ ಪ್ರದೇಶದಲ್ಲಿನ ಅಮೆರಿಕದ ಇಂಡಿಯನ್ ಮೂಲನಿವಾಸಿಗಳಿಗೆ ಮಾಯ ಎನ್ನುವರು. ಸಾಮಾನ್ಯವಾಗಿ ಅವರ ಭಾಷೆಯನ್ನು ಈಗ ಯುಕಟೆಕ್ ಎಂದು ಕರೆಯಲಾಗಿದೆ. ದೈಹಿಕವಾಗಿ ಮಾಯದ ಜನ ಗಿಡ್ಡವಾಗಿದ್ದು, ಕಂದುಬಣ್ಣ, ನೇರಕೂದಲನ್ನು ಹಾಗೂ ಬಹುತೇಕ ಗುಂಡನೆಯ ತಲೆಯನ್ನು ಹೊಂದಿದವರಾಗಿದ್ದಾರೆ. ಪ್ರಾಚೀನ ಅಮೆರಿಕದ ಇಂಡಿಯನ್ನರುಗಳಲ್ಲೆ ಅತ್ಯಂತ ಅಭಿವೃದ್ಧಿ ಹೊಂದಿದವರೆಂದರೆ ಮಾಯಗಳು. ಕಲ್ಲಿನಿಂದ ಕಟ್ಟಿದ ನಗರಗಳ ಅವಶೇಷಗಳು ಮೆಕ್ಸಿಕೊದ ಯುಕಟೆನ್, ಗ್ವಾಟೆಮಾಲ ಹಾಗೂ ಹೊಂಡುರಸ್‌ಗಳಲ್ಲಿ ದೊರೆತಿವೆ. ಇಲ್ಲಿನ ನಾಗರಿಕತೆಯು ಸುಮಾರು 1700 ವರ್ಷಗಳ ಹಿಂದೆ ಪ್ರವರ್ಧಮಾನಕ್ಕೆ ಬಂದಿತು. ಇವರ ಮೊಟ್ಟಮೊದಲ ನಗರಗಳು ಸಾ.ಶ. 320ರ ಹೊತ್ತಿಗೆ ನಿರ್ಮಾಣಗೊಂಡಿದ್ದವು. ಸಾ.ಶ.ಪೂ. 1527 ರಿಂದ ಸಾ.ಶ.ಪೂ. 1546 ರವರೆಗಿನ ಕೊರ್ಟೆಜ್ ನೇತೃತ್ವದಲ್ಲಿ ನಡೆದ ಸ್ಪೇನಿನವರ ಆಕ್ರಮಣದೊಂದಿಗೆ ಮಾಯ ಸಂಸ್ಕೃತಿಯ ಅಧಃಪತನವನ್ನು ಕಾಣುತ್ತೇವೆ. ಈ ದಮನಗಳ ನಡುವೆಯೂ ಬದುಕಿ ಉಳಿದ ಮಾಯ ಇಂಡಿಯನ್ನರು ಯುಕಟೆನ್ನಿನ ಉತ್ತರದ ವಲಯ ಹಾಗೂ ಗ್ವಾಟೆಮಾಲದಲ್ಲಿ ಇವತ್ತಿಗೂ ಇದ್ದಾರೆ.

## ಮಾಯ ಜನರ ಬದುಕು

ಮಾಯಗಳು ನೆಲಸಿದ್ದ ಬಹುತೇಕ ಪ್ರದೇಶಗಳು ಬೃಹತ್ ಆಚರಣೆಯ ಕೇಂದ್ರಗಳನ್ನು ಒಳಗೊಂಡಿತ್ತು. ಇವುಗಳನ್ನು ನಗರಗಳೆಂದಿದ್ದಾರೆ. ಇವು ಜನವಸತಿ ಪ್ರದೇಶವಾಗಿರಲಿಲ್ಲ. ಈ ಪ್ರದೇಶಗಳನ್ನು ಧಾರ್ಮಿಕ ಆಚರಣೆಗಳಿಗೆ, ಸಂತೆಗಳಿಗೆ, ನ್ಯಾಯಾಲಯವಾಗಿ ಹಾಗೂ ನಾಗರಿಕ ಆಡಳಿತಕ್ಕಾಗಿ ಬಳಸಲಾಗುತ್ತಿತ್ತು. ಇದರ ಸುತ್ತಲಿನ ಗ್ರಾಮಗಳಲ್ಲಿ ಜನರು ವಾಸವಾಗಿದ್ದರು. ಸಂತೆ ಹಾಗೂ ಧಾರ್ಮಿಕ ಹಬ್ಬಗಳ ಸಂದರ್ಭವನ್ನು ಬಿಟ್ಟರೆ ಬೇರೆಲ್ಲ ಸಂದರ್ಭದಲ್ಲಿಯೂ ಈ ಆಚರಣಾ ಕೇಂದ್ರಗಳು, ನಿರ್ಜನ ಪ್ರದೇಶವಾಗಿದ್ದವು. ತಿಕಲ್ ಎನ್ನುವ ಬೃಹತ್ ನಿವೇಶನದಲ್ಲಿ ಪಿರಮಿಡ್‌ಗಳು, ಅರಮನೆಗಳು ಮತ್ತು ಆವರಣಗಳು ಒಂದು ಚದುರ ಮೈಲಿಯ ಸುತ್ತ ಕಂಡುಬಂದಿವೆ.

ಎಲ್ಲ ಆಚರಣಾ ಕೇಂದ್ರಗಳಲ್ಲಿ ಆವರಣದ ಹಾಗೂ ಅದರ ಇಕ್ಕೆಲಗಳಲ್ಲಿ ಪಿರಮಿಡ್ಡುಗಳಿರುತ್ತಿದ್ದವು, ಅದರ ಕೆಳಗೆ ಹಲವು ಕೊಠಡಿಗಳನ್ನು ಒಳಗೊಂಡ ಕಟ್ಟಡಗಳಿದ್ದವು. ಇವುಗಳ ಎದುರಿಗೆ ಬೃಹತ್ ಶಿಲಾಕಂಬಗಳು ಇರುತ್ತಿದ್ದವು. ಇವುಗಳಲ್ಲಿ ಕೆಲವು ಸಾದಾಕಂಬಗಳು. ಸಾಮಾನ್ಯವಾಗಿ ದೇವರುಗಳನ್ನು, ಪುರೋಹಿತರನ್ನು, ಆಡಳಿತದ ಗಣ್ಯವ್ಯಕ್ತಿಗಳನ್ನು ಪ್ರತಿನಿಧಿಸುವ ಚಿತ್ರಗಳು ಹಾಗೂ ಹಿರೋಗ್ಲೈಫಿಕ್ ಪಠ್ಯಗಳನ್ನು ಸಹ ಇವುಗಳ ಮೇಲೆ ಕೆತ್ತಲಾಗಿತ್ತು. ಇಂತಹ ಕಲ್ಲಿನಾಕೃತಿಗಳನ್ನು ಸ್ಟೆಲಿಸ್ ಎಂದು ಕರೆಯುತ್ತಾರೆ. ಇವುಗಳಲ್ಲಿ ಅತ್ಯಂತ ಎತ್ತರದ್ದು ಸುಮಾರು 35 ಅಡಿ ಎತ್ತರ ಹಾಗೂ 65 ಟನ್ ತೂಕದ್ದಾಗಿದೆ. ಪಿರಮಿಡ್ಡುಗಳ ಮೇಲೆ ದೇವಾಲಯಗಳಿದ್ದವು. ಆವರಣದಲ್ಲಿ ಜನ ನೆರೆದು ದೇವಾಲಯದ ಎದುರು ನಡೆಯುತ್ತಿದ್ದ ಆಚರಣೆಗಳನ್ನು ವೀಕ್ಷಿಸುತ್ತಿದ್ದರು. ಕ್ರಮೇಣವಾಗಿ 9ನೆಯ ಶತಮಾನದಷ್ಟೊತ್ತಿಗೆ ಈ ಆಚರಣಾ ಕೇಂದ್ರಗಳನ್ನು ಜನ ತೊರೆದರು. ಇನ್ನುಳಿದ ಆರು ಶತಮಾನಗಳಲ್ಲಿ ಈ ಕೇಂದ್ರ ಪ್ರದೇಶವು ಅಷ್ಟೇನೂ ಮುಖ್ಯವಾಗಿರಲಿಲ್ಲ. ಮಾಯದ ಜನಸಾಮಾನ್ಯರು ಆಚರಣಾ ಕೇಂದ್ರಗಳ ಹೊರವಲಯಗಳಲ್ಲಿನ ಗುಡಿಸಲುಗಳಲ್ಲಿ ವಾಸವಾಗಿದ್ದರು. ಅಲ್ಲಿ ಸುತ್ತಲು ಜೋಳದ ಹೊಲಗಳು ಇದ್ದವು. ರೈತರು ಜೋಳ, ಗೆಣಸು, ಇತ್ಯಾದಿಗಳನ್ನು ಬೆಳೆಯುತ್ತಿದ್ದರು. ಅಸಂಖ್ಯಾತ ಕೃಷಿಕರ ಶ್ರಮವನ್ನೇ ಬಳಸಿ ಇಲ್ಲಿ ಬೃಹತ್ ಕಟ್ಟಡಗಳನ್ನು ಕಟ್ಟಲಾಯಿತು.

ಮಾಯಗಳ ಗಮನಾರ್ಹವಾದ ಬೌದ್ಧಿಕ ಸಾಧನೆಯನ್ನು ಅವರ ಬರವಣಿಗೆ(ಹಿರೋಗ್ಲೈಫಿಕ್), ಖಗೋಳಶಾಸ್ತ್ರ ಹಾಗೂ ಕಾಲಗಣನೆಯ ತಿಳಿವಿನಲ್ಲಿ ಕಾಣುತ್ತೇವೆ. ಮಾಯಗಳ ಹಿರೋಗ್ಲೈಫಿಕ್ ಬರವಣಿಗೆಯು ವೈಚಾರಿಕ ಸಂಕೇತಗಳನ್ನು ಹಾಗೂ ಶಬ್ದಗಳನ್ನು ಆಧರಿಸಿದೆ. ಇವು ಸುಮಾರು 850 ಅಂಶಗಳನ್ನು ಹೊಂದಿವೆ.

©KTBS Not to be republished

ಬಹುತೇಕವಾಗಿ ಅವುಗಳ ಅರ್ಥ ನಮಗೆ ತಿಳಿದಿಲ್ಲ. ಹಿರೋಗ್ಲೈಫಿಕ್ ಪಠ್ಯಗಳನ್ನು ಕಲ್ಲಿನ ಸ್ಮಾರಕಗಳು, ಕಟ್ಟಡಗಳು ಹಾಗೂ ಮರದ ತುಂಡುಗಳ ಮೇಲೆ ಕೆತ್ತಲಾಗಿವೆ. ಇವುಗಳನ್ನು ಪುಸ್ತಕಗಳಲ್ಲಿಯೂ ಬರೆಯಲಾಗಿತ್ತು. ಈ ಪುಸ್ತಕಗಳು ಸ್ಪೇನಿನವರ ಆಕ್ರಮಣದ ನಂತರ ನಾಶವಾಯಿತು. ಇವುಗಳಲ್ಲಿ ಮೂರು ಮಾತ್ರ ಉಳಿದಿವೆ. ಇದರಲ್ಲಿ ಒಂದಾದ ಡ್ರೆಸ್‌ಡೆನ್ ಕೊಡೆಕ್ಸ್ ಗ್ರಹಣಗಳ ದಿನಾಂಕಗಳನ್ನು ಮುನ್ಸೂಚಿತವಾಗಿ ತಿಳಿಸಲು ಬಳಸಲಾಗುತಿತ್ತು.

ಮಾಯಗಳಲ್ಲಿ ಲೋಹದ ಬಳಕೆ ಕಂಡುಬಂದಿಲ್ಲ. 16ನೆಯ ಶತಮಾನದ ಪ್ರಾರಂಭದಲ್ಲೂ ಸಹ ತಾಮ್ರ ಮತ್ತು ಬಂಗಾರ ಅತಿ ವಿರಳ. ಇವರು ಕಲ್ಲು, ಎಲುಬು ಹಾಗೂ ಮರದ ಉಪಕರಣಗಳನ್ನು ಬಳಸುತ್ತಿದ್ದರು. 9ನೆಯ ಶತಮಾನದವರೆವಿಗೂ ಇವರಿಗೆ ಬಿಲ್ಲು ಬಾಣದ ಅರಿವಿರಲಿಲ್ಲ. ಅವರ ಜೋಳದ ಬೆಳೆಗೆ ಸಂಬಂಧಪಟ್ಟ ದೇವರುಗಳು ಮಾಯ ಜನರ ಆರಾಧ್ಯ ದೈವ. ಮಳೆ, ಮಣ್ಣು, ಗಾಳಿ, ಸೂರ್ಯ, ಚಂದ್ರ ಹಾಗೂ ಜೋಳವನ್ನೇ ಅವರು ದೇವರಂತೆ ಕಾಣುತ್ತಿದ್ದರು. ನಾಗರಿಕತೆ ಯುದ್ಧಕ್ಕೂ ನರಬಲಿಯನ್ನು ವಿರಳವಾಗಿ ಕಾಣುತ್ತೇವೆ.

**ಆಸ್ಟೆಕ್**

ಮೆಕ್ಸಿಕೊದಲ್ಲಿನ ಟೆಕ್ಸ್‌ಕೊಕೊ (Texcoco) ಎಂಬುದು ಒಂದು ಸರೋವರ. ಆ ಸರೋವರದ ದ್ವೀಪವೊಂದರ ಮೇಲೆ ಆಸ್ಟೆಕರು ತಮ್ಮ ನಗರವನ್ನು ಕಟ್ಟಿಕೊಂಡರು. ಇವರ ಕುಲದ ಹಿರಿಯರಲ್ಲಿ ಒಬ್ಬನಾದ ಟೆನೋಚ್‌ನ ಹೆಸರಿನ ಹಿನ್ನೆಲೆಯಲ್ಲಿ ಆಸ್ಟೆಕರನ್ನು ಟೆನೋಚರೆಂದು ಕರೆಯಲಾಯಿತು. ಇವರು ನಿರ್ಮಿಸಿಕೊಂಡ ನಗರವನ್ನು ಟೆನೊಟಿಟ್‌ಲಾನ್ (ನೀರಿನಿಂದ ಉದಯಿಸುವ ಕಲ್ಲು) ಎಂದು ಕರೆಯುತ್ತಾರೆ. ಇವರ ನಗರವನ್ನು ಮೆಕ್ಸಿಕ (Mexica) ಎಂದು ಸಹ ಕರೆಯಲಾಗಿದೆ. ಅಲ್ಲಿನ ಜನರನ್ನು ಅದೇ ಹೆಸರಿನಿಂದ ಗುರುತಿಸುತ್ತಾರೆ. ಇವರ ಭಾಷೆ ನಹೂವಾ. ಇಂದಿಗೂ ಮೆಕ್ಸಿಕೊದಲ್ಲಿ ನಹೂವಾ ಭಾಷೆಯನ್ನಾಡುವವರಿದ್ದಾರೆ.

ಪೆರುವಿನ ಇಂಕಾಗಳನ್ನು ಬಿಟ್ಟರೆ ಹೊಸಜಗತ್ತಿನಲ್ಲಿ ಆಸ್ಟೆಕರಷ್ಟು ವ್ಯಾಪಕ ಸಾಮ್ರಾಜ್ಯವನ್ನು ಮತ್ತಿನ್ಯಾರು ಹೊಂದಿರಲಿಲ್ಲ. ಒಂದೇ ಶತಮಾನದಲ್ಲಿ ಸಾಮ್ರಾಜ್ಯವೊಂದನ್ನು ಕಟ್ಟಿ ಆಳಿದ ಸಣ್ಣ ಅಲೆಮಾರಿ ಜನಾಂಗವೊಂದರ ಅದ್ಭುತ ಚರಿತ್ರೆ ಇದು. ಅಷ್ಟೇ ಶೀಘ್ರದಲ್ಲಿ ಅದು ಅವನತಿಯಾಯಿತು. ಅವರ ಈ ಕ್ಷಿಪ್ರ ಏಳಿಗೆ ಮತ್ತು ಅವನತಿಯ ಕಥೆಯು ಅವರ ಮೌಖಿಕ ಪರಂಪರೆಯಲ್ಲಿ ಹಾಗೂ ಉತ್ಖನನಗಳಲ್ಲಿ ವ್ಯಕ್ತವಾಗಿವೆ. ಮೌಖಿಕ ಪರಂಪರೆಯನ್ನು ಸ್ಪೆನಿಷ್ ಚರಿತ್ರೆಕಾರರು ಹಾಗೂ ಸಮಾಜ ವಿಜ್ಞಾನಿಗಳು ಭಾಷಾಂತರ ಮಾಡಿದ್ದಾರೆ. ಇವುಗಳನ್ನು ಇಂಡಿಯನ್ ಕೊಡೈಸಸ್ ಎಂದು ಕರೆಯಲಾಗಿದೆ.

ಸ್ಪೆನಿಷ್ ಸೈನ್ಯವು ಮೆಕ್ಸಿಕೊದ ಕಣಿವೆಗಳಿಗೆ 1519ರಲ್ಲಿ ಪ್ರವೇಶಿಸಿದಾಗ ಸರೋವರವೊಂದರ ದ್ವೀಪದಲ್ಲಿನ ಸುಂದರ ನಗರವೊಂದು ಅವರ ಕಣ್ಣಿಗೆ ಬಿದ್ದಿತು. ಆ ನಗರವೇ ಆಸ್ಟೆಕರ ರಾಜಧಾನಿಯಾಗಿದ್ದ ಟೆನೊಟಿಟ್‌ಲಾನ್. ಅಧಿಕಾರ ಹಾಗೂ ಸಂಪತ್ತಿನ ದ್ಯೋತಕವಾಗಿ ಈ ಸುಂದರ ನಗರ ಬೆಳೆದಿತ್ತು. ಸ್ಪೇನಿನವರು ಈ ನಗರಕ್ಕೆ ಕಾಲಿಟ್ಟಾಗ ಅವರಿಗೆ ಮೂರು ವಿಶಾಲವಾದ ದಾರಿಗಳು ಕಂಡವು. ಒಂದನೇ ದಾರಿಯು ಅರಮನೆಗೆ ಹೋಗುವ ಮಾರ್ಗವಾಗಿತ್ತು. ಎರಡನೆಯದು ಅಲಂಕೃತ ದೇವಾಲಯಕ್ಕೆ ಹೋಗುವ ದಾರಿಯಾಗಿತ್ತು. ಮೂರನೆಯದು ಪಿರಮಿಡ್‌ಗಳಿಗೆ ಹೋಗುವ ಮಾರ್ಗವಾಗಿತ್ತು. ಇವೆಲ್ಲವೂ ಸ್ಪೇನಿನವರ ಆಕ್ರಮಣಕ್ಕೆ ಗುರಿಯಾದವು.

ಆಸ್ಟೆಕರು ಮೂಲತಃ ಅಲೆಮಾರಿ ಜನ. 13ನೆಯ ಶತಮಾನದ ಹೊತ್ತಿಗೆ ಇವರು ಮೆಕ್ಸಿಕೊಗೆ ಬಂದರೆಂದು ಅಭಿಪ್ರಾಯಪಡಲಾಗಿದೆ. ಇಲ್ಲಿನ ಕೆಲವು ಬುಡಕಟ್ಟುಗಳೊಂದಿಗೆ ಅವರು ಅನೇಕ ಬಾರಿ ಕಾದಾಡಿದರು. ಕೆಲವೊಮ್ಮೆ ಅವರ ಅಧೀನದಲ್ಲಿ ಸೇವೆಮಾಡಿದ್ದು ಇದೆ. ಹೀಗೆ ತಾವು ದಾಳಿಮಾಡಿದ ಪ್ರದೇಶದಲ್ಲಿನ ಸುಸಂಸ್ಕೃತ ಜನರಾದ ಟೋಲ್‌ಟೆಕ್ಕರ, ಮಾಯನರ, ಜೆಪೊಟೆಕ್ಕರ ಸಂಸ್ಕೃತಿಯನ್ನು ಅವರು ತಮ್ಮದಾಗಿಸಿಕೊಂಡರು. ಕಡೆಗೆ 14ನೆಯ ಶತಮಾನದಲ್ಲಿ ಮೆಕ್ಸಿಕೊದಲ್ಲಿನ ಸರೋವರವೊಂದರ ದ್ವೀಪದಲ್ಲಿ ಆಶ್ರಯಪಡೆದು ಟೆನೊಟಿಟ್‌ಲಾನ್ ನಗರದ ಉಗಮಕ್ಕೆ ಕಾರಣರಾದರು. ನಂತರ ಹೊಸ ಪ್ರದೇಶಗಳ ಮೇಲೆ

© KTBS Not to be republished

ಹಿಡಿತ ಸಂಪಾದಿಸಿ ಸಾಮ್ರಾಜ್ಯವೊಂದರ ಉದಯಕ್ಕೆ ಕಾರಣರಾದರು. ಇವತ್ತಿಗೂ ಮೆಕ್ಸಿಕೊ ನಗರದಲ್ಲಿನ ಇಂಡಿಯನ್ನರು ಈ ಸಂತತಿಯವರೆ ಆಗಿದ್ದಾರೆ.

ವಾಸ್ತುಶಿಲ್ಪಕಲೆ ಹಾಗೂ ಕೆತ್ತನೆಗಳು ಇವರ ಕಟ್ಟಡಗಳಲ್ಲಿ ಉತ್ತಮವಾಗಿ ಮೂಡಿ ಬಂದಿವೆ. ಬೃಹತ್ ದೇವಾಲಯಗಳನ್ನು ಕೆತ್ತನೆಗಳಿಂದ ಅಲಂಕರಿಸಿದ್ದರು. ಚಾರಿತ್ರಿಕ ಹಾಗೂ ಧಾರ್ಮಿಕ ಘಟನೆಗಳನ್ನು ಅಂಕಿ-ಸಂಕೇತಗಳ ಮೂಲಕ ಹಿರೋಗ್ಲೈಫಿಕ್ಸ್‌ಗಳಲ್ಲಿ ಅವರು ವ್ಯಕ್ತಪಡಿಸಿದ್ದಾರೆ. ಮಾಯಾರಿಂದ ಅವರು ಕಾಲಗಣನೆಯನ್ನು ತಿಳಿದಿದ್ದರು. ಅವರ ಪಂಚಾಂಗವು ಹಬ್ಬದ ದಿನಾಂಕಗಳನ್ನು ಹಾಗೂ ನಿರ್ದಿಷ್ಟವಾದ ಸಮಯಗಳಲ್ಲಿ ಪ್ರಭಾವಿಸುವ ದೇವರುಗಳ ಪಟ್ಟಿಯನ್ನು ನೀಡುತ್ತಿತ್ತು.

ವ್ಯಾಪಾರ ವ್ಯವಸ್ಥೆಯು ಸಾಮ್ರಾಜ್ಯದ ದೂರದ ಭಾಗಗಳನ್ನು ಟೆನೊಟಿಟಲಾನಿನ ಜೊತೆಗೆ ಸಂಪರ್ಕದಲ್ಲಿಟ್ಟಿತ್ತು. ಸೈನಿಕರು ವ್ಯಾಪಾರಿಗಳಿಗೆ ರಕ್ಷಣೆಯನ್ನು ಒದಗಿಸುತ್ತಿದ್ದರು. ಹೊರೆ ಹೊರುವ ಪ್ರಾಣಿಗಳು ಇಲ್ಲದ ಕಾರಣ ಕೂಲಿಯವರನ್ನೇ ಹೊರೆಹೊಯ್ಯಲು ಇವರು ಬಳಸುತ್ತಿದ್ದರು. ಹತ್ತಿರದ ಹೊಲಗಳಿಂದ ಬೆಳೆಯನ್ನು ಮಾರುಕಟ್ಟೆಗೆ ತರಲು ಕಾಲುವೆಗಳನ್ನು ಬಳಸುತ್ತಿದ್ದರು. ಅವರು ಅಲ್ಲಿಗೆ ದೋಣಿಗಳಲ್ಲಿ ಬರುತ್ತಿದ್ದರು. ಇವರ ಮುಖ್ಯವಾದ ಫಸಲು ಎಂದರೆ ಕಾಳು-ಕಡ್ಡಿ, ದವಸ-ಧಾನ್ಯ, ಮೆಣಸು, ಹಣ್ಣಿನರಸ, ಟೊಮೆಟೊ, ತಂಬಾಕು ಹಾಗೂ ಹತ್ತಿ. ವಸ್ತು ವಿನಿಮಯದ ಮೂಲಕ ಇವರು ವ್ಯಾಪಾರವನ್ನು ಮಾಡುತ್ತಿದ್ದರು.

ಆಸ್ಟೆಕರು ತಮ್ಮ ಸಂಪತ್ತು ಹಾಗೂ ಅಧಿಕಾರವನ್ನು ರಾಜಧಾನಿಯ ಬದುಕನ್ನು ಸುಂದರವಾಗಿಸಲೆಂದೇ ಉಪಯೋಗಿಸಿದರು. ರಾಜನು ಸುಂದರ ಅರಮನೆಯಲ್ಲಿ ವಾಸಿಸುತ್ತಿದ್ದನು. ಪ್ರತಿಷ್ಠಿತರು ಹಾಗೂ ಸಾವಿರಾರು ಗುಲಾಮರುಗಳು ಅವನ ಅಧೀನದಲ್ಲಿದ್ದರು. ಅರಮನೆಯ ಬಳಿ ಸುಂದರ ಉದ್ಯಾನಗಳು ಹಾಗೂ ಪ್ರಾಣಿ ಸಂಗ್ರಹಾಲಯಗಳು ಇದ್ದವು. ರಸ್ತೆಗಳು, ಸೇತುವೆಗಳು ಹಾಗೂ ಕಾಲುವೆಗಳು ನಗರದ ಸಂಪರ್ಕಮಾರ್ಗಗಳಾಗಿದ್ದವು. ಕುಡಿಯುವ ನೀರಿನ ಯೋಜನೆಯನ್ನು ಸಹ ಮಾಡಲಾಗಿತ್ತು.

ನಗರ ದ್ವೀಪದ ಸುತ್ತಲಿದ್ದ ಸಣ್ಣ ದ್ವೀಪಗಳನ್ನು ಕೃಷಿಭೂಮಿಯಾಗಿ ಪರಿವರ್ತಿಸಿಕೊಂಡಿದ್ದರು. ಇವುಗಳನ್ನು 'ಚಿನಂಪ'ಗಳೆಂದು ಕರೆಯುತ್ತಿದ್ದರು. ರೈತರು ದ್ವೀಪಗಳಲ್ಲಿನ ಗುಡಿಸಲುಗಳಲ್ಲಿ ವಾಸವಾಗಿದ್ದರು. ಅಧಿಕಾರಿಗಳು ಕಲ್ಲಿನ ಹಾಗೂ ಸುಟ್ಟ ಇಟ್ಟಿಗೆಯಿಂದ ರಚಿಸಿದ ನಿವಾಸದಲ್ಲಿ ಇದ್ದರು. ಯುದ್ಧದ ತರಬೇತಿಯಲ್ಲಿ ಭರ್ಜಿ ಹಾಗೂ ಬಿಲ್ಲು ಬಾಣಗಳ ಬಳಸುವಿಕೆಯನ್ನು ಕಲಿಸಲಾಗುತ್ತಿತ್ತು. ಯುದ್ಧದಲ್ಲಿ ಸೆರೆಸಿಕ್ಕವರನ್ನು ಕೊಲ್ಲದೆ ಆಹುತಿಯ ಸಂದರ್ಭಕ್ಕಾಗಿ ಅವರನ್ನಿಟ್ಟುಕೊಂಡಿರುತ್ತಿದ್ದರು. ಆಸ್ಟೆಕರ ರಿವಾಜುಗಳನ್ನು ಕಂಡು ಭಯಭೀತರಾದ ಸ್ಪೆನಿಷರು ಅವರ ಹಳೆಯ ನಂಬಿಕೆಗಳನ್ನು ನಿರ್ಮೂಲನಮಾಡುವ ಸಲುವಾಗಿ ಅಲ್ಲಿನ ದೇವಾಲಯಗಳನ್ನೆಲ್ಲ ನಾಶಪಡಿಸಿದರು. ಆಸ್ಟೆಕರ ವೈಭವದ ದಿನಗಳು ಇವರ ಕಡೆಯ ದಿನಗಳು ಸಹ ಆಗಿತ್ತು. ಆಸ್ಟೆಕರು ಪ್ರಕೃತಿಯ ಆರಾಧಕರಾಗಿದ್ದರು. ದೇವರನ್ನು ಹಲವು ವಿಧಗಳಲ್ಲಿ ಸಂತೃಪ್ತಿಪಡಿಸಲು ಅವರು ಧಾರ್ಮಿಕ ವಿಧಿಗಳನ್ನು ಅನುಸರಿಸುತ್ತಿದ್ದರು. ಅವುಗಳಲ್ಲಿ ಮಾನವರ ಬಲಿಯೂ ಒಂದು. ಆಸ್ಟೆಕರ ಸಾಮ್ರಾಜ್ಯವು ವಿಸ್ತರಿಸಿದಂತೆಲ್ಲ ದೇವರನ್ನು ಸಂತೈಸಲು ಇನ್ನು ಹೆಚ್ಚು ಹೆಚ್ಚು ಆಹುತಿಗಳ ನೀಡುತ್ತಿದ್ದರು. ಟೆನೊಟಿಟಲಾನಿನ ಪಿರಮಿಡ್ ದೇವಾಲಯವನ್ನು ಸಮರ್ಪಿಸುವಾಗ ಸುಮಾರು 20,000 ಕೈದಿಗಳನ್ನು ಆಹುತಿಯಾಗಿ ನೀಡಿದರು ಎನ್ನಲಾಗಿದೆ. 1517ರಲ್ಲಿ ಹರ್ನೆಂಡೊ ಕಾರ್ಟೆಸ್ಸ್‌ನ ನೇತೃತ್ವದಲ್ಲಿ ಧಾವಿಸಿ ಬಂದ ಸ್ಪೇನಿನ ಪಡೆ ಇವರ ಸಾಂಸ್ಕೃತಿಕ ದಮನಕ್ಕೂ ಕಾರಣವಾಯಿತು.

**ಇಂಕಾ**

15 ಮತ್ತು 16ನೆಯ ಶತಮಾನಗಳಲ್ಲಿ ಏಳಿಗೆಯನ್ನು ಕಂಡ ಇಂಕಾ ಸಾಮ್ರಾಜ್ಯದ ವ್ಯಾಪ್ತಿ ಪೆರು, ಈಕ್ವೆಡೋರ್, ಚಿಲಿ ಹಾಗೂ ಅರ್ಜೆಂಟೈನಾ ಭಾಗಗಳವರೆಗೆ ಆವರಿಸಿತ್ತು. ಇಂಕಾಗಳ ಪೂರ್ವದಲ್ಲಿ ಬೇರೆ

©KTBS Not to be republished

ಸಂಸ್ಕೃತಿಗಳು ಇದ್ದವು. ಇಂಕಾ ಸಾಮ್ರಾಜ್ಯವು ತನ್ನ ಹಿಂದಿನ ಸಂಸ್ಕೃತಿಗಳ ಪರಂಪರೆಯನ್ನು ಮುಂದುವರೆಸಿತು. ಇಂಕಾಗಳಲ್ಲಿ ಬರವಣಿಗೆ ಇಲ್ಲದ ಕಾರಣ ಅವರ ಪ್ರಾರಂಭಿಕ ಬದುಕಿನ ಬಗ್ಗೆ ಮಾಹಿತಿಗಳು ಹೆಚ್ಚು ತಿಳಿದಿಲ್ಲ. ಇವರು ಸುಮಾರು 11ನೆಯ ಶತಮಾನದಲ್ಲಿ ಪೆರುವಿನ ಕುಸ್ಕೊ (Cuzco) ಕಣಿವೆಯಲ್ಲಿ ಬಂದು ನೆಲೆಸಿ ಕ್ರಮೇಣವಾಗಿ ಇಡೀ ಕಣಿವೆಯನ್ನು ಆಕ್ರಮಿಸಿಕೊಂಡರು. ಆದರೆ 15ನೆಯ ಶತಮಾನದವರೆಗಿನ ಅವರ ಬದುಕಿನ ಬಗ್ಗೆ ವಿವರಣೆಗಳು ಅಸ್ಪಷ್ಟವಾಗಿದೆ. ಟ್ಯೂಪೆಕ್ (Tupac) ಇವರ ಪ್ರಸಿದ್ಧ ನಾಯಕ. ಇವನು ಇಂಕಾಗಳಿಗಿಂತ ಮೊದಲಿದ್ದ ಚಿಮುಗಳ ವಿರುದ್ಧ ಹೋರಾಡಿ ಅವರನ್ನು ಪರಾಭವಗೊಳಿಸಿದರು. ಕಾಲಕ್ರಮೇಣದಲ್ಲಿ ಇವನ ಸಂತತಿಯು ಸಾಮ್ರಾಜ್ಯವನ್ನು ಕಟ್ಟುವಲ್ಲಿ ಶ್ರಮಿಸಿತು. ಆದರೆ, 1532ರಲ್ಲಿ 200ಕ್ಕೂ ಕಡಿಮೆಯ ಸ್ಪೇನಿಷ್ ಸೈನ್ಯ ಇಂಕಾಗಳನ್ನು ಪರಾಭವಗೊಳಿಸಿದರು. ಇವರು ಇಂಕಾ ಸೈನಿಕರನ್ನು ಅಮಾನುಷವಾಗಿ ಹತ್ಯೆಮಾಡಿ ರಾಜ್ಯವನ್ನು ವಶಪಡಿಸಿಕೊಂಡರು.

ಇಂಕಾಗಳ ಪ್ರತಿಭೆಯನ್ನು ಅವರ ಕಲಾಸಕ್ತಿಗಿಂತಲೂ ಅವರ ಸಂಘಟನಾ ಸಾಮರ್ಥ್ಯದಲ್ಲಿ ಕಾಣಲು ಸಾಧ್ಯ. ಇಂಕಾಗಳ ಸಾಮ್ರಾಜ್ಯವು ನಾಲ್ಕು ಪ್ರಾಂತ್ಯಗಳಾಗಿ ವಿಂಗಡಿಸಲ್ಪಟ್ಟಿತ್ತು. ಪ್ರಾಂತ್ಯಗಳನ್ನು ಮುಖ್ಯಸ್ಥರುಗಳು ನೋಡಿಕೊಳ್ಳುತ್ತಿದ್ದರು. ಇವರ ಮೇಲೆ ರಾಜನಿದ್ದನು. ಸಮಾಜದ ಪ್ರಬಲವರ್ಗಗಳಾಗಿ ಅಧಿಕಾರಿಗಳನ್ನು ಹಾಗೂ ಪುರೋಹಿತರನ್ನು ಕಾಣುತ್ತೇವೆ. ಭೂಮಿಯನ್ನು ಮೂರು ಭಾಗವಾಗಿ ವಿಂಗಡಿಸಲಾಗಿತ್ತು. ಒಂದು ಭಾಗವು ಕುಟುಂಬಗಳಿಗೆ ಮೀಸಲಿತ್ತು. ಇನ್ನೆರಡು ಸೂರ್ಯದೇವ ಮತ್ತು ರಾಜನಿಗೆ ಮೀಸಲಾಗಿತ್ತು. ಬೃಹತ್ ಉಗ್ರಾಣಗಳ ಸೌಕರ್ಯವನ್ನು ಸಾಮ್ರಾಜ್ಯದ ಉದ್ದಗಲಕ್ಕೂ ವ್ಯವಸ್ಥೆ ಮಾಡಲಾಗಿತ್ತು. ವಿಪತ್ತುಗಳು ಸಂಭವಿಸಿದಾಗ ಉಗ್ರಾಣಗಳಲ್ಲಿ ಶೇಖರಿಸಿದ್ದ ಆಹಾರ ಪದಾರ್ಥಗಳನ್ನು ಹಾಗೂ ಬಟ್ಟೆಯನ್ನು ಜನಗಳಿಗೆ ಒದಗಿಸಲಾಗುತ್ತಿತ್ತು. ಪ್ರತಿವರ್ಷವೂ ನಿರೀಕ್ಷಕರುಗಳು ಗ್ರಾಮಗಳ ಜನಸಂಖ್ಯೆಯನ್ನು, ಆಹಾರ ಹಾಗೂ ಪ್ರಾಣಿಗಳ ಲೆಕ್ಕವನ್ನು ಇಡುವುದಕ್ಕೆ ಭೇಟಿ ನೀಡುತ್ತಿದ್ದರು. ಇವರಲ್ಲಿ ಬಹುತೇಕರು ಕೃಷಿಕರಾಗಿದ್ದರೆ, ಇನ್ನು ಕೆಲವರು ಸೈನಿಕರು ಮತ್ತು ಕುಶಲಕರ್ಮಿಗಳಾಗಿದ್ದರು.

ಇವರ ಸುವ್ಯವಸ್ಥಿತವಾದ ಯೋಜನೆಯು ಸಾಧ್ಯವಾದದ್ದು ಅದರ ಉತ್ತಮ ಸಂಪರ್ಕದಿಂದ. ರಾಜ್ಯವು ಎರಡು ಮುಖ್ಯರಸ್ತೆಗಳನ್ನು ಹಾಗೂ ಅನೇಕ ಸಣ್ಣ ರಸ್ತೆಗಳನ್ನು ಒಳಗೊಂಡಿತ್ತು. ಶೀಘ್ರವಾಗಿ ಸಂದೇಶವನ್ನು ರವಾನಿಸುವ ಉದ್ದೇಶದಿಂದ ರಸ್ತೆಗಳಲ್ಲಿ ಜನರನ್ನು ನೇಮಿಸಲಾಗಿತ್ತು. ಇಂಕಾಗಳ ಬಹುಮುಖ್ಯ ಕೊಡುಗೆಯನ್ನು ಅವರ ಬೃಹತ್ ಶಿಲಾಕಟ್ಟಡಗಳಲ್ಲಿ ಕಾಣಬಹುದಾಗಿದೆ. ಇವರ ವಾಸ್ತುಶಿಲ್ಪಗಳು ಇವರ ಸಾಮ್ರಾಜ್ಯದ ತುಂಬೆಲ್ಲ ಹರಡಿವೆ. ಇವರ ಬಹುಮುಖ್ಯವಾದ ಕಟ್ಟಡಗಳು ಪೆರುವಿನಲ್ಲಿದೆ. ಇಲ್ಲಿ ಅನೇಕ ಅರಮನೆಗಳು, ದೇವಾಲಯಗಳು ಕಂಡುಬಂದಿವೆ. ಟ್ಯೂಪೆಕ್ಕನು ಕಟ್ಟಿಸಿದ ಕೋಟೆಯು ಇಲ್ಲಿದೆ. ಟಿಟಿಕಾಕ ಸರೋವರದ ದ್ವೀಪವೊಂದರಲ್ಲಿರುವ ಮೇಲಿನ ಅರಮನೆ ಹಾಗೂ ಚಂದ್ರನ ದೇವಾಲಯ ಇಂಕಾಗೋ ನಿರ್ಮಿಸಿದ ಎರಡು ಪ್ರಸಿದ್ಧ ಕಟ್ಟಡಗಳು.

ಮಡಿಕೆ, ಬಟ್ಟೆ ಹಾಗೂ ಲೋಹದ ಕೆಲಸದಲ್ಲಿ ಇವರು ಹೊಸ ವಿಧಾನಗಳನ್ನು ಅನುಸರಿಸಿದ್ದರು. ಚಿನ್ನದ ಆಭರಣದ ಕೆಲಸವು ಉತ್ತರ ಪೆರುವಿನ ಭಾಗಗಳಲ್ಲಿ ಹೆಚ್ಚು ಅಭಿವೃದ್ಧಿಯನ್ನು ಹೊಂದಿತ್ತು. ಎದೆಯ ಕವಚಗಳು, ದೇವಾಲಯದಲ್ಲಿನ ಸೂರ್ಯನ ಚಿತ್ರ ಹಾಗೂ ಅರಮನೆಯ ವಿವಿಧ ಬಂಗಾರದ ಆಭರಣಗಳು ಇವರ ಚಿನ್ನದ ಕೆಲಸದಲ್ಲಿನ ನೈಪುಣ್ಯತೆಗೆ ಸಾಕ್ಷಿಯಾಗಿವೆ.

ಸೂರ್ಯದೇವನು ಇಂಕಾಗಳ ಬಹುಮುಖ್ಯ ಆರಾಧ್ಯದೈವ. ವೀರಕೊಚನೆಂಬ ದೇವರು ಸೃಷ್ಟಿಗೆ ಕಾರಣನಾದವನೆಂದು ನಂಬಿದ್ದರು. ಸೂರ್ಯದೇವನು ವೀರಕೊಚ ಮತ್ತು ಜನಗಳ ನಡುವಿನ ಸಂಪರ್ಕವಾಗಿದ್ದನು ಎಂಬುದು ಇವರ ನಂಬಿಕೆ. ಈ ಕಾರಣಕ್ಕಾಗಿಯೇ ಎಲ್ಲ ಇಂಕಾ ಕೇಂದ್ರಗಳಲ್ಲೂ ಒಂದು ಸೂರ್ಯ ದೇವಾಲಯವಿತ್ತು. ಪ್ರಕೃತಿಯ ವಿಸ್ಮಯಗಳಾದ ಚಂದ್ರ, ತಾರೆ, ಮಿಂಚು ಹಾಗೂ ಮತ್ತಿತರ ಪ್ರಾಕೃತಿಕ ಅಂಶಗಳನ್ನು ಇವರು ಆರಾಧಿಸುತ್ತಿದ್ದರು.

© KTBS Not to be republished

## ಅಭ್ಯಾಸಗಳು

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಹೋಮರನು ರಚಿಸಿದ ಮಹಾಕಾವ್ಯಗಳು ಈಲಿಯಡ್ ಮತ್ತು ____________ .
2. ಗ್ರೀಕರು ಸರ್ವಾಧಿಕಾರಿಗಳನ್ನು ____________ ಎಂದು ಕರೆದರು.
3. ವೈದ್ಯಕೀಯ ಅಧ್ಯಯನಕ್ಕೆ ಬುನಾದಿಯನ್ನು ಹಾಕಿದವನು ____________ .
4. ಚರಿತ್ರೆಯ ಮೊದಲ ವಿಶ್ಲೇಷಣಾಕಾರ ____________ ಎಂದು ಅಭಿಪ್ರಾಯ ಪಡಿಸಲಾಗಿದೆ.
5. 'ಪ್ರಿನ್ಸೆಪ್' ಎಂದರೆ ____________ .
6. ರೋಮನ್ನರ ಭಾಷೆ ____________ .
7. ಮಾಯ ನಾಗರಿಕತೆಯ ಕಲ್ಲಿನ ಕಲಾಕೃತಿಗಳನ್ನು ____________ ಎಂದು ಕರೆಯುತ್ತಾರೆ.
8. ಟೆಕ್ಸ್‌ಕೊಕೊ ಎಂಬುದು ಮೆಕ್ಸಿಕೋದಲ್ಲಿನ ಒಂದು ____________ .
9. ಇಂಕಾ ಜನರ ಪ್ರಸಿದ್ಧ ನಾಯಕ ____________ .
10. ಇಂಕಾಗಳ ಆರಾಧ್ಯ ದೈವ ____________ .

**II. ಕೆಳಕಂಡ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

1. ಗ್ರೀಕರ ಸಾಹಿತ್ಯಕ್ಕೆ ಹೋಮರನ ಕೊಡುಗೆಯನ್ನು ವಿವರಿಸಿ.
2. ಗ್ರೀಕರ ನಗರ ರಾಜ್ಯಗಳನ್ನು ಹೆಸರಿಸಿ.
3. ರೋಮನ್ನರ ಗಣರಾಜ್ಯದ ಅಂಶಗಳನ್ನು ತಿಳಿಸಿ.
4. ಪ್ರಾಚೀನ ಕೊಲಂಬಿಯಾದ ನಾಗರಿಕತೆಗಳಾವುವು?
5. 'ಮಾಯ'ನ್ನರು ಯಾರು?
6. ಆಸ್ಟೆಕರು ಪ್ರಕೃತಿಯ ಆರಾಧಕರು. ಹೇಗೆ?

**III. ಚಟುವಟಿಕೆಗಳು.**

1. ಉಪಾಧ್ಯಾಯರ ಸಹಾಯದಿಂದ ಗ್ರೀಕ್ ತತ್ವಜ್ಞಾನಿಗಳ ಚರಿತ್ರೆಯನ್ನು ತಿಳಿಯಿರಿ.
2. ಷೇಕ್ಸ್‌ಪಿಯರ್ ಬರೆದಿರುವ ಜೂಲಿಯಸ್ ಸೀಸರ್ ನಾಟಕವನ್ನು ನೋಡಿ ಮತ್ತು ಓದಿರಿ.

*****

©KTBS Not to be republished

# ಜೈನ ಮತ್ತು ಬೌದ್ಧ ಧರ್ಮಗಳ ಉದಯ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಜೈನ ಮತ್ತು ಬೌದ್ಧ ಧರ್ಮಗಳ ಉದಯದ ಹಿನ್ನಲೆ.*
- *ಜೈನ ಮತ್ತು ಬೌದ್ಧ ಧರ್ಮಗಳು*
- *ಜೈನ ಮತ್ತು ಬೌದ್ಧ ಧರ್ಮಗಳ ತತ್ವಗಳು.*
- *ಜೈನ ಮತ್ತು ಬೌದ್ಧ ಧರ್ಮಗಳ ಬೆಳವಣಿಗೆ.*

ಭಾರತ ವಿವಿಧ ಸಂಸ್ಕೃತಿ ಮತ್ತು ಧರ್ಮಗಳಿರುವ ದೇಶ. ವೈವಿಧ್ಯಮಯವಾದ ಈ ಬಹುಮುಖಿ ಸಂಸ್ಕೃತಿಯನ್ನು ಹಲವು ಧರ್ಮಗಳು ಪೋಷಿಸಿವೆ. ಇವುಗಳಲ್ಲಿ ಸಾ.ಶ.ಪೂ. 6ನೆಯ ಶತಮಾನದಲ್ಲಿ ಮಧ್ಯ ಗಂಗಾನದಿ ಬಯಲಿನಲ್ಲಿ ಉದಯಿಸಿದ ಜೈನ ಮತ್ತು ಬೌದ್ಧ ಧರ್ಮಗಳು ಮುಖ್ಯವಾಗಿವೆ. ಗೌತಮ ಬುದ್ಧ ಮತ್ತು ಮಹಾವೀರರು ಬಹುಮುಖಿ ಸಂಸ್ಕೃತಿಯ ತಿರುಳಾದ ಶಾಂತಿ, ಅಹಿಂಸೆ ಮತ್ತು ಸಹಿಷ್ಣುತೆಯಂಥ ಮಾನವೀಯ ಮೌಲ್ಯಗಳನ್ನು ಬೋಧಿಸಿದರು. ಈ ಧರ್ಮಗಳ ಉದಯದ ಕಾರಣಗಳು ಆ ಕಾಲದ ಸಮಾಜ ಮತ್ತು ರಾಜಕೀಯ ವ್ಯವಸ್ಥೆಯಲ್ಲಿದ್ದವು.

## ಜೈನ ಮತ್ತು ಬೌದ್ಧ ಧರ್ಮಗಳ ಉದಯದ ಹಿನ್ನೆಲೆ:

ಸಾ.ಶ.ಪೂ. 6ನೆಯ ಶತಮಾನದ ಹೊತ್ತಿಗೆ ಭಾರತೀಯ ಸಮಾಜ ವರ್ಣಾಧಾರಿತವಾಗಿ ವಿಭಜಿತವಾಗಿತ್ತು. ನಾಲ್ಕು ವರ್ಣಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ಎರಡು ಮೇಲ್ವರ್ಣಗಳಲ್ಲಿ ಬ್ರಾಹ್ಮಣರು, ಕ್ಷತ್ರಿಯರು ಅವರಿಗಿಂತ ಕೆಳಗಿನ ವರ್ಣದಲ್ಲಿ ವೈಶ್ಯರು ಮತ್ತು ಕೊನೆಯ ಹಂತದಲ್ಲಿ ಶೂದ್ರರು ಇದ್ದರು. ಬ್ರಾಹ್ಮಣರು ಪುರೋಹಿತರಾಗಿ, ಯಜ್ಞಯಾಗಾದಿಗಳ ಧಾರ್ಮಿಕ ಕ್ರಿಯೆಗಳ ಆಚರಣೆಯಲ್ಲಿ ಮುಖ್ಯಸ್ಥರಾಗಿದ್ದರು. ದಾನ, ದಕ್ಷಿಣೆ ಪಡೆಯುವ ಹಕ್ಕನ್ನು ಹೊಂದಿದ್ದರು. ರಾಜನಿಗೆ ರಾಜಧರ್ಮ ಪಾಲನೆಯಲ್ಲಿ ಮಾರ್ಗದರ್ಶಕರಾಗಿ ಕ್ಷತ್ರಿಯರ ಮೇಲೂ ಹತೋಟಿಯನ್ನು ಹೊಂದಿದ್ದರು. ಎರಡನೇ ಹಂತದಲ್ಲಿದ್ದ ಕ್ಷತ್ರಿಯರು ಆಳುವ ವರ್ಗದವರಾಗಿದ್ದು ರೈತನ ಕಂದಾಯದ ಮೇಲೆ ಬದುಕುತ್ತಿದ್ದರು. ಕೃಷಿ, ಪಶುಪಾಲನೆ ಮತ್ತು ವ್ಯಾಪಾರಿ ಸಂಬಂಧಿತ ಕಸುಬುಗಳನ್ನು ಮಾಡುತ್ತಿದ್ದ ವೈಶ್ಯರನ್ನು ದ್ವಿಜರೆಂದು ಮಾನ್ಯ ಮಾಡಿದ್ದರೂ, ಅವರ ಮೇಲೆ ನಿರ್ಬಂಧಗಳಿದ್ದವು, ಶೂದ್ರರು ಕೃಷಿಯಾಳು, ಮನೆಯಾಳುಗಳಾಗಿ ಮತ್ತು ಕುಶಲ ಕಸುಬುದಾರಿಕೆ ಸೇವೆಗಾಗಿಯೇ ಮೀಸಲಾಗಿದ್ದರು. ಸಮಾಜದಲ್ಲಿ ಎಲ್ಲಾ ಸವಲತ್ತುಗಳು, ಮನ್ನಣೆಗಳು ಉಚ್ಚವರ್ಣದವರಿಗೆ ಸೀಮಿತವಾಗಿದ್ದವು. ಸ್ತ್ರೀಯರು ಸೇರಿದಂತೆ ಶೂದ್ರರು ಅಶುದ್ಧರೆಂದು ಪರಿಗಣಿಸಲ್ಪಟ್ಟಿದ್ದರು. ಈ ವರ್ಣಾಧಾರಿತ ತಾರತಮ್ಯತೆಯ ಸಮಾಜದಲ್ಲಿ ಸಾಮಾಜಿಕ ವಿರಸ ಮತ್ತು ತುಮುಲಗಳನ್ನು ಸೃಷ್ಟಿಸಿತ್ತು. ಈ ಸಂದರ್ಭದಲ್ಲಿ ಜನತೆಗೆ ಗೌತಮ ಮತ್ತು ಮಹಾವೀರರ ತತ್ವಗಳು ಭರವಸೆಯ ಹೊಸ ಮಾರ್ಗಗಳಾಗಿ ಗೋಚರಿಸಿದವು.

ಎಲ್ಲಾ ಪ್ರಾಚೀನ ಕಾಲದ ಸಮಾಜದಲ್ಲಿ ಧರ್ಮ ಮತ್ತು ರಾಜ್ಯ ವ್ಯವಸ್ಥೆಗಳಲ್ಲಿ ಬಹುದೊಡ್ಡ ಬದಲಾವಣೆಗಳು ಘಟಿಸಲು ಆಯಾ ಸಮಾಜದಲ್ಲಿನ ಕೃಷಿ ವಿಧಾನಗಳಲ್ಲಿನ ಮಾರ್ಪಾಡುಗಳು ಮತ್ತು ಆಹಾರ ಧಾನ್ಯಗಳ ಹೆಚ್ಚಳ ಬಹುಪಾಲು ಮೂಲ ಪ್ರೇರಣೆಯಾಗುತ್ತವೆ. ಬೌದ್ಧ ಮತ್ತು ಜೈನ ಧರ್ಮಗಳ ಉದಯಕ್ಕೂ ಸಹ ಇವೇ ಮುಖ್ಯ ಕಾರಣಗಳಾಗಿವೆ. ಈ ಕಾಲದ ಹೊತ್ತಿಗೆ ಉತ್ತರ ಪ್ರದೇಶದ ಪೂರ್ವ ಭಾಗ ಬಿಹಾರದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ನವೀನ ಕೃಷಿಯಾಧಾರಿತ ಅರ್ಥವ್ಯವಸ್ಥೆ ರೂಪುಗೊಂಡಿತು. 5ನೆಯ ಶತಮಾನದ ಕಾಲಾವಧಿಯ

© KTBS Not to be republished

ವೇಳೆಗೆ ಇಲ್ಲಿ ಕಬ್ಬಿಣದ ವ್ಯವಸಾಯದ ಉಪಕರಣಗಳು ಬಳಕೆಗೆ ಬಂದವು. ಕಬ್ಬಿಣದ ಗುಳಗಳಿಂದ ನೇಗಿಲುಗಳನ್ನು ಎಳೆಯಲು ಎತ್ತುಗಳು ಅಗತ್ಯವಾಗಿದ್ದವು ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಳವಾಯಿತು. ಆಹಾರ ಧಾನ್ಯಗಳ ಹೆಚ್ಚಳವನ್ನು ಕಾಯ್ದುಕೊಳ್ಳಲು ಎತ್ತುಗಳ ಬಳಕೆ ಅತ್ಯಗತ್ಯವಾಗಿತ್ತು. ಧಾರ್ಮಿಕ ಆಚರಣೆಗಳಲ್ಲಿ ಎತ್ತುಗಳನ್ನು ಬಲಿ ಕೊಡುತ್ತಿದ್ದರಿಂದ ಅವುಗಳ ಸಂಖ್ಯೆ ಇಳಿಮುಖವಾಗತೊಡಗಿತು. ಈ ಹಿನ್ನೆಲೆಯಲ್ಲಿ ಪ್ರಾಣಿ ಬಲಿಯನ್ನು ತಿರಸ್ಕರಿಸಿ ಅಹಿಂಸೆಯನ್ನು ಬೋಧಿಸುತ್ತಿದ್ದ ಹೊಸ ಧರ್ಮಗಳು ಜನರಿಗೆ ಹೊಸ ಭರವಸೆಯನ್ನು ನೀಡಿದ್ದರಿಂದ ಅವರು ಆಕರ್ಷಿತರಾದರು.

ಈ ಕಾಲಾವಧಿಯಲ್ಲಿ ನಗರಗಳು ಬೆಳೆದವು. ಕೌಶಂಬಿ, ಕುಶಿನಗರ, ವಾರಣಾಸಿ, ಬಿಹಾರದಲ್ಲಿ ವೈಶಾಲಿ, ಚಿರಾಂಡ್ ಮತ್ತು ರಾಜಗೃಹಗಳು ಪ್ರವರ್ಧಮಾನಕ್ಕೆ ಬಂದವು. ಈ ನಗರಗಳಲ್ಲಿ ಕುಶಲ ಕಸುಬುದಾರರು ಮತ್ತು ವ್ಯಾಪಾರಿಗಳು ನೆಲೆಸಿದರು. ಮೊಟ್ಟಮೊದಲಿಗೆ ನಾಣ್ಯಗಳನ್ನು ಬಳಸಿದರು. ವ್ಯಾಪಾರ ವಾಣಿಜ್ಯಗಳಿಗೆ ಪ್ರಶಸ್ತವಾದ ಈ ಸನ್ನಿವೇಶದಲ್ಲಿ ವರ್ಣವಿಭಜಿತ ಸಮಾಜದಲ್ಲಿ ಮೂರನೇ ಸ್ಥಾನದಲ್ಲಿದ್ದು ಸಾಮಾಜಿಕ ಗೌರವವನ್ನು ಹೊಂದಿರದ ವೈಶ್ಯರು ವೈದಿಕ ಧರ್ಮ ತಮ್ಮ ಮೇಲೆ ವಿಧಿಸಿದ್ದ ನಿರ್ಬಂಧಗಳನ್ನು ಕಿತ್ತೆಸೆದು ತಮ್ಮ ಸ್ಥಾನವನ್ನು ಉನ್ನತಗೊಳಿಸಿಕೊಳ್ಳಲು ವರ್ಣ ವ್ಯವಸ್ಥೆಗೆ ಮಹತ್ವ ನೀಡದ ಬೌದ್ಧ ಮತ್ತು ಜೈನ ಧರ್ಮಗಳನ್ನು ಸ್ವೀಕರಿಸಿದರು.

ರಾಜಕೀಯ ವ್ಯವಸ್ಥೆಯಲ್ಲಿ ಈ ಕಾಲದಲ್ಲಾದ ಮಹತ್ತರವಾದ ಬದಲಾವಣೆಗಳೂ ಸಹ ಹೊಸ ಧರ್ಮಗಳ ಉದಯದ ಹಿನ್ನೆಲೆಯಲ್ಲಿದ್ದವು. ಗಂಗಾನದಿಯ ಬಯಲಿನಲ್ಲಿ ಜನಪದಗಳು ಮತ್ತು ಮಹಾಜನಪದಗಳು, ರಾಜಪ್ರಭುತ್ವಗಳಾಗಿ ರೂಪಾಂತರವಾಗುತ್ತಿದ್ದವು. ಜನಪದ ಸಮುದಾಯಗಳಿಗೆ ಸೇರಿದ ಹೊಸ ರಾಜಮನೆತನಗಳ ರಾಜರು, ವೈದಿಕ ಸಂಪ್ರದಾಯಗಳನ್ನು ಮತ್ತು ಪುರೋಹಿತರ ಪ್ರಾಬಲ್ಯವನ್ನು ಮುರಿಯುವಂತಹ ಹೊಸ ಧರ್ಮ ಮಾರ್ಗಗಳನ್ನು ಹುಡುಕುತ್ತಿದ್ದರು. ಯುದ್ಧಗಳ ನಿರರ್ಥಕತೆಯನ್ನು ಮತ್ತು ಅಹಿಂಸೆಯನ್ನು ಬೋಧಿಸಿದ ಬುದ್ಧ ಮತ್ತು ಮಹಾವೀರರ ತತ್ವಗಳನ್ನು ಒಪ್ಪಿಕೊಂಡರು.

ಬುದ್ಧ ಮತ್ತು ಮಹಾವೀರರ ಧರ್ಮಗಳು ಮನುಷ್ಯನ ಸಮಸ್ಯೆಗಳಿಗೆ ಆಸೆಯೇ ಮೂಲವೆಂದು ಗುರ್ತಿಸಿ ಅದನ್ನು ತ್ಯಜಿಸಬೇಕೆಂದು ಕರೆ ನೀಡಿದವು. ಸಂಪತ್ತಿನ ಸಂಗ್ರಹಣೆ ಭೋಗ ಜೀವನ ಶೈಲಿಯನ್ನು ತಿರಸ್ಕರಿಸಿ ಸರಳ, ಶುದ್ಧ ಸಾಂಸಾರಿಕ ಜೀವನವನ್ನು ಎತ್ತಿಹಿಡಿದವು. ಗೃಹಸ್ಥರು ಜೀವನಕ್ಕೆ ಎಷ್ಟು ಅಗತ್ಯವೋ ಅಷ್ಟು ಮಾತ್ರ ಸಂಪತ್ತನ್ನು ಗಳಿಸಿ ಬಳಸುವಂತೆ ಉಪದೇಶಿಸಿದವು. ಸಂಸ್ಕೃತ ಭಾಷೆಯನ್ನು ಬಿಟ್ಟು ಜನರ ಭಾಷೆಯಾಗಿದ್ದ ಪಾಳಿ ಮತ್ತು ಪ್ರಾಕೃತ ಭಾಷೆಗಳಲ್ಲಿ ಧರ್ಮೋಪದೇಶವನ್ನು ನೀಡಿದರು. ವೈದಿಕ ಧರ್ಮದೊಂದಿಗೆ ಸಮರಸವಾಗದೆ ಬೇರೆಯಾದ ಹೊಸ ಮಾರ್ಗಗಳನ್ನು ಸಮಾಜಕ್ಕೆ ನೀಡಿದವು.

## ಜೈನ ಧರ್ಮ

ಅತ್ಯಂತ ಪುರಾತನ ಧರ್ಮಗಳಲ್ಲಿ ಜೈನ ಧರ್ಮವೂ ಒಂದು. ಸಾಂಪ್ರದಾಯಕವಾಗಿ ಜೈನರಲ್ಲಿ 24 ತೀರ್ಥಂಕರರಿದ್ದರೆಂಬ ನಂಬಿಕೆಯಿದೆ. ಋಷಭ ಇವರಲ್ಲಿ ಮೊದಲನೆಯ ತೀರ್ಥಂಕರನಾದರೆ ಪಾರ್ಶ್ವನಾಥ 23ನೆಯ ತೀರ್ಥಂಕರ. ಪಾರ್ಶ್ವನಾಥನು ಸಾ.ಶ.ಪೂ. 8ನೆಯ ಶತಮಾನದಲ್ಲಿ ರಾಜ ಅಶ್ವಸೇನನ ಮಗನಾಗಿ ಜನಿಸಿದನು. ಇವನು ಸುಖ ಭೋಗವನ್ನು ತ್ಯಜಿಸಿ ಅಮರನಾದನೆಂಬ ನಂಬಿಕೆಯಿದೆ. ಸರ್ವಸಂಘ ಪರಿತ್ಯಾಗಿಯಾಗಿ ಇವನು ಸನ್ಯಾಸಿಯಾದನು. ಇವನು ಸುಖಮಯ ಬದುಕಿಗೆ ನಾಲ್ಕು ತತ್ವಗಳನ್ನು ಸೂಚಿಸಿದ್ದನು.

### ಪಾರ್ಶ್ವನಾಥನು ಬೋಧಿಸಿದ ನಾಲ್ಕು ತತ್ವಗಳು

1. ಅಹಿಂಸೆ, 2. ಸತ್ಯ 3. ಅಸ್ತೇಯ (ಕದಿಯದಿರುವುದು)
4. ಅಪರಿಗ್ರಹ (ಆಸ್ತಿಯನ್ನು ಹೊಂದದಿರುವುದು).


5ನೆಯ ತತ್ವವಾದ ಬ್ರಹ್ಮಚರ್ಯವನ್ನು ವರ್ಧಮಾನನು ಬೋಧಿಸಿದನು. ಇವನೇ 24ನೆಯ ತೀರ್ಥಂಕರ.



© KTBS Not to be republished

## ವರ್ಧಮಾನ ಮಹಾವೀರ (ಸಾ.ಶ.ಪೂ. 599–527)

ವರ್ಧಮಾನನು ಗಣರಾಜ್ಯಗಳಲ್ಲೊಂದಾದ ವೈಶಾಲಿಯ ಕುಂಡಲಗ್ರಾಮದಲ್ಲಿ ಜನಿಸಿದನು. ಇವನ ತಂದೆ ಸಿದ್ಧಾರ್ಥ, ಜ್ಞಾತ್ರಿಕ ಎಂಬ ಬುಡಕಟ್ಟಿನ ರಾಜ. ತಾಯಿ ತ್ರಿಶಲಾದೇವಿ, ಪ್ರಬಲ ಗಣರಾಜ್ಯವಾಗಿದ್ದ ಲಿಚ್ಛವಿಗಳ ಯುವರಾಣಿ.


ವರ್ಧಮಾನ ಮಹಾವೀರ

ತನ್ನ 30ನೆಯ ವಯಸ್ಸಿನಲ್ಲಿ ಸತ್ಯಾನ್ವೇಷಣೆಯ ಹುಡುಕಾಟದಲ್ಲಿ ತೊಡಗಿದ ಈತ ಮನೆಯನ್ನು ತ್ಯಜಿಸಿದನು. ನಂತರ ಇವನು 12 ವರ್ಷಗಳ ಕಾಲ ಸತ್ಯದ ಹುಡುಕಾಟದಲ್ಲಿ ಅಲೆದಾಡಿದ, ತಪಸ್ಸು ಮಾಡಿದ. ಇವನು ಉಪವಾಸ ಮಾಡುವ ಮೂಲಕ ಸ್ವತಃ ತನ್ನ ದೇಹವನ್ನು ದಂಡಿಸಿಕೊಂಡನು. ಆತ 42ನೆಯ ವಯಸ್ಸಿನಲ್ಲಿ ಕೈವಲ್ಯ ಜ್ಞಾನವನ್ನು ಪಡೆದನು. ಕೈವಲ್ಯ ಜ್ಞಾನವೆಂದರೆ ಜ್ಞಾನೋದಯವೆಂದರ್ಥ. ಇವನು ಇಂದ್ರಿಯಗಳನ್ನು ನಿಗ್ರಹಿಸಿ ಸುಖ ಹಾಗೂ ಯಾತನೆಗಳ ಮೇಲೆ ನಿಯಂತ್ರಣವನ್ನು ಸಾಧಿಸಿಕೊಂಡ. ಈ ಸಾಧನೆಗಾಗಿ ಇವನು 'ಮಹಾವೀರ'ನೆಂದು ಕರೆಸಿಕೊಂಡು 'ಜಿನ'ನಾದನು. 'ಜಿನ'ನೆಂದರೆ ಎಲ್ಲವನ್ನು ನಿಗ್ರಹಿಸಿದವನು, ಜಯಿಸಿದವನು ಎಂದರ್ಥ. ಹೀಗಾಗಿಯೆ ಇವನ ಅನುಯಾಯಿಗಳನ್ನು ಜೈನರೆಂದು ಕರೆಯುತ್ತಾರೆ.

ಮಹಾವೀರನು ತನ್ನ ಉಳಿದ 30 ವರ್ಷಗಳ ಬದುಕನ್ನು ಗಂಗಾನದಿಯ ಪ್ರದೇಶದ ಜನತೆಗೆ ತನ್ನ ತಿಳಿವನ್ನು ಬೋಧಿಸುತ್ತಾ ಕಳೆದನು. ಇವನು ತನ್ನ ಪಶ್ಚಿಮ ಭಾರತಕ್ಕೂ ಬೋಧಿಸುತ್ತಾ ಪ್ರಯಾಣಿಸಿದ. ಇವನು ತನ್ನ 72ನೆಯ ವಯಸ್ಸಿನಲ್ಲಿ ಬಿಹಾರದ ಪಾವಾಪುರಿ ಎಂಬಲ್ಲಿ ನಿರ್ವಾಣವನ್ನು ಹೊಂದಿದನು.

ಮಹಾವೀರನು 5 ಪ್ರತಿಜ್ಞೆಗಳನ್ನು ಹಾಗೂ ನಡವಳಿಕೆಯ 3 ನಿಯಮಗಳನ್ನು ಬೋಧಿಸಿದನು. ಇವುಗಳನ್ನು ತ್ರಿರತ್ನಗಳೆಂದು ಕರೆಯುತ್ತಾರೆ.

**ಪಂಚ ಪ್ರತಿಜ್ಞೆಗಳು:** 1. ಅಹಿಂಸೆ 2. ಸತ್ಯ 3. ಆಸ್ತೇಯ 4. ಅಪರಿಗ್ರಹ 5. ಬ್ರಹ್ಮಚರ್ಯ

**ತ್ರಿರತ್ನಗಳು:** 1. ಸಮ್ಯಕ್‌ಜ್ಞಾನ 2. ಸಮ್ಯಕ್‌ದರ್ಶನ 3. ಸಮ್ಯಕ್‌ಚಾರಿತ್ರ

ಜೈನಧರ್ಮವು ಪೂರ್ಣವಾಗಿ ದೇವರ ಇರುವಿಕೆಯನ್ನು ನಿರಾಕರಿಸುವುದಿಲ್ಲ. ಆದರೂ ಅದು ನಾಸ್ತಿಕವಾದವನ್ನು ಒಪ್ಪುತ್ತದೆ. ಪ್ರಪಂಚದ ಆಗುಹೋಗುಗಳಲ್ಲಿ ದೇವರ ಪಾತ್ರವನ್ನು ನಿರಾಕರಿಸುತ್ತದೆ. ಇಲ್ಲಿ ಜಿನನಿಗಿಂತ ಕೆಳಗಿನ ಸ್ಥಾನದಲ್ಲಿ ದೇವರನ್ನು ಇಡಲಾಗಿದೆ.

ಎಲ್ಲ ಚರಾಚರ ವಸ್ತುಗಳಲ್ಲಿಯೂ ಆತ್ಮ(ಜೀವ)ವಿದೆ ಎನ್ನುವುದು ಇವರ ನಂಬಿಕೆ. ಆತ್ಮ(ಜೀವ)ದ ಶುದ್ಧೀಕರಣವು ಮಾತ್ರ ಪುನರ್ಜನ್ಮದಿಂದ ಮುಕ್ತಿಯನ್ನು ನೀಡುತ್ತದೆ ಹಾಗೂ ನಿರ್ವಾಣ ಸಾಧ್ಯ. ಶುದ್ಧೀಕರಣವು ತಪಸ್ಸು, ಉಪವಾಸ, ದೇಹದಂಡನೆ ಹಾಗೂ ಅದರ ಮೂಲಕ ಉಂಟಾಗುವ ದೇಹ ನಾಶದಿಂದ ಮಾತ್ರ ಸಾಧ್ಯವೆಂಬುದು ಇವರ ನಂಬಿಕೆ. ಇದನ್ನು ಸಲ್ಲೇಖನವೆನ್ನುವರು. ಕರ್ಮಸಿದ್ಧಾಂತವು ಜೈನರ ಬಹುಮುಖ್ಯ

©KTBS Not to be republished

ಆಯಾಮ. ಈ ಧರ್ಮದ ಪ್ರಕಾರ ಉತ್ತಮ ಮತ್ತು ಪುಣ್ಯಕಾರ್ಯಗಳ ಮೂಲಕ ಮಾತ್ರ ವಿಮೋಚನೆಯನ್ನು ಪಡೆಯಬಹುದಾಗಿದೆ. ಕೈವಲ್ಯ ಜ್ಞಾನವನ್ನು ಪಡೆಯಲು ದೇಹದ ಬಂಧನದಿಂದ ಆತ್ಮವು ವಿಮುಕ್ತವಾಗಬೇಕು.

ಸಾಂಪ್ರದಾಯಿಕವಾಗಿ ಜೈನರಲ್ಲಿ ಶ್ವೇತಾಂಬರ ಹಾಗೂ ದಿಗಂಬರರೆಂಬ ಎರಡು ಮುಖ್ಯ ಪಂಗಡಗಳನ್ನು ಕಾಣುತ್ತೇವೆ. ಬಿಳಿಯ ಉಡುಪು ಧರಿಸಿದ ಜೈನ ಮುನಿಗಳನ್ನು ಹಾಗೂ ಅವರ ಅನುಯಾಯಿಗಳನ್ನು ಶ್ವೇತಾಂಬರರೆಂದು ಕರೆಯುತ್ತಾರೆ. ಉಡುಪನ್ನು ಧರಿಸದ ಜೈನಮುನಿಗಳನ್ನು ಹಾಗೂ ಅವರ ಅನುಯಾಯಿಗಳನ್ನು ದಿಗಂಬರ ಪಂಥಕ್ಕೆ ಸೇರಿದವರೆಂದು ಪರಿಗಣಿಸಲಾಗಿದೆ. ಮೊದಲ ಜೈನ ಸಮಾವೇಶದ ನಂತರ ಮಹಾವೀರನ ವಿಚಾರಗಳನ್ನು 12 ಗ್ರಂಥಗಳಲ್ಲಿ ಸಂಗ್ರಹಿಸಿಡಲಾಯಿತು. ಇವುಗಳನ್ನು ಜೈನರು 12 ಅಂಗಗಳೆಂದು ಕರೆದರು. ಇವುಗಳು ಪ್ರಾಕೃತ ಭಾಷೆಯಲ್ಲಿವೆ.

ಬಹಳ ಹಿಂದೆಯೇ ಜೈನರ ಒಂದು ಗುಂಪು ಬಿಹಾರದ ಕ್ಷಾಮದಿಂದಾಗಿ ದಕ್ಷಿಣಕ್ಕೆ ಬಂದು ಶ್ರವಣಬೆಳಗೊಳದಲ್ಲಿ ನೆಲೆಸಿತು. ಹೀಗೆ ದಕ್ಷಿಣ ಭಾರತದಲ್ಲಿ ಕೂಡ ಜೈನಮತದ ಪ್ರಚಾರವಾಯಿತು. ಇದ–ರಿಂದ ಅಪಾರವಾದ ಗ್ರಂಥಗಳು ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ ರಚನೆಯಾದವು. ಕನ್ನಡದ ಸುಪ್ರಸಿದ್ಧ ಕವಿಗಳಾದ ಪಂಪ, ರನ್ನ, ಪೊನ್ನ, ಜನ್ನ ಇವರುಗಳು ಜೈನರಾಗಿದ್ದರು.

## ಬೌದ್ಧ ಧರ್ಮ

ಗೌತಮ ಬುದ್ಧನೆಂದೇ ಪ್ರಖ್ಯಾತನಾದ ಸಿದ್ಧಾರ್ಥನು ಸಾ.ಶ.ಪೂ. 6ನೆಯ ಶತಮಾನದಲ್ಲಿ ಜನಿಸಿದನು. ತಂದೆ ಶುದ್ಧೋದನನು ಶಾಕ್ಯ ಗಣ–ಸಂಘದ ರಾಜ. ಸಿದ್ಧಾರ್ಥನು ರಾಜರ ಭೋಗವನ್ನು ಹಾಗೂ ಸಂಸಾರದ ಸುಖವನ್ನು ತ್ಯಜಿಸಿ ಸನ್ಯಾಸಿಯಾದನು. ಪ್ರಚಲಿತ ಬದುಕಿನ ದಾರಿಗಳ ನಿರರ್ಥಕತೆಯನ್ನು ಕಂಡು ಸತ್ಯದ ಹುಡುಕಾಟದಲ್ಲಿ ನಿರತನಾಗಿ ಜ್ಞಾನೋದಯವನ್ನು ಪಡೆದು ಬುದ್ಧನಾದನು. ಜ್ಞಾನೋದಯದ ನಂತರ ಈತ ಮೊದಲಿಗೆ ತೆರಳಿದ್ದು ಬನಾರಸ್ ಸಮೀಪದ ಸಾರನಾಥಕ್ಕೆ. ಇಲ್ಲಿನ ಜಿಂಕೆವನದಲ್ಲಿ ಈತನು ತನ್ನ ಮೊಟ್ಟಮೊದಲ ಬೋಧನೆಯನ್ನು ಮಾಡಿದನು. ಇದು 'ಧರ್ಮ ಚಕ್ರ ಪ್ರವರ್ತನ'ವೆಂದು ಕರೆಯಲ್ಪಟ್ಟಿದೆ. ಇಲ್ಲಿ ಬುದ್ಧನು ಚತುರ್ ಆರ್ಯಸತ್ಯ ಹಾಗೂ ಅಷ್ಟಾಂಗಿಕ ಮಾರ್ಗವನ್ನು ಬೋಧಿಸಿದನು.



**ಗೌತಮ ಬುದ್ಧ**

ಲೋಕವೆಲ್ಲ ದುಃಖ ಹಾಗೂ ನೋವಿನಿಂದ ಆವರಿಸಿದೆ. ದುಃಖದ ಮೂಲವನ್ನು, ಅದರ ಕಾರಣವನ್ನು ಚತುರ್‌ಆರ್ಯ ಸತ್ಯವು ವಿವರಿಸುತ್ತದೆ. ಆಸೆಯೇ ದುಃಖಕ್ಕೆ ಮೂಲಕಾರಣ ಎಂಬ ಸತ್ಯವನ್ನು ಬುದ್ಧನು ಕಂಡನು. ಅತಿಯಾದ ಆಸೆಯ ವಿಮುಕ್ತಿಯಿಂದ ಮಾತ್ರ ನೆಮ್ಮದಿಯ ಬದುಕು ಸಾಧ್ಯ. ಆಸೆಯ ವಿಮುಕ್ತಿಗಾಗಿ ಅಷ್ಟಾಂಗಿಕ ಮಾರ್ಗವನ್ನು ಬುದ್ಧನು ಬೋಧಿಸಿದನು. ಇದನ್ನು ಮಧ್ಯಮ ಪಥವೆಂದು ಕರೆಯುವರು.

## ಅಷ್ಟಾಂಗಿಕ ಮಾರ್ಗ

| | | | |
|---|---|---|---|
| 1. ಒಳ್ಳೆಯ ನಡತೆ | 2. ಮಾತು | 3. ನೋಟ (ದೃಷ್ಟಿ) | 4. ಬದುಕು |
| 5. ಪ್ರಯತ್ನ | 6. ನೆನಪು | 7. ನಿರ್ಧಾರ | 8. ಚಿಂತನೆ |

©KTBS Not to be republished

## ಧರ್ಮದ ಅನುಯಾಯಿಗಳು

ಶ್ರೀಮಂತ ವರ್ತಕರು, ಕುಶಲಕರ್ಮಿಗಳು, ಜನಸಾಮಾನ್ಯರು ಈ ಹೊಸ ಪ್ರತಿಪಾದನೆಯಿಂದ ಪ್ರೇರಿತರಾದರು. ಜನಸಾಮಾನ್ಯರ ಭಾಷೆಯಾದ ಪ್ರಾಕೃತದ ಮೂಲಕ ಬುದ್ಧನು ತನ್ನ ಬೋಧನೆಗಳನ್ನು ಮಾಡಿದನು ಹಾಗೂ ಅವುಗಳನ್ನು ಸ್ಥಳೀಯ ಸಂಪ್ರದಾಯಗಳ ಅಂಶಗಳೊಂದಿಗೆ ಸಂಬಂಧ ಕಲ್ಪಿಸಿದನು. ಹೊಸ ನಗರಗಳ ವಾತಾವರಣವು ಜನರ ಬದುಕಿನ ವಿಧಾನಗಳನ್ನು ಬದಲಾಯಿಸಿತು. ಬದಲಾದ ಪರಿಸ್ಥಿತಿಗಳಲ್ಲಿ ಹೊಸ ಮತಗಳು ಆಶಾಕಿರಣಗಳಾದವು. ಅದರಲ್ಲೂ ಬೌದ್ಧಮತ ಹೊಸ ಪಾತ್ರವನ್ನು ವಹಿಸಿಕೊಂಡು ಪ್ರವರ್ತನೆಯ ಹಾದಿಯನ್ನು ಹಿಡಿಯಿತು.

ಬುದ್ಧ ಹಾಗೂ ಅವನ ಅನುಯಾಯಿಗಳು ಕೋಸಲ, ಮಗಧ ಹಾಗೂ ಗಂಗಾನದಿಯ ಬಯಲು ಪ್ರದೇಶದ ಉಳಿದ ಹಲವು ನಗರಗಳಿಗೆ ಭೇಟಿಕೊಟ್ಟು ತಮ್ಮ ವಿಚಾರಗಳನ್ನು ಬೋಧಿಸಿದರು. ಇವರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕಾಲ್ನಡಿಗೆಯಲ್ಲಿಯೇ ಪ್ರಯಾಣಿಸುತ್ತಿದ್ದರು ಮತ್ತು ತಮ್ಮ ಜೀವನವನ್ನು ಪರರ ಬದುಕಿಗಾಗಿಯೆ ಮೀಸಲಿಟ್ಟರು. 80ನೆಯ ಇಳಿ ವಯಸ್ಸಿನಲ್ಲಿ ಬುದ್ಧನ ಅವಿರತವಾದ ಸಾರ್ಥಕ ಬದುಕು ಕುಶಿನಗರದಲ್ಲಿ ಅಂತ್ಯಗೊಂಡಿತು. ಇದನ್ನು 'ಮಹಾಪರಿ ನಿರ್ವಾಣ'ವೆಂದು ಕರೆಯಲಾಗಿದೆ.



**ಸಾಂಚಿ ಸ್ತೂಪ**

ಬುದ್ಧನು ವಿಹರಿಸಿದ ಪ್ರದೇಶಗಳಲ್ಲಿ ವಿಹಾರಗಳನ್ನು ಕಾಲಾಂತರದಲ್ಲಿ ನಿರ್ಮಿಸಿದರು. ಅವನ ಅಸ್ಥಿಪಂಜರ ಕಳೆಬರವನ್ನು ಹಾಗೂ ಮೂಳೆಗಳನ್ನು ಜನ ಅವನ ನೆನಪಿನಲ್ಲಿ ಸಂರಕ್ಷಿಸಿದರು. ಅವುಗಳ ಮೂಲಕ ಚೈತ್ಯಾಲಯ ಹಾಗೂ ಸ್ತೂಪಗಳಲ್ಲಿ ಅವನ ಸಾಧನೆಯನ್ನು ಸ್ಮರಿಸುತ್ತಾ ಪೂಜಿಸತೊಡಗಿದರು. ಹೀಗೆ ಪ್ರಾರಂಭವಾದದ್ದೆ ಮೊಟ್ಟಮೊದಲ ದೇವಾಲಯಗಳು, ವಿಗ್ರಹಗಳು ಹಾಗೂ ಮೂರ್ತಿಪೂಜೆ.

**ನಿಮಗಿದು ತಿಳಿದಿರಲಿ**

*ಬೌದ್ಧ ಧರ್ಮವು ನಾಡಿನ ತುಂಬೆಲ್ಲ ಪಸರಿಸಿದಲ್ಲದೆ ದೇಶ ವಿದೇಶಗಳಿಗೂ ಹರಡಿತು. ಇದರ ವೈಭವವನ್ನು ಚೀನಾದ ಪ್ರವಾಸಿಗಳಾದ ಫಾಹಿಯಾನ್, ಇತ್ಸಿಂಗ್ ಹಾಗೂ ಹ್ಯೂಯನ್‌ತ್ಸಾಂಗ್ ಕಣ್ಣಿಗೆಕಟ್ಟುವಂತೆ ಅವರ ಬರವಣಿಗೆಗಳಲ್ಲಿ ವಿವರಿಸಿದ್ದಾರೆ. ಮಲಯ, ಬರ್ಮ, ಥೈಲ್ಯಾಂಡ್, ವಿಯಟ್ನಾಂ, ಕಾಂಬೋಡಿಯ, ಶ್ರೀಲಂಕ ಹಾಗೂ ಬಾಮಿಯಾನಿನವರೆವಿಗೂ ಬೌದ್ಧ ಧರ್ಮವು ಹರಡಿತ್ತು. ಇಲ್ಲೆಲ್ಲ ಬೆಟ್ಟಗಳ ಶಿಲೆಗಳನ್ನೆ ಕಡೆದು ಬುದ್ಧನ ಮೂರ್ತಿಗಳನ್ನು ನಿರ್ಮಿಸಿದ್ದಾರೆ. ಹಲವೆಡೆಗಳಲ್ಲಿ ಬೃಹತ್ ಪ್ರತಿಮೆಗಳನ್ನು ನಿರ್ಮಿಸಿರುವುದನ್ನು ನಾವು ಇಂದಿಗೂ ಕಾಂಬೋಡಿಯದ ಅಂಕೂರ್‌ವಟ್ ಹಾಗೂ ಅಫ್ಘಾನಿಸ್ತಾನದ ಬಾಮಿಯಾನ್‌ನಲ್ಲಿ ಕಾಣಬಹುದು. ದುರದೃಷ್ಟವೆಂದರೆ ಬಾಮಿಯಾನ್‌ನ ಬುದ್ಧನ ಬೃಹತ್ ಪ್ರತಿಮೆಗಳು ದಾಳಿಗೆ ತುತ್ತಾಗಿ ಇತ್ತೀಚಿನ ದಿನಗಳಲ್ಲಿ ನಾಶವಾದವು.*

*1956ರಲ್ಲಿ ಭಾರತದ ಪ್ರಮುಖ ಸಾಮಾಜಿಕ ಚಿಂತಕರಾದ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್‌ರವರು ಬುದ್ಧನ ಬೋಧನೆಗಳಿಂದ ಪ್ರೇರಿತರಾಗಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು.*

ಬುದ್ಧನ ಮರಣದ ನಂತರ ಅವನ ಅನುಯಾಯಿಗಳು ಬುದ್ಧನ ಬೋಧನೆ ಹಾಗೂ ಸಂಪ್ರದಾಯವನ್ನು ತ್ರಿಪಿಟಕಗಳಲ್ಲಿ ಕ್ರೋಡೀಕರಿಸಿದರು. ಇವೇ ವಿನಯ, ಸುತ್ತ ಹಾಗೂ ಅಭಿಧಮ್ಮ ಪಿಟಕವೆಂದು ಕರೆಯಲ್ಪಟ್ಟಿವೆ. ಕಾಲಕ್ರಮೇಣ ಬೋಧನೆಗಳಲ್ಲಿ ಹುಟ್ಟಿಕೊಂಡ ಭಿನ್ನಾಭಿಪ್ರಾಯದಿಂದಾಗಿ ಒಳಪಂಗಡಗಳು ಹುಟ್ಟಿಕೊಂಡವು.

©KTBS Not to be republished

ಹೀಗೆ ಹೀನಯಾನ, ಮಹಾಯಾನ, ವಜ್ರಯಾನ ಹಾಗೂ ಅವುಗಳಲ್ಲಿನ ಸೂತ್ರಗಳು ಹುಟ್ಟಿಕೊಂಡವು. ಇಂದು ಬುದ್ಧನನ್ನು ಅರಸುವ ಅನೇಕ ಹಾದಿಗಳನ್ನು ಹುಡುಕಿಕೊಂಡಿರುವ ಸಂಘಟನೆಗಳನ್ನು ಜಗತ್ತಿನಾದ್ಯಂತ ನಾವು ಕಾಣುತ್ತೇವೆ.

## ವಿದೇಶಿಯರ ದಾಳಿ

ಇದೇ ಕಾಲಘಟ್ಟದಲ್ಲಿ ಗ್ರೀಸ್‌ನಲ್ಲಿ ನಗರ ರಾಜ್ಯಗಳು ವಿಕಸಿತಗೊಂಡಿದ್ದವು. ಪ್ರಾಚೀನ ಪರ್ಶಿಯ ಒಂದು ಪ್ರಬಲ ಸಾಮ್ರಾಜ್ಯವಾಗಿ ಬೆಳೆದಿತ್ತು. ಈ ಎರಡು ಪ್ರದೇಶಗಳು ನಿರಂತರವಾದ ಸಂಘರ್ಷಕ್ಕೆ ಗುರಿಯಾದವು. ಪ್ರಾಚೀನ ಪರ್ಶಿಯವನ್ನು ಆಳಿದವರಲ್ಲಿ ಅಖಿಮೇನಿಯನ್ನರು ಕೂಡ ಒಬ್ಬರು. ಸಾ.ಶ.ಪೂ.6ನೆಯ ಶತಮಾನದಲ್ಲಿ ಈ ಮನೆತನದ ದೊರೆಯಾದ ಡೇರಿಯಸನು ಪ್ರಬಲ ಸಾಮ್ರಾಜ್ಯವೊಂದನ್ನು ಕಟ್ಟಿದನು. ಇವನ ಕಾಲದಲ್ಲಿ ಅವನ ಸಾಮ್ರಾಜ್ಯವು ಭಾರತದ ಗಡಿಯವರೆವಿಗೂ ಹರಡಿತ್ತು. ಸಾ.ಶ.ಪೂ. 4ನೆಯ ಶತಮಾನದಲ್ಲಿ ಮ್ಯಾಸೆಡೋನಿಯಾದ ದೊರೆ ಅಲೆಗ್ಸಾಂಡರ್ ಗ್ರೀಕ್ ನಗರ ರಾಜ್ಯಗಳನ್ನು ಗೆದ್ದು ಪರ್ಶಿಯಾವನ್ನು ವಶಪಡಿಸಿಕೊಂಡನು. ಇದರಿಂದಾಗಿ ಭಾರತದ ಗಡಿಯವರೆವಿಗಿದ್ದ ಪರ್ಶಿಯಾ ಭಾಗವು ಅಲೆಗ್ಸಾಂಡರನ ಕೈವಶವಾಯಿತು. ಪರ್ಶಿಯಾವನ್ನು ಗೆದ್ದ ನಂತರ ಅಲೆಗ್ಸಾಂಡರ್ ಕಂದಾಹಾರ್ ಹಾಗೂ ಹಿಂದುಕುಶ್‌ನ ಮಾರ್ಗವಾಗಿ ಭಾರತವನ್ನು ಪ್ರವೇಶಿಸಿದ. ರಾವಿ ಮತ್ತು ಬಿಯಾಸ್ ನದಿಯವರೆಗೂ ಸಾಗಿದ ಈತನಿಗೆ ಇನ್ನು ಹೆಚ್ಚು ಮುಂದುವರಿಯಲಾಗದೆ ಜೀಲಂ ನದಿಯ ಮೂಲಕ ಭಾರತದ ಗಡಿದಾಟಿ ಹಿಂದಿರುಗುವ ಮಾರ್ಗದಲ್ಲಿ ಬ್ಯಾಬಿಲೋನಿನವರೆವಿಗೆ ಸಾಗಿ ಅಲ್ಲಿ ಮೃತನಾದ.

***ಅಲೆಗ್ಸಾಂಡರ್-ಪೌರವರ ಕದನ :*** *ತಕ್ಷಶಿಲೆಯ ರಾಜನಾದ ಅಂಬಿಯ ಆಮಂತ್ರಣವನ್ನು ಪಡೆದು ಬಂದ ಅಲೆಗ್ಸಾಂಡರನಿಗೆ ಎದುರಾದದ್ದು ಪೌರವ. ಇವನನ್ನು ಪೋರಸ್ ಎಂದೂ ಕರೆಯುತ್ತಾರೆ. ಭೀಕರವಾದ ಚಂಡಮಾರುತ ಹಾಗೂ ಪ್ರವಾಹಭರಿತ ಜೀಲಂನದಿಯ ಎದುರು ಎರಡು ಸೇನೆಗಳು ಮುಖಾಮುಖಿಯಾದವು. ಪ್ರವಾಹದ ಮಧ್ಯದಲ್ಲಿ ನದಿಯನ್ನು ದಾಟುವುದನ್ನು ನಿರೀಕ್ಷಿಸದ ಪೌರವನ ಮೇಲೆ ಅಲೆಗ್ಸಾಂಡರನ ಸೇನೆಯು ಆಕ್ರಮಣ ಮಾಡಿತು. ಹೋರಾಟದಲ್ಲಿ ಅಲೆಗ್ಸಾಂಡರನ ಸೇನೆಯು ಜಯಗಳಿಸಿತು. ಸೆರೆಯಾದ ಪೌರವನನ್ನು ಕುರಿತು ಅಲೆಗ್ಸಾಂಡರ್ 'ನಿನ್ನನ್ನು ನಾನು ಹೇಗೆ ನಡೆಸಿಕೊಳ್ಳಬೇಕು?' ಎಂದು ಕೇಳಿದನು. ಆಗ ಪೌರವನು ಅತ್ಯಂತ ಧೈರ್ಯ, ಸ್ವಾಭಿಮಾನಗಳಿಂದ 'ಒಬ್ಬ ರಾಜ ಮತ್ತೊಬ್ಬ ರಾಜನನ್ನು ಹೇಗೆ ನಡೆಸಿಕೊಳ್ಳಬೇಕೋ ಹಾಗೆ' ಎಂದು ಉತ್ತರಿಸಿದ. ಪೌರವನ ಧೈರ್ಯ ಸಾಹಸಗಳು ಗ್ರೀಕರ ಬರವಣಿಗೆಗಳಲ್ಲಿ ಅಮರವಾಗಿವೆ. ಅಲೆಗ್ಸಾಂಡರ್‌ನ ಆಕ್ರಮಣವು ಮೌರ್ಯರ ರಾಜಪ್ರಭುತ್ವಕ್ಕೆ ಕಾರಣವಾಯಿತು. ಮಹಾಜನಪದಗಳ ನಡುವೆ ಇದ್ದ ವ್ಯಾಪಾರಿ ಸಂಪರ್ಕಗಳು ಈ ಸಂದರ್ಭದಲ್ಲಿ ಕುಸಿದವು. ಆದರೆ ಗ್ರೀಕರ ಪ್ರವೇಶವು ಉತ್ತರ ಭಾರತದ ಕಲೆ ಹಾಗೂ ವಿಜ್ಞಾನದ ಮೇಲೆ ಪರಿಣಾಮವನ್ನುಂಟುಮಾಡಿತು. ಆಗ ರೂಢಿಯಲ್ಲಿದ್ದ ಗಾಂಧಾರ ಶಿಲ್ಪಕಲೆಯು ಗ್ರೀಕರ ಪ್ರಭಾವಕ್ಕೆ ಒಳಗಾಗಿತ್ತು.*

## ಅಭ್ಯಾಸಗಳು

**I. ಬಿಟ್ಟ ಸ್ಥಳಗಳಲ್ಲಿ ಸೂಕ್ತ ಪದಗಳಿಂದ ಭರ್ತಿ ಮಾಡಿ.**

1. ಜೈನರ ಮೊದಲ ತೀರ್ಥಂಕರನು ____________ .
2. ವರ್ಧಮಾನನು ಜನಿಸಿದ ಸ್ಥಳ ____________ .
3. ಮಹಾವೀರನು ತನ್ನ 42ನೆಯ ವಯಸ್ಸಿನಲ್ಲಿ ____________ ಪಡೆದನು.
4. ಮಹಾವೀರನು ತನ್ನ 72ನೆಯ ವಯಸ್ಸಿನಲ್ಲಿ ____________ ಎಂಬಲ್ಲಿ ನಿರ್ವಾಣ ಹೊಂದಿದನು.

©KTBS Not to be republished

5. ಗೌತಮ ಬುದ್ಧನ ಮೊದಲ ಹೆಸರು __________ .

6. ಬುದ್ಧನು ತನ್ನ ಮೊದಲ ಬೋಧನೆಯನ್ನು __________ ದಲ್ಲಿ ಮಾಡಿದನು.

7. ಬುದ್ಧನ ಮೊದಲ ಬೋಧನೆಯನ್ನು __________ ಎಂದು ಕರೆಯಲಾಗಿದೆ.

**II. ಈ ಕೆಳಕಂಡ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

1. ಹೊಸ ಧರ್ಮಗಳ ಉದಯದ ಪೂರ್ವದಲ್ಲಿದ್ದ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಮಹಾವೀರನ ಜೀವನ ಕುರಿತು ಬರೆಯಿರಿ.
3. ತ್ರಿರತ್ನಗಳೆಂದರೇನು?
4. ಜೈನರ ಪಂಗಡಗಳನ್ನು ಹೆಸರಿಸಿರಿ.
5. ಮಧ್ಯಮ ಪಥವೆಂದರೇನು?
6. ಹೊಸ ಧರ್ಮದಿಂದ ಪ್ರೇರಿತರಾದವರು ಯಾರು?
7. ತ್ರಿಪಿಟಿಕಗಳ ಬಗ್ಗೆ ಟಿಪ್ಪಣಿ ಬರೆಯಿರಿ.

**III. ಚಟುವಟಿಕೆಗಳು.**

1. ಮಹಾವೀರನ ಜೀವನ ಚರಿತ್ರೆಯ ಬಗ್ಗೆ ವಿಷಯ ಸಂಗ್ರಹಿಸಿ.
2. ಗೌತಮ ಬುದ್ಧನ ಜೀವನ ಸಂಬಂಧ ಚಿತ್ರಗಳನ್ನು ಸಂಗ್ರಹಿಸಿ.
3. ಧರ್ಮ, ಮತ, ಪಂಥ, ಆಸ್ತಿಕ ಮತ್ತು ನಾಸ್ತಿಕ ಪದಗಳಿಗೆ ಅರ್ಥವನ್ನು ತಿಳಿದುಕೊಳ್ಳಿರಿ.

*****

©KTBS Not to be republished

## ರಾಜ್ಯಶಾಸ್ತ್ರ

## ಅಧ್ಯಾಯ –1

# ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಮುಖ್ಯತೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ರಾಜ್ಯಶಾಸ್ತ್ರದ ಪರಿಕಲ್ಪನೆ.*
- *ರಾಜ್ಯಶಾಸ್ತ್ರವು ಬೆಳವಣಿಗೆಯಾದ ಕ್ರಮ.*
- *ರಾಜ್ಯಶಾಸ್ತ್ರದ ಚಿಂತಕರುಗಳು.*
- *ರಾಜ್ಯಶಾಸ್ತ್ರದ ಪ್ರಾಮುಖ್ಯತೆ.*

ರಾಜ್ಯಶಾಸ್ತ್ರವು ಒಂದು ಸಮಾಜ ವಿಜ್ಞಾನ. ಇದು ಮಾನವನ ಜೀವನದ ರಾಜಕೀಯ ಚಟುವಟಿಕೆಗಳಿಗೆ ಮತ್ತು ರಾಜ್ಯದ ರೂಪರೇಷಗಳಿಗೆ ಸಂಬಂಧಿಸಿದ್ದಾಗಿದೆ. ಇದು ರಾಜ್ಯ ಮತ್ತು ಸರ್ಕಾರಕ್ಕೂ ಸಂಬಂಧಿಸಿದೆ. ರಾಜ್ಯದ ಉಗಮ, ಲಕ್ಷಣ ಹಾಗೂ ರಾಜಕೀಯ ಸಂಸ್ಥೆಗಳ ಅಧ್ಯಯನ ಮಾಡುತ್ತದೆ. ರಾಜ್ಯದ ಬಗೆಗಿನ ಅಧ್ಯಯನವೇ ರಾಜ್ಯಶಾಸ್ತ್ರದ ಮುಖ್ಯ ವಿಷಯವಾಗಿದೆ.

ರಾಜ್ಯಶಾಸ್ತ್ರದ ಮೂಲವನ್ನು ನಾವು ಗ್ರೀಸ್ ದೇಶದಲ್ಲಿ ಕಾಣಬಹುದು. ಗ್ರೀಕರಿಗಿಂತಲೂ ಮೊದಲು ಈಜಿಪ್ಟಿಯನ್ನರು, ಬೆಬಿಲೋನಿಯರು, ಪರ್ಶಿಯನ್ನರು, ಭಾರತೀಯರು ಹಾಗೂ ಚೀನಿಯರು 'ರಾಜನೀತಿಗೆ' ಸಂಬಂಧಿಸಿದಂತೆ ಕೆಲವೊಂದು ವಿಚಾರಗಳನ್ನು ವ್ಯಕ್ತಪಡಿಸಿದ್ದರೂ ಸಹ ಅವರು ರಾಜ್ಯಶಾಸ್ತ್ರವನ್ನು ಒಂದು ಕ್ರಮಬದ್ಧ ಅಧ್ಯಯನವನ್ನಾಗಿ ಅಭಿವೃದ್ಧಿಪಡಿಸಲಿಲ್ಲ. ರಾಜ್ಯಶಾಸ್ತ್ರಕ್ಕೆ ಒಂದು ಸ್ವತಂತ್ರ ವಿಜ್ಞಾನದ ಸ್ಥಾನಮಾನ ಕೊಟ್ಟವರೇ ಗ್ರೀಕರು.

ಗ್ರೀಕ್ ತತ್ವಜ್ಞಾನಿಗಳಾದ ಸಾಕ್ರೆಟೀಸ್ ಮತ್ತು ಆತನ ಶಿಷ್ಯ ಪ್ಲೇಟೋ ರಾಜ್ಯಶಾಸ್ತ್ರದ ಚಿಂತಕರಾಗಿದ್ದರು. ಪ್ಲೇಟೋ ತನ್ನ 'ರಿಪಬ್ಲಿಕ್' ಎಂಬ ಮಹಾಕೃತಿಯಲ್ಲಿ ಪ್ರಥಮ ಬಾರಿಗೆ ರಾಜ್ಯ ಮತ್ತು ಸರ್ಕಾರದ ಸ್ವರೂಪ ಮತ್ತು ಕರ್ತವ್ಯಗಳ ಬಗ್ಗೆ ಚರ್ಚಿಸಿದ್ದಾರೆ. ಆದರೆ ಗ್ರೀಸ್ ದೇಶದ ಮತ್ತೊಬ್ಬ ದಾರ್ಶನಿಕ ಅರಿಸ್ಟಾಟಲನಿಗೆ ರಾಜ್ಯಶಾಸ್ತ್ರದ 'ಪಿತಾಮಹ' ಎಂದು ಗೌರವ ನೀಡಲಾಗಿದೆ, ಏಕೆಂದರೆ, ಅರಿಸ್ಟಾಟಲ್ ರಾಜ್ಯಶಾಸ್ತ್ರ ಅಧ್ಯಯನವನ್ನು ಕ್ರಮಬದ್ಧಗೊಳಿಸಿ ರಾಜ್ಯಶಾಸ್ತ್ರಕ್ಕೆ ತಳಪಾಯ ಹಾಕಿದ ಪ್ರಥಮ ಚಿಂತಕರೆನಿಸಿದ್ದಾರೆ. ಅರಿಸ್ಟಾಟಲ್ ರಾಜ್ಯಶಾಸ್ತ್ರವನ್ನು ಕುರಿತು ಪ್ರಪಂಚದಲ್ಲಿಯೇ ಪ್ರಥಮ ಗ್ರಂಥ 'ಪಾಲಿಟಿಕ್ಸ್' ಎಂಬ ಕೃತಿಯನ್ನು ರಚಿಸಿದನು. ಈ ಕೃತಿಯಲ್ಲಿ ರಾಜ್ಯದ ಉಗಮ, ಬೆಳವಣಿಗೆ ಮತ್ತು ಕಾರ್ಯಗಳ ಬಗ್ಗೆ ಚರ್ಚಿಸಲಾಗಿದೆ. ಕೌಟಿಲ್ಯನ 'ಅರ್ಥಶಾಸ್ತ್ರ' ದಲ್ಲಿಯೂ ರಾಜಕೀಯ ನೀತಿಗಳ ಬಗ್ಗೆ ಬಹಳಷ್ಟು ವಿವರಗಳಿವೆ.

ಪ್ರಾಚೀನ ಗ್ರೀಕರು ರಾಜ್ಯದ ಸಮಸ್ತ ಚಟುವಟಿಕೆಗಳಿಗೂ ಅನ್ವಯಿಸಿ ಪಾಲಿಟಿಕ್ಸ್ (ರಾಜಕಾರಣ) ಎಂಬ ಪದವನ್ನು ಬಳಸುತ್ತಿದ್ದರು. 'ಪಾಲಿಟಿಕ್ಸ್' ಎಂಬ ಪದ 'ನಗರ ರಾಜ್ಯ' (City - State) ಎಂಬ ಅರ್ಥವುಳ್ಳ ಮೂಲ ಗ್ರೀಕ್ ಪದವಾದ 'ಪೊಲಿಸ್' (Polis) ಎಂಬುದರಿಂದ ಹುಟ್ಟಿ ಬಂದಿದೆ. ಗ್ರೀಕರಿಗೆ ನಗರವೇ ರಾಜ್ಯವಾಗಿತ್ತು ಮತ್ತು ನಗರ ರಾಜ್ಯದ ಆಡಳಿತದ ಅಧ್ಯಯನವೇ ರಾಜಕಾರಣವಾಗಿದ್ದಿತು. ಆಧುನಿಕವಾಗಿ ತಜ್ಞರು ರಾಜ್ಯಶಾಸ್ತ್ರ ಎಂದು ಕರೆದಿದ್ದಾರೆ.

ರಾಜ್ಯಶಾಸ್ತ್ರವು (ಪೊಲಿಟಿಕಲ್‌ಸೈನ್ಸ್) ರಾಜ್ಯದ ಮೂಲ, ಬೆಳವಣಿಗೆ, ಸ್ವರೂಪ, ಆಡಳಿತ ಪದ್ಧತಿ, ರಾಜ್ಯದ ಕಾರ್ಯವ್ಯಾಪ್ತಿ, ಪೌರರ ಹಕ್ಕು ಬಾಧ್ಯತೆಗಳು ಮುಂತಾದ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತದೆ. ರಾಜ್ಯಶಾಸ್ತ್ರವು ರಾಜ್ಯದ ಎಲ್ಲ ಮುಖಗಳ ಅಧ್ಯಯನವಾಗಿದೆ.

©KTBS Not to be republished

ರಾಜ್ಯಶಾಸ್ತ್ರವು ರಾಜ್ಯದ ಭೂತ, ವರ್ತಮಾನ ಹಾಗೂ ಭವಿಷ್ಯದ ರಾಜಕೀಯ ಸಂಸ್ಥೆಗಳು, ರಾಜಕೀಯ ಕಾರ್ಯಗಳು ಹಾಗೂ ರಾಜಕೀಯ ಸಿದ್ಧಾಂತಗಳ ಅಧ್ಯಯನವಾಗಿರುತ್ತದೆ. ರಾಜ್ಯ, ಸರ್ಕಾರ ಮತ್ತು ಮಾನವನ ರಾಜಕೀಯ ಚಟುವಟಿಕೆಗಳನ್ನು ಕುರಿತು ಅಧ್ಯಯನ ಮಾಡುವ ವಿಷಯವೇ ರಾಜ್ಯಶಾಸ್ತ್ರವೆಂದು ಸಾಮಾನ್ಯವಾಗಿ ಹೇಳಬಹುದು.

## ರಾಜ್ಯಶಾಸ್ತ್ರದ ಪ್ರಾಮುಖ್ಯತೆ

ಪ್ರಸ್ತುತ ಯುಗದಲ್ಲಿ ರಾಜ್ಯಶಾಸ್ತ್ರದ ಜ್ಞಾನವು ಪ್ರತಿಯೊಬ್ಬರಿಗೂ ಅತ್ಯಂತ ಅವಶ್ಯಕವಾದುದ್ದಾಗಿದೆ. ರಾಜ್ಯವೊಂದರ ಅಭಿವೃದ್ಧಿ ಮತ್ತು ಪ್ರಗತಿಯು ಅಲ್ಲಿನ ಜನಗಳ ಆಲೋಚನೆ, ಜ್ಞಾನ ಮತ್ತು ರಾಜಕೀಯದಲ್ಲಿ ತೊಡಗಿಸಿಕೊಳ್ಳುವಿಕೆಯ ಮೇಲೆ ಅವಲಂಬಿತವಾಗಿರುತ್ತದೆ.

- ರಾಜ್ಯಶಾಸ್ತ್ರವು ರಾಜ್ಯವೊಂದರ ಉಗಮ ಮತ್ತು ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗುತ್ತದೆ. ರಾಜ್ಯದ ಕಾರ್ಯಗಳಲ್ಲಿ ರಾಜಕೀಯ ಚಟುವಟಿಕೆಗಳು ಮತ್ತು ವಿವಿಧ ಸರ್ಕಾರಗಳು ತೊಡಗಿಸಿಕೊಂಡಿರುವುದರ ಬಗ್ಗೆ ಮಾಹಿತಿಯನ್ನು ರಾಜ್ಯಶಾಸ್ತ್ರವು ಒದಗಿಸುತ್ತದೆ.
- ರಾಜ್ಯಶಾಸ್ತ್ರವು ಚಕ್ರಾಧಿಪತ್ಯ, ಸಮಾನತೆ, ನ್ಯಾಯ, ಸ್ವಾತಂತ್ರ್ಯ, ಉತ್ತಮ ಸರ್ಕಾರ, ಯುದ್ಧ ಮತ್ತು ಶಾಂತಿ ಇತ್ಯಾದಿ ಪರಿಕಲ್ಪನೆಗಳ ಉಗಮ ಮತ್ತು ಬೆಳವಣಿಗೆ ಬಗ್ಗೆ ಮಾಹಿತಿ ಒದಗಿಸುತ್ತದೆ.
- ರಾಜ್ಯಶಾಸ್ತ್ರವು ರಾಜ್ಯ ಮತ್ತು ಸರ್ಕಾರಗಳ ರಚನೆ ಮತ್ತು ಕಾರ್ಯಗಳ ಬಗ್ಗೆ ಮಾಹಿತಿ ಒದಗಿಸುತ್ತದೆ.
- ರಾಜ್ಯಶಾಸ್ತ್ರವು ಸರ್ಕಾರದ ಭೂತ ಮತ್ತು ವರ್ತಮಾನ ಕಾಲದ ಚಟುವಟಿಕೆಗಳ ಬೆಳಕಿನಡಿಯಲ್ಲಿ ಭವಿಷ್ಯದ ಚಟುವಟಿಕೆಗಳನ್ನು ಯೋಜಿಸಲು ಸಹಕರಿಸುವುದರ ಜೊತೆಗೆ ಆಧುನಿಕ ಕಲ್ಯಾಣ ರಾಜ್ಯದ ಸ್ಥಾಪನೆಗೆ ಸಹಾಯಕವಾಗುತ್ತದೆ.
- ರಾಜ್ಯಶಾಸ್ತ್ರವು ರಾಜ್ಯದ ಸಂವಿಧಾನ ಮತ್ತು ಕಾನೂನುಗಳ ಬಗೆಗಿನ ಜ್ಞಾನವನ್ನು ಒದಗಿಸುತ್ತದೆ.
- ರಾಜ್ಯಶಾಸ್ತ್ರವು ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಮತ್ತು ಅವುಗಳ ಕಾರ್ಯಗಳ ಬಗ್ಗೆ ತಿಳುವಳಿಕೆ ನೀಡುತ್ತದೆ.
- ರಾಜ್ಯಶಾಸ್ತ್ರವು ಸಾಮಾನ್ಯ ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸುವುದರ ಮೂಲಕ ಸರ್ಕಾರ ಮತ್ತು ಜನಪ್ರತಿನಿಧಿಗಳು ಜಾಗೃತವಾಗಿಯೂ ಮತ್ತು ಸಕ್ರಿಯವಾಗಿ ಇರುವಂತೆ ನೋಡಿಕೊಳ್ಳುತ್ತದೆ.
- ರಾಜ್ಯಶಾಸ್ತ್ರದ ಜ್ಞಾನವು ಉತ್ತಮ ನಾಯಕರು ಮತ್ತು ಸಮಾಜಸೇವಕರುಗಳು ಜನರ ಸಮಸ್ಯೆಗಳನ್ನು ತಿಳಿದು ಪರಿಣಾಮಕಾರಿಯಾದ ಪರಿಹಾರ ಕ್ರಮಗಳನ್ನು ಅನುಸರಿಸಲು ಸಹಾಯಕವಾಗುತ್ತದೆ.
- ರಾಜ್ಯಶಾಸ್ತ್ರದ ಜ್ಞಾನವು ಉತ್ತಮ ನಾಯಕರುಗಳನ್ನು ಮತ್ತು ಉತ್ತಮ ನಾಗರಿಕರನ್ನು ಸೃಷ್ಟಿಸುವಲ್ಲಿ ಸಹಕರಿಸುತ್ತದೆ.
- ರಾಜ್ಯಶಾಸ್ತ್ರವು ರಾಜಕೀಯ ಸಂಸ್ಥೆಗಳಾದಂತಹ ರಾಜಕೀಯ ಪಕ್ಷಗಳು, ಒಕ್ಕೂಟಗಳು, ಸ್ಥಳೀಯ ಸಂಸ್ಥೆಗಳು ಇತ್ಯಾದಿಗಳನ್ನು ತಿಳಿಯಲು ಸಹಾಯಕವಾಗುತ್ತದೆ.
- ಜನರು ಸಕ್ರಿಯವಾಗಿ ರಾಜಕೀಯದಲ್ಲಿ ತೊಡಗಿಸಿಕೊಳ್ಳಲು ಪೂರಕವಾಗುವ ತತ್ವ ಹಾಗೂ ನೀತಿಗಳನ್ನು ಪ್ರೋತ್ಸಾಹಿಸಲು ರಾಜ್ಯಶಾಸ್ತ್ರವು ನೆರವಾಗುತ್ತದೆ.
- ರಾಜ್ಯಶಾಸ್ತ್ರವು ಅಂತಾರಾಷ್ಟ್ರೀಯ ಸಂಬಂಧಗಳ ಬಗೆಗಿನ ಜ್ಞಾನವನ್ನು ನೀಡುವುದರ ಜೊತೆಗೆ ವಿಶೇಷವಾಗಿ ದೇಶದೇಶಗಳ ನಡುವಿನ ಯುದ್ಧಗಳ ಬಗ್ಗೆ ಹಾಗೂ ಶಾಂತಿ ಮತ್ತು ಸಹಕಾರದ ಮಹತ್ವವನ್ನು ತಿಳಿಸುತ್ತದೆ.

© KTBS Not to be republished

ಈ ಮೇಲಿನ ಎಲ್ಲಾ ಕಾರಣಗಳಿಂದಾಗಿ ರಾಜ್ಯಶಾಸ್ತ್ರದ ಅಧ್ಯಯನವು ರಾಜ್ಯವೊಂದರ ಅವಶ್ಯಕತೆ, ಉತ್ತಮ ರಾಜ್ಯಾಡಳಿತ, ನಾಯಕರುಗಳ ಪಾತ್ರ ಹಾಗೂ ಪ್ರಜೆಗಳ ಭಾಗವಹಿಸುವಿಕೆಯ ಸ್ಪಷ್ಟ ಅರಿವನ್ನುಂಟುಮಾಡುತ್ತದೆ. ರಾಜ್ಯಶಾಸ್ತ್ರವು ಪ್ರಜೆಗಳೆಲ್ಲರೂ ಉತ್ತಮ, ಜವಾಬ್ದಾರಿಯುತ, ಸುಸಂಸ್ಕೃತ ಮತ್ತು ಕ್ರಿಯಾಶೀಲ ನಾಗರಿಕರಾಗುವಂತೆ ಸಹಕರಿಸುತ್ತದೆ. ರಾಜ್ಯಶಾಸ್ತ್ರದ ಜ್ಞಾನವು ನ್ಯಾಯಯುತ, ಶಾಂತ, ಪ್ರಗತಿದಾಯಕ ಮತ್ತು ಸುಖಿ ರಾಜ್ಯವನ್ನು ಸಂಸ್ಥಾಪಿಸುವಲ್ಲಿ ಮಹತ್ತರ ಕೊಡುಗೆಯನ್ನು ನೀಡುವುದರ ಮೂಲಕ ಸಹಸ್ರ ಸಹಸ್ರ ಸಂಖ್ಯೆಯ ಜನರ ಕನಸನ್ನು ನನಸಾಗಿಸುತ್ತದೆ.

## ಅಭ್ಯಾಸಗಳು

### I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

1. ರಾಜಕೀಯ ಎಂಬ ಪದ ಉತ್ಪತ್ತಿಗೊಂಡ ಗ್ರೀಕ್ ಪದ ____________ .
2. 'ರಿಪಬ್ಲಿಕ್' ಗ್ರಂಥದ ಕರ್ತೃ ____________ .
3. ಅರಿಸ್ಟಾಟಲ್ ರಾಜ್ಯಶಾಸ್ತ್ರವನ್ನು ಕುರಿತು ರಚಿಸಿದ ಕೃತಿ ____________ .
4. ರಾಜ್ಯಶಾಸ್ತ್ರದ ಬಗೆಗಿನ ಮಾಹಿತಿ ಹೊಂದಿರುವ ಕೌಟಿಲ್ಯನ ಕೃತಿ ____________ .

### II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ರಾಜ್ಯಶಾಸ್ತ್ರ ಎಂದರೇನು?
2. ರಾಜ್ಯಶಾಸ್ತ್ರದ ಕ್ರಮಬದ್ಧ ಅಧ್ಯಯನ ಯಾರಿಂದ ಪ್ರಾರಂಭವಾಯಿತು?
3. ರಾಜ್ಯಶಾಸ್ತ್ರದ ಪಿತಾಮಹರೆಂದು ಯಾರನ್ನು ಕರೆಯುತ್ತಾರೆ?
4. ರಾಜ್ಯಶಾಸ್ತ್ರದ ಒಂದು ವ್ಯಾಖ್ಯಾನ ನೀಡಿ.
5. ರಾಜ್ಯಶಾಸ್ತ್ರದ ಅಧ್ಯಯನದ ಯಾವುದಾದರೊಂದು ಪ್ರಯೋಜನ ತಿಳಿಸಿ?

### III. ಚಟುವಟಿಕೆಗಳು.

1. ಭಾರತದಲ್ಲಿ ಹಿಂದೆ ಇದ್ದ ರಾಜಕೀಯ ವ್ಯವಸ್ಥೆಯನ್ನು ಬಿಂಬಿಸುವ ಚಿತ್ರಪಟಗಳ ಸಂಗ್ರಹ ಪುಸ್ತಕವನ್ನು ಸಿದ್ಧಪಡಿಸಿ.
2. ನಿಮ್ಮ ತರಗತಿಯಲ್ಲಿ ಶಿಕ್ಷಕರ ಸಹಾಯದೊಂದಿಗೆ ಅರಿಸ್ಟಾಟಲನು ರಾಜ್ಯಶಾಸ್ತ್ರದ ಬಗ್ಗೆ ನೀಡಿದ ಹೇಳಿಕೆಯನ್ನು ಚರ್ಚಿಸಿ.
3. 'ಮಾನವನ ಸಾಮಾಜಿಕ ಅವಶ್ಯಕತೆಗಳು ರಾಜ್ಯ ಸೃಷ್ಟಿಗೆ ನಾಂದಿಯಾದವು' ಈ ವಿಚಾರವಾಗಿ ನಿಮ್ಮ ತರಗತಿಯಲ್ಲಿ ವಿಚಾರವಿನಿಮಯದ ಕಾರ್ಯಕ್ರಮವೊಂದನ್ನು ಏರ್ಪಡಿಸಿ.

### IV. ಯೋಜನಾ ಕಾರ್ಯಗಳು (Project Work).

1. ನೀವೊಬ್ಬ ಪುರಾತನ ಗ್ರೀಸ್ ದೇಶದ ಪ್ರಜೆಯೆಂದು ಭಾವಿಸಿಕೊಂಡು ನಗರ ರಾಜ್ಯದ ಯಾವುದಾದರೊಂದು ನಿರ್ದಿಷ್ಟ ವಿಚಾರವೊಂದರ ಬಗ್ಗೆ ಚರ್ಚಿಸಿ.
2. 'ಸರ್ವಾಧಿಕಾರಿ ಧೋರಣೆಯು ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಸಂಸ್ಥೆಗಳನ್ನು ದಮನಗೊಳಿಸುತ್ತದೆ' – ಈ ವಿಚಾರಕ್ಕೆ ಸಂಬಂಧಿಸಿದ ಮಾಹಿತಿ ಮತ್ತು ಚಿತ್ರಪಟಗಳನ್ನು ಸಂಗ್ರಹಿಸಿ.
3. ಮಹಾಕಾವ್ಯಗಳಲ್ಲಿ ಕಾಣಬರುವ ರಾಜಕೀಯ ವಿಚಾರಗಳ ಬಗೆಗಿನ ಮಾಹಿತಿಯನ್ನು ಸಂಗ್ರಹಿಸಿ.

*****

©KTBS Not to be republished

# ಅಧ್ಯಾಯ – 2

# ಸಾರ್ವಜನಿಕ ಆಡಳಿತ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಸಾರ್ವಜನಿಕ ಆಡಳಿತದ ಅರ್ಥ ಮತ್ತು ಪ್ರಾಮುಖ್ಯತೆ.
- ನೇಮಕಾತಿ ಅರ್ಥ ಮತ್ತು ವಿಧಾನಗಳು.
- ಕೇಂದ್ರ ಲೋಕಸೇವಾ ಆಯೋಗ.
- ಕೇಂದ್ರ ಸಚಿವಾಲಯ.
- ಕಾನೂನು ಮತ್ತು ಸುವ್ಯವಸ್ಥೆ.
- ಸಾರ್ವಜನಿಕ ಆಡಳಿತದ ವ್ಯಾಪ್ತಿ.
- ತರಬೇತಿಯ ಅರ್ಥ ಮತ್ತು ವಿಧಗಳು.
- ಕರ್ನಾಟಕ ಲೋಕಸೇವಾ ಆಯೋಗ.
- ರಾಜ್ಯ ಸಚಿವಾಲಯ.

**ಸಾರ್ವಜನಿಕ ಆಡಳಿತ**

ಆಧುನಿಕ ಸಮಾಜವು ಸಂಕೀರ್ಣ ಮತ್ತು ಶೀಘ್ರಗತಿಯ ಬದಲಾವಣೆಗಳಿಗೆ ಒಳಗಾಗುತ್ತಿರುವುದರಿಂದ ಸಾರ್ವಜನಿಕ ಆಡಳಿತವು ಪ್ರಮುಖ ಸ್ಥಾನವನ್ನು ಹೊಂದಿದೆ. ಸಾರ್ವಜನಿಕ ಆಡಳಿತದಿಂದ ಸಮಾಜಕ್ಕೆ ಆಗುವ ಪ್ರಯೋಜನಗಳ ಅರಿವು ಮತ್ತು ಮಹತ್ವವು ದಿನೇ ದಿನೇ ಹೆಚ್ಚುತ್ತಿದೆ. ಹಾಗಾಗಿ ಸಾರ್ವಜನಿಕ ಆಡಳಿತವು ಮಾನವ ಸಮಾಜವನ್ನು ನಾಗರಿಕ ಸಮಾಜವನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಈ ಬಗೆಯ ಆಡಳಿತಾತ್ಮಕ ಪ್ರಯೋಗಗಳು ಮಾನವ ಸಮಾಜದಷ್ಟೇ ಪುರಾತನವಾದವು. ಆದರೆ ಸಾರ್ವಜನಿಕ ಆಡಳಿತದ ಅಧ್ಯಯನದ ಬೆಳವಣಿಗೆ ವಿಶೇಷವಾಗಿ ಅಮೆರಿಕಾದಲ್ಲಿ ಪ್ರಾರಂಭವಾಯಿತು. ಅಮೆರಿಕಾದ ಮಾಜಿ ಅಧ್ಯಕ್ಷರಾದ ವುಡ್ರೋವಿಲ್ಸನ್‌ರನ್ನು ಸಾರ್ವಜನಿಕ ಆಡಳಿತದ ಪಿತಾಮಹ ಎಂದು ಕರೆಯಲಾಗಿದೆ. ಪ್ರಸ್ತುತ ಸಾರ್ವಜನಿಕ ಆಡಳಿತವು ಎಲ್ಲಾ ರಾಷ್ಟ್ರಗಳಲ್ಲಿ ಒಂದು ಪ್ರಮುಖ ಅಧ್ಯಯನ ವಿಷಯವಾಗಿ ಬೆಳವಣಿಗೆ ಹೊಂದುತ್ತಿದೆ.

'ಸಾರ್ವಜನಿಕ ಆಡಳಿತ' ಎಂಬುದು ಆಡಳಿತ ಎಂಬ ವ್ಯಾಪಕ ವ್ಯಾಪ್ತಿಯ ಕ್ಷೇತ್ರದ ಒಂದು ನಿರ್ದಿಷ್ಟ ಭಾಗವಾಗಿದೆ. ಸಾರ್ವಜನಿಕ ಎನ್ನುವ ಪದ ಸರ್ಕಾರಿ (Government) ಎನ್ನುವ ಅರ್ಥ ಸೂಚಿಸುತ್ತದೆ. ಸಾರ್ವಜನಿಕ ಆಡಳಿತ ಎಂಬ ಪದವನ್ನು 1812ರಲ್ಲಿ ಮೊಟ್ಟಮೊದಲ ಬಾರಿಗೆ ಅಲೆಕ್ಸಾಂಡರ್ ಹ್ಯಾಮಿಲ್ಟನ್‌ರು ಬಳಸಿದರು. ಅನಂತರ ಹಲವು ಲೇಖಕರು ತಮ್ಮ ಪರಿಭಾಷೆಯ ಅರ್ಥಗಳಲ್ಲಿ ವ್ಯಾಖ್ಯಾನಿಸಿದ್ದಾರೆ.

1. ವುಡ್ರೋವಿಲ್ಸನ್‌ರ ಪ್ರಕಾರ "ಕಾನೂನಿನ ಸಮಗ್ರ ಮತ್ತು ಕ್ರಮಬದ್ಧ ಜಾರಿಗೊಳಿಸುವಿಕೆ ಸಾರ್ವಜನಿಕ ಆಡಳಿತವಾಗಿರುತ್ತದೆ."
2. ಫಿಫ್ನರ್ ಪ್ರಕಾರ "ಸಾರ್ವಜನಿಕ ನೀತಿಯನ್ನು ಜಾರಿಗೊಳಿಸುವ ಸಾಮೂಹಿಕ ಯತ್ನದ ಸಂಯೋಜನೆಯೇ ಸಾರ್ವಜನಿಕ ಆಡಳಿತವಾಗಿರುತ್ತದೆ."
3. ಲೂಥರ್ ಗುಲಿಕ್‌ರ ಪ್ರಕಾರ, "ಸಾರ್ವಜನಿಕ ಆಡಳಿತವು ಸರ್ಕಾರ ಕಾರ್ಯಗಳನ್ನು ನಿರ್ವಹಿಸುವ ಕಾರ್ಯಾಂಗ ಶಾಖೆಗೆ ಸಂಬಂಧಿಸಿದೆ."

ಒಟ್ಟಿನಲ್ಲಿ ಸರ್ಕಾರ ಇಡೀ ವ್ಯವಸ್ಥೆಯ ಸಮಸ್ತ ಕಾರ್ಯಾಚರಣೆಗೆ ಸಂಬಂದಿಸಿರುತ್ತದೆ. ರಾಜ್ಯದ ದೈನಂದಿನ ವ್ಯವಹಾರಗಳನ್ನು ನಡೆಸಿಕೊಂಡು ಹೋಗುವ ಸರ್ಕಾರದ ಅಂಗವೇ ಸಾರ್ವಜನಿಕ ಆಡಳಿತವಾಗಿರುತ್ತದೆ.

© KTBS Not to be republished

## ಪ್ರಾಮುಖ್ಯತೆ

ರಕ್ಷಣಾ ರಾಜ್ಯದಿಂದ ಕಲ್ಯಾಣ ರಾಜ್ಯವಾಗಿ, ಬದಲಾವಣೆ ಆಗುತ್ತಿರುವ ರಾಜ್ಯದ ಸ್ವರೂಪಕ್ಕೆ ತಕ್ಕಂತೆ ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆಯು ಹೆಚ್ಚುತ್ತಿದೆ. ಇದರಿಂದಾಗಿ ಸಾರ್ವಜನಿಕ ಆಡಳಿತ ಕ್ಷೇತ್ರವೂ ವಿಸ್ತಾರವಾಗುತ್ತದೆ. ಮಾನವನ ಸರ್ವಾಂಗೀಣ ಅಭಿವೃದ್ಧಿ ಹಾಗೂ ಮಾನವ ಸಮಾಜದ ಅಳಿವು ಮತ್ತು ಉಳಿವು ಸಾರ್ವಜನಿಕ ಆಡಳಿತವನ್ನು ಅವಲಂಬಿಸಿದೆ.

ವ್ಯಕ್ತಿಯು ಹುಟ್ಟಿನಿಂದ ಮರಣದವರೆಗೆ ಸಾರ್ವಜನಿಕ ಆಡಳಿತ ವ್ಯವಸ್ಥೆಗೆ ಒಳಪಟ್ಟಿರುತ್ತಾನೆ. ಇದು ರಾಜ್ಯ ವ್ಯವಸ್ಥೆಯ ಹೃದಯವಾಗಿದೆ. ಸಾರ್ವಜನಿಕ ಆಡಳಿತ ಇಲ್ಲದ ರಾಜ್ಯದ ಕಲ್ಪನೆಯೇ ಅಸಾಧ್ಯವಾಗಿದೆ. ಆದ್ದರಿಂದ ಆಧುನಿಕ ರಾಜ್ಯವನ್ನು ಆಡಳಿತಾತ್ಮಕ ರಾಜ್ಯ ಎಂದು (Administrative State) ಪರಿಗಣಿಸಲಾಗಿದೆ. ಕೆಳಕಂಡ ಅಂಶಗಳು ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆಯನ್ನು ತಿಳಿಸುತ್ತಿವೆ.

**1) ಸಾರ್ವಜನಿಕ ಆಡಳಿತವು ಸರ್ಕಾರದ ಆಧಾರ ಸ್ತಂಭವಾಗಿದೆ.** ರಾಜ್ಯದಲ್ಲಿ ಶಾಸಕಾಂಗ ಹಾಗೂ ನ್ಯಾಯಾಂಗವಿಲ್ಲದೆ ಸರ್ಕಾರವಿರಬಹುದು. ಆದರೆ ಆಡಳಿತಾಂಗವಿಲ್ಲದೆ ಸರ್ಕಾರ ಅಥವಾ ರಾಜ್ಯ ಅಸ್ತಿತ್ವದಲ್ಲಿ ಇರಲು ಸಾಧ್ಯವಿಲ್ಲ. ಸಾರ್ವಜನಿಕ ಅಥವಾ ಸರ್ಕಾರದ ನೀತಿಗಳನ್ನು ಕಾರ್ಯಗತಗೊಳಿಸಲು ಆಡಳಿತಾತ್ಮಕ ಯಂತ್ರ ಎಲ್ಲ ರಾಷ್ಟ್ರಗಳಲ್ಲಿಯೂ ಅತ್ಯವಶ್ಯಕವಾಗಿರುತ್ತದೆ. ಹಾಗಾಗಿ ಪಾಲ್ ಅಪಲ್‌ಬಿಯವರು "ಆಡಳಿತವಿಲ್ಲದೆ ಸರ್ಕಾರ ಕೇವಲ ಒಣ ಹರಟೆಯ ಕೂಟವಾಗುವುದೆಂದು" ಅಭಿಪ್ರಾಯಪಟ್ಟಿದ್ದಾರೆ.

**2) ಸಾರ್ವಜನಿಕ ಹಿತಾಸಕ್ತಿಗಾಗಿ ವಿವಿಧ ಸೇವೆ ಸಲ್ಲಿಸುತ್ತಿದೆ.** ಸಾರ್ವಜನಿಕ ಆಡಳಿತ ವ್ಯವಸ್ಥೆಯು ವ್ಯಕ್ತಿಯು ಗರ್ಭದಲ್ಲಿರುವಾಗಿನಿಂದ ಹಿಡಿದು ಅವನ ಮರಣದವರೆಗೂ ಅಗತ್ಯವಾದ ಸೇವೆಗಳನ್ನು ಒದಗಿಸುತ್ತದೆ. ಶಾಂತಿ ಹಾಗೂ ಸಮೃದ್ಧತೆಯನ್ನು ಕಾಪಾಡಿ ಜನರ ಪ್ರಾಣ ಹಾಗೂ ಆಸ್ತಿ ರಕ್ಷಣೆ, ನ್ಯಾಯ ಒದಗಿಸುವುದು, ಶಿಕ್ಷಣ ನೀಡುವುದು, ಉದ್ಯೋಗಾವಕಾಶ ಕಲ್ಪಿಸುವುದು, ಅವಶ್ಯಕ ವಸ್ತುಗಳ ಪೂರೈಸುವುದು, ದೇಶ ಸಂರಕ್ಷಣೆ, ಆರ್ಥಿಕ ಸಮಾನತೆಯನ್ನು ಉಂಟುಮಾಡುವುದು. ಹೀಗೆ ಹಲವು ರೀತಿಯ ಸೇವೆಗಳನ್ನು ಒದಗಿಸುತ್ತದೆ.

**3) ಕಾನೂನು ಮತ್ತು ನೀತಿಗಳ ಅನುಷ್ಠಾನ.** ಕಾನೂನು ಮತ್ತು ನೀತಿಗಳನ್ನು ಜಾರಿಗೊಳಿಸುವುದರ ಮೂಲಕ ಸಾರ್ವಜನಿಕ ಆಡಳಿತವು ಸಮಾಜದಲ್ಲಿ ಜನರ ಚಟುವಟಿಕೆಗಳನ್ನು ನಿಯಂತ್ರಿಸಿ ಕಾನೂನು ಹಾಗೂ ವ್ಯವಸ್ಥೆಯನ್ನು ಕಾಪಾಡುತ್ತದೆ. ಸಾರ್ವಜನಿಕ ಆಡಳಿತವು ನಿಷ್ಠೆ ಹಾಗೂ ದಕ್ಷತೆಯಿಂದ ಕಾರ್ಯನಿರ್ವಹಿಸದಿದ್ದರೆ ಉತ್ತಮ ನೀತಿಗಳ ಗುರಿಗಳು ಕೇವಲ ಕಾಗದದ ಘೋಷಣೆಗಳಾಗಿ ಉಳಿಯುತ್ತದೆ.

**4) ಸಾಮಾಜಿಕ ಭದ್ರತೆಯನ್ನು ಕಾಪಾಡಲು ಅಗತ್ಯ.** ಸಾರ್ವಜನಿಕ ಆಡಳಿತವು ಸಾಮಾಜಿಕ ಭದ್ರತೆಯ ಒಂದು ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಸರ್ಕಾರಗಳು ಬದಲಾವಣೆಯಾದರೂ ಸಾರ್ವಜನಿಕ ಆಡಳಿತ ಶಾಶ್ವತ ವ್ಯವಸ್ಥೆಯಾಗಿರುವುದರಿಂದ ಇದು ಆಡಳಿತಕ್ಕೆ ಸ್ಥಿರತೆಯನ್ನು ಒದಗಿಸುತ್ತದೆ. ಇದರಿಂದಾಗಿ ಆಡಳಿತದ ಕಾರ್ಯಗಳು ಸುಗಮವಾಗಿ ನಿರ್ವಹಣೆಯಾಗಲು ಸಾಧ್ಯವಾಗುತ್ತದೆ. ಉತ್ತಮ ಆಡಳಿತ ವ್ಯವಸ್ಥೆ ಇಲ್ಲವಾದಲ್ಲಿ ಅತ್ಯಂತ ಪ್ರಬಲ ರಾಷ್ಟ್ರವು ಕುಸಿದು ಬೀಳುತ್ತದೆ. ಉದಾ: ಪ್ರಾಚೀನ ರೋಮ್ ಸಾಮ್ರಾಜ್ಯ ಅಧಃಪತನವಾಗಿರುವುದು. ಸಾರ್ವಜನಿಕ ಆಡಳಿತವು ಸಮಾಜದ ಸಮಸ್ಯೆಗಳನ್ನು ಪರಿಹರಿಸಿ, ಸಮಾಜದಲ್ಲಿ ಒಗ್ಗಟ್ಟು ಹಾಗೂ ಸಾಮರಸ್ಯವನ್ನು ಉಂಟುಮಾಡುವಲ್ಲಿ ಮುಖ್ಯ ಪಾತ್ರವಹಿಸುತ್ತದೆ.

**5) ಶಾಸಕಾಂಗ ಮತ್ತು ಕಾರ್ಯಾಂಗಕ್ಕೂ ಸಹಾಯ ಮಾಡುತ್ತದೆ.** ಸಾರ್ವಜನಿಕ ಆಡಳಿತವು ಶಾಸಕಾಂಗ ರೂಪಿಸಿದ ಸಾರ್ವಜನಿಕ ನೀತಿಗಳನ್ನು ಕಾರ್ಯರೂಪಕ್ಕೆ ತರಲು ಸಹಾಯ ಮಾಡುತ್ತದೆ. ಜೊತೆಗೆ ಸರ್ಕಾರಗಳು ತಮ್ಮ ನೀತಿಗಳನ್ನು ರೂಪಿಸಲು ಅಗತ್ಯವಾದ ಅಂಕಿ ಅಂಶಗಳನ್ನು ಹಾಗೂ ಸಲಹೆಗಳನ್ನು ನೀಡುತ್ತದೆ. ಈ ಮೂಲಕ ಆಡಳಿತಾಂಗ ಕೇವಲ ನೀತಿ ಅನುಷ್ಠಾನದ ಜೊತೆಗೆ ನೀತಿ ರಚನಾ ಕಾರ್ಯದಲ್ಲೂ ಪ್ರಮುಖ

©KTBS Not to be republished

ಪಾತ್ರವಹಿಸುತ್ತದೆ. ನಿಯೋಜಿತ ಶಾಸನದಲ್ಲಿ ಆಡಳಿತಾಂಗವು ಶಾಸನಗಳಿಗೆ ಅಗತ್ಯ ವಿವರಗಳನ್ನು ತುಂಬುವ ಮೂಲಕ ಕಾರ್ಯಾಂಗಕ್ಕೆ ಸಹಾಯ ಮಾಡುತ್ತದೆ.

**ವ್ಯಾಪ್ತಿ :** ಸಾರ್ವಜನಿಕ ಆಡಳಿತದ ವ್ಯಾಪ್ತಿಯ ಕುರಿತು ಚಿಂತಕರಲ್ಲಿ ಭಿನ್ನಾಭಿಪ್ರಾಯಗಳಿವೆ. ವುಡ್ರೋವಿಲ್ಸನ್, ಎಲ್.ಡಿ. ವೈಟ್ ಮುಂತಾದವರು ವ್ಯಾಪಕ ದೃಷ್ಟಿಕೋನವನ್ನು ಹೊಂದಿದೆ ಎಂದು ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ ಸರಕಾರದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಎಲ್ಲಾ ಕಾರ್ಯಚಟುವಟಿಕೆಗಳನ್ನು ಸಾರ್ವಜನಿಕ ಆಡಳಿತವು ಒಳಗೊಳ್ಳುತ್ತದೆ.

ಲೂಥರ್ ಗುಲಿಕ್, ಸೈಮನ್ ಮುಂತಾದವರು ಸಂಕುಚಿತ ದೃಷ್ಟಿಕೋನವನ್ನು ಹೊಂದಿರುತ್ತದೆ ಎಂದು ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ ಸಾರ್ವಜನಿಕ ಆಡಳಿತದ ವ್ಯಾಪ್ತಿಯು ಕೇವಲ ಸರ್ಕಾರದ ಅಂಗವಾದ ಕಾರ್ಯಾಂಗದ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

**ಪೋಸ್ಡ್‌ಕಾರ್ಬ್ (POSD CORB) ದೃಷ್ಟಿಕೋನ**

ಲೂಥರ್ ಗುಲಿಕ್‌ರು ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು **"ಪೋಸ್ಡ್‌ಕಾರ್ಬ್" (**POSD CORB**)** ಎಂಬ ಇಂಗ್ಲಿಷ್ ಪದದಲ್ಲಿ ಸೂಚಿಸಿದ್ದಾರೆ. ಇಂಗ್ಲಿಷ್ ಪದದ ಪ್ರತಿಯೊಂದು ಅಕ್ಷರವೂ ಸಾರ್ವಜನಿಕ ಆಡಳಿತದ ಒಂದೊಂದು ಕಾರ್ಯವನ್ನು ಸೂಚಿಸುತ್ತದೆ.

**1) P–ಯೋಜನೆ (Planning):** ಸರ್ಕಾರಿ ಯಂತ್ರ ಕೈಗೊಳ್ಳಬೇಕಾದ ಕಾರ್ಯಸೂಚಿ, ನಿರ್ವಹಿಸಬೇಕಾಗಿರುವ ಕಾರ್ಯಗಳು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರಲು ವಿಧಾನಗಳನ್ನು ಕುರಿತಂತೆ ಸ್ಥೂಲ ರೂಪರೇಷೆಯ ಯೋಜನೆ ಸಿದ್ಧಪಡಿಸುವುದು.

**2) O–ಸಂಘಟನೆ (Organisation):** ಉದ್ದೇಶಿತ ಗುರಿ ಸಾಧನೆಗಾಗಿ ಇಲಾಖೆ, ನಿಗಮ, ವಿಭಾಗ, ಉಪವಿಭಾಗ, ಮುಂತಾದ ಆಡಳಿತ ವ್ಯವಸ್ಥೆಯನ್ನು ರೂಪಿಸುವುದು ಮತ್ತು ನಿರ್ವಹಿಸಬೇಕಾದ ಕಾರ್ಯಗಳನ್ನು ವಿವಿಧ ಇಲಾಖೆಗಳಿಗೆ ಹಂಚುವುದು.

**3) S–ಸಿಬ್ಬಂದಿ ವ್ಯವಸ್ಥೆ (Staffing):** ಆಡಳಿತ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಾದ ಸಿಬ್ಬಂದಿಯ ನೇಮಕ, ತರಬೇತಿ ಹಾಗೂ ಸೇವಾ ನಿಯಮಗಳನ್ನು ನಿರ್ಧರಿಸುವುದು.

**4) D–ನಿರ್ದೇಶನ (Direction) :** ಸರ್ಕಾರದ ವಿವಿಧ ಇಲಾಖೆಗಳಿಗೆ ಆದೇಶ ಹಾಗೂ ನಿರ್ದೇಶನ ನೀಡುವುದು ಮತ್ತು ತೀರ್ಮಾನ ಕೈಗೊಳ್ಳುವುದು.

**5) Co–ಸಂಯೋಜನೆ (Co-ordination):** ಸರ್ಕಾರದ ವಿವಿಧ ಇಲಾಖೆಗಳಲ್ಲಿ ಘರ್ಷಣೆ, ಭಿನ್ನಾಭಿಪ್ರಾಯಗಳನ್ನು ನಿವಾರಿಸಿ ಅವುಗಳ ಕಾರ್ಯಗಳನ್ನು ಸಂಯೋಜನೆಗೊಳಿಸುವುದು.

**6) R–ವರದಿ (Reporting):** ಉನ್ನತಾಧಿಕಾರಿಗಳಿಗೆ ಅಧೀನಾಧಿಕಾರಿಗಳು ವಿವಿಧ ಇಲಾಖೆಗಳ ಕಾರ್ಯ ಚಟುವಟಿಕೆಗಳ ಬಗ್ಗೆ ವರದಿ ಸಲ್ಲಿಸುವುದು ಮತ್ತು ದಾಖಲೆ, ಸಂಶೋಧನೆ ಮತ್ತು ತನಿಖೆಯ ಮೂಲಕ ಶಾಸಕಾಂಗಕ್ಕೆ ವರದಿ ನೀಡುವುದು.

**7) B–ಆಯವ್ಯಯ (Budgeting):** ಹಣಕಾಸಿನ ಯೋಜನೆ, ಆಯವ್ಯಯ, ಲೆಕ್ಕಾಚಾರ, ಲೆಕ್ಕಪರಿಶೋಧನೆ, ಮುಂತಾದವುಗಳ ನಿರ್ವಹಣೆಯಾಗಿರುತ್ತದೆ.

ಸಾರ್ವಜನಿಕ ಆಡಳಿತದ ವ್ಯಾಪ್ತಿ ಇತ್ತೀಚಿನ ದಿನಗಳಲ್ಲಿ ವ್ಯಾಪಕವಾಗಿ ಹೆಚ್ಚುತ್ತಿದೆ. ಇದು ರಕ್ಷಣಾತ್ಮಕ ಮತ್ತು ನಿಯಂತ್ರಣಾತ್ಮಕ ಚಟುವಟಿಕೆಗಳನ್ನು ನಿರ್ವಹಿಸುತ್ತದೆ. ನಾಗರಿಕ ಸಮಾಜ ಬೆಳೆದಷ್ಟು ಸಾರ್ವಜನಿಕ ಆಡಳಿತದ ವ್ಯಾಪ್ತಿ ವಿಸ್ತರಣೆಯಾಗುತ್ತದೆ. ಜನರ ಅಪೇಕ್ಷೆ ಮತ್ತು ಆಕಾಂಕ್ಷೆಗಳು ಇದರ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತೃತಗೊಳಿಸಿವೆ.

©KTBS Not to be republished

## ನೇಮಕಾತಿ (Recruitment)

ಸಾರ್ವಜನಿಕ ಆಡಳಿತದ ಯಶಸ್ವಿಗೆ ಪರಿಣಾಮಕಾರಿ ಸಿಬ್ಬಂದಿ / ಅಧಿಕಾರಿಗಳು ಅವಶ್ಯಕವಾಗಿರುತ್ತದೆ. ಈ ಸಿಬ್ಬಂದಿ/ಅಧಿಕಾರಿಗಳನ್ನು ಕ್ರಮಬದ್ಧ ರೀತಿಯಲ್ಲಿ ಆಯ್ಕೆ ಮಾಡಬೇಕಾಗುತ್ತದೆ. ಆಯ್ಕೆ ಮಾಡುವಲ್ಲಿ ಹಲವಾರು ಪ್ರಕ್ರಿಯೆಗಳನ್ನು ಅನುಸರಿಸಬೇಕಾಗುತ್ತದೆ. ಈ ಪ್ರಕ್ರಿಯೆಗಳನ್ನು ನೇಮಕಾತಿ ಪ್ರಕ್ರಿಯೆಯಲ್ಲಿ ಗಮನಿಸಬಹುದಾಗಿದೆ.

ಉತ್ತಮ ಮತ್ತು ದಕ್ಷ ಸಾರ್ವಜನಿಕ ಆಡಳಿತವು ನೇಮಕಾತಿ ಮತ್ತು ಅದರ ವಿಧಾನಗಳನ್ನು ಅವಲಂಬಿಸಿದೆ. ಅರ್ಹ, ದಕ್ಷ ಹಾಗೂ ಪ್ರಾಮಾಣಿಕ ವ್ಯಕ್ತಿಯನ್ನು ಆಡಳಿತಕ್ಕೆ ನೇಮಿಸಿಕೊಂಡಾಗ ಅವರು ಕ್ರೀಯಾಶೀಲತೆ, ಬುದ್ಧಿವಂತಿಕೆ ಮತ್ತು ಸರಿಯಾದ ರೀತಿಯಲ್ಲಿ ಸಾರ್ವಜನಿಕ ಆಡಳಿತವನ್ನು ನಡೆಸಿ ಅಭಿವೃದ್ಧಿಗೆ ಪ್ರಯತ್ನಿಸುತ್ತಾರೆ. ನೇಮಕಾತಿ ವಿಧಾನವು ಹೆಚ್ಚು ಸಮರ್ಪಕವೂ, ವೈಜ್ಞಾನಿಕವೂ ಆಗಿದ್ದಾಗ ದಕ್ಷ ಸಿಬ್ಬಂದಿ ವರ್ಗವನ್ನು ಹೊಂದಿ ಸಾರ್ವಜನಿಕ ಆಡಳಿತವನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾಗುತ್ತದೆ.

ನೇಮಕಾತಿಯು ಸಿಬ್ಬಂದಿ ಆಡಳಿತದಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ಹೊಂದಿದೆ. ಓ.ಜಿ. ಸ್ಟಾಲ್‌ರವರ ಪ್ರಕಾರ ನೇಮಕಾತಿಯು ಸಾರ್ವಜನಿಕ ಸಿಬ್ಬಂದಿ ರಚನೆಯ ಅಡಿಗಲ್ಲಾಗಿರುತ್ತದೆ.

## ನೇಮಕಾತಿ ವಿಧಾನಗಳು

ಎ) ನೇರ ನೇಮಕಾತಿ   ಬಿ) ಆಂತರಿಕ ನೇಮಕಾತಿ (ಬಡ್ತಿ ಮೂಲಕ ನೇಮಕಾತಿ)

**ನೇರ ನೇಮಕಾತಿ :** ನೇಮಕಾತಿ ವಿಧಾನಗಳಲ್ಲಿ ನೇರ ನೇಮಕಾತಿ ಜನಪ್ರಿಯ ಹಾಗೂ ವೈಜ್ಞಾನಿಕ ವಿಧಾನವಾಗಿದೆ. ಅರ್ಹ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನಿಶ್ಚಿತ ರೀತಿಯಲ್ಲಿ ಆಯ್ಕೆ ಮಾಡುವುದೇ ನೇರ ನೇಮಕಾತಿಯಾಗಿರುತ್ತದೆ. ಈ ಮೂಲಕ ಸೇವೆಗೆ ಸೇರಬೇಕಾದ ಅಭ್ಯರ್ಥಿಗಳು ಕೆಲವು ಸಾಮಾನ್ಯ ಅರ್ಹತೆಗಳನ್ನು ಹಾಗೂ ವಿಶೇಷ ಅರ್ಹತೆಗಳನ್ನು ಹೊಂದಿರಬೇಕು.

**ಆಂತರಿಕ ನೇಮಕಾತಿ :** ಸರ್ಕಾರಿ ಸೇವೆಯಲ್ಲಿ ಇದ್ದವರಲ್ಲಿ ಅರ್ಹರಾದವರನ್ನು ಮೇಲ್ದರ್ಜೆಯ ಹುದ್ದೆಗಳಿಗೆ ಆಯ್ಕೆ ಮಾಡುವುದೇ ಆಂತರಿಕ ನೇಮಕಾತಿಯಾಗಿರುತ್ತದೆ. ಇಂತಹ ಪದ್ಧತಿಯನ್ನು ಸಾಮಾನ್ಯವಾಗಿ ಎಲ್ಲಾ ರಾಷ್ಟ್ರಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಪದ್ಧತಿಯು ಭಾರತದಲ್ಲಿಯೂ ಜಾರಿಯಲ್ಲಿದೆ.

## ತರಬೇತಿ

ಸಾರ್ವಜನಿಕ ಸಿಬ್ಬಂದಿಯ ದಕ್ಷತೆಯು ಅವರು ಪಡೆದಿರುವ ತರಬೇತಿ ಮಟ್ಟವನ್ನು ಅವಲಂಬಿಸಿರುತ್ತದೆ. ಆಧುನಿಕ ರಾಜ್ಯದ ಆಡಳಿತ ಕಾರ್ಯಗಳು ಕ್ಲಿಷ್ಟವಾಗಿರುವುದರಿಂದ ಅಭ್ಯರ್ಥಿಗಳು ತಾವು ನಿರ್ವಹಿಸಬೇಕಾದ ಕಾರ್ಯಗಳ ಕುರಿತು ಸರಿಯಾದ ತಿಳುವಳಿಕೆ ಪಡೆಯಲು ತರಬೇತಿ ಅವಶ್ಯಕವಾಗಿದೆ. ವ್ಯವಸ್ಥಿತವಾದ ತರಬೇತಿಯಿಂದ ಮಾತ್ರ ನೌಕರರನ್ನು ತಮ್ಮ ದಕ್ಷ ಕಾರ್ಯನಿರ್ವಹಣೆಗೆ ಅಗತ್ಯವಾದ ಜ್ಞಾನವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

ನಿರ್ದಿಷ್ಟ ಕಾರ್ಯನಿರ್ವಹಿಸಲು ಅಗತ್ಯವಾದ ಜ್ಞಾನ ಹಾಗೂ ಪರಿಣಿತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವುದೇ ತರಬೇತಿಯಾಗಿರುತ್ತದೆ. ತರಬೇತಿಯು ಉದ್ಯೋಗಿಗಳಿಗೆ ತಾವು ನಿರ್ವಹಿಸಬೇಕಾಗಿರುವ ಕಾರ್ಯಗಳ ಬಗ್ಗೆ ತಾತ್ವಿಕವಾಗಿ, ಪ್ರಾಯೋಗಿಕವಾಗಿ, ಅರಿವು ಮತ್ತು ಜ್ಞಾನವನ್ನು ನೀಡುತ್ತದೆ.

ಸಾರ್ವಜನಿಕ ಆಡಳಿತದಲ್ಲಿ ತರಬೇತಿಗೆ ವಿಶಿಷ್ಟ ಸ್ಥಾನವಿದೆ. ನಿರಂತರವಾಗಿ ಹೊಸ ಕ್ಲಿಷ್ಟ ಮತ್ತು ತಾಂತ್ರಿಕ ಕಾರ್ಯಗಳನ್ನು ನಿರ್ವಹಿಸಬೇಕಾಗಿರುವುದರಿಂದ ಆಧುನಿಕ ಸರ್ಕಾರದಲ್ಲಿ ತರಬೇತಿಯ ಪ್ರಾಮುಖ್ಯತೆ ಹೆಚ್ಚುತ್ತಿದೆ. ತರಬೇತಿಯು ನಿರಂತರವಾದ ಪ್ರಕ್ರಿಯೆಯಾಗಿರುತ್ತದೆ.

©KTBS Not to be republished

**ತರಬೇತಿಯ ವಿಧಗಳು**

ತರಬೇತಿಯ ವಿಧಾನ, ಅವಧಿ, ಹಂತ, ತರಬೇತಿ ನೀಡುವ ಸಂಸ್ಥೆ ಮತ್ತು ಉದ್ದೇಶಗಳನ್ನು ಆಧರಿಸಿ ತರಬೇತಿಯನ್ನು ಮುಖ್ಯವಾಗಿ 5 ವಿಧಗಳಾಗಿ ವಿಂಗಡಿಸಲಾಗಿದೆ.

**i) ಔಪಚಾರಿಕ ಮತ್ತು ಅನೌಪಚಾರಿಕ ತರಬೇತಿ:** ನೌಕರರು ಕಾರ್ಯ ನಿರ್ವಹಿಸಬೇಕಾದ ಕಾರ್ಯಕ್ಕೆ ಪೂರ್ವಭಾವಿಯಾಗಿ ಸಿದ್ಧಪಡಿಸಿದ ಕ್ರಮಬದ್ಧ ಯೋಜನೆಗಳಿಂದ ಪಡೆದು, ಕಾರ್ಯನಿರ್ವಹಿಸುವುದು ಔಪಚಾರಿಕ ತರಬೇತಿಯಾಗಿರುತ್ತದೆ. ತರಬೇತಿಯನ್ನು ಪರಿಣಿತರ ಮಾರ್ಗದರ್ಶನದಲ್ಲಿ ನೀಡಲಾಗುವುದು.

ಅನೌಪಚಾರಿಕ ತರಬೇತಿ ಎಂದರೆ, ನೌಕರರು ಕಛೇರಿಯಲ್ಲಿ ಕಾರ್ಯನಿರ್ವಹಿಸುವ ಮೂಲಕ ಪಡೆಯುವ ತರಬೇತಿಯಾಗಿರುತ್ತದೆ. ನೌಕರರು ಈ ತರಬೇತಿಯನ್ನು ತಮ್ಮ ದೈನಂದಿನ ಕಛೇರಿ ಕಾರ್ಯಗಳನ್ನು ನಿರ್ವಹಿಸುವ ಮೂಲಕ ಪಡೆಯುತ್ತಾರೆ.

**ii) ನೌಕರಿ ಪೂರ್ವ ಮತ್ತು ನೌಕರಿ ಆರಂಭೋತ್ತರ ತರಬೇತಿ:** ನೌಕರಿ ಪೂರ್ವ ತರಬೇತಿಯು ಭಾವಿ ಉದ್ಯೋಗಿಗಳನ್ನು ಸಾರ್ವಜನಿಕ ಸೇವೆಗಾಗಿ ತಯಾರು ಮಾಡುತ್ತದೆ. ನೌಕರಿಗೆ ಸೇರುವ ಮೊದಲೇ ಆ ನೌಕರಿಗೆ ಪೂರಕವಾದ ತರಬೇತಿಯನ್ನು ನಿಗದಿಪಡಿಸಲಾಗಿರುತ್ತದೆ. ಉದಾ : ಪ್ರೌಢಶಾಲಾ ಶಿಕ್ಷಕರಾಗಲು ಬಿ.ಇಡಿ. ತರಬೇತಿಯು ಕಡ್ಡಾಯವಿರುತ್ತದೆ.

ನೌಕರಿ ಆರಂಭೋತ್ತರ ತರಬೇತಿಯು ಹುದ್ದೆಗೆ ಆಯ್ಕೆಯಾದವರಿಗೆ ನೀಡುವ ತರಬೇತಿಯಾಗಿರುತ್ತದೆ. ಈ ತರಬೇತಿಯ ಉದ್ದೇಶವು ಹೊಸ ಅಭ್ಯರ್ಥಿಗಳಿಗೆ ಹೆಚ್ಚಿನ ನೈಪುಣ್ಯತೆ ಮತ್ತು ಕೌಶಲ್ಯತೆಯನ್ನು ನೀಡುವುದಾಗಿದೆ. ಈ ರೀತಿಯ ತರಬೇತಿಯನ್ನು ಸಾಮಾನ್ಯ ಬುನಾದಿ ತರಬೇತಿ ಎಂದು ನೀಡುತ್ತಾರೆ.

**iii) ಅಲ್ಪಾವಧಿ ಮತ್ತು ದೀರ್ಘಾವಧಿ ತರಬೇತಿ :** ಅಲ್ಪಾವಧಿ ತರಬೇತಿಯು ನಾಲ್ಕರಿಂದ ಆರು ವಾರಗಳ ಕಾಲಾವಧಿಗೆ ನೀಡುವ ತರಬೇತಿಯಾಗಿರುತ್ತದೆ. ಉದಾ: ಲೋಕಸೇವಾ ಆಯೋಗದಿಂದ ಆಯ್ಕೆಯಾದ ವೈದ್ಯರುಗಳಿಗೆ ಆರು ವಾರಗಳ ಕಾಲದ ತರಬೇತಿ ನೀಡಲಾಗುತ್ತದೆ. ತರಬೇತಿ ನಿರಂತರ ಸ್ವರೂಪದ್ದಾಗಿದ್ದು ಅದರ ಅವಧಿಯು ಒಂದರಿಂದ ಎರಡು ವರ್ಷಗಳ ಕಾಲ ನೀಡಿದರೆ ದೀರ್ಘಾವಧಿ ತರಬೇತಿಯಾಗಿರುತ್ತದೆ. ಉದಾ: ಅಖಿಲ ಭಾರತ ಸೇವೆಗಳಿಗೆ ಆಯ್ಕೆಯಾದವರಿಗೆ ನೀಡುವ ತರಬೇತಿಯಾಗಿರುತ್ತದೆ.

**iv) ಇಲಾಖಾ ಮತ್ತು ಕೇಂದ್ರೀಯ ತರಬೇತಿ :** ತನ್ನ ಇಲಾಖೆಗೆ ನೇಮಕ ಹೊಂದುವ ಅಭ್ಯರ್ಥಿಗಳಿಗೆ ಇಲಾಖೆ ನೀಡುವ ತರಬೇತಿಯು ಇಲಾಖಾ ತರಬೇತಿಯಾಗಿರುತ್ತದೆ. ಉದಾ: ಪೊಲೀಸ್ ಇಲಾಖೆಯ ತರಬೇತಿ. ಕೇಂದ್ರೀಯ ಸಂಸ್ಥೆಯೊಂದು ತರಬೇತಿ ನೀಡಿದರೆ ಅದು ಕೇಂದ್ರೀಯ ತರಬೇತಿಯಾಗಿರುತ್ತದೆ. ಉದಾ: ಮಸ್ಸೂರಿಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಸಂಸ್ಥೆ ನೀಡುವ ತರಬೇತಿ.

**v) ಪರಿಣಿತ ತರಬೇತಿ ಮತ್ತು ಹಿನ್ನೆಲೆ ತರಬೇತಿ :** ತರಬೇತಿಯ ಉದ್ದೇಶವು ಅಭ್ಯರ್ಥಿಯ ತಜ್ಞತೆಯನ್ನು ಕಾರ್ಯಕೌಶಲ್ಯವನ್ನು ಹೆಚ್ಚಿಸುವುದಾಗಿದ್ದರೆ ಅದನ್ನು ಪರಿಣಿತ ತರಬೇತಿ ಎಂದು ಕರೆಯಲಾಗುತ್ತದೆ. ಉದಾ: ಪ್ರೌಢಶಾಲೆ ಶಿಕ್ಷಕರಿಗೆ ಬಿ.ಇಡಿ. ಶಿಕ್ಷಣ ತರಬೇತಿ ಕಡ್ಡಾಯ ಮಾಡಲಾಗಿದೆ. ತರಬೇತಿಯು ಕೆಲವು ಸಾಮಾನ್ಯ ವಿಷಯಗಳ ಕುರಿತು ತಿಳುವಳಿಕೆ ನೀಡುವುದಾದರೆ ಹಿನ್ನೆಲೆ ತರಬೇತಿಯಾಗಿರುತ್ತದೆ. ಉದಾ–ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ನೀಡಲಾಗುವ ತರಬೇತಿಯಾಗಿರುತ್ತದೆ.

ಸರ್ಕಾರಿ ನೌಕರರಿಗೆ/ಅಧಿಕಾರಿಗಳಿಗೆ ಸೇವೆಗೆ ಸೇರಿದ ನಂತರ ವೃತ್ತಿಪರ ದಕ್ಷತೆಯನ್ನು ಹೆಚ್ಚಿಸಲು ಆಗಿಂದಾಗ್ಗೆ ಸೇವಾವಧಿಯ ತರಬೇತಿಗಳನ್ನು ನೀಡುತ್ತಲೇ ಇರುತ್ತದೆ. ಇದಕ್ಕಾಗಿಯೇ ಜಿಲ್ಲಾ ಹಂತದಲ್ಲಿ ತರಬೇತಿ ಕೇಂದ್ರಗಳಿವೆ. ರಾಜ್ಯ ಹಂತದಲ್ಲಿಯು ತರಬೇತಿ ಕೇಂದ್ರಗಳಿವೆ.

©KTBS Not to be republished

### ಕೇಂದ್ರ ಲೋಕಸೇವಾ ಆಯೋಗ

ಕೇಂದ್ರ ಲೋಕಸೇವಾ ಆಯೋಗವು ಸಂವಿಧಾನದ ವಿಧಿ 315ರ ಅಡಿಯಲ್ಲಿ ಸ್ಥಾಪಿತವಾಗಿರುವ ಸಂವಿಧಾನಾತ್ಮಕ ಆಯೋಗವಾಗಿರುತ್ತದೆ. ಈ ಆಯೋಗದಲ್ಲಿ ಒಬ್ಬರು ಅಧ್ಯಕ್ಷರು ಮತ್ತು 10 ಜನ ಸದಸ್ಯರು ಇರುತ್ತಾರೆ. ಇವರುಗಳನ್ನು ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ. ಸದಸ್ಯರುಗಳ ಅಧಿಕಾರಾವಧಿಯು ನೇಮಕವಾದ ದಿನಾಂಕದಿಂದ ಆರು ವರ್ಷಗಳ ಅವಧಿಗೆ ಅಥವಾ ಅವರಿಗೆ 65 ವರ್ಷ ವಯಸ್ಸಿನವರೆಗೆ ಅವಕಾಶವಿದ್ದು, ಇವುಗಳಲ್ಲಿ ಯಾವುದು ಮೊದಲು ಅದನ್ನು ಪರಿಗಣಿಸಿ ಸದಸ್ಯತ್ವದ ಅವಧಿಯನ್ನು ಅಂತ್ಯಗೊಳಿಸಲಾಗುತ್ತದೆ. ರಾಷ್ಟ್ರಪತಿ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ದುರ್ನಡತೆಯ ಆಧಾರದ ಮೇಲೆ ವಜಾ ಮಾಡುವ ಅಧಿಕಾರ ಹೊಂದಿರುತ್ತಾರೆ. ಆಯೋಗವು ಶಾಸಕಾಂಗ ಮತ್ತು ಕಾರ್ಯಾಂಗಗಳ ಹಸ್ತಕ್ಷೇಪದಿಂದ ಸ್ವತಂತ್ರ್ಯವಾಗಿ ಕಾರ್ಯನಿರ್ವಹಿಸುತ್ತದೆ. ಆಯೋಗದಲ್ಲಿ ಕಾರ್ಯದರ್ಶಿಯವರು ಇರುತ್ತಾರೆ. ಪ್ರಸ್ತುತ ದೆಹಲಿಯಲ್ಲಿ ಆಯೋಗದ ಕಛೇರಿ ಇದೆ.

#### ಕಾರ್ಯಗಳು

ಸಂವಿಧಾನದ 320ನೇ ವಿಧಿಯು ಕೆಳಕಂಡ ಕಾರ್ಯಗಳನ್ನು ನಿರ್ವಹಿಸಲು ಸೂಚಿಸಿದೆ.

1. ಕೇಂದ್ರದ ಎ ಮತ್ತು ಬಿ ವೃಂದದ ಸೇವೆಗಳಿಗೆ ನೇಮಕ ಮಾಡಲು ಪರೀಕ್ಷೆಗಳನ್ನು ನಡೆಸುವುದು.
2. ನೇರ ನೇಮಕಾತಿಗೆ ಸಂದರ್ಶನಗಳನ್ನು ನಡೆಸುವುದು.
3. ಸೇವಾ ಹುದ್ದೆಗಳಿಗೆ ಬಡ್ತಿ ಮತ್ತು ವರ್ಗಾವಣೆಗೆ ಅನುಸರಿಸಬೇಕಾದ ತತ್ವಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು.
4. ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಹುದ್ದೆಗಳಲ್ಲಿರುವ ಅಧಿಕಾರಿಗಳ ವರ್ತನೆಯ ಮೇರೆಗೆ ಶಿಸ್ತುಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು.
5. ರಾಷ್ಟ್ರಪತಿಗಳ ಸೂಚನೆ ಅನ್ವಯ ಯಾವುದೇ ವಿಷಯಗಳಿಗೆ ಸರ್ಕಾರಕ್ಕೆ ಸಲಹೆ ನೀಡುವುದು.

ಆಯೋಗವು ರಾಷ್ಟ್ರಮಟ್ಟದಲ್ಲಿ ಸಿವಿಲ್ ಸೇವೆ, ತಾಂತ್ರಿಕ ಸೇವೆ, ವೈದ್ಯಕೀಯ ಸೇವೆ, ಅರಣ್ಯ ಸೇವೆ ಮತ್ತು ರಕ್ಷಣಾ ಸೇವೆಗಳಿಗೆ ಸಂಬಂಧಿಸಿದಂತೆ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತದೆ. ಇವುಗಳಲ್ಲಿ ಸಿವಿಲ್ ಸರ್ವಿಸ್‌ಗಾಗಿ ನಡೆಸುವ ಪರೀಕ್ಷೆಯು ಮಹತ್ವದ್ದಾಗಿರುತ್ತದೆ. ಐ.ಎ.ಎಸ್. (ಭಾರತೀಯ ಆಡಳಿತ ಸೇವೆ), ಐ.ಪಿ.ಎಸ್. (ಭಾರತೀಯ ಪೋಲೀಸ್ ಸೇವೆ), ಐ.ಎಫ್.ಎಸ್. (ಭಾರತೀಯ ವಿದೇಶಿ ಸೇವೆ), ಐ.ಆರ್.ಎಸ್. (ಭಾರತೀಯ ಕಂದಾಯ ಸೇವೆ), ಐ.ಎ.ಎ.ಎಸ್. (ಭಾರತೀಯ ಲೆಕ್ಕ ಮತ್ತು ಪರಿಶೋಧನಾ ಸೇವೆ) ಪರೀಕ್ಷೆಗಳು ಮುಖ್ಯವಾಗಿರುತ್ತವೆ. ಸಾಮಾನ್ಯವಾಗಿ ಈ ಪರೀಕ್ಷೆಗಳನ್ನು ಮೂರು ಹಂತದಲ್ಲಿ ನಡೆಸುತ್ತದೆ.

1. ಪೂರ್ವಭಾವಿ ಪರೀಕ್ಷೆ
2. ಮುಖ್ಯ ಪರೀಕ್ಷೆ
3. ವ್ಯಕ್ತಿತ್ವ ಪರೀಕ್ಷೆ

### ಕರ್ನಾಟಕ ರಾಜ್ಯ ಲೋಕಸೇವಾ ಆಯೋಗ

ಕೇಂದ್ರ ಹಂತದಲ್ಲಿ ಕೇಂದ್ರ ಲೋಕಸೇವಾ ಆಯೋಗವಿರುವಂತೆಯೇ ರಾಜ್ಯ ಹಂತದಲ್ಲಿ ರಾಜ್ಯ ಲೋಕಸೇವಾ ಆಯೋಗ ಸಂವಿಧಾನದ ನಿರ್ದೇಶನದನ್ವಯ ಅಸ್ತಿತ್ವದಲ್ಲಿರುತ್ತದೆ. ಇದನ್ನು ಕರ್ನಾಟಕದಲ್ಲಿ ಕರ್ನಾಟಕ ಲೋಕಸೇವಾ ಆಯೋಗವೆಂದು ಕರೆಯುತ್ತಾರೆ. ಇದು ದಿನಾಂಕ 18–5–1951ರಲ್ಲಿ ಸ್ಥಾಪಿಸಲ್ಪಟ್ಟಿತು.



©KTBS Not to be republished

ಆಯೋಗವು ಒಬ್ಬರು ಅಧ್ಯಕ್ಷರು ಮತ್ತು 9 ಜನ ಸದಸ್ಯರುಗಳನ್ನು ಒಳಗೊಂಡಿರುತ್ತದೆ. ಇವರುಗಳನ್ನು ರಾಜ್ಯಪಾಲರು ನೇಮಿಸುತ್ತಾರೆ. ಇವರುಗಳ ಅಧಿಕಾರಾವಧಿಯು ನೇಮಕದಿಂದ ಆರು ವರ್ಷಗಳು ಅಥವಾ ಅವರುಗಳ 62ನೇ ವಯಸ್ಸಿನವರೆಗೆ ಇದ್ದು ಇವುಗಳಲ್ಲಿ ಪ್ರಥಮವಾಗುವುದನ್ನು ಪರಿಗಣಿಸಲಾಗುತ್ತದೆ. ಆಯೋಗವು ಬೆಂಗಳೂರಿನಲ್ಲಿ ಕೇಂದ್ರ ಕಛೇರಿಯನ್ನು ಹೊಂದಿರುತ್ತದೆ. ಮೈಸೂರು, ಬೆಳಗಾವಿ, ಕಲಬುರಗಿ ಮತ್ತು ಶಿವಮೊಗ್ಗಗಳಲ್ಲಿ ಪ್ರಾಂತೀಯ ಕಛೇರಿಗಳನ್ನು ಹೊಂದಿರುತ್ತದೆ.

**ಕಾರ್ಯಗಳು :**

1. ರಾಜ್ಯ ಸರ್ಕಾರಿ ಸೇವೆಗೆ ಪತ್ರಾಂಕಿತ ಅಧಿಕಾರಿಗಳು ಮತ್ತು ಅಪತ್ರಾಂಕಿತ ಸಿಬ್ಬಂದಿಗಳನ್ನು, ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಸಂದರ್ಶನಗಳ ಮೂಲಕ ಸರ್ಕಾರವು ಆಗಿಂದಾಗ್ಗೆ ಹೊರಡಿಸುವ ನೇಮಕಾತಿ ನಿಯಮಗಳು ಹಾಗೂ ಸಂಬಂಧಿತ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಮೇರೆಗೆ ಆಯ್ಕೆ ಮಾಡುವುದು. ಉದಾ : ಉಪವಿಭಾಗಾಧಿಕಾರಿ, ಆರಕ್ಷಕ ಉಪ ಆಯುಕ್ತರು, ತಹಶೀಲ್ದಾರರು, ಇತ್ಯಾದಿ ಹುದ್ದೆಗಳು.
2. ನೇರವಾಗಿ ನೇಮಕಗೊಳ್ಳುವ ಅಭ್ಯರ್ಥಿಗಳ ಸಂದರ್ಶನ ನಡೆಸುವುದು.
3. ಸರ್ಕಾರಿ ನೌಕರರಿಗೆ ವರ್ಷಕ್ಕೆ ಎರಡು ಬಾರಿ ಇಲಾಖಾ ಪರೀಕ್ಷೆಗಳನ್ನು ನಡೆಸುವುದು.
4. ಶಿಸ್ತು ಮತ್ತು ಪೂರ್ವಾನ್ವಯ ಬಡ್ತಿ ಪ್ರಕರಣಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು.
5. ಕೇಂದ್ರ ಲೋಕಸೇವಾ ಆಯೋಗವು ರಾಜ್ಯದಲ್ಲಿ ನಡೆಸುವ ವಿವಿಧ ಪರೀಕ್ಷೆಗಳ ಸಮನ್ವಯ ಕಾರ್ಯ ನಿರ್ವಹಿಸುವುದು.

©KTBS Not to be republished

## ಸಚಿವಾಲಯ (ಕೇಂದ್ರ ಮತ್ತು ರಾಜ್ಯ)

### ಕೇಂದ್ರ ಸಚಿವಾಲಯ

ಆಡಳಿತದ ದಕ್ಷ ಮತ್ತು ಯಶಸ್ವಿ ಕಾರ್ಯನಿರ್ವಹಣೆಗೆ ವಿವಿಧ ಖಾತೆಗಳು ಹಾಗೂ ಇಲಾಖೆಗಳನ್ನು ರಚಿಸಲಾಗುವುದು. ಕೇಂದ್ರ ಸಚಿವಾಲಯವು ಕೇಂದ್ರ ಸರ್ಕಾರದ ವಿವಿಧ ಖಾತೆಗಳ ಮತ್ತು ಇಲಾಖೆಗಳ ಮಿಶ್ರಣವಾಗಿರುತ್ತದೆ. ಈ ಸಚಿವಾಲಯದ ಮುಖ್ಯ ಹೊಣೆಗಾರಿಕೆ ಎಂದರೆ ವಿವಿಧ ಖಾತೆಗಳ ರಾಜಕೀಯ ಮುಖ್ಯಸ್ಥರಾಗಿರುವ ಮಂತ್ರಿಗಳಿಗೆ ಅವರ ಕಾರ್ಯ ನಿರ್ವಹಣೆ ಮತ್ತು ಜವಾಬ್ದಾರಿಯನ್ನು ನಿರ್ವಹಿಸಲು ಸಹಾಯ ಮಾಡುವುದು. ಇದು ಕಾರ್ಯದರ್ಶಿಗಳನ್ನು ಆಡಳಿತಾತ್ಮಕ ಮುಖ್ಯಸ್ಥರನ್ನಾಗಿಯೂ, ಮಂತ್ರಿಗಳನ್ನು ರಾಜಕೀಯ ಮುಖ್ಯಸ್ಥರನ್ನಾಗಿ ಹೊಂದಿರುತ್ತದೆ.

**ಕೇಂದ್ರ ಸಚಿವಾಲಯದ ರಚನೆ:** ಕೇಂದ್ರ ಸಚಿವಾಲಯವು ವಿವಿಧ ಖಾತೆಗಳ ಮತ್ತು ಇಲಾಖೆಗಳ ಸಂಗ್ರಹವಾಗಿದೆ. ಸಂವಿಧಾನದ 77(3) ವಿಧಿ ಅನ್ವಯ ರಾಷ್ಟ್ರಾಧ್ಯಕ್ಷರು ಭಾರತ ಸರ್ಕಾರದ ಆಡಳಿತ ವ್ಯವಹಾರಗಳ ಸುಗಮ ನಿರ್ವಹಣೆಗಾಗಿ ಹಾಗೂ ಮಂತ್ರಿಗಳಲ್ಲಿ ಆ ವ್ಯವಹಾರಗಳ ಹಂಚುವಿಕೆಗಾಗಿ ನಿಯಮಗಳನ್ನು ರೂಪಿಸಲು ಅಧಿಕಾರ ಹೊಂದಿರುತ್ತಾರೆ.

ಪ್ರತಿ ಒಬ್ಬ ಕ್ಯಾಬಿನೆಟ್ ಸಚಿವರು ಒಂದು ಸ್ವತಂತ್ರ ಖಾತೆಯನ್ನು ಹೊಂದಿರುತ್ತಾರೆ. ಅವರು ಹೊಂದಿರುವ ಖಾತೆ ದೊಡ್ಡದಾಗಿದ್ದರೆ, ಅವರಿಗೆ ಸಹಾಯ ಮಾಡಲು ರಾಜ್ಯಮಂತ್ರಿ ಮತ್ತು ಉಪಮಂತ್ರಿ ಇರುತ್ತಾರೆ. ಮಂತ್ರಿಯು ಖಾತೆಯ ರಾಜಕೀಯ ಮುಖ್ಯಸ್ಥರಾಗಿರುತ್ತಾರೆ. ಒಂದು ಖಾತೆಯು ಒಂದಕ್ಕಿಂತ ಹೆಚ್ಚು ಇಲಾಖೆಗಳನ್ನು ಹೊಂದಿರಬಹುದಾಗಿದೆ. ಉದಾ: ಗೃಹ, ಕೃಷಿ, ರಕ್ಷಣ, ಹಣಕಾಸು ಇತ್ಯಾದಿ ಇಲಾಖೆಯು

ಆಡಳಿತಾತ್ಮಕ ಘಟಕವಾಗಿದ್ದು ಆಡಳಿತಾತ್ಮಕ ಮುಖ್ಯಸ್ಥರಾಗಿರುವ ಒಬ್ಬ ಕಾರ್ಯದರ್ಶಿಯ ನಿಯಂತ್ರಣದಲ್ಲಿ ನಿರ್ದಿಷ್ಟವಾಗಿ ಕಾರ್ಯನಿರ್ವಹಿಸುತ್ತದೆ.

ಖಾತೆಯನ್ನು ಈ ಕೆಳಕಂಡಂತೆ ವಿಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ವಿಭಾಗವನ್ನು ಒಬ್ಬೊಬ್ಬ ಅಧಿಕಾರಿಗೆ ವಹಿಸಿಕೊಡಲಾಗಿದೆ. ಸಚಿವಾಲಯದ ಶ್ರೇಣಿ ವ್ಯವಸ್ಥೆ ಈ ಕೆಳಗಿನಂತಿರುತ್ತದೆ.

1. ಇಲಾಖೆಯ ಪ್ರಧಾನ ಕಾರ್ಯದರ್ಶಿ/ಹೆಚ್ಚುವರಿ ಕಾರ್ಯದರ್ಶಿ/ವಿಶೇಷ ಕಾರ್ಯದರ್ಶಿ.
2. ಶಾಖೆ (ವಿಂಗ್)–ಜಂಟಿ/ಹೆಚ್ಚುವರಿ ಕಾರ್ಯದರ್ಶಿ
3. ವಿಭಾಗ (ಡಿವಿಜನ್)–ನಿರ್ದೇಶಕರು/ಉಪಕಾರ್ಯದರ್ಶಿ
4. ಶಾಖೆ (ಬ್ರಾಂಚ್)–ಅಧೀನ ಕಾರ್ಯದರ್ಶಿ.
5. ಭಾಗ (ಸೆಕ್ಷನ್)–ಶಾಖಾಧಿಕಾರಿ (ಸೆಕ್ಷನ್–ಆಫೀಸರ್)

**ಸಚಿವಾಲಯದ ಪಾತ್ರ ಮತ್ತು ಕಾರ್ಯಗಳು**

1. ಸಚಿವಾಲಯವು ಸರ್ಕಾರಕ್ಕೆ ಅದರ ಗುರಿ ಸಾಧನೆಗೆ ಸಹಾಯ ಮಾಡುವ ಸಂಘಟನೆಯಾಗಿದೆ. ಸರ್ಕಾರದ ನೀತಿಗಳನ್ನು ರೂಪಿಸುವಾಗ ಮಂತ್ರಿಗಳಿಗೆ ಇದು ಸಹಾಯ ಮಾಡುತ್ತದೆ.
2. ಮಂತ್ರಿಗಳು ತಮ್ಮ ಸಂಸದೀಯ ಜವಾಬ್ದಾರಿಯನ್ನು ನಿಭಾಯಿಸಲು ಸಚಿವಾಲಯವು ಸಹಾಯ ಮತ್ತು ಸಹಕಾರ ಒದಗಿಸುತ್ತದೆ.
3. ಆಡಳಿತದ ವಿಧಿ–ವಿಧಾನಗಳನ್ನು ಸಚಿವಾಲಯವು ತಯಾರಿಸುತ್ತದೆ.
4. ಸಚಿವಾಲಯವು ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸುತ್ತದೆ.
5. ಹಣಕಾಸಿನ ಇಲಾಖೆಯೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡು ಆಯ–ವ್ಯಯ ಅಂದಾಜು ಪಟ್ಟಿಯನ್ನು ಸಿದ್ಧಪಡಿಸುತ್ತದೆ.
6. ಕೇಂದ್ರ ಸರ್ಕಾರ ಮತ್ತು ಉಳಿದ ರಾಜ್ಯ ಸರ್ಕಾರಗಳ ನಡುವೆ ಸಚಿವಾಲಯವು ಪ್ರಮುಖ ಸಂಪರ್ಕ ಸೇತುವೆಯಂತೆ ಕಾರ್ಯನಿರ್ವಹಿಸುತ್ತದೆ.

ಒಟ್ಟಿನಲ್ಲಿ ಸಚಿವಾಲಯವು ಸರಕಾರದ 'ನರಮಂಡಲ'ವಾಗಿದೆ. ಇದು 'ನೀತಿಗಳನ್ನು ರೂಪಿಸುವ ಬೌದ್ಧಿಕ ಕೇಂದ್ರ' (Brain centre for policy making)ವಾಗಿ ಕಾರ್ಯನಿರ್ವಹಿಸುತ್ತದೆ.

**ರಾಜ್ಯ ಸಚಿವಾಲಯ**

ಪ್ರತಿಯೊಂದು ರಾಜ್ಯದ ಸಚಿವಾಲಯ ನರಮಂಡಲದಂತೆ ಕಾರ್ಯನಿರ್ವಹಿಸುತ್ತದೆ. ಸಚಿವಾಲಯವು ವಿವಿಧ ಇಲಾಖೆಗಳನ್ನು ಹೊಂದಿರುತ್ತದೆ. ಈ ಇಲಾಖೆಗಳಿಗೆ ಮಂತ್ರಿಗಳು ರಾಜಕೀಯ ಮುಖ್ಯಸ್ಥರಾದರೆ, ಪ್ರಧಾನ ಕಾರ್ಯದರ್ಶಿಗಳು ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಮುಖ್ಯ ಕಾರ್ಯದರ್ಶಿಯು ರಾಜ್ಯ ಸಚಿವಾಲಯದ ಮುಖ್ಯಸ್ಥರಾಗಿರುತ್ತಾರೆ. ಕಾರ್ಯದರ್ಶಿಯು ಒಂದು ಅಥವಾ ಎರಡು ಇಲಾಖೆಗಳಿಗೆ ಮುಖ್ಯಸ್ಥರಾಗಿರುತ್ತಾರೆ. ಇವರು ಸಾಮಾನ್ಯವಾಗಿ ಭಾರತೀಯ ಆಡಳಿತ ಸೇವಾ ಹಂತದ ಅಧಿಕಾರಿಯಾಗಿರುತ್ತಾರೆ.

**ಸಚಿವಾಲಯದ ರಚನೆ :** ಮುಖ್ಯಮಂತ್ರಿಗಳು ಮಂತ್ರಿಗಳಿಗೆ ಖಾತೆಗಳನ್ನು ಹಂಚಿಕೆ ಮಾಡುತ್ತಾರೆ. ಸಚಿವರ ಖಾತೆಗಳ ಸಂಖ್ಯೆಯಲ್ಲಿ ರಾಜ್ಯದಿಂದ ರಾಜ್ಯಕ್ಕೆ ಭಿನ್ನತೆಯಿರುತ್ತದೆ. ಸಾಮಾನ್ಯವಾಗಿ ಇಲಾಖೆಗಳ ಸಂಖ್ಯೆ 16ರಿಂದ 35ರವರೆಗೆ ಇರುತ್ತದೆ.

©KTBS Not to be republished

ರಾಜ್ಯದ ಮುಖ್ಯಕಾರ್ಯದರ್ಶಿಯು, ಸರ್ಕಾರದ ಆಡಳಿತಾತ್ಮಕ ಮುಖ್ಯಸ್ಥರೂ ಮತ್ತು ಸಚಿವಾಲಯ ಮುಖ್ಯಸ್ಥರೂ ಆಗಿರುತ್ತಾರೆ. ಸರ್ಕಾರದ ಪ್ರತಿಯೊಂದು ಇಲಾಖೆಗೂ ಒಬ್ಬ ಕಾರ್ಯದರ್ಶಿ ಇರುತ್ತಾರೆ. ಸಚಿವರಿಗೆ ಇವರು ಆಡಳಿತಾತ್ಮಕ ಸಲಹೆಯನ್ನು ನೀಡುತ್ತಾರೆ.

ಪ್ರಧಾನ ಕಾರ್ಯದರ್ಶಿಯ ಕಛೇರಿಯನ್ನು ವಿವಿಧ ಭಾಗಗಳಾಗಿ ವಿಂಗಡಿಸಲಾಗಿರುತ್ತದೆ. ಪ್ರತಿಯೊಂದು ವಿಭಾಗವೂ ಸೆಕ್ಷನ್ ಆಫೀಸರ್ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತವೆ. ತನ್ನ ವಿಭಾಗದ ಕಾಗದ ಪತ್ರ ಮತ್ತು ಕಡತಗಳನ್ನು ಪರಿಶೀಲಿಸಿ ಸಂಬಂಧಪಟ್ಟವರಿಗೆ ತಲುಪಿಸುವ ಹೊಣೆಯನ್ನು ಇವರು ಹೊಂದಿರುತ್ತಾರೆ. ಪ್ರತಿಯೊಂದು ವಿಭಾಗದಲ್ಲಿ ಕೆಲವು ತಜ್ಞ ಶೀಘ್ರಲಿಪಿಕಾರರು ಮತ್ತು ಬೆರಳಚ್ಚುಗಾರರೂ, ಪ್ರಥಮದರ್ಜೆ ಸಹಾಯಕರು, ದ್ವಿತೀಯದರ್ಜೆ ಸಹಾಯಕರು ಇರುತ್ತಾರೆ. ಸಚಿವಾಲಯದ ಇಲಾಖೆಗಳು ಹಲವು ಹಂತದ ಅಧಿಕಾರಿಗಳನ್ನು ಹೊಂದಿರುತ್ತಾರೆ. ಸಚಿವಾಲಯದ ಶ್ರೇಣಿ ವ್ಯವಸ್ಥೆ ಕೆಳಕಂಡಂತಿದೆ.

ಪ್ರಧಾನ ಕಾರ್ಯದರ್ಶಿ
↓
ವಿಶೇಷ ಕಾರ್ಯದರ್ಶಿ/ಹೆಚ್ಚುವರಿ ಕಾರ್ಯದರ್ಶಿ
↓
ಜಂಟಿ ಕಾರ್ಯದರ್ಶಿ
↓
ಉಪ ಕಾರ್ಯದರ್ಶಿ
↓
ಅಧೀನ ಕಾರ್ಯದರ್ಶಿ
↓
ಸಹ ಕಾರ್ಯದರ್ಶಿ
↓
ಸೆಕ್ಷನ್ ಆಫೀಸರ್

**ಸಚಿವಾಲಯದ ಕಾರ್ಯಗಳು**

ಸಚಿವಾಲಯವು ಸಲಹಾ ವರ್ಗವಾಗಿದ್ದು, ಕೆಳಕಂಡಂತೆ ಕಾರ್ಯಗಳನ್ನು ನಿರ್ವಹಿಸುತ್ತದೆ.

1. ರಾಜ್ಯ ಸರ್ಕಾರದ ಅತ್ಯುನ್ನತವಾದ ಕಾರ್ಯಾಲಯವು ಸರ್ಕಾರದ ಆಡಳಿತಾಂಗದ ಸಾಧನವಾಗಿದೆ. ರಾಜ್ಯ ಸರ್ಕಾರದ ಆಡಳಿತಾಂಗದ ಸಾಧನವಾಗಿದೆ. ರಾಜ್ಯ ಸರ್ಕಾರದ ಆಡಳಿತದ ಸಮಸ್ತ ವಿಷಯಗಳ ಮೇಲೆ ಧೋರಣೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ಮಂತ್ರಿಗಳಿಗೆ ಸಹಾಯ ನೀಡುತ್ತದೆ.
2. ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವ 'ತಜ್ಞರ ಮಂಡಲಿ'ಯಾಗಿ ಕಾರ್ಯನಿರ್ವಹಿಸುತ್ತದೆ.
3. ರಾಜ್ಯದ ಆಡಳಿತದ ಸಂಯೋಜನೆ ಅಂಗವಾಗಿ ಸರ್ಕಾರದ ನೀತಿ ಹಾಗೂ ಕಾರ್ಯಕ್ರಮಗಳನ್ನು ಸಂಯೋಜಿಸಿ ವಿವಿಧ ಇಲಾಖೆಗಳ ಆಂತರಿಕ ಆಡಳಿತದಲ್ಲಿ ಸಮನ್ವಯತೆಯನ್ನು ಸಾಧಿಸುತ್ತದೆ.
4. ಶಾಸನದ ಕರಡು ಪ್ರತಿಯನ್ನು ಸಿದ್ಧಪಡಿಸುವುದು ನಿಯಮಾವಳಿಗಳನ್ನು ರೂಪಿಸುವುದು ಮತ್ತು ಹಣಕಾಸಿನ ನಿಯಂತ್ರಣಕ್ಕಾಗಿ ವಿಧಿವಿಧಾನಗಳನ್ನು ರೂಪಿಸುವುದರಲ್ಲಿ ಮಂತ್ರಿಗಳಿಗೆ ಸಹಾಯ ಮಾಡುತ್ತದೆ.

©KTBS Not to be republished

5. ರಾಜ್ಯದ ಆಯ–ವ್ಯಯವನ್ನು ಸಿದ್ಧಪಡಿಸುವುದು ಮತ್ತು ಸಾರ್ವಜನಿಕ ವೆಚ್ಚದ ಮೇಲೆ ಮಿತಿ ವಿಧಿಸುವುದು.

6. ರಾಜ್ಯ ಸಚಿವಾಲಯವು ರಾಜ್ಯದ ರಾಜಕೀಯ ಮತ್ತು ಆಡಳಿತಾತ್ಮಕ ವ್ಯವಸ್ಥೆಯ 'ಚಟುವಟಿಕೆಯ ಕೇಂದ್ರ'ವಾಗಿ ಕಾರ್ಯನಿರ್ವಹಿಸುತ್ತದೆ.

**ಕಾನೂನು ಮತ್ತು ಸುವ್ಯವಸ್ಥೆ**

ರಾಷ್ಟ್ರದ ಸುಖ ಶಾಂತಿಗೆ, ಐಕ್ಯತೆಗೆ ಹಾಗೂ ಅಭಿವೃದ್ಧಿಗೆ ಕಾನೂನು ಸುವ್ಯವಸ್ಥೆ ಅತ್ಯವಶ್ಯಕವಾಗಿದೆ. ಶೀಘ್ರಗತಿಯಲ್ಲಿ ಬೆಳೆಯುತ್ತಿರುವ ಸಮಾಜದ ಇಂದಿನ ದಿನಗಳಲ್ಲಿ ಕಾನೂನು ಸುವ್ಯವಸ್ಥೆಯು ಅತಿ ಮುಖ್ಯ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ.

'ಕಾನೂನು' ಮತ್ತು 'ಸುವ್ಯವಸ್ಥೆ' ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಂತೆ ಅವಿಭಾಜ್ಯವಾಗಿವೆ. ಸರ್ವರ ಸಂರಕ್ಷಣೆಗೆ ಕಾನೂನಿನ ಆಡಳಿತ ಅಗತ್ಯವಾಗಿರುತ್ತದೆ. ಸಂವಿಧಾನದ 7ನೇ ಅನುಸೂಚಿಯ ರಾಜ್ಯಪಟ್ಟಿಯಲ್ಲಿ ಕಾನೂನು ಸುವ್ಯವಸ್ಥೆಯನ್ನು ತಿಳಿಸಲಾಗಿದೆ. ಹಾಗಾಗಿ ಕಾನೂನು ಸುವ್ಯವಸ್ಥೆ ಕಾಪಾಡುವುದು ರಾಜ್ಯದ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ಕೇಂದ್ರ ಸರ್ಕಾರವು ರಾಜ್ಯಗಳಿಗೆ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ನಿರ್ದೇಶನ ನೀಡುವ ಸಂವಿಧಾನಾತ್ಮಕ ಅಧಿಕಾರವನ್ನು ಹೊಂದಿದೆ.

**ಕೇಂದ್ರದ ಪಾತ್ರ**

ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಕೇಂದ್ರ ಸರ್ಕಾರದ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಸಂವಿಧಾನದ ಹಲವು ವಿಧಿಗಳಲ್ಲಿ ತಿಳಿಸಲಾಗಿದೆ. ಉದಾ–ಸಂವಿಧಾನದ 355ನೇ ವಿಧಿ ಪ್ರಕಾರ ಬಾಹ್ಯ ದಾಳಿಯಿಂದ ರಾಜ್ಯಗಳನ್ನು ರಕ್ಷಿಸುವುದು, ಸಂವಿಧಾನದ 356ನೇ ವಿಧಿಯನ್ವಯ ರಾಜ್ಯದಲ್ಲಿ ಸಂವಿಧಾನಾತ್ಮಕ ಆಡಳಿತ ವಿಫಲವಾದಾಗ ರಾಜ್ಯ ತುರ್ತು ಪರಿಸ್ಥಿತಿ ಅಥವಾ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೊಳಿಸುವುದು.

ಸಾರ್ವಜನಿಕ ಭದ್ರತೆ ಒದಗಿಸಲು ಕೇಂದ್ರ ಗೃಹ ಮಂತ್ರಾಲಯವು ಅರೆಸೈನಿಕ ಪಡೆಗಳನ್ನು ಹೊಂದಿದ್ದು, ಅವುಗಳ ಮೂಲಕ ಆಡಳಿತ ಮತ್ತು ನಿಯಂತ್ರಣದ ಜವಾಬ್ದಾರಿಯನ್ನು ಹೊಂದಿದೆ. ಅವುಗಳೆಂದರೆ:

**1) ಕೇಂದ್ರ ಮೀಸಲು ಪೊಲೀಸ್ ಪಡೆ (CRPF) :** ಈ ಪಡೆಯು ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು, ದಂಗೆಗಳನ್ನು ಹತ್ತಿಕ್ಕಲು ಹಾಗೂ ದೇಶದ ಯಾವುದೇ ಭಾಗ ಪ್ರಕೃತಿ ವಿಕೋಪಕ್ಕೆ ಒಳಗಾದಾಗ ಪರಿಹಾರ ಕಾರ್ಯಗಳನ್ನು ಕೈಗೊಳ್ಳುತ್ತದೆ.

**2) ಗಡಿಭದ್ರತಾ ಪಡೆ (BSF) :** ಗಡಿ ಭಾಗಗಳಲ್ಲಿ ಅಪರಾಧಿ ಕೃತ್ಯಗಳನ್ನು ತಡೆಗಟ್ಟಲು ರಚಿಸಲಾಗಿದೆ. ದೇಶದ ಗಡಿಗಳಲ್ಲಿ ಪೊಲೀಸ್ ಬಂದೋಬಸ್ತು ಏರ್ಪಡಿಸಬಹುದು. ಗಸ್ತು ತಿರುಗುವುದು ಮತ್ತು ಗಡಿಪ್ರದೇಶದ ಜನರಿಗೆ ಹಾಗೂ ಅವರ ಆಸ್ತಿಗೆ ರಕ್ಷಣೆಯನ್ನೊದಗಿಸುವುದು ಗಡಿಭದ್ರತಾ ಪಡೆಯ ಕಾರ್ಯವಾಗಿದೆ.

**3) ರೈಲ್ವೆ ರಕ್ಷಣಾ ಪಡೆ :** ರೈಲ್ವೆಗಳಲ್ಲಿನ ಅಪರಾಧಗಳನ್ನು ತಡೆಗಟ್ಟುವುದು, ಅವುಗಳ ತನಿಖೆ ನಡೆಸುವುದು, ರೈಲ್ವೆ ಆಸ್ತಿ, ಹಳಿ ಮೊದಲಾದವುಗಳನ್ನು ರಕ್ಷಿಸುತ್ತದೆ.

**4) ಕೇಂದ್ರಿಯ ಉದ್ದಿಮೆ ಸಂರಕ್ಷಣಾ ಪಡೆ (CISF) :** ಸಾರ್ವಜನಿಕ ವಲಯದಲ್ಲಿನ ಭಾರತ ಸರ್ಕಾರದ ಬೃಹತ್ ಕೈಗಾರಿಕೆ ಉದ್ದಿಮೆಗಳಿಗೆ ರಕ್ಷಣೆ ಒದಗಿಸುತ್ತದೆ. ಈ ಪಡೆಯನ್ನು ವಿಮಾನ ನಿಲ್ದಾಣಗಳ ಸಂರಕ್ಷಣೆಗೂ ಬಳಸಿಕೊಳ್ಳಲಾಗುತ್ತದೆ.

ರಾಷ್ಟ್ರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ರಕ್ಷಣೆಯಲ್ಲಿ ಕೇಂದ್ರ ಸರ್ಕಾರವು ಸಂಯೋಜನಾ ಕಾರ್ಯ ಮತ್ತು ವಿಶೇಷ ಹೊಣೆಗಾರಿಕೆಯನ್ನು ನಿರ್ವಹಿಸುವುದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಕೇಂದ್ರ ಸರ್ಕಾರ ಹೊಂದಿರುವ ಅಧಿಕಾರ, ಜವಾಬ್ದಾರಿ, ತಜ್ಞ ಸೇವೆ ಮುಂತಾದವುಗಳು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುರಲ್ಲಿ ರಾಜ್ಯ ಸರ್ಕಾರಗಳಿಗೆ ಒಂದು ಚೌಕಟ್ಟನ್ನು ಒದಗಿಸುತ್ತದೆ.

©KTBS Not to be republished

## ರಾಜ್ಯದ ಪಾತ್ರ–ರಾಜ್ಯ ಪೊಲೀಸ್ ವ್ಯವಸ್ಥೆ

ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ರಾಜ್ಯ ಸರ್ಕಾರಗಳ ಪ್ರಾಥಮಿಕ ಜವಾಬ್ದಾರಿಯಾಗಿದೆ. ತಮ್ಮ ಜವಾಬ್ದಾರಿಯ ನಿರ್ವಹಣೆಗಾಗಿ ರಾಜ್ಯಗಳು ಕಾರ್ಯನಿರ್ವಹಣಾ ವರ್ಗ ಮತ್ತು ಸಲಹಾ ವರ್ಗಗಳಿಂದ ಕೂಡಿದ ಪೊಲೀಸ್ ಸಂಘಟನೆಯನ್ನು ಹೊಂದಿದೆ.

ರಾಜ್ಯಗಳಲ್ಲಿ ಪೊಲೀಸ್ ಖಾತೆಯು ಗೃಹಮಂತ್ರಿಯ ಅಧೀನದಲ್ಲಿರುತ್ತದೆ. ಗೃಹಮಂತ್ರಿಯು ಪೊಲೀಸ್ ಆಡಳಿತಕ್ಕೆ ಸಂಬಂಧಪಟ್ಟ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ಗೃಹ ಇಲಾಖೆಯ ಕಾರ್ಯದರ್ಶಿಯು ಭಾರತೀಯ ಆಡಳಿತ ಸೇವಾ ಹಂತದ ಅಧಿಕಾರಿಯಾಗಿದ್ದು ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಇವರು ಗೃಹಮಂತ್ರಿಗೆ ಕರ್ತವ್ಯ ನಿರ್ವಹಣೆಯಲ್ಲಿ ಸಲಹೆ ಮತ್ತು ಸಹಾಯ ನೀಡುತ್ತಾರೆ. ಗೃಹ ಇಲಾಖೆಯು ಪೊಲೀಸ್ ಆಡಳಿತದ ಮೇಲ್ವಿಚಾರಣೆ ಮತ್ತು ಸಂಯೋಜನೆ ಕಾರ್ಯವನ್ನು ನಿರ್ವಹಿಸುತ್ತದೆ.

**ರಾಜ್ಯ ಪೊಲೀಸ್ ಸಂಘಟನೆ ರಚನೆ ಕೆಳಗಿನಂತಿದೆ.**

ಗೃಹಸಚಿವರು/ಗೃಹ ಕಾರ್ಯದರ್ಶಿ

↓

ಪೊಲೀಸ್ ಮಹಾನಿರ್ದೇಶಕರು (**DGP**)
(ರಾಜ್ಯ ಪೊಲೀಸ್ ಇಲಾಖೆಯ ಮುಖ್ಯಸ್ಥರು)

↓

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (**ADGP**)

↓

ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (**DIGP**)

↓

(ವಲಯ ಕಛೇರಿಯ ಮುಖ್ಯಸ್ಥರು)

↓

ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (**SP**)
(ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ)

↓

ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (**DySP**)
(ಉಪವಿಭಾಗ ಕಛೇರಿ ಮುಖ್ಯಸ್ಥರು)

↓

ಇನ್ಸ್‌ಪೆಕ್ಟರ್ ಆಫ್ ಪೊಲೀಸ್ (**CPI**)
(ವೃತ್ತ ಕಛೇರಿಯ ಮುಖ್ಯಸ್ಥರು)

↓

ಸಬ್‌ಇನ್ಸ್‌ಪೆಕ್ಟರ್ ಆಫ್ ಪೊಲೀಸ್ (**PSI**)

↓

ಅಸಿಸ್ಟಂಟ್ ಸಬ್‌ಇನ್ಸ್‌ಪೆಕ್ಟರ್ ಆಫ್ ಪೊಲೀಸ್ (**ASI**)

↓

ಹೆಡ್ ಕಾನ್ಸ್‌ಟೇಬಲ್

↓

ಪೊಲೀಸ್ ಕಾನ್ಸ್‌ಟೇಬಲ್

©KTBS Not to be republished

ಪೊಲೀಸ್ ವ್ಯವಸ್ಥೆ ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆ ಹಾಗೂ ರಕ್ಷಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

> ***ನಿಮಗಿದು ತಿಳಿದಿರಲಿ:*** *ಯಾವುದೇ ಅಹಿತಕರ ಘಟನೆಗಳಿಗೆ ಹತ್ತಿರದ ಪೊಲೀಸ್ ಠಾಣೆಯಲ್ಲಿ ದೂರು ನೀಡಬಹುದಾಗಿದೆ. ಇಲ್ಲಿ ದೂರು ನೀಡಿದ ನಂತರ ಪ್ರಥಮ ಮಾಹಿತಿ ವರದಿ (ಎಫ್.ಐ.ಆರ್.)ಯನ್ನು ದಾಖಲಿಸಲಾಗುತ್ತದೆ.*

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಸಾರ್ವಜನಿಕ ಆಡಳಿತದ ಪಿತಾಮಹ ______________ .
2. ಸಾರ್ವಜನಿಕ ಆಡಳಿತ ಪದವನ್ನು ______________ ಪ್ರಥಮವಾಗಿ ಉಪಯೋಗಿಸುತ್ತಾರೆ.
3. ಕೇಂದ್ರ ಲೋಕಾಸೇವಾ ಆಯೋಗದ ಸದಸ್ಯರನ್ನು ______________ ನೇಮಕ ಮಾಡುತ್ತಾರೆ.
4. ಸಂವಿಧಾನದ ______________ ವಿಧಿಯು ರಾಜ್ಯ ಲೋಕಸೇವಾ ಆಯೋಗದ ಕುರಿತು ತಿಳಿಸುತ್ತದೆ.
5. ರಾಜ್ಯ ಸಚಿವಾಲಯದ ಮುಖ್ಯಸ್ಥರು ______________ .

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ, ಉತ್ತರಿಸಿ.**

1. ಸಾರ್ವಜನಿಕ ಆಡಳಿತ ಪ್ರಸ್ತುತ ಅತ್ಯಗತ್ಯವಾಗಿದೆ. ಚರ್ಚಿಸಿ.
2. ಸಾರ್ವಜನಿಕ ಆಡಳಿತ ವ್ಯಕ್ತಿಯ ಹುಟ್ಟಿನಿಂದ ಮರಣದವರೆಗೆ ವ್ಯಾಪಕವಾಗಿ ಕಾರ್ಯನಿರ್ವಹಿಸುತ್ತದೆ. ಸಮರ್ಥಿಸಿ.
3. ನೇಮಕಾತಿ ವಿಧಾನಗಳ ಕುರಿತು ವಿವರಿಸಿರಿ.
4. ತರಬೇತಿಯ ವಿಧಗಳು ಯಾವುವು?
5. ಕೇಂದ್ರ ಸಚಿವಾಲಯದ ರಚನೆ ತಿಳಿಸಿ.
6. ಕಾನೂನು ಸುವ್ಯವಸ್ಥೆ ನಿರ್ವಹಣೆಯಲ್ಲಿ ರಾಜ್ಯದ ಪಾತ್ರವೇನು? ವಿವರಿಸಿರಿ.

**III. ಯೋಜನೆ**

1. ಕೇಂದ್ರ ಲೋಕಸೇವಾ ಆಯೋಗ ನಡೆಸುವ ಸೇವೆಗಳ ಪಟ್ಟಿಮಾಡಿ.
2. ರಾಜ್ಯ ಸಚಿವಾಲಯದ ಅಧಿಕಾರಿಗಳ ಶ್ರೇಣೀಕೃತ ಪಟ್ಟಿ ತಯಾರಿಸಿ.

**IV. ಚಟುವಟಿಕೆ :**

1. ಕಾನೂನು ಮತ್ತು ಸುವ್ಯವಸ್ಥೆಯಲ್ಲಿ ಪೋಲೀಸ್ ಇಲಾಖೆಯ ಪಾತ್ರದ ಮತ್ತು ಸಂಚಾರ ನಿಯಮಗಳ ಕುರಿತು ಸಮೀಪದ ಪೊಲೀಸ್ ಠಾಣೆಗೆ ಭೇಟಿ ಮಾಡಿ ಪೊಲೀಸ್ ಅಧಿಕಾರಿಯ ಜೊತೆಗೆ ಚರ್ಚಿಸಿರಿ.

*****

©KTBS Not to be republished

# ಸಮಾಜಶಾಸ್ತ್ರ

## ಅಧ್ಯಾಯ-1

# ಸಮಾಜಶಾಸ್ತ್ರದ ಪರಿಚಯ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಸಮಾಜಶಾಸ್ತ್ರದ ಉಗಮ, ಅರ್ಥ, ಸ್ವರೂಪ, ವ್ಯಾಪ್ತಿ ಮತ್ತು ಮಹತ್ವ.*
- *ಸಮಾಜಶಾಸ್ತ್ರ ಮತ್ತು ಇತರ ಸಮಾಜವಿಜ್ಞಾನಗಳ ನಡುವಿನ ಸಂಬಂಧ ಮತ್ತು ವ್ಯತ್ಯಾಸ.*
- *ಆರಂಭಿಕ ವಿದೇಶಿ ಸಮಾಜಶಾಸ್ತ್ರಜ್ಞರು*

  *1. ಆಗಸ್ಟ್ ಕಾಮ್ಟೆ 2. ಕಾರ್ಲ್ ಮಾರ್ಕ್ಸ್ 3. ಎಮಿಲಿ ಡರ್ಖೆಮ್ 4. ಮ್ಯಾಕ್ಸ್ ವೇಬರ್*
- *ಭಾರತದ ಪ್ರಮುಖ ಸಮಾಜಶಾಸ್ತ್ರಜ್ಞರು*

  *1. ಬಿ. ಆರ್. ಅಂಬೇಡ್ಕರ್ 2. ಜಿ. ಎಸ್. ಘುರ್ಯೆ 3. ಎಂ.ಎನ್. ಶ್ರೀನಿವಾಸ್*

  *4. ಸಿ. ಪಾರ್ವತಮ್ಮ 5. ಇರಾವತಿ ಕರ್ವೆ 6. ಎ.ಆರ್.ದೇಸಾಯಿ*

### ಸಮಾಜಶಾಸ್ತ್ರದ ಉಗಮ

ಮಾನವ ಬದುಕು ಕುತೂಹಲಕಾರಿಯಾದದು. ಬಹಳ ಹಿಂದಿನಿಂದಲೂ ಮಾನವ ತಾನು ವಾಸಿಸುವ ಪರಿಸರವನ್ನು, ನಿಸರ್ಗವನ್ನು ಮತ್ತು ತಾನೇ ಸೃಷ್ಟಿಸಿರುವ ಸಾಮಾಜಿಕ ಜಗತ್ತನ್ನು ಹೆಚ್ಚು ಆಳವಾಗಿ ಮತ್ತು ನಿಖರವಾಗಿ, ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾ ಬಂದಿರುವುದು ತಿಳಿಯುತ್ತದೆ. ಇತರ ಪ್ರಾಣಿಗಳಿಗಿಂತ ಭಿನ್ನವಾಗಿರುವ 'ಚಿಂತನಾಜೀವಿ' ಅಥವಾ 'ಆಲೋಚನಾ ಜೀವಿ' ಮಾನವ. ಮಾನವನಿಗೂ ಮತ್ತು ಪ್ರಾಣಿಗಳಿಗೂ ಬಹಳ ವ್ಯತ್ಯಾಸಗಳಿವೆ. ಉದಾಹರಣೆಗೆ; ದೈಹಿಕ ರಚನೆ ಮತ್ತು ಬೆಳವಣಿಗೆಯಲ್ಲಿ, ಆಹಾರ ಸೇವನೆಯಲ್ಲಿ, ಕ್ರಿಯಾಶೀಲತೆಯಲ್ಲಿ, ಮೆದುಳಿನ ವಿಕಾಸದಲ್ಲಿ ಹೆಚ್ಚಿನ ವ್ಯತ್ಯಾಸಗಳನ್ನು ನಾವು ಕಾಣಬಹುದು.

ಮಾನವ ಸಮಾಜ ಹಂತಹಂತವಾಗಿ ವಿಕಾಸಗೊಳ್ಳುತ್ತಾ ಬಂದು ಇಂದು ವಿಜ್ಞಾನ, ಮಾಹಿತಿ ತಂತ್ರಜ್ಞಾನ ಯುಗವನ್ನು ತಲುಪಿ, ತಾನು ವಾಸಿಸುವ ಗ್ರಹದ ಜೊತೆಗೆ ಇತರ ಗ್ರಹಗಳಲ್ಲಿ ಏನಿದೆ ಎನ್ನುವುದನ್ನು ತಿಳಿದುಕೊಳ್ಳಲು ಹವಣಿಸುವ ಮಟ್ಟವನ್ನು ತಲುಪಿದೆ.

### ಮಾನವ ಸಂಘಜೀವಿ/ ಸಮಾಜಜೀವಿ :

ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧ ಅನನ್ಯವಾದುದು. ವ್ಯಕ್ತಿಯಿಲ್ಲದೆ ಸಮಾಜವಿಲ್ಲ, ಸಮಾಜವಿಲ್ಲದೆ ವ್ಯಕ್ತಿಯಿಲ್ಲ. ನಾವು ಸಾಮಾನ್ಯವಾಗಿ ಆಲೋಚಿಸಿದಾಗ, ತಾನೊಬ್ಬನೇ ಭೂಮಿಯಲ್ಲಿ ಇರಲು ಸಾಧ್ಯವೆ? ಆಗ ಎಲ್ಲರಿಗೂ ಸಿಗುವ ಉತ್ತರ ಒಂದೇ 'ಅಸಾಧ್ಯ' ಎಂಬುದು. ಮಾನವ ಸಂಘಜೀವಿ. ಎಲ್ಲರ ಜೊತೆಯಲ್ಲಿ ಬದುಕಲು ಇಚ್ಛಿಸುತ್ತಾನೆ/ಳೆ. ನಮ್ಮೆಲ್ಲರ ವಿಕಾಸ ಮತ್ತು ಬೆಳವಣಿಗೆಗೆ ಸಂಘ ಜೀವನ ಅಗತ್ಯ. ಆದುದರಿಂದಲೇ ಮಾನವ ಸಮಾಜವನ್ನು 'ಸಾಮಾಜಿಕ ಸಂಬಂಧಗಳ ಬಲೆ' ಎಂದೂ ಕರೆಯಲಾಗುತ್ತದೆ.

©KTBS Not to be republished

## ಸಮಾಜಶಾಸ್ತ್ರದ ಅರ್ಥ :

"ಸೋಷಿಯಾಲಜಿ" ಎನ್ನುವುದು 'ಸಮಾಜಶಾಸ್ತ್ರ' ಎಂಬ ಕನ್ನಡಕ್ಕೆ ತತ್ಸಮಾನ ಅರ್ಥವುಳ್ಳ ಇಂಗ್ಲಿಷ್ ಪದ. ಸೋಷಿಯಾಲಜಿ ಎಂಬ ಪದವು ಲ್ಯಾಟಿನ್ ಭಾಷೆಯ 'ಸೋಶಿಯಸ್' ಮತ್ತು ಗ್ರೀಕ್ ಭಾಷೆಯ 'ಲಾಗೋಸ್' ಎಂಬ ಶಬ್ದಗಳಿಂದ ಉತ್ಪತ್ತಿ ಹೊಂದಿದೆ. 'ಸೋಶಿಯಸ್' ಎಂದರೆ ಜೊತೆಗಾರ, ಸಹಚರ. ಹಾಗೆಯೇ 'ಲಾಗೋಸ್' ಎಂದರೆ ಶಾಸ್ತ್ರ ಅಥವಾ ವಿಜ್ಞಾನವೆಂಬ ಅರ್ಥವಿದೆ. ಹೀಗೆ "ಸಮಾಜಶಾಸ್ತ್ರ" ಎಂಬುದು ಸಮಾಜದ ವೈಜ್ಞಾನಿಕ ಅಧ್ಯಯನ ಶಾಸ್ತ್ರ.

## ಸಮಾಜಶಾಸ್ತ್ರದ ವ್ಯಾಖ್ಯೆಗಳು

**ಆಗಸ್ಟ್ ಕಾಮ್ಟೆ :** ಸಮಾಜಶಾಸ್ತ್ರವು ನಿಸರ್ಗ ಸಹಜವಾದ ಹಾಗು ಸ್ಥಿರರೂಪದ ನಿಯಮಗಳಿಗೆ ಒಳಪಟ್ಟ ವಿಜ್ಞಾನವಾಗಿದ್ದು ಅಂತಹ ನಿಯಮಗಳನ್ನು ಕಂಡುಕೊಳ್ಳುವುದೇ 'ಸಮಾಜಶಾಸ್ತ್ರ' ಎಂದು ಹೇಳಿದ್ದಾರೆ.

**ಮ್ಯಾಕ್ಸ್‌ವೇಬರ್:** "ಸಾಮಾಜಿಕ ವರ್ತನೆಯನ್ನು ಅರ್ಥೈಸುವ ಅಧ್ಯಯನವೆ "ಸಮಾಜಶಾಸ್ತ್ರ" ಎಂದು ಹೇಳಿದ್ದಾರೆ.

**ಡರ್ಖಿಂ:** "ಸಾಮಾಜಿಕ ಸಂಸ್ಥೆಗಳ ವಿಜ್ಞಾನವೇ "ಸಮಾಜಶಾಸ್ತ್ರ" ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಹೇಳುವುದಾದರೆ: "ಸರ್ವ ಮಾನವ ಸಮಾಜದ ಅಧ್ಯಯನವೆ ಸಮಾಜಶಾಸ್ತ್ರ" ಎಂದು ಹೇಳಬಹುದು.

## ಸಮಾಜಶಾಸ್ತ್ರದ ಉಗಮ

ಸಮಾಜಶಾಸ್ತ್ರವು ಒಂದು ಸ್ವತಂತ್ರ ಹಾಗೂ ಪ್ರತ್ಯೇಕ ಅಧ್ಯಯನ ಶಾಸ್ತ್ರವಾಗಿ ರೂಪುಗೊಳ್ಳತೊಡಗಿದ್ದು, 19ನೇ ಶತಮಾನದ ಮಧ್ಯಭಾಗದಲ್ಲಿ ಎನ್ನಬಹುದು. ನಂತರದ 50 ವರ್ಷಗಳಲ್ಲಿ ಅದು ವೈಜ್ಞಾನಿಕ ಸ್ವರೂಪವನ್ನು ಪಡೆಯಿತು. ಸಮಾಜ ವಿಜ್ಞಾನಗಳಾದ ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮನಃಶಾಸ್ತ್ರ ಇತ್ಯಾದಿಗಳು ತಮ್ಮದೇ ಆದ ದೀರ್ಘ ಹಿನ್ನಲೆಯನ್ನು ಹೊಂದಿರಬಹುದಾದರೂ 'ಸಮಾಜ ವಿಜ್ಞಾನಗಳು' ಎಂಬ ಮಾನ್ಯತೆ ಅವುಗಳಿಗೆ ಲಭ್ಯವಾದುದು ಸಾ.ಶ 18 ಹಾಗೂ 19 ನೆಯ ಶತಮಾನಗಳಲ್ಲಿ 'ಯುರೋಪಿನಲ್ಲಾದ ಕೈಗಾರಿಕಾ ಕ್ರಾಂತಿ ಮತ್ತು ಫ್ರಾನ್ಸಿನ ಮಹಾಕ್ರಾಂತಿಯ ಬೆಳವಣಿಗೆಯಿಂದ. ಸಾ.ಶ 16 ಮತ್ತು 18 ನೆಯ ಶತಮಾನಗಳಲ್ಲಿ ಸಂಭವಿಸಿದ ಜ್ಞಾನ ಪುನರುತ್ಥಾನ, ಧಾರ್ಮಿಕ ಸುಧಾರಣೆ ಇನ್ನೂ ಮುಂತಾದ ಬೌದ್ಧಿಕ ಪ್ರಕ್ರಿಯೆಗಳು ಹಾಗೂ ಭೌತ ವಿಜ್ಞಾನಗಳಿಗೆ ಸಿಕ್ಕಿದ ಪ್ರೇರಣೆ ಸಮಾಜಶಾಸ್ತ್ರದ ಉಗಮಕ್ಕೆ ಕಾರಣವಾಗಿವೆ.

**ಸಮಾಜಶಾಸ್ತ್ರದ ವ್ಯಾಪ್ತಿ :** ಸಮಾಜಶಾಸ್ತ್ರವು ಮಾನವ ಸಮಾಜವನ್ನು ಅಧ್ಯಯನ ಮಾಡುತ್ತದೆ. ಈ ಶಾಸ್ತ್ರ ಮಾನವನ ಸಾಮಾಜಿಕ ಜೀವನ, ಸಾಮಾಜಿಕ ಸಂಬಂಧಗಳು, ಸಾಮಾಜಿಕ ಸಂಸ್ಥೆಗಳು ಮತ್ತು ಸಾಮಾಜಿಕ ಪ್ರಕ್ರಿಯೆಗಳನ್ನು ತನ್ನ ವ್ಯಾಪ್ತಿಯಲ್ಲಿ ಪರಿಗಣಿಸುತ್ತದೆ.

**ಸಮಾಜಶಾಸ್ತ್ರದ ಸ್ವರೂಪ:** ಸಮಾಜ ವಿಜ್ಞಾನಗಳ ಸಮೂಹದಲ್ಲಿ ಸಮಾಜಶಾಸ್ತ್ರಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ತನ್ನ ಕೆಲವು ಗುಣಗಳಿಂದಾಗಿ ಅದು ಇತರ ಸಮಾಜ ವಿಜ್ಞಾನಗಳಿಗಿಂತ ಭಿನ್ನವಾಗಿದೆ. ಸಮಾಜಶಾಸ್ತ್ರವು ಒಂದು ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಅಧ್ಯಯನ ಶಾಸ್ತ್ರವೆಂದು ಪರಿಗಣಿಸಲ್ಪಟ್ಟಿದೆ.

1. **ಸಮಾಜಶಾಸ್ತ್ರವು ಒಂದು ಸಮಾಜ ವಿಜ್ಞಾನವಾಗಿದೆಯೇ ಹೊರತು ಭೌತವಿಜ್ಞಾನವಾಗಿಲ್ಲ:** ಸಮಾಜಶಾಸ್ತ್ರವು ಸಮಾಜ ವಿಜ್ಞಾನಗಳ ಕುಟುಂಬಕ್ಕೆ ಸೇರಿದುದಾಗಿದೆಯೇ ಹೊರತು ಭೌತ ವಿಜ್ಞಾನಗಳ ಸಮೂಹಕ್ಕೆ ಸೇರಿಲ್ಲ. ಸಮಾಜ ವಿಜ್ಞಾನಗಳಲ್ಲಿ ಒಂದಾದ ಸಮಾಜಶಾಸ್ತ್ರವು ಮಾನವ ಸಮಾಜದ ಸಾಮಾಜಿಕ ಚಟುವಟಿಕೆಗಳು ಮತ್ತು ಸಾಮಾಜಿಕ ಜೀವನವನ್ನು ಅಧ್ಯಯನ

©KTBS Not to be republished

ಮಾಡುತ್ತದೆ. ಹಾಗೆಯೇ ಸಮಾಜಶಾಸ್ತ್ರವು ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮನಃಶಾಸ್ತ್ರ, ಮಾನವಶಾಸ್ತ್ರಗಳೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದೆ.

2. **ಸಮಾಜಶಾಸ್ತ್ರವು ಒಂದು ನಿಶ್ಚಯಾತ್ಮಕ ಶಾಸ್ತ್ರವೇ ಹೊರತು ಗುಣ ನಿರ್ದೇಶಕ ಶಾಸ್ತ್ರವಲ್ಲ:** ಸಮಾಜಶಾಸ್ತ್ರವು ತನ್ನ ಅಧ್ಯಯನದಲ್ಲಿ ವಿಷಯವು "ಹೇಗಿದೆಯೋ ಹಾಗೆ" ಅಧ್ಯಯನ ಮಾಡುವುದೇ ಹೊರತು ಅದು "ಹೇಗಿರಬೇಕು" ಎನ್ನುವ ದೃಷ್ಟಿಯಿಂದ ಅಧ್ಯಯನ ಮಾಡುವುದಿಲ್ಲ. ಈ ದೃಷ್ಟಿಕೋನವು ನೈತಿಕವೂ ಅಲ್ಲ. ಅನೈತಿಕವೂ ಅಲ್ಲ. ಆದರೆ ನಿರಪೇಕ್ಷವಾದುದು. ಅಂದರೆ ನೈತಿಕ ವಿಷಯಗಳಲ್ಲಿ ಸಮಾಜಶಾಸ್ತ್ರವು ತಟಸ್ಥ ಧೋರಣೆಯನ್ನು ಹೊಂದಿದೆ.

3. **ಸಮಾಜಶಾಸ್ತ್ರವು ಒಂದು ಶುದ್ಧ ಶಾಸ್ತ್ರವೇ ಹೊರತು ಪ್ರಾಯೋಗಿಕ ಅಥವಾ ಆನ್ವಯಿಕ ವಿಜ್ಞಾನವಲ್ಲ :** ಒಂದು ಶುದ್ಧ ಶಾಸ್ತ್ರವಾಗಿರುವ ಸಮಾಜಶಾಸ್ತ್ರದ ಉದ್ದೇಶವು ಜ್ಞಾನ ಸಂಪಾದನೆಯೇ ಹೊರತು, ಪ್ರಾಯೋಗಿಕ ಶಾಸ್ತ್ರಗಳಂತೆ ಹೊಸ ಜ್ಞಾನದ ಶೋಧನೆಯಲ್ಲ.

4. **ಸಮಾಜಶಾಸ್ತ್ರವು ಅಮೂರ್ತ ಸ್ವರೂಪದ ವಿಜ್ಞಾನವಾಗಿದೆಯೇ ಹೊರತು ಮೂರ್ತ ಸ್ವರೂಪದ್ದಲ್ಲ:** ಸಮಾಜಶಾಸ್ತ್ರವು ಕೆಲವು ನಿರ್ದಿಷ್ಟ ಮಾನವ ಘಟನೆಗಳ ಮೂರ್ತರೂಪದಲ್ಲಿ ಆಸಕ್ತವಾಗಿಲ್ಲ. ಆದರೆ ಸಾಮಾನ್ಯ ಸ್ವರೂಪದ ಮಾನವ ಘಟನೆಗಳ 'ರೂಪ' ಹಾಗೂ 'ನಮೂನೆ'ಗಳಲ್ಲಿ ಮಾತ್ರ ಆಸಕ್ತವಾಗಿದೆ. ಉದಾಹರಣೆಗೆ; ಸಮಾಜಶಾಸ್ತ್ರವು ಇತಿಹಾಸದಂತೆ ಯಾವುದೇ ನಿಶ್ಚಿತವಾದ ಯುದ್ಧ ಅಥವಾ ಕ್ರಾಂತಿಯಲ್ಲಿ ಆಸಕ್ತವಾಗಿಲ್ಲ. ಅರ್ಥಾತ್ ವಿಭಿನ್ನ ರೀತಿಯ ಸಾಮಾಜಿಕ ಸಂಘರ್ಷಗಳೆಂದು ಭಾವಿಸಿ ಅವುಗಳ ಸಾಮಾನ್ಯ ಸ್ವರೂಪ ಹಾಗೂ ಲಕ್ಷಣಗಳನ್ನು ಅಧ್ಯಯನ ಮಾಡುತ್ತದೆ.

5. **ಸಮಾಜಶಾಸ್ತ್ರವು ಒಂದು ಸಾಮಾನ್ಯ ವಿಜ್ಞಾನವಾಗಿದೆಯೇ ಹೊರತು ವಿಶೇಷ ವಿಜ್ಞಾನವಾಗಿಲ್ಲ:** ಸಮಾಜ ವಿಜ್ಞಾನಗಳಲ್ಲಿ ಸಮಾಜಶಾಸ್ತ್ರವು ಮಾತ್ರ ಮಾನವನ ಅಂತರ್‌ಕ್ರಿಯೆಗಳು ಒಳಗೊಳ್ಳುವ ಆರ್ಥಿಕ, ರಾಜಕಿಯ, ಧಾರ್ಮಿಕ, ನೈತಿಕ, ಬೌದ್ಧಿಕ, ಮುಂತಾದ ಹಲವು ಸ್ಥಿತಿಗಳ ಸಾಮಾನ್ಯ ಸ್ವರೂಪವನ್ನು ಅಧ್ಯಯನ ಮಾಡುತ್ತದೆ. ಇದರ ಅಧ್ಯಯನ ವ್ಯಾಪ್ತಿ ವಿಶಾಲವಾದುದೇ ಹೊರತು ಉಳಿದ ಸಮಾಜ ವಿಜ್ಞಾನಗಳಂತೆ ಸೀಮಿತವಾದುದಲ್ಲ.

### ಸಮಾಜಶಾಸ್ತ್ರದ ಪ್ರಾಮುಖ್ಯತೆ/ಮಹತ್ವ

ಸಮಾಜ ವಿಜ್ಞಾನಗಳಲ್ಲಿ ಸಮಾಜಶಾಸ್ತ್ರ ಕಿರಿಯ ವಿಜ್ಞಾನವಾಗಿದ್ದರೂ ಅದರ ಉಪಯೋಗಗಳನ್ನು ಸಾರ್ವತ್ರಿಕವಾಗಿ ಗುರುತಿಸಲಾಗಿದೆ.

1. **ಸಮಾಜಶಾಸ್ತ್ರವು ವೈಜ್ಞಾನಿಕವಾಗಿ ಮಾನವ ಸಮಾಜವನ್ನು ಅಧ್ಯಯನ ಮಾಡುತ್ತದೆ:** ಸಮಾಜಶಾಸ್ತ್ರವು ವೈಜ್ಞಾನಿಕ ವಿಧಾನದ ಮೂಲಕ ಮಾನವ ಸಮಾಜದ ಬಗ್ಗೆ ಕ್ರಮಬದ್ಧವಾದ ಜ್ಞಾನವನ್ನು ಸಂಗ್ರಹಿಸಿದ್ದು, ಇದು ವಿವಿಧ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಸಹಕಾರಿಯಾಗಿದೆ.

2. **ವ್ಯಕ್ತಿತ್ವದ ಬೆಳವಣಿಗೆಗೆ ಪೂರಕ:** ಮಾನವ ಮೂಲಭೂತವಾಗಿ ಸಾಮಾಜಿಕ ಜೀವಿ. ಸಮಾಜದಲ್ಲಿ ಬದಲಾಗುವ ಸನ್ನಿವೇಶಗಳಿಗೆ ಅವನು ಹೊಂದಿಕೊಳ್ಳಬೇಕಾಗುತ್ತದೆ, ಸಮಾಜದ ರಚನೆ, ಬೆಳವಣಿಗೆ, ಬದಲಾವಣೆ, ಸಮಸ್ಯೆಗಳು, ವ್ಯಕ್ತಿಯ ಬಾಧ್ಯತೆಗಳು ಇತ್ಯಾದಿ. ಇವುಗಳ ಬಗ್ಗೆ ಸಮಗ್ರವಾದ ಅರಿವು ಮೂಡಿಸಿ ಎಲ್ಲಾ ರೀತಿಯ ವ್ಯಕ್ತಿತ್ವ ಬೆಳವಣಿಗೆಗೆ ಎಡೆ ಮಾಡಿಕೊಡುತ್ತದೆ.

3. **ಸಾಮಾಜಿಕ ಪ್ರಕ್ರಿಯೆಗಳ ಪರಿಚಯ:** ಇತರೆ ಸಮಾಜದ ಧರ್ಮ, ಸಂಪ್ರದಾಯಗಳು, ಸಂಸ್ಕೃತಿ, ನೀತಿ–ನಿಯಮಗಳು, ಸಾಮಾಜಿಕ ಸಂಸ್ಥೆಗಳು, ಮೌಲ್ಯಗಳು, ಆದರ್ಶಗಳು ಇತ್ಯಾದಿಗಳ ಬಗ್ಗೆ ವೈಜ್ಞಾನಿಕ ಮತ್ತು ವೈಚಾರಿಕ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳುವಲ್ಲಿ, ಸಮಾಜದ ವಿವಿಧ ಸಮೂಹಗಳು

©KTBS Not to be republished

ಹಾಗೂ ಜನರೊಂದಿಗೆ ಸಹ–ಜೀವನ, ಸಹ–ಸಂಬಂಧಗಳನ್ನು ತಿಳಿದುಕೊಳ್ಳಲು ಸಮಾಜಶಾಸ್ತ್ರ ಸಹಕಾರಿಯಾಗಿದೆ.

4. **ಸಾಮಾಜಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಪರಿಹಾರ ಕಂಡುಕೊಳ್ಳುವಲ್ಲಿ ಸಹಾಯಕ:** ಪ್ರತಿಯೊಂದು ಸಮಾಜವು ತನ್ನದೇ ಆದ ಸಮಸ್ಯೆಗಳನ್ನು ಎದುರಿಸುತ್ತಲಿರುತ್ತದೆ. ಉದಾಹರಣೆಗೆ; ಅಪರಾಧ, ಬಾಲಾಪರಾಧ, ಕೋಮುಗಲಭೆ, ಮದ್ಯಪಾನ, ಹಸಿವು, ಅಪೌಷ್ಟಿಕತೆ, ಜಾತೀಯತೆ, ಬಡತನ, ನಿರುದ್ಯೋಗ, ಭಯೋತ್ಪಾದನೆ, ಜೂಜಾಟ, ವೇಶ್ಯಾವಾಟಿಕೆ, ಮಕ್ಕಳ ದುಡಿಮೆ, ಅಸಮಾನತೆ, ಹಿಂಸೆ, ಹೀಗೆ ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ನಾವು ಎದುರಿಸುತ್ತಿದ್ದೇವೆ. ಇಂತಹ ಸಾಮಾಜಿಕ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವುಗಳ ಪರಿಹಾರಕ್ಕೆ ಉಪಯುಕ್ತ ಸಲಹೆಗಳನ್ನು ಸಮಾಜಶಾಸ್ತ್ರ ವೈಜ್ಞಾನಿಕವಾಗಿ ನೀಡುತ್ತದೆ.

5. **ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ರೂಪಿಸಲು ಸಮಾಜಶಾಸ್ತ್ರ ಸಹಕಾರಿಯಾಗಿದೆ:** ಸಮಾಜದ ವೈಜ್ಞಾನಿಕ ಅಧ್ಯಯನದ ಮೂಲಕ ಸಾಮಾಜಿಕ ಅಭಿವೃದ್ಧಿ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ರಚಿಸಲು ಸಮಾಜಶಾಸ್ತ್ರವು ನೆರವಾಗುತ್ತದೆ.

**ಸಮಾಜಶಾಸ್ತ್ರ ಮತ್ತು ಇತರ ಸಮಾಜವಿಜ್ಞಾನಗಳ ನಡುವಿನ ಸಂಬಂಧ ಮತ್ತು ವ್ಯತ್ಯಾಸ.**

ಸಮಾಜಶಾಸ್ತ್ರವು ಒಂದು ರೀತಿಯ ಸಮಾಜ ವಿಜ್ಞಾನ. ಅದು ತನ್ನದೇ ಆದ ಅಧ್ಯಯನ ವಿಷಯಗಳೊಂದಿಗೆ ಮತ್ತು ಇತರೆ ಸಮಾಜ ವಿಜ್ಞಾನಗಳ ಜೊತೆಗೆ ಸಹ ಸಂಬಂಧವನ್ನು ಹೊಂದಿದೆ.

**ಸಮಾಜಶಾಸ್ತ್ರ ಮತ್ತು ರಾಜ್ಯಶಾಸ್ತ್ರದ ನಡುವಿನ ಸಂಬಂಧ:** ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರದ ನಡುವೆ ಬಹಳ ನಿಕಟವಾದ ಸಂಬಂಧವಿದೆ. ರಾಜ್ಯಶಾಸ್ತ್ರ ಮನುಷ್ಯನ ರಾಜಕೀಯ ಚಟುವಟಿಕೆಗಳನ್ನು, ರಾಜಕೀಯ ಸಂಸ್ಥೆ ಮತ್ತು ರಾಜಕೀಯ ವ್ಯವಸ್ಥೆಯ ನಡುವಿನ ವ್ಯವಹಾರಗಳನ್ನು ಅಧ್ಯಯನ ಮಾಡುತ್ತದೆ. ಸಮಾಜಶಾಸ್ತ್ರವು ರಾಜಕೀಯ ವ್ಯವಸ್ಥೆಯ ಅಡಿಯಲ್ಲಿ ಬರುವ ಸಂಘಟಿತ ಸಾಮಾಜಿಕ ಗುಂಪುಗಳು ಮತ್ತು ಸಂಸ್ಥೆಗಳನ್ನು ಅಧ್ಯಯನ ಮಾಡುತ್ತದೆ.

**ಸಮಾಜಶಾಸ್ತ್ರ ಮತ್ತು ಇತಿಹಾಸದ ನಡುವಿನ ಸಂಬಂಧ :** ಸಮಾಜಶಾಸ್ತ್ರ ಮತ್ತು ಇತಿಹಾಸ ತುಂಬಾ ಪರಸ್ಪರವಾಗಿವೆ. ಇತಿಹಾಸವು ಸಮಾಜದ ಹಿಂದಿನ ಬದುಕಿನ ಪುನರ್‌ರಚನೆಯಾಗಿದೆ. ಸಮಾಜಶಾಸ್ತ್ರವು ಸಮಕಾಲೀನ ಮಾನವ ಸಮಾಜದ ಪ್ರಸ್ತುತ ರಚನೆಯಾಗಿದೆ. ಸಮಕಾಲೀನ ಸಮಾಜದ ವಿವಿಧ ಸಾಮಾಜಿಕ ಘಟನೆಗಳು ಮತ್ತು ಅದರ ವಿವರಣೆಗಳನ್ನು ಇತಿಹಾಸ ಬರವಣಿಗೆಗಾರರಿಗೆ ದಾಖಲೆಯ ಜೊತೆಗೆ ವೈಜ್ಞಾನಿಕ ಮಾಹಿತಿ ನೀಡುವಲ್ಲಿ ಸಮಾಜಶಾಸ್ತ್ರ ಸಹಕಾರಿಯಾಗಿದೆ.

**ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರದ ನಡುವಿನ ಸಂಬಂಧ:** ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರದ ನಡುವಿನ ಸಂಬಂಧವು ವ್ಯಾಪಕವಾಗಿ ಗುರುತಿಸಲ್ಪಟ್ಟಿದೆ. ಮಾನವಶಾಸ್ತ್ರವು ಜನಾಂಗ, ಸಮುದಾಯಗಳು ಮತ್ತು ಸಂಸ್ಕೃತಿಯು ಹಾದು ಬಂದ ದಾರಿಯನ್ನು ತಿಳಿಸುತ್ತದೆ. ಮಾನವರ ಸಾಮಾಜಿಕ ಜೀವನದ ಸಮಗ್ರ ಅಧ್ಯಯನದ ಮೂಲಕ ಸಮಾಜಶಾಸ್ತ್ರವು ಬಹಳ ವಿಸ್ತಾರವಾಗಿ ಬೆಳೆಯುವ ಜೊತೆಗೆ ವಿವಿಧ ಸಮಾಜಗಳ ಬಗ್ಗೆ, ಅಲ್ಲಿನ ಸಾಮಾಜಿಕ ಸಂಸ್ಥೆಗಳ ಬಗ್ಗೆ ವಿಶ್ಲೇಷಣಾತ್ಮಕ ವಿವರಣೆಯನ್ನು ನೀಡುತ್ತದೆ.

**ಸಮಾಜಶಾಸ್ತ್ರ ಮತ್ತು ಮನೋವಿಜ್ಞಾನದ ನಡುವಿನ ಸಂಬಂಧ:** ಸಮಾಜಶಾಸ್ತ್ರ ಮತ್ತು ಮನೋವಿಜ್ಞಾನ ಒಂದಕ್ಕೊಂದು ಸಹಾಯಕ ವಿಜ್ಞಾನವಾಗಿವೆ. ಮನೋವಿಜ್ಞಾನ ಮಾನವನ ವರ್ತನೆಯನ್ನು ಮನೋವಿಜ್ಞಾನದ ನೆಲೆಯಲ್ಲಿ ಅಧ್ಯಯನ ಮಾಡುತ್ತದೆ. ಸಮಾಜಶಾಸ್ತ್ರ ಸಮಾಜದಲ್ಲಿ ವ್ಯಕ್ತಿಗಳ ಸಾಮಾಜಿಕ ನಡುವಳಿಕೆಗಳನ್ನು, ಸಾಮಾಜಿಕ ಸಂಸ್ಥೆಗಳ ಕಾರ್ಯಗಳನ್ನು, ವೈಜ್ಞಾನಿಕ ಅಧ್ಯಯನದ ಮೂಲಕ ಅರ್ಥೈಸುತ್ತದೆ.


© KTBS Not to be republished

**ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರದ ನಡುವಿನ ಸಂಬಂಧ:** ಅರ್ಥಶಾಸ್ತ್ರವು ಸಮಾಜದ ಆರ್ಥಿಕ ಚಟುವಟಿಕೆಗಳನ್ನು ಅಧ್ಯಯನ ಮಾಡಿದರೆ, ಸಮಾಜಶಾಸ್ತ್ರವು ಜನರ ಸಾಮಾಜಿಕ ಅಂಶಗಳ ಜೊತೆಗೆ ಆರ್ಥಿಕ ಅಂಶಗಳು ಹೇಗೆ ವ್ಯವಹರಿಸುತ್ತವೆ? ಆರ್ಥಿಕ ಅಂಶಗಳು ಜನರ ವರ್ತನೆಗಳನ್ನು ಹೇಗೆ ರೂಪಿಸುತ್ತಿವೆ ಎನ್ನುವುದನ್ನು ವಿಶ್ಲೇಷಣೆಗೆ ಒಳಪಡಿಸುತ್ತದೆ.

ಒಟ್ಟಾರೆ ಒಂದು ಸಮಾಜದ ಸಾಮಾಜಿಕ ವರ್ತನೆಗಳನ್ನು ಅರ್ಥೈಸುವಾಗ ಸಮಾಜಶಾಸ್ತ್ರವು ಇತರ ಎಲ್ಲಾ ಸಮಾಜವಿಜ್ಞಾನಗಳ ಜೊತೆ ತನ್ನದೇ ಆದ ಸಹ ಸಂಬಂಧವನ್ನು ಹೊಂದಿದೆ.

## ಆರಂಭಿಕ ವಿದೇಶಿ ಸಮಾಜಶಾಸ್ತ್ರಜ್ಞರು


**1. ಆಗಸ್ಟ್ ಕಾಮ್ಟೆ (1798–1857) :** ಆಗಸ್ಟ್ ಕಾಮ್ಟೆ ಫ್ರಾನ್ಸ್‌ನ ಒಬ್ಬ ಮಹಾನ್ ಚಿಂತಕ. ಮೊದಲ ಸಾಮಾಜಿಕ ತತ್ವಜ್ಞಾನಿ. 'ಸಮಾಜಶಾಸ್ತ್ರದ ಪಿತಾಮಹ' ಎಂದು ಆಗಸ್ಟ್ ಕಾಮ್ಟೆ ಅವರನ್ನು ಕರೆಯಲಾಗುತ್ತದೆ. ಆಗಸ್ಟ್ ಕಾಮ್ಟೆ ಸಮಾಜವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಸಮಾಜಶಾಸ್ತ್ರಕ್ಕೆ ವಿಜ್ಞಾನದ ಸ್ಥಾನ ಸಿಗುವಂತೆ ಮಾಡಿದ್ದಾರೆ. ಆಗಸ್ಟ್ ಕಾಮ್ಟೆ ಅವರ ಪ್ರಯತ್ನವನ್ನು ಬಲವಾಗಿ ಸಮರ್ಥನೆ ಮಾಡಿದವರಲ್ಲಿ ಹರ್ಬರ್ಟ್ ಸ್ಪೆನ್ಸರ್, ಎಮಿಲಿ ಡರ್ಖಿಂ, ಮ್ಯಾಕ್ಸವೇಬರ್ ಪ್ರಮುಖರು. ಸಾ.ಶ. 1839 ರಲ್ಲಿ 'ಪೊಸಿಟಿವ್ ಫಿಲಾಸಫಿ' ಎಂಬ ವಿಷಯದ ಕುರಿತಾಗಿ ಸಾರ್ವಜನಿಕ ಉಪನ್ಯಾಸ ನೀಡುವಾಗ ಆಗಸ್ಟ್ ಕಾಮ್ಟೆ ಮೊದಲ ಬಾರಿಗೆ ಸಮಾಜಶಾಸ್ತ್ರ ಎಂಬ ಪದವನ್ನು ಬಳಸಿದರು.


**ಆಗಸ್ಟ್ ಕಾಮ್ಟೆ**

ಇವರ ಪೂರ್ಣ ಹೆಸರು–ಇಸಿಡೂರ ಆಗಸ್ಟ್ ಮೇರಿ ಫ್ರಾಂಕಾಯಿಸ್ ಝೇವಿಯರ್ ಕಾಮ್ಟೆ ಸಾಮಾನ್ಯವಾಗಿ ಆಗಸ್ಟ್ ಕಾಮ್ಟೆ ಎಂದು ಪರಿಚಿತರಾಗಿದ್ದಾರೆ. ಇವರು ದಕ್ಷಿಣ ಫ್ರಾನ್ಸ್‌ನ ಮೋಂಟ್ ಪೆಲಿಯರ್ ಎಂಬಲ್ಲಿ 1798 ಜನವರಿ 19 ರಂದು ಕ್ಯಾಥೋಲಿಕ್ ಸಮುದಾಯದಲ್ಲಿ ಜನಿಸಿದ್ದಾರೆ. ಇವರು ಇಂಪಿರಿಯಲ್ ಶಾಲೆಯಲ್ಲಿ ತನ್ನ ಆರಂಭಿಕ ಶಿಕ್ಷಣ ಮುಗಿಸಿದರು. ಮುಂದೆ ಇಕೋಲ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅಧ್ಯಾಪಕರಾದರು.

- **ಇವರ ಪ್ರಮುಖ ಕೊಡುಗೆಗಳು :** ಪೊಸಿಟಿವ್ ಫಿಲಾಸಫಿ–1839, ಪೊಸಿಟಿವ್ ಪಾಲಿಟಿ–1851, ಮಾನವತಾ ಧರ್ಮ– 1857, ಮೂರು ಹಂತಗಳ ಸೂತ್ರ ಹೀಗೆ ಇವರು ಹಲವು ಸಮಾಜಶಾಸ್ತ್ರ ಗ್ರಂಥಗಳನ್ನು ಬರೆದಿದ್ದಾರೆ. ಆಗಸ್ಟ್ ಕಾಮ್ಟೆ ಅವರು ಸೆಪ್ಟಂಬರ್ 5, 1857 ತಮ್ಮ 59 ನೇ ವರ್ಷ

**2. ಕಾರ್ಲ್‌ಮಾರ್ಕ್ಸ್ (1818–1883):** ಕಾರ್ಲ್‌ಮಾರ್ಕ್ಸ್, ಸಾ.ಶ. 19ನೇ ಶತಮಾನದ ವಿಶ್ವಮಾನ್ಯ ಸಾಮಾಜಿಕ ಚಿಂತಕ. ಕಾರ್ಲ್‌ಮಾರ್ಕ್ಸ್ ಒಬ್ಬ ರಾಜಕೀಯ ಕ್ರಾಂತಿಕಾರಿ, ಚತುರ ಸಂಘಟಕ ಮತ್ತು ತೀಕ್ಷ್ಣ ಬರಹಗಾರ. ಕಾರ್ಲ್‌ಮಾರ್ಕ್ಸ್‌ರನ್ನು ಸಂಘರ್ಷ ಸಿದ್ಧಾಂತದ ಪ್ರವರ್ತಕನೆಂದು ಕರೆಯಲಾಗುತ್ತದೆ. ಇವರು ದುಡಿಯುವ ವರ್ಗಗಳು ಮತ್ತು ಕಾರ್ಮಿಕರನ್ನು ಕುರಿತು ನಡೆಸಿದ ಚಿಂತನೆ, ಅಧ್ಯಯನ ಮತ್ತು ಬರವಣಿಗೆಗಳು ಕಾರ್ಮಿಕರ ಹೋರಾಟಕ್ಕೆ ಹೊಸ ದಿಕ್ಕನ್ನು ನೀಡಿದೆ.



**ಕಾರ್ಲ್‌ಮಾರ್ಕ್ಸ್**

©KTBS Not to be republished

ಮಾರ್ಕ್ಸ್ ಅವರು ಸಾ.ಶ. 1818 ಮೇ 5 ರಂದು ಜರ್ಮನಿಯ ಟ್ರಿಯರ್ ಎಂಬಲ್ಲಿ ಜನಿಸಿದರು. ತಂದೆ-ತಾಯಿ ಹೀನ್ರಿಚ್ ಮತ್ತು ಹೆನ್ರಿಯಟ್ ಮಾರ್ಕ್ಸ್ ಹಾಗೂ ಹೆಂಡತಿ ಜೆನ್ನಿವಾನ್ ವೆಸ್ಟ್ ಪೆಲೀನ್. ಹೆಗೆಲನ್ ಕಾರ್ಲ್‌ಮಾರ್ಕ್ಸ್ ಅವರ ನೆಚ್ಚಿನ ಗುರುವಾಗಿದ್ದರು. 1841 ರಲ್ಲಿ ಕಾನೂನು ವಿಷಯದ ಪಿಎಚ್.ಡಿ ಪದವಿ ಪಡೆದು ವೃತ್ತಿ ಜೀವನ ಆರಂಭಿಸಿದರು.

• **ಇವರ ಪ್ರಮುಖ ಕೊಡುಗೆಗಳು :** ದಾಸ್ ಕ್ಯಾಪಿಟಲ್-1865, ದಿ ಹೋಲಿ ಫ್ಯಾಮಿಲಿ, ದಿ ಜರ್ಮನ್ ಐಡಿಯಾಲಜಿ-1845, ದಿ ಮ್ಯನಿಫೆಸ್ಟೊ ಆಫ್ ದಿ ಕಮ್ಯೂನಿಸ್ಟ್ ಪಾರ್ಟಿ-1848 ಇತ್ಯಾದಿ. ಕಾರ್ಲ್‌ಮಾರ್ಕ್ಸ್ ಅವರು ಮಾರ್ಚ್ 14, 1883ರಲ್ಲಿ ಮರಣ ಹೊಂದಿದರು. ಇವರು ಮರಣ ಹೊಂದಿ ಒಂದು ಶತಮಾನ ಕಳೆದರೂ ಅವರ ವಿಚಾರಗಳು, ಸಿದ್ಧಾಂತಗಳು ಇಂದಿಗೂ ಜೀವಂತವಾಗಿದೆ.

**3. ಎಮಿಲಿ ಡರ್ಖಿಂ (1858-1917) :** ಎಮಿಲಿ ಡರ್ಖಿಂ 19ನೇ ಶತಮಾನದ ಫ್ರಾನ್ಸ್‌ನ ಪ್ರಮುಖ ಸಮಾಜಶಾಸ್ತ್ರಜ್ಞ, ಸಮಾಜಶಾಸ್ತ್ರ ಅಧ್ಯಯನ ವಿಧಾನಗಳು ವಿಜ್ಞಾನಗಳಿಗೆ ಸಮನಾಗಿವೆ ಎಂದು ಸಾಬೀತುಪಡಿಸಿದ ವಿಶ್ಲೇಷಣಾತ್ಮಕ ಬರಹಗಾರ. ಆಗಸ್ಟ್ ಕಾಮ್ಟೆ ಸಮಾಜಶಾಸ್ತ್ರದ ಪಿತಾಮಹನಾದರೆ, ಡರ್ಖಿಂ ಅವರನ್ನು ಸಮಾಜಶಾಸ್ತ್ರದ ಬೆಳವಣಿಗೆಯ ಪಿತಾಮಹ ಎಂದು ಕರೆಯಲಾಗುತ್ತದೆ.



**ಎಮಿಲಿ ಡರ್ಖಿಂ**

ಎಮಿಲಿ ಡರ್ಖಿಂ ಅವರು ಫ್ರಾನ್ಸಿನ ಲೋರೋಯಿನ್ ಪ್ರಾಂತದ ಎಪಿನಾಲ್ ಎಂಬಲ್ಲಿ 1858 ಏಪ್ರಿಲ್, 15 ರಂದು ಜನಿಸಿದರು. ಯಾಹೂದಿ ಸಮುದಾಯಕ್ಕೆ ಸೇರಿದ ಇವರು ಫ್ರಾನ್ಸಿನ, ಡಿ ಎಫಿನಾಲೆಂಬ ಶಾಲೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಯಾಗಿ, ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದರು.

• **ಡರ್ಖಿಂ ಇವರ ಪ್ರಮುಖ ಕೊಡುಗೆಗಳು :** ದಿ ಡಿವಿಜನ್ ಆಫ್ ಲೇಬರ್ ಇನ್ ಸೊಸೈಟಿ -1893, ಸೂಸೈಡ್(ಆತ್ಮಹತ್ಯೆ) - 1897, ದಿ ರೂಲ್ಸ್ ಆಫ್ ಸೋಸಿಯಲಾಜಿಕಲ್ ಮೆಥಡ್-1895, ದಿ ಎಲಿಮೆಂಟರಿಫಾರ್ಮ್ಸ್ ಆಫ್ ರಿಲಿಜಿಯಸ್ ಲೈಫ್- 1912 ಇತ್ಯಾದಿ. ಇವರು ತಮ್ಮ 59ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು.

**4. ಮ್ಯಾಕ್ಸ್‌ವೇಬರ್** [**1864-1920**] **:** ಮ್ಯಾಕ್ಸ್‌ವೇಬರ್ ಅವರದು ಸಮಾಜವಿಜ್ಞಾನ ಕ್ಷೇತ್ರದಲ್ಲಿ ಅವಿಸ್ಮರಣೀಯ ವ್ಯಕ್ತಿತ್ವ. ಇವರು ಜರ್ಮನಿಯ ಒಬ್ಬ ಪ್ರಭಾವಿ ಬರಹಗಾರ ಮತ್ತು ಪ್ರತಿಭಾವಂತ ರಾಜಕಾರಣಿಯೂ ಹೌದು. ವೇಬರ್ ಕಾನೂನು, ಅರ್ಥಶಾಸ್ತ್ರ, ಧರ್ಮ, ಕಲೆ, ಇತಿಹಾಸ, ಸಮಾಜಶಾಸ್ತ್ರದಲ್ಲಿ ಹೆಚ್ಚಿನ ಆಸಕ್ತಿ ಮತ್ತು ಅಭಿರುಚಿಯನ್ನು ಹೊಂದಿದ್ದರು. ಮ್ಯಾಕ್ಸ್‌ವೇಬರ್ ಪಶ್ಚಿಮ ಜರ್ಮನಿಯ ಏರ್‌ಫರ್ಟ್ ಎಂಬಲ್ಲಿ ಏಪ್ರಿಲ್ 21ರ, 1864 ರಂದು ಪ್ರೊಟೆಸ್ಟಂಟ್ ಕುಟುಂಬವೊಂದರಲ್ಲಿ ಜನಿಸಿದರು. ವೇಬರ್ 18ನೇ ವಯಸ್ಸಿನಲ್ಲಿ ಜರ್ಮನಿಯ ಹೀಡಲ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಕಾನೂನು ವಿದ್ಯಾರ್ಥಿಯಾಗಿ, ಕಾನೂನುಶಾಸ್ತ್ರದಲ್ಲಿ ಪಿಎಚ್.ಡಿ ಪದವಿ ಪಡೆದು ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಬೋಧಕರಾಗಿ ಸೇವೆ ಸಲ್ಲಿಸಿದರು. ಇವರು 56ನೇ ವಯಸ್ಸಿನಲ್ಲಿ ಮರಣ ಹೊಂದಿದರು.



**ಮ್ಯಾಕ್ಸ್‌ವೇಬರ್**

**ಇವರ ಪ್ರಮುಖ ಕೊಡುಗೆಗಳು:** ದಿ ಜರ್ಮನ್ ಸೋಸಿಯಾಲಾಜಿಕಲ್ ಸೊಸೈಟಿ-1910, ದಿ ಪ್ರೊಟೆಸ್ಟಂಟ್ ಎಥಿಕ್ ಅಂಡ್ ದಿ ಸ್ಪಿರಿಟ್ ಅಫ್ ಕ್ಯಾಪಿಟಲಿಸಂ, ದಿ ಸಿಟಿ, ಬ್ಯೂರೋಕ್ರಸಿ, ಎಕೊನಮಿ ಅಂಡ್ ಸೊಸೈಟಿ, ಇತ್ಯಾದಿ.

©KTBS Not to be republished

## ಭಾರತದ ಪ್ರಮುಖ ಸಮಾಜಶಾಸ್ತ್ರಜ್ಞರು


ಡಾ. ಬಿ.ಅರ್. ಅಂಬೇಡ್ಕರ್

**ಡಾ. ಬಿ.ಆರ್. ಅಂಬೇಡ್ಕರ್ (1891–1956)** : ಆಧುನಿಕ ಭಾರತದ ನಿರ್ಮಾಪಕರ ಶ್ರೇಣಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್‌ರವರ ಕೊಡುಗೆ ಅತ್ಯಂತ ಮಹತ್ವದ್ದು. ಇವರ ಪೂರ್ಣ ಹೆಸರು ಭೀಮರಾವ್ ರಾಮ್‌ಜಿ ಅಂಬೇಡ್ಕರ್. ಇವರು ಜಗತ್ತಿನ ಪ್ರಮುಖ ಸಮಾಜ ಸುಧಾರಕ ನ್ಯಾಯಶಾಸ್ತ್ರಜ್ಞ ಭಾರತದಲ್ಲಿ ದಲಿತರು ಎದುರಿಸುತ್ತಿರುವ ಅಸ್ಪೃಶ್ಯತೆ ಸೇರಿದಂತೆ ಹಲವು ಸಾಮಾಜಿಕ ಭೇದ ಭಾವನೆಗಳ ವಿರುದ್ಧ ಹೋರಾಡಿದರು. ದಲಿತರು, ಮಹಿಳೆಯರ ಹಕ್ಕುಗಳಿಗಾಗಿ ಸಾಮಾಜಿಕ ಹೋರಾಟಗಳನ್ನು ಸಂಘಟಿಸಿ ಜಾಗೃತಿ ಮೂಡಿಸಿದರು.

ಇದೆಲ್ಲಕ್ಕಿಂತಲೂ ಮುಖ್ಯವಾಗಿ ಭಾರತದ ಸಾಂಸ್ಕೃತಿಕ ಅಸಮಾನತೆ ಸೇರಿದಂತೆ ಎಲ್ಲಾ ಬಗೆಯ ಶ್ರೇಣೀಕೃತ ಶೋಷಣೆ, ತಾರತಮ್ಯ ಮತ್ತು ದೌರ್ಜನ್ಯಗಳನ್ನು ಶಿಕ್ಷಣದ ಮೂಲಕ ಸರಿಪಡಿಸುವ ಭರವಸೆಯನ್ನು ಸಾಧಿಸಿ ತೋರಿಸಿದ ಮೊದಲಿಗರು ಡಾ. ಬಿ.ಅರ್. ಅಂಬೇಡ್ಕರ್. ಶಿಕ್ಷಣ ಕುರಿತು ಡಾ.ಬಿ.ಆರ್.ಅಂಬೇಡ್ಕರ್ ಅವರ ನಿಲುವು ಹಲವು ತತ್ವಶಾಸ್ತ್ರೀಯ ನಿಲುವುಗಳಿಗಿಂತ ಭಿನ್ನವಾದುದು. ಬಿ.ಆರ್.ಅಂಬೇಡ್ಕರ್ ಅವರು ಶಿಕ್ಷಣವು ಸಾಮಾಜಿಕ ಬದಲಾವಣೆಯ ಪ್ರಮುಖ ಸಾಧನ/ಮಾಧ್ಯಮ ಎಂದು ಪ್ರತಿಪಾದಿಸುತ್ತಾರೆ. ಅಂಬೇಡ್ಕರ್ ಅವರ ಪ್ರಕಾರ ಶಿಕ್ಷಣ ಎನ್ನುವುದು ತರ್ಕ ಸಮ್ಮತವಾದ ಮತ್ತು ವಿಮರ್ಶಾತ್ಮಕವಾದ ವಿಶ್ಲೇಷಣೆ ಮಾಡಲು ಬೇಕಾಗುವ ಸಂಪನ್ಮೂಲಗಳನ್ನು ಗಳಿಸಿಕೊಳ್ಳಲು ಇರುವ ಮಾರ್ಗ. ವಿಶೇಷವಾಗಿ ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಪೂರ್ವಾಗ್ರಹಗಳ ಅಪಾಯಗಳು ಮತ್ತು ಪೂರ್ವಾಗ್ರಹಗಳಿಂದ ರೂಪ ಪಡೆಯುವ ಸಾಮಾಜಿಕ ತೇಜೋವಧೆಗಳನ್ನು ಕಾರಣಗಳನ್ನು ತರ್ಕ ಸಮ್ಮತವಾಗಿ ಚರ್ಚಿಸಲು ಶಿಕ್ಷಣ ಅಗತ್ಯ ಎಂದು ಡಾ. ಬಿ.ಆರ್. ಅಂಬೇಡ್ಕರ್ ಹೇಳುತ್ತಾರೆ.


ಶಿಕ್ಷಣವನ್ನು ಎಲ್ಲರಿಗೂ ಕಡ್ಡಾಯ ಮತ್ತು ಉಚಿತವಾಗಿ ನೀಡಬೇಕು. ಏಕೆಂದರೆ ಶಿಕ್ಷಣ ಸಾರ್ವಜನಿಕವಾಗಿ ಸಮಾಜದ ಸಾಮಾಜಿಕ ಬದಲಾವಣೆಗೆ ಲಾಭಕರವಾದ ಗುಣಗಳನ್ನು ಹೊಂದಿದೆ ಎಂದು ತಿಳಿದ ಅಂಬೇಡ್ಕರ್ ಶಿಕ್ಷಣ ಸಾರ್ವಜನಿಕ ಸ್ವತ್ತಾಗಬೇಕು ಎಂದು ಪ್ರತಿಪಾದಿಸುತ್ತಾರೆ. ಈ ರೀತಿಯಾದ ಕ್ರಾಂತಿಕಾರಿ ಚಿಂತನೆಗಳಿಂದಲೇ ಅಂಬೇಡ್ಕರ್ ಅವರು ಸಂವಿಧಾನ ಕರಡು ರಚನೆಯಲ್ಲಿ ಅತ್ಯಂತ ರಚನಾತ್ಮಕವಾದ ಪಾತ್ರವನ್ನು ನಿರ್ವಹಿಸಿದ್ದಾರೆ.

ಪ್ರಾಯಶಃ ಈ ಕಾರಣದಿಂದಲೇ ಇಂಡಿಯಾದ ಸಂವಿಧಾನವು ವಿಶ್ವದಲ್ಲಿಯೆ ವಿಶಿಷ್ಟವಾದ ನ್ಯಾಯ ಮತ್ತು ಸಮಾನತೆಯನ್ನು ನೀಡುವ ದಿಕ್ಕಿನಲ್ಲಿ ಮಹತ್ವವನ್ನು ಪಡೆದಿದೆ.

**ಜೀವನ ಮತ್ತು ಶಿಕ್ಷಣ :** ಬಿ.ಆರ್.ಅಂಬೇಡ್ಕರ್ ಅವರು ಮಹಾರಾಷ್ಟ್ರದ ಅಂಬಾವಾಡೆ ಎಂಬ ಗ್ರಾಮದಲ್ಲಿ ಏಪ್ರಿಲ್ 14, 1891ರಂದು ಜನಿಸಿದರು. ಅಂಬೇಡ್ಕರ್ 6 ವರ್ಷದಲ್ಲಿದ್ದಾಗ ತಾಯಿಯನ್ನು ಕಳೆದುಕೊಂಡು ಚಿಕ್ಕಮ್ಮ ಮೀರಾಬಾಯಿಯವರ ಆಶ್ರಯದಲ್ಲಿ ಬೆಳೆದರು. ಇವರು ಸತಾರಾದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಿದರು.


ಮುಂಬೈನ ಪ್ರಖ್ಯಾತ ಎಲ್ಫಿನ್‌ಸ್ಟನ್ ಪ್ರೌಢಶಾಲೆಗೆ ಸೇರಿ 1907 ರಲ್ಲಿ ಮೆಟ್ರಿಕ್ ಹಂತದಲ್ಲಿ ಪ್ರಥಮ ಶ್ರೇಣಿ ಗಳಿಸಿ ತೇರ್ಗಡೆಯಾಗುತ್ತಾರೆ. ರಮಾಬಾಯಿ ಎಂಬ ಕನ್ಯೆಯೊಂದಿಗೆ ವಿವಾಹವಾದರು. ಮಹಾರಾಜರಿಂದ ರೂ. 25=00 ವಿದ್ಯಾರ್ಥಿ ವೇತನ ಪಡೆದು ಬಿ.ಎ. ಎಂ.ಎ ಪದವಿ ಪಡೆದು, 1916 ರಲ್ಲಿ ಕೊಲಂಬಿಯ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆಯುತ್ತಾರೆ. 1920 ರಲ್ಲಿ ಮೂಕನಾಯಕ ಎಂಬ ಪಾಕ್ಷಿಕವನ್ನು ಆರಂಭಿಸುತ್ತಾರೆ. ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರಮುಖ ಪುಸ್ತಕಗಳೆಂದರೆ ಜಾತಿ ವಿನಾಶ–1936, ಯಾರು ಶೂದ್ರರು–1946, ಬುದ್ಧ ಮತ್ತು ಅವನ ಧಮ್ಮ–1957, ಇತ್ಯಾದಿ. ಇವರ ಎಲ್ಲಾ ಬರವಣಿಗೆಗಳನ್ನು ಕರ್ನಾಟಕ ಸರ್ಕಾರ 26 ಸಂಪುಟಗಳಲ್ಲಿ ಮುದ್ರಿಸಿ ಪ್ರಕಟಿಸಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ಡಿಸೆಂಬರ್ 6, 1956 ರಂದು ನಿಧನರಾದರು.

©KTBS Not to be republished



ಜಿ.ಎಸ್. ಘುರ್ಯೆ

**ಜಿ.ಎಸ್. ಘುರ್ಯೆ (1893–1984) :** ಭಾರತದ ವಿಶ್ವವಿದ್ಯಾಲಯಗಳ ಹಂತದಲ್ಲಿ ಸಮಾಜಶಾಸ್ತ್ರದ ಅಧ್ಯಯನ ಮತ್ತು ಬೋಧನಾ ವಿಭಾಗಗಳನ್ನು ಪ್ರಾರಂಭಿಸುವಲ್ಲಿ ಘುರ್ಯೆ ಅವರು ಮುಖ್ಯ ಪಾತ್ರ ವಹಿಸಿದ್ದಾರೆ. ಇವರ ಪೂರ್ಣ ಹೆಸರು ಗೋವಿಂದ ಸದಾಶಿವ ಘುರ್ಯೆ. ಇವರು ಡಿಸೆಂಬರ್ 12, 1893ರಂದು ಮಹಾರಾಷ್ಟ್ರದ ಮಾಲ್ವನ್ ಎಂಬಲ್ಲಿ ಜನಿಸಿದರು. ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಕಾಲೇಜು ಶಿಕ್ಷಣವನ್ನು ಪೂರೈಸಿದರು. ಲಂಡನ್ನಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಪದವಿ ಪಡೆದು 1924ರಲ್ಲಿ ಭಾರತಕ್ಕೆ ಬಂದು ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಬೋಧನೆ ಮತ್ತು ಅಧ್ಯಯನ ವಿಭಾಗವನ್ನು ಪ್ರಾರಂಭಿಸಿ ಅದರ ಸ್ಥಾಪಕ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. ಇವರ ಪ್ರಮುಖ ಸಂಶೋಧನಾ ಪುಸ್ತಕಗಳೆಂದರೆ, ಕಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ 1932; ಶೆಡ್ಯೂಲ್ಡ್ ಟ್ರೈಬ್ಸ್ 1943; ಭಾರತೀಯ ಸಾಧುಗಳು 1953; ಮಾತ್ರವಲ್ಲದೆ ಇವರು 30 ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ್ದಾರೆ.



ಎಂ.ಎನ್. ಶ್ರೀನಿವಾಸ್

**ಎಂ.ಎನ್. ಶ್ರೀನಿವಾಸ್ (1916–1999) :** ಎಂ. ಎನ್. ಶ್ರೀನಿವಾಸ್ ಅವರು ಅಂತಾರಾಷ್ಟ್ರೀಯ ಖ್ಯಾತಿಯ ಭಾರತದ ಪ್ರಮುಖ ಸಮಾಜಶಾಸ್ತ್ರಜ್ಞರು. ಕ್ಷೇತ್ರಾಧಾರಿತ ದೃಷ್ಟಿಕೋನ ಎಂಬ ಅಧ್ಯಯನವನ್ನು ಬಳಸಿ ಸಮಾಜ ಸಂಶೋಧನೆಯನ್ನು ಜನಪ್ರಿಯಗೊಳಿಸಿದವರು ಇವರು. ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯದಲ್ಲಿದ್ದಾಗ ಅಲ್ಲಿ ನಡೆದ ವಿದ್ಯಾರ್ಥಿ ಚಳವಳಿಯಲ್ಲಿ ಇವರ ಕ್ಷೇತ್ರಕಾರ್ಯ ಟಿಪ್ಪಣಿಗಳು ಬೆಂಕಿಗೆ ತುತ್ತಾದ ದುರಂತದ ನಂತರ 'ದಿ ರಿಮೆಂಬರ್ಡ್ ವಿಲೇಜ್' ಎಂಬ ಸಾರ್ವಕಾಲಿಕ ಕೃತಿಯನ್ನು 1976ರಲ್ಲಿ ಮೊದಲು ಪ್ರಕಟಣೆ ಮಾಡಿದ್ದರು. ನಂತರ ಇದು ಅನೇಕ ಮರುಮುದ್ರಣಗಳನ್ನು ಕಂಡಿದೆ. ಇದಕ್ಕೂ ಮೊದಲು 1952ರಲ್ಲಿ ಎಂ.ಎನ್. ಶ್ರೀನಿವಾಸ್ ಅವರ ಗುರುಗಳಾದ ಎ.ಆರ್.ರ್‍ಯಾಡಿಕ್ಲಿಫ್ ಬ್ರೌನ್ ಮಾರ್ಗದರ್ಶನದಲ್ಲಿ "ದಕ್ಷಿಣ ಭಾರತದ ಕೊಡವರ ಧರ್ಮ ಮತ್ತು ಸಮಾಜ" ಎಂಬ ಪುಸ್ತಕ ಬರೆದರು.

ಇವರ ಪೂರ್ಣ ಹೆಸರು ಮೈಸೂರು ನರಸಿಂಹಾಚಾರ್ ಶ್ರೀನಿವಾಸ್. ನವೆಂಬರ್ 16, 1916ರಂದು ಮೈಸೂರಿನಲ್ಲಿ, ನರಸಿಂಹಾಚಾರ್ ಮತ್ತು ರುಕ್ಮಿಣಿ ದಂಪತಿಗಳ ಪುತ್ರನಾಗಿ ಜನಿಸಿದರು. ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಎಂ.ಎ., ಎಲ್.ಎಲ್.ಬಿ. ಮತ್ತು ಪಿಎಚ್.ಡಿ ಪದವಿ ಪಡೆದು ಆಕ್ಸ್‌ಫರ್ಡ್‌ನಲ್ಲಿ ಡಿ.ಫಿಲ್ ಪದವಿ ಪಡೆದು, ದೆಹಲಿಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಇವರ ಪ್ರಮುಖ ಕೊಡುಗೆಗಳು: ದಕ್ಷಿಣ ಭಾರತದ ಕೊಡವರ ಧರ್ಮ ಮತ್ತು ಸಮಾಜ–1952, ಇಂಡಿಯನ್ ವಿಲೇಜಸ್, ಸೋಸಿಯಲ್ ಚೇಂಜ್ ಇನ್ ಮಾಡರ್ನ್ ಇಂಡಿಯಾ–1963, ರಿಮೆಂಬರ್ಡ್ ವಿಲೇಜ್–1976 ಇತ್ಯಾದಿ.

**ಪಾರ್ವತಮ್ಮ ಸಿ :** ಪಾರ್ವತಮ್ಮ ಅವರು ಕರ್ನಾಟಕದವರಾಗಿದ್ದು ಸಮಕಾಲೀನ ಭಾರತದ ಪ್ರಮುಖ ಮಹಿಳಾ ಸಮಾಜಶಾಸ್ತ್ರಜ್ಞರಲ್ಲಿ ಒಬ್ಬರು. ಸಿ. ಪಾರ್ವತಮ್ಮ ಅವರು ಅತ್ಯಂತ ಕಷ್ಟದಲ್ಲಿ ಬೆಳೆದವರು. ಅವರು ಹುಟ್ಟಿದ ದಿನದಿಂದ ಅನೇಕ ಎಡರು ತೊಡರುಗಳನ್ನು ಎದುರಿಸಿ ಭಾರತದ ಪ್ರಮುಖ ಸಮಾಜಶಾಸ್ತ್ರಜ್ಞರಾಗಿ ಬೆಳೆದವರು. ಪಾರ್ವತಮ್ಮ ಅವರು ದಾವಣಗೆರೆ ಜಿಲ್ಲೆಯ (ಮೊದಲು ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲೂಕಿಗೆ ಸೇರಿದ) ಸ್ಯಾಗಲ್ಲಿ ಎನ್ನುವ ಹಳ್ಳಿಯಲ್ಲಿ ಜೂನ್ 1928 ರಲ್ಲಿ ಜನಿಸಿದರು. ಇವರ ನಿಖರವಾದ ಜನ್ಮ ದಿನಕ್ಕೆ ದಾಖಲೆಗಳು ದೊರೆಯದ ಕಾರಣ ಶಾಲೆಗೆ ಪ್ರವೇಶ ಪಡೆದ ದಾಖಲೆಯನ್ನು ಮಾತ್ರ ಪರಿಗಣಿಸಲಾಗಿದೆ. ಸಿ.ಪಾರ್ವತಮ್ಮ ಅವರು 9 ತಿಂಗಳ ಮಗುವಾಗಿರುವಾಗಲೇ ಅವರ ತಂದೆ ಮರಣಹೊಂದುತ್ತಾರೆ. ಅವರು ಅಜ್ಜಿಯ ಮನೆಯಲ್ಲಿ ದೊರೆತ ನೈತಿಕ ಮತ್ತು ಭೌತಿಕ ಬೆಂಬಲದಿಂದ ಚಿಕ್ಕ ವಯಸ್ಸಿನ ತಾಯಿಯೊಂದಿಗೆ ಬೆಳೆಯುತ್ತಾರೆ.

©KTBS Not to be republished

ಸಿ. ಪಾರ್ವತಮ್ಮ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹುಟ್ಟೂರಿನಲ್ಲಿದ್ದ ಏಕ ಶಿಕ್ಷಕರ ಶಾಲೆಯಲ್ಲಿ ಮುಗಿಸುತ್ತಾರೆ. ಮಾಧ್ಯಮಿಕ ಶಿಕ್ಷಣವನ್ನು ಅವರು ಪಕ್ಕದ ಲೋಕಿಕೆರೆಯಲ್ಲಿ, ನಂತರ ಸರ್ಕಾರಿ ಪ್ರೌಢಶಾಲೆ ದಾವಣಗೆರೆಯಲ್ಲಿ ತಮ್ಮ ಪ್ರೌಢಶಿಕ್ಷಣವನ್ನು ಪೂರೈಸುತ್ತಾರೆ. 1945 ರಲ್ಲಿ ಅವರು ಇಂಟರ್ ಮೀಡಿಯಟ್ ಕಾಲೇಜು ದಾವಣಗೆರೆಯಲ್ಲಿ ಇದ್ದರೂ ಸಹ ಪಾರ್ವತಮ್ಮ ಅವರ ಶಿಕ್ಷಕರೊಬ್ಬರು ಇವರ ಶಿಕ್ಷಣ ಮುಂದುವರೆಯಲಿ ಎನ್ನುವ ಕಾಳಜಿಯಿಂದ ಕಾಂತರಾಜುಶೆಟ್ಟಿ ಎನ್ನುವ ಡಿ.ಡಿ.ಪಿ.ಐ. ಸಹಕಾರದೊಂದಿಗೆ ಮೈಸೂರಿನ ಸಮುದಾಯ ವಸತಿ ನಿಲಯದಲ್ಲಿ ವಸತಿ ವ್ಯವಸ್ಥೆ ಮಾಡಿ, ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್ ಪ್ರವೇಶ ಪಡೆಯಲು ಅವಕಾಶ ಒದಗಿಸುತ್ತಾರೆ.

ಹಲವಾರು ಸವಾಲುಗಳ ನಡುವೆ ಶಿಕ್ಷಣ ಮುಂದುವರೆಸಿದ ಪಾರ್ವತಮ್ಮ ಅವರು ಕಲಾ ವಿಷಯದಲ್ಲಿ ಇಂಟರ್ ಮೀಡಿಯಟ್‌ನಲ್ಲಿ ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ, ನಂತರ ಬಿ.ಎ ಆನರ್ಸ್‌ಗೆ ಮಹಾರಾಜ ಕಾಲೇಜಿನಲ್ಲಿ ಸಾಮಾಜಿಕ ತತ್ವಶಾಸ್ತ್ರಕ್ಕೆ ಪ್ರವೇಶ ಪಡೆದರು. ಆ ಮಾಧ್ಯಮಿಕ ಶಾಲೆಯಿಂದ ಬಿ.ಎ ಆನರ್ಸ್ ಶಿಕ್ಷಣದವರೆಗೆ ವಿದ್ಯಾರ್ಥಿವೇತನ ಪಡೆದು ಓದಿ ಬಿ.ಎ ಆನರ್ಸ್‌ನಲ್ಲಿ ಪ್ರಥಮ ರ್‍ಯಾಂಕ್ ಪಡೆದು ತೇರ್ಗಡೆ–ಯಾಗುತ್ತಾರೆ. ನಂತರ ಅವರ ಪ್ರಾಧ್ಯಾಪಕರೊಬ್ಬರು ಉನ್ನತ ಶಿಕ್ಷಣವನ್ನು ವಿದೇಶದಲ್ಲಿ ಮುಂದುವರೆಸಲು ಸಲಹೆ ನೀಡಿದರು.

ಸಿ. ಪಾರ್ವತಮ್ಮ ಅವರು ಕರ್ನಾಟಕದಿಂದ ವಿದೇಶಕ್ಕೆ ಹೋಗಿ ಕಲಿತು ಕರ್ನಾಟಕಕ್ಕೆ ಬಂದು ನೆಲೆಸಿ, ಸಮಾಜಶಾಸ್ತ್ರವನ್ನು ಇಡೀ ದಕ್ಷಿಣ ಭಾರತದಲ್ಲಿ ವಿಸ್ತರಿಸಲು ನಡೆಸಿದ ಪ್ರಯತ್ನ ಅವರ ಸಾಮಾಜಿಕ ಕಾಳಜಿ ಮತ್ತು ಬದ್ಧತೆಯ ಮಹತ್ವವನ್ನು ತಿಳಿಸುತ್ತದೆ. ಇವರ ಪ್ರಮುಖ ಕೊಡುಗೆಗಳೆಂದರೆ ಪಾಲಿಟಿಕ್ಸ್ ಮತ್ತು ರಿಲಿಜಿಯನ್, ಸೋಷಿಯಲಾಜಿಕಲ್ ಎಸ್ಸೇಸ್ ಅನ್ ವೀರಶೈವಿಸಮ್. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಾಮಾಜಿಕ ಆರ್ಥಿಕ ಪರಿಸ್ಥಿತಿ ಕುರಿತು ಇವರು ನಡೆಸಿದ ಸಂಶೋಧನೆ ಈಗಲೂ ಅತ್ಯಂತ ಮಹತ್ವದ್ದಾಗಿದೆ.


ಇರಾವತಿ ಕರ್ವೆ

**ಇರಾವತಿ ಕರ್ವೆ :** ಇರಾವತಿ ಕರ್ವೆ ಅವರನ್ನು ಪ್ರಮುಖ ಸಮಾಜಶಾಸ್ತ್ರಜ್ಞರೆಂದು ಗುರುತಿಸಲಾಗಿದೆ. ಇವರು ಜಿ.ಎಸ್. ಘುರ್ಯೆ ಅವರ ಶಿಷ್ಯರಾಗಿದ್ದಾರೆ. ಪ್ರಸಿದ್ಧ ಸುಧಾರಣಾವಾದಿ, ಮಹರ್ಷಿ ಕರ್ವೆಯವರ ಸೊಸೆಯಾಗಿ ಬಂದ ಇರಾವತಿ ಕರ್ವೆಯವರಲ್ಲಿ ಸಾಮಾಜಿಕ, ರಾಷ್ಟ್ರೀಯ ಮತ್ತು ರಾಜಕೀಯ ವಿಚಾರಗಳ ಕಾಳಜಿ ಇತ್ತು. ಇವರು ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಎಂ.ಎ ಪದವಿ ಪಡೆದು ಮತ್ತು ಪೂನಾದ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಇವರ ಕೊಡುಗೆಗಳು : ಕಿನ್‌ಷಿಪ್ ಆರ್ಗನೈಸೇಷನ್ ಇನ್ ಇಂಡಿಯಾ, ಫ್ಯಾಮಿಲಿ ಇನ್ ಇಂಡಿಯಾ, ಭಾರತೀಯ ಸಮಾಜ, ಸಂಸ್ಥೆಗಳು ಮತ್ತು ಬಂಧುತ್ವ ಇತ್ಯಾದಿ ಕೃತಿಗಳು ಪ್ರಮುಖವಾದವು.

**ಎ.ಆರ್. ದೇಸಾಯಿ (1915–1994) :** ಭಾರತೀಯ ಸಮಾಜಶಾಸ್ತ್ರಜ್ಞರ ಸಾಲಿನಲ್ಲಿ ಎ.ಆರ್. ದೇಸಾಯಿ ಪ್ರಮುಖರು. ಯು.ಜಿ.ಸಿ ಯ ನ್ಯಾಷನಲ್ ಫೆಲೋ ಆಗಿ, ಬೊಂಬಾಯಿಯ ವಿಶ್ವವಿದ್ಯಾಲಯ ಸಮಾಜಶಾಸ್ತ್ರದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. ಇವರ ಪೂರ್ಣ ಹೆಸರು ಅಕ್ಷಯ್ ರಮಣಲಾಲ್ ದೇಸಾಯಿ ಇವರು 1915ರಲ್ಲಿ ಜನಿಸಿದರು. ಬೊಂಬಾಯಿಯ ವಿಶ್ವವಿದ್ಯಾಲಯದಲ್ಲಿ ಘುರ್ಯೆ ಅವರ ವಿದ್ಯಾರ್ಥಿಯಾಗಿದ್ದು, ತದನಂತರ ಅಲ್ಲಿಯೇ ಪ್ರಾಧ್ಯಾಪಕರಾಗಿ, ಇಲಾಖೆ ಮುಖ್ಯಸ್ಥರಾಗಿದ್ದರು. ಇವರು ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ಮಾರ್ಕ್ಸವಾದಿ ದೃಷ್ಟಿಕೋನವನ್ನು ಅನುಸರಿಸುತ್ತಿದ್ದುದರಿಂದ ಅವರನ್ನು ಮಾರ್ಕ್ಸ್‌ವಾದಿ ಸಮಾಜಶಾಸ್ತ್ರಜ್ಞನೆಂದು ಕರೆಯಲಾಗುತ್ತದೆ. ಇವರ ದಿ ಸೋಷಿಯಾಲಾಜಿಕಲ್ ಬ್ಯಾಕ್‌ಗ್ರೌಂಡ್ ಆಫ್ ಇಂಡಿಯನ್ ನ್ಯಾಷನಲಿಸಂ ಎಂಬುದು ಇವರ ಅತ್ಯುತ್ತಮ ಕೃತಿಯಾಗಿದೆ. ಭಾರತದಲ್ಲಿ ಗ್ರಾಮೀಣ ಸಮಾಜಶಾಸ್ತ್ರ, ಇಂಡಿಯನ್ ಸೋಷಿಯಾಲಾಜಿಕಲ್ ಸೊಸೈಟಿಸ್ ಸಮ್ಸ್ ಅಂಡ್ ಅರ್ಬನೈಜೆಷನ್, ಇತ್ಯಾದಿ ಕೃತಿಗಳು ಪ್ರಸಿದ್ಧವಾಗಿವೆ.

©KTBS Not to be republished

# ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಭರ್ತಿ ಮಾಡಿರಿ.**

1. ಮಾನವ ________ ಜೀವಿ.
2. ಲಾಗೋಸ್ ಎಂದರೆ ____________ .
3. ಸಮಾಜಶಾಸ್ತ್ರದ ಪಿತಾಮಹ _________ .
4. ಸಂಘರ್ಷ ಸಿದ್ಧಾಂತದ ಪ್ರವರ್ತಕ ಎಂದು ____________ ರನ್ನು ಕರೆಯಲಾಗುತ್ತದೆ.
5. ಜಾತಿ ವಿನಾಶ ಪುಸ್ತಕದ ಕರ್ತೃ ____________ .

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಸಮಾಜಶಾಸ್ತ್ರದ ಬೆಳವಣಿಗೆಯ ಪಿತಾಮಹ ಎಂದು ಯಾರನ್ನು ಕರೆಯಲಾಗುತ್ತದೆ?
2. ಸಮಾಜಶಾಸ್ತ್ರ ಎಂದರೇನು?
3. ಸಮಾಜಶಾಸ್ತ್ರದ ಸ್ವರೂಪವನ್ನು ವಿವರಿಸಿ.
4. ಆರಂಭಿಕ ಪ್ರಮುಖ ಸಮಾಜಶಾಸ್ತ್ರಜ್ಞರನ್ನು ಹೆಸರಿಸಿ.
5. ಭಾರತದ ಪ್ರಮುಖ ಸಮಾಜಶಾಸ್ತ್ರಜ್ಞರನ್ನು ಹೆಸರಿಸಿ.

**III. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಅಥವಾ ಐದು ವಾಕ್ಯಗಳಿಗೆ ಉತ್ತರಿಸಿ**

1. ಮಾನವ ಸಮಾಜ ಜೀವಿ ಎಂಬುದನ್ನು ವಿವರಿಸಿ.
2. ಸಮಾಜಶಾಸ್ತ್ರ ಮತ್ತು ಇತಿಹಾಸದ ನಡುವಿನ ಸಂಬಂಧವನ್ನು ವಿವರಿಸಿ.
3. ಸಮಾಜಶಾಸ್ತ್ರವು ಏನನ್ನು ಅಧ್ಯಯನ ಮಾಡುತ್ತದೆ?
4. ಕಾರ್ಲ್‌ಮಾರ್ಕ್ಸ್‌ರವರು ರಚಿಸಿದ ಕೃತಿಗಳಾವವು?
5. ಅಂಬೇಡ್ಕರ್ ಅವರ ಆರಂಭಿಕ ಜೀವನವನ್ನು ಕುರಿತು ಬರೆಯಿರಿ.
6. ಕರ್ನಾಟಕದ ಪ್ರಮುಖ ಸಮಾಜಶಾಸ್ತ್ರಜ್ಞರಾದ ಡಾ. ಸಿ. ಪಾರ್ವತಮ್ಮ ಅವರನ್ನು ಕುರಿತು ಬರೆಯಿರಿ.
7. ಭಾರತದ ಪ್ರಮುಖ ಸಮಾಜಶಾಸ್ತ್ರಜ್ಞರಾದ ಡಾ. ಎಂ.ಎನ್. ಶ್ರೀನಿವಾಸ್ ಅವರನ್ನು ಕುರಿತು ಬರೆಯಿರಿ.

**IV. ಚಟುವಟಿಕೆ.**

1. ಭಾರತದ ಪ್ರಮುಖ ಸಮಾಜಶಾಸ್ತ್ರಜ್ಞರ ಚಿತ್ರಗಳನ್ನು ಸಂಗ್ರಹಿಸಿರಿ.
2. ಕರ್ನಾಟಕದ ಪ್ರಮುಖ ಸಮಾಜಶಾಸ್ತ್ರಜ್ಞರ ಚಿತ್ರಗಳನ್ನು ಸಂಗ್ರಹಿಸಿರಿ.

*****

© KTBS Not to be republished

## ಅಧ್ಯಾಯ – 2

# ಸಂಸ್ಕೃತಿ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಸಂಸ್ಕೃತಿಯ ಅರ್ಥ ಮತ್ತು ಸ್ವರೂಪ.*
- *ಸಂಸ್ಕೃತಿಯ ಗುಣಲಕ್ಷಣಗಳು.*
- *ಸಂಸ್ಕೃತಿ ಮತ್ತು ಸಮಾಜದ ನಡುವಿನ ಸಂಬಂಧ.*
- *ಸಾಂಸ್ಕೃತಿಕ ಆಚರಣೆಗಳು, ಸಾಂಸ್ಕೃತಿಕ ವೈವಿಧ್ಯತೆ, ಮಹತ್ವ ಮತ್ತು ಪ್ರಾಮುಖ್ಯತೆ.*

### ಸಂಸ್ಕೃತಿಯ ಅರ್ಥ

ಮಾನವ ಸಾಮಾಜಿಕ ಜೀವಿ, ಸಂಘ ಜೀವಿ ಮಾತ್ರವಲ್ಲದೆ, ಸಾಂಸ್ಕೃತಿಕ ಜೀವಿಯೂ ಹೌದು. ಸಂಸ್ಕೃತಿಯು ಮಾನವ ಸಮಾಜವನ್ನು ಪ್ರಾಣಿ ಸಮಾಜದಿಂದ ಭಿನ್ನವಾಗಿಸುವ ವಿಶಿಷ್ಟ ಅಂಶ. ಪ್ರತಿಯೊಬ್ಬ ಮನುಷ್ಯನನ್ನು ಸಂಸ್ಕೃತಿಯ ಪ್ರತಿನಿಧಿ ಎಂದು ಪರಿಗಣಿಸಬಹುದು. ಸಂಸ್ಕೃತಿ ಮತ್ತು ಸಮಾಜ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಮಾನವನ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಹಾಗೂ ಆಧ್ಯಾತ್ಮಿಕ ಇನ್ನೂ ಮುಂತಾದ ಅಂಶಗಳು ಸಂಸ್ಕೃತಿಯಿಂದಲೇ ನಿರ್ಧರಿಸಲ್ಪಡುತ್ತವೆ. ಸಂಸ್ಕೃತಿಯನ್ನು ಸಾಮಾಜಿಕ ಬದಲಾವಣೆಯ ಮುಖ್ಯ ಅಂಶವಾಗಿ ಪರಿಗಣಿಸಲಾಗುತ್ತದೆ. ಸಂಸ್ಕೃತಿಯನ್ನು ಮಾನವನ ಸಾಮಾಜಿಕ ಪರಂಪರೆಯ ಜೈವಿಕ ವ್ಯವಸ್ಥೆ ಎಂದು ವಿಶ್ಲೇಷಿಸಲಾಗಿದೆ.

ಸಂಸ್ಕೃತಿಯು ಒಂದು ನಿರ್ದಿಷ್ಟ ಜನಸಮುದಾಯದ ಜೀವನ ವಿಧಾನ, ಸಂಗೀತ, ಸಾಹಿತ್ಯ, ಕಲೆ, ವಿಜ್ಞಾನ, ತಂತ್ರಜ್ಞಾನ ಮುಂತಾದ ಸಾಧನೆಗಳನ್ನು ಸೂಚಿಸುತ್ತದೆ. ಮಾನವ ಸಮಾಜವನ್ನು ಅರ್ಥಪೂರ್ಣ ಮತ್ತು ವಿಶಿಷ್ಟವಾಗಿಸುವುದು ಸಂಸ್ಕೃತಿ. ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರದಲ್ಲಿ ಈ ಪರಿಕಲ್ಪನೆಯನ್ನು ವಿಶಿಷ್ಟ ಅರ್ಥದಲ್ಲಿ ಬಳಸಲಾಗಿದೆ.

ಸಂಸ್ಕೃತಿ ಎನ್ನುವುದು ಜ್ಞಾನ, ಅನುಭವ, ನಂಬಿಕೆ, ಮೌಲ್ಯ, ನಡವಳಿಕೆ, ಶ್ರೇಣೀಕರಣ, ಸಂಬಂಧ ಇನ್ನೂ ಮುಂತಾದ ವಿಷಯಗಳನ್ನು ತಲೆಮಾರುಗಳ ಜನರಿಂದ ಪಡೆಯುವ ಪ್ರಕ್ರಿಯೆಯನ್ನು ವಿವರಿಸುತ್ತದೆ. ಹೀಗಾಗಿ ಸಂಸ್ಕೃತಿ ಎಂದರೆ ವಿಸ್ತೃತವಾದ ಜನರ ಗುಂಪು ಹಂಚಿಕೊಂಡ ವ್ಯವಸ್ಥಿತ ಜೀವನ ಮತ್ತು ಜ್ಞಾನ ಎಂದು ಕರೆಯಲಾಗುತ್ತದೆ.

ಸಂಸ್ಕೃತಿ ಎಂದರೆ ಒಂದು ಗುಂಪಿನ ಜನರ ಜೀವನ ಕ್ರಮ. ಇಲ್ಲಿ ನಡವಳಿಕೆಗಳು, ನಂಬಿಕೆಗಳು, ಮೌಲ್ಯಗಳು ಮತ್ತು ಆ ಜನರ ಗುಂಪು ಒಪ್ಪಿಕೊಂಡಿರುವ ಜೀವನ ಸಂಕೇತಗಳು ಇರುತ್ತವೆ. ಸಾಮಾನ್ಯವಾಗಿ ಅವುಗಳನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ರವಾನೆ ಮಾಡಲಾಗುತ್ತಿರುತ್ತದೆ.

**ಸಂಸ್ಕೃತಿ ಪದದ ಅರ್ಥ:** 'ಕಲ್ಚರ್' ಎಂಬ ಇಂಗ್ಲಿಷ್ ಪದವು ಲ್ಯಾಟೀನ್ ಭಾಷೆಯ ಕೂಲರ್ ಎಂಬ ಮೂಲ ಪದದಿಂದ ಉತ್ಪತ್ತಿ ಹೊಂದಿದೆ. ಇದರ ಅರ್ಥ ಬೆಳೆಸು, ಪೋಷಿಸು, ಭೂಮಿಯನ್ನು ಉಳು ಎಂಬ ಅರ್ಥವನ್ನು ಹೊಂದಿದೆ. ಮಧ್ಯಕಾಲೀನ ಯುಗದಲ್ಲಿ "ಕಲ್ಚರ್"ಎಂಬ ಪದಕ್ಕೆ ಬಿತ್ತಿದ ಬೆಳೆಯ ಪ್ರಗತಿದಾಯಕ ಸುಧಾರಣೆಯನ್ನು ಸೂಚಿಸಲು "ಅಗ್ರಿಕಲ್ಚರ್" ಎಂಬ ರೂಪ ನೀಡಲಾಗಿದೆ. ಆದರೆ 18 ಹಾಗೂ 19ನೇ ಶತಮಾನದಲ್ಲಿ ಮಾನವನ ವರ್ತನೆಯ ಸ್ವರೂಪವನ್ನು ಸೂಚಿಸಲು 'ಕಲ್ಚರ್' ಪದವನ್ನು ಬಳಸುವ ಪರಿಪಾಠ ಆರಂಭವಾಗಿದೆ.

©KTBS Not to be republished

## ಸಂಸ್ಕೃತಿ ಕುರಿತ ವ್ಯಾಖ್ಯೆಗಳು

**ಇ.ಬಿ.ಟೇಲರ್ ಪ್ರಕಾರ :** ಮಾನವ ಸಮಾಜದ ಒಬ್ಬ ಸದಸ್ಯನಾಗಿ ಗಳಿಸಿಕೊಳ್ಳುವ ಜ್ಞಾನ, ನಂಬಿಕೆ, ಕಲೆ, ನೀತಿಗಳು, ಕಾನೂನು, ಸಂಪ್ರದಾಯ ಮತ್ತು ಇತರೆ ಯಾವುದೇ ಸಾಮರ್ಥ್ಯಗಳು ಮತ್ತು ರೂಢಿಗಳನ್ನು ಹೊಂದಿರುವ ಅಖಂಡವಾದ ಸಂಕೀರ್ಣ ವ್ಯವಸ್ಥೆಯೇ ಸಂಸ್ಕೃತಿ.

**ಮಾಲಿನೋವ್‌ಸ್ಕಿ ಪ್ರಕಾರ :** ಮಾನವ ತನ್ನ ಜೀವಿತದ ಗೊತ್ತುಗುರಿಗಳನ್ನು ರೂಪಿಸಿಕೊಳ್ಳಲು ನಿರ್ಮಿಸಿಕೊಂಡ ಸಾಧನವೇ ಸಂಸ್ಕೃತಿ.

## ಸಂಸ್ಕೃತಿಯ ಪ್ರಕಾರಗಳು

ಸಂಸ್ಕೃತಿಯನ್ನು ಭೌತಿಕ ಸಂಸ್ಕೃತಿ ಮತ್ತು ಅಭೌತಿಕ ಸಂಸ್ಕೃತಿ ಎಂದು ಎರಡು ಪ್ರಕಾರಗಳಾಗಿ ವಿಭಾಗಿಸಬಹುದು. ಭೌತಿಕ ಸಂಸ್ಕೃತಿಯಲ್ಲಿ ಕಣ್ಣಿಗೆ ಗೋಚರಿಸುವ ಸ್ಥೂಲವಸ್ತುಗಳು, ನಾವು ಬಳಸುವ ಉಪಕರಣಗಳು, ಇತ್ಯಾದಿ ಸೇರಿವೆ. ನಮ್ಮ ಆಲೋಚನೆಗಳು, ಚಿಂತನೆಗಳು, ನಂಬಿಕೆಗಳು, ಮೌಲ್ಯ, ಇತ್ಯಾದಿ ಅಭೌತಿಕ ಸಂಸ್ಕೃತಿಗೆ ಸೇರುತ್ತವೆ.

ಸಂಸ್ಕೃತಿಯ ಸಮಗ್ರತೆಯನ್ನು ವಿವರಿಸಲು ಆಗ್‌ಬರ್ನ್ ಸಂಸ್ಕೃತಿಯನ್ನು ಭೌತಿಕ ಸಂಸ್ಕೃತಿ ಮತ್ತು ಅಭೌತಿಕ ಸಂಸ್ಕೃತಿ ಎಂದು ವಿಂಗಡಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಇವೆರಡೂ ಮಾನವ ನಿರ್ಮಿತವಾಗಿರುತ್ತವೆ. ಆಗ್‌ಬರ್ನ್ ಪ್ರಕಾರ ಭೌತಿಕ ಸಂಸ್ಕೃತಿ ಎಂದರೆ ನೈಸರ್ಗಿಕ ಸಂಪನ್ಮೂಲಗಳಿಂದ ಪರಿವರ್ತಿಸಿದ ಮಾನವ ನಿರ್ಮಿತ ವಸ್ತುಗಳಾದ ಮನೆ, ಕಟ್ಟಡ, ಶಾಲೆ, ಸೇತುವೆ, ರಸ್ತೆ, ಅಣೆಕಟ್ಟು, ಯಂತ್ರ, ಉತ್ಪಾದನಾ ವಿಭಾಗ, ಉದ್ದಿಮೆ, ತಂತ್ರಜ್ಞಾನ, ಕಂಪ್ಯೂಟರ್ ಇತ್ಯಾದಿ. ಭೌತಿಕ ಸಂಸ್ಕೃತಿಯನ್ನು ನಾಗರಿಕತೆ ಎಂದೂ ಕರೆಯಲಾಗುತ್ತದೆ. ಭೌತಿಕ ಸಂಸ್ಕೃತಿಯು ಅತೀ ಕಡಿಮೆ ಅವಧಿಯಲ್ಲಿ ಅತೀ ವೇಗವಾಗಿ ಬದಲಾವಣೆಯನ್ನು ಹೊಂದುತ್ತದೆ. ಅಮೂರ್ತವಾದ ಅಭೌತಿಕ ಸಂಸ್ಕೃತಿ ಎಂದರೆ ಮಾನವ ನಿರ್ಮಿತ ಸಾಧನೆಗಳು. ಉದಾಹರಣೆಗೆ; ಸಂಪ್ರದಾಯ, ಲೋಕಾರೂಢಿ, ನಂಬಿಕೆ, ಆಚಾರ–ವಿಚಾರ, ನೈತಿಕ ನಿಯಮ, ಮೌಲ್ಯಗಳು, ಆದರ್ಶಗಳು, ಕಲೆ, ಸಂಗೀತ, ಸಾಹಿತ್ಯ, ಧರ್ಮ, ಭಾಷೆ ಇತ್ಯಾದಿ. ಭೌತಿಕ ಸಂಸ್ಕೃತಿಗೆ ಹೋಲಿಸಿದರೆ ಅಭೌತಿಕ ಸಂಸ್ಕೃತಿಯು ಪ್ರತಿಯೊಂದು ಸಮಾಜದಲ್ಲಿ ಬಹಳ ನಿಧಾನವಾಗಿ ಬದಲಾವಣೆ ಹೊಂದುವುದು.

## ಸಂಸ್ಕೃತಿಯ ಗುಣಲಕ್ಷಣಗಳು

**1. ಸಂಸ್ಕೃತಿ ಅಮೂರ್ತವಾದದ್ದು :** ಸಂಸ್ಕೃತಿ ಎಂದರೆ ಒಂದು ಗುಂಪಿನ ಜನರ ಜೀವನಕ್ರಮ. ಅಂದರೆ ಒಪ್ಪಿಕೊಂಡಿರುವ ಸಂಕೇತಗಳನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ರವಾನೆಯಾಗುವ ಪ್ರಕ್ರಿಯೆ ನಡೆಯುತ್ತಿರುತ್ತದೆ. ಈ ಪ್ರಕ್ರಿಯೆಯು ಅಮೂರ್ತವಾಗಿ ಅಂದರೆ ದೃಷ್ಟಿಗೆ ಗೋಚರವಾಗದೆ ನಡೆ–ಯುತ್ತಿರುತ್ತದೆ.

**2. ಸಂಸ್ಕೃತಿ ಸಾಮಾಜಿಕವಾದದ್ದು :** ಸಂಸ್ಕೃತಿಯು ವೈಯಕ್ತಿಕವಾದುದಲ್ಲ. ಸಮಾಜದಲ್ಲಿ ಇರುವ ಎಲ್ಲರ ಜೊತೆ ಬದುಕುವುದು, ಆಹಾರ, ಆಚರಣೆ, ಉಡುಪು ಇತ್ಯಾದಿಗಳನ್ನು ಸಾಮುದಾಯಿಕವಾಗಿ ಅನುಸರಿಸುವುದು ಸಾಮಾನ್ಯವಾಗಿರುತ್ತದೆ. ಆದುದ್ದರಿಂದ ಸಂಸ್ಕೃತಿ ಎನ್ನುವುದು ಸಾಮಾಜಿಕವಾದದ್ದು.

**3. ಸಂಸ್ಕೃತಿ ಕಲಿಕೆ :** ಸಂಸ್ಕೃತಿಯು ಮನುಷ್ಯ ಹುಟ್ಟಿನಿಂದಲೇ ಬರುವ ಪ್ರವೃತ್ತಿಯಲ್ಲ. ಪ್ರಕೃತಿ ನಿರ್ಮಿತವೂ ಅಲ್ಲ. ಆದರೆ ಮಾನವ ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಿನ ಒಡನಾಟಗಳಿಂದ ರೂಪಿತವಾಗುತ್ತಿರುತ್ತದೆ. ಅಂದರೆ ಸಾಮಾಜೀಕರಣ ಪ್ರಕ್ರಿಯೆಯ ಮೂಲಕ ಮಗುವು ಆಯಾ ಸಮಾಜದ ನಡವಳಿಕೆಗಳನ್ನು ತನ್ನದಾಗಿಸಿ ಕೊಳ್ಳುತ್ತಿರುತ್ತದೆ. ನಿರಂತರ ಅಭ್ಯಾಸ, ಸಂವಾದ, ಚರ್ಚೆ, ಜೀವನಾನುಭವ ಮತ್ತು ಆಲೋಚನೆಗಳ ಮೂಲಕ

©KTBS Not to be republished

ಕಲಿಯುವ ಗುಣಗಳೇ ಸಂಸ್ಕೃತಿಯಾಗಿರುತ್ತವೆ. ಉದಾಹರಣೆಗೆ; ಮಕ್ಕಳು ತನ್ನ ಹಿರಿಯರಿಂದ, ಶಿಕ್ಷಕರಿಂದ, ಕುಟುಂಬದ ಸದಸ್ಯರಿಂದ, ಸಮಾಜದ ಸದಸ್ಯರಿಂದ ಮತ್ತು ಸಹಪಾಠಿಗಳಿಂದ ಹೊಸ ಹೊಸ ನಡವಳಿಕೆಗಳನ್ನು ಕಲಿಯುತ್ತಿರುತ್ತಾರೆ.

**4. ಸಾಂಸ್ಕೃತಿಕ ಸಹಜೀವನ:** ಸಂಸ್ಕೃತಿಯು ಸಮಾಜದಲ್ಲಿ ಪ್ರತಿಯೊಬ್ಬ ಸದಸ್ಯರಿಗೂ ತಮ್ಮ ಮೌಲ್ಯಗಳನ್ನು ನಂಬಿಕೆಗಳನ್ನು ಹಂಚಿಕೊಳ್ಳುವ ಅವಕಾಶಗಳನ್ನು ನೀಡುತ್ತದೆ. ಆ ಮೂಲಕ ಸಮಾಜದಲ್ಲಿ ಇರುವ ಎಲ್ಲಾ ರೀತಿಯ ಸಂಪ್ರದಾಯಗಳು, ಲೋಕಾಚಾರಗಳು, ನೈತಿಕ ನಿಯಮಗಳು, ನಂಬಿಕೆ, ಆಚರಣೆಗಳು, ಮೌಲ್ಯಗಳು, ಆದರ್ಶಗಳು ಹಾಗೂ ಭಾಷೆಗಳು ಇವೇ ಮುಂತಾದ ಅಂಶಗಳು ಸಹಭಾಗಿತ್ವಗೊಳ್ಳುವ ಅವಕಾಶವನ್ನು ಸಂಸ್ಕೃತಿ ನೀಡುತ್ತದೆ.

**5. ಸಂಸ್ಕೃತಿಯು ನಿರಂತರವಾದದ್ದು:** ಪ್ರತಿಯೊಂದು ಸಂಸ್ಕೃತಿಯು ಹೊಸ ಹೊಸ ಅಂಶಗಳ ಸೇರ್ಪಡೆಯಿಂದ ನಿರಂತರವಾಗಿ ಬೆಳೆಯುತ್ತದೆ. ಜ್ಞಾನ, ಕಲ್ಪನೆ, ನಿಯಮಗಳು, ಮೌಲ್ಯಗಳು ಒಂದು ಸಂಯೋಜಿತ ವ್ಯವಸ್ಥೆಯೊಂದರಲ್ಲಿ ನಿರ್ಮಾಣಗೊಂಡರೂ ಹಿಂದಿನ ನಡವಳಿಕೆಗಳನ್ನು ಮೌಲ್ಯಗಳನ್ನು ಸಂಪೂರ್ಣವಾಗಿ ಬದಲಾಯಿಸಿಕೊಳ್ಳದೆ, ಅದರಲ್ಲಿ ಸ್ವಲ್ಪಮಟ್ಟಿನ ಬದಲಾವಣೆಗಳನ್ನು ಮಾಡಿಕೊಂಡು ಮುಂದುವರೆಯುತ್ತಿರುತ್ತದೆ.

**6. ಸಂಸ್ಕೃತಿಯು ಬಹುತ್ವದ್ದು:** ಪ್ರತಿಯೊಂದು ಜನ ಸಮೂಹಕ್ಕೆ ತನ್ನದೇ ಆದ ಸಂಸ್ಕೃತಿಯಿದೆ. ಆದುದರಿಂದ ಸಂಸ್ಕೃತಿಯು ಏಕರೂಪವಾಗಿಲ್ಲ, ಸಂಸ್ಕೃತಿಯ ವಿವಿಧಾಂಶಗಳಾದ ಸಂಪ್ರದಾಯ, ಲೋಕಾರೂಢಿ, ನೈತಿಕ ನಿಯಮ, ಕಲೆ, ನಡವಳಿಕೆ, ನಂಬಿಕೆ, ಭಾಷೆ ಇತ್ಯಾದಿಗಳು ಸಮಾಜದಿಂದ ಸಮಾಜಕ್ಕೆ ಬೇರೆ ಬೇರೆಯಾಗುತ್ತವೆ. ಆದಿವಾಸಿ, ಗ್ರಾಮೀಣ ಹಾಗೂ ನಗರ ಸಮುದಾಯಗಳಲ್ಲಿ ಬೇರೆ ಬೇರೆ ಪ್ರಕಾರದಲ್ಲಿ ಇದನ್ನು ಗುರುತಿಸಬಹುದು. ಉದಾಹರಣೆಗೆ; ಉತ್ತರ ಕರ್ನಾಟಕದ ಊಟ ಉಪಚಾರಗಳು, ದಕ್ಷಿಣ ಕರ್ನಾಟಕದ ಊಟ ಉಪಚಾರಗಳಿಗಿಂತ ವಿಭಿನ್ನ. ಇದು ಮಾತ್ರವಲ್ಲದೆ ಒಂದೇ ಊರಿನಲ್ಲಿ ವಾಸಮಾಡುವ ವಿವಿಧ ಜನರ ಗುಂಪುಗಳ ಸಂಸ್ಕೃತಿಯು ಭಿನ್ನವಾಗಿದೆ. ಈ ವಿಭಿನ್ನತೆಯ ನಡುವೆ ಏಕತೆಯನ್ನು ಸಾಧಿಸಿರುವುದು ಮಹತ್ವದ್ದಾಗಿದೆ.

## ಸಂಸ್ಕೃತಿಯ ಮಹತ್ವ

**1. ಸಂಸ್ಕೃತಿಯು ಜ್ಞಾನಭಂಡಾರ:** ಮಾನವರ ಸಾಮಾಜಿಕ ಮತ್ತು ಭೌತಿಕ ಅಸ್ತಿತ್ವಕ್ಕೆ ಅಗತ್ಯವಾದ ಜ್ಞಾನವನ್ನು ಸಂಸ್ಕೃತಿಯು ನೀಡುವುದು. ಪ್ರಾಣಿ ಪಕ್ಷಿಗಳು ತಮ್ಮ ಪ್ರಕೃತಿ ಸಹಜವಾದ ಮೂಲ ಪ್ರವೃತ್ತಿಗಳಿಂದ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳುವ ಪ್ರಯತ್ನ ಮಾಡುತ್ತವೆ ಮತ್ತು ಬದುಕುಳಿಯುತ್ತವೆ. ಆದರೆ ಮಾನವರು ಮಾತ್ರ ತನ್ನ ಕಲಿಕಾ ಶಕ್ತಿಯಿಂದ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳುತ್ತಾ, ಪರಿಸರದ ಅಗತ್ಯಗಳಿಗೆ ಅನುಗುಣವಾಗಿ ಬದುಕನ್ನು ಮಾರ್ಪಾಡು ಮಾಡಿಕೊಳ್ಳುತ್ತಾ ಬಂದಿರುವುದನ್ನು ಕಾಣುತ್ತೇವೆ. ಇದಕ್ಕೆ ಮಾನವರ ಸಮಯೋಚಿತ ಸಾಂಸ್ಕೃತಿಕ ನಡವಳಿಕೆಗಳು ಕಾರಣವಾಗಿವೆ. ಉದಾಹರಣೆಗೆ; ಸಂಸ್ಕೃತಿಯ ಒಂದು ಉಪ ಅಂಗವಾದ ಭಾಷೆ, ಅದರ ಮುಖ್ಯ ರೂಪಕಗಳಾದ ಮಾತು ಮತ್ತು ಬರವಣಿಗೆಯಿಂದ ಇದುವರೆಗಿನ ಎಲ್ಲಾ ಸಾಧನೆಗಳನ್ನು ಸಂಗ್ರಹಿಸಿ ಆಯಾ ಸಂದರ್ಭ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ಇಂದಿನ ಪೀಳಿಗೆಯು ಮುಂದಿನ ತಲೆಮಾರಿಗೆ, ಗಾದೆಗಳ ಮೂಲಕ, ಜಾನಪದದ ಮೂಲಕ, ಚಿತ್ರಕಲೆಯ ಮೂಲಕ, ಬರವಣಿಗೆಗಳ ಮೂಲಕ, ಅಗತ್ಯವಾದ ಕಲಿಕಾ ಸಾಧನಗಳನ್ನು ರೂಪಿಸಿರುವುದು. ಇದು ನಮ್ಮ ಹಿಂದಿನ ತಲೆಮಾರಿನ ಹಿರಿಯರು ರೂಪಿಸಿದ ಜ್ಞಾನದ ಸಾಧನಗಳನ್ನು ಬಳಸಿಕೊಂಡು, ನಾವು ಹೇಗೆ ಪರಿಸ್ಥಿತಿಗೆ ಅನುಗುಣವಾಗಿ ಬದುಕಬೇಕು ಎನ್ನುವುದನ್ನು ಪಡೆದುಕೊಂಡು ಹೊಸ ತಲೆಮಾರು ಮತ್ತೊಂದು ಪ್ರಗತಿಯ ದಿಕ್ಕಿಗೆ ಮುನ್ನಡೆಯುತ್ತದೆ. ಹೀಗಾಗಿಯೇ ಸಂಸ್ಕೃತಿ ಎನ್ನುವುದು ಕೇವಲ ಆಚಾರ ವಿಚಾರವಾಗದೆ ಅದು ಸಾಮಾಜಿಕ ಅಭಿವೃದ್ಧಿಗೆ ಬೇಕಾಗುವ ಜ್ಞಾನ ಭಂಡಾರ.

©KTBS Not to be republished

**2. ಸಂಸ್ಕೃತಿಯು ಪರಿಸ್ಥಿತಿಯನ್ನು ವಿವರಿಸುವುದು:** ಸಂಸ್ಕೃತಿಯು ನಮಗೆ ಆಯಾ ಸಂದರ್ಭದ ಸಾಮಾಜಿಕ ಪರಿಸ್ಥಿತಿಯನ್ನು ವಿವರಿಸಿ ಪರಿಚಯಿಸುತ್ತದೆ. ಆಯಾ ಸಮಯ ಸಂದರ್ಭ ಹಾಗೂ ಪರಿಸ್ಥಿತಿಗೆ ಅನುಸಾರವಾಗಿ ಮಾನವ ಸಮಾಜ ಹೇಗೆ ವಿಕಾಸಗೊಂಡಿದೆ ಎನ್ನುವುದನ್ನು ಸಂಸ್ಕೃತಿ ಅಧ್ಯಯನಗಳು ನಮಗೆ ತಿಳಿಸುತ್ತವೆ. ಉದಾಹರಣೆಗೆ; ಬಾಗಲಕೋಟೆ ಜಿಲ್ಲೆಯ ಬಾದಾಮಿ, ಐಹೊಳೆ ಸುತ್ತಮುತ್ತಲಿನ ಗುಹೆಗಳು ಮತ್ತು ಅಲ್ಲಿನ ವಾಸ್ತುಶಿಲ್ಪಗಳು ನಮ್ಮ ಸಮಾಜದ ವಿಕಾಸವನ್ನು ವಿವರಿಸುತ್ತವೆ.

**3. ಸಂಸ್ಕೃತಿಯು ಮೌಲ್ಯಗಳನ್ನು ವಿವರಿಸುವುದು:** ಮಾನವ ಸಮಾಜದ ಪ್ರವೃತ್ತಿ, ಮನೋಭಾವ ಮತ್ತು ನಡವಳಿಕೆಯ ವಿಚಾರಗಳನ್ನು ಮಾಪನಮಾಡುವ ಸಾಧನವೇ ಮೌಲ್ಯ. ಉದಾಹರಣೆಗೆ; ನಮ್ಮ ಸಂವಿಧಾನದ ಆಶಯದಂತೆ ಎಲ್ಲಾ ಸಂಸ್ಕೃತಿಗೆ ಸೇರಿದ ಜನರು, ಎಲ್ಲಾ ಮತ–ಧರ್ಮಗಳ ತಾರತಮ್ಯವಿಲ್ಲದೇ ಸಮಾನವಾಗಿ ಜೀವಿಸಬೇಕು ಎನ್ನುವುದು ಬಹುಸಂಸ್ಕೃತಿಯನ್ನು ಗೌರವಿಸುವ ಮೌಲ್ಯ. ನಾವು ಎಲ್ಲರೂ ಒಂದೇ. ನಮ್ಮ ನಡುವೆ ಸಾಮಾಜಿಕವಾಗಿ ಯಾವುದೇ ಭಿನ್ನಮತಗಳಿಲ್ಲ ಎನ್ನುವುದು ಮೌಲ್ಯ. ಈ ರೀತಿಯ ಚಿಂತನಾ ಕ್ರಮಗಳು ಮನೋಧರ್ಮವನ್ನು ರೂಪಿಸುತ್ತವೆ. ಹಾಗಾಗಿ ಸಂಸ್ಕೃತಿಯು ಮಾನವೀಯ ಸಂಬಂಧಗಳನ್ನು ಹೆಚ್ಚು ಮಾಡುವ ಮೌಲ್ಯಗಳನ್ನು ಹೊಂದಿರುತ್ತದೆ.

**4. ಸಂಸ್ಕೃತಿಯು ವರ್ತನೆಯ ಮಾದರಿಗಳನ್ನು ತಿಳಿಸುತ್ತದೆ:** ಸಂಸ್ಕೃತಿಯು ನಮಗೆ ಗುರಿಗಳನ್ನು ಮತ್ತು ಅವುಗಳನ್ನು ಸಾಧಿಸಲು ಮಾರ್ಗಗಳನ್ನು ನೀಡುತ್ತದೆ. ನಮ್ಮ ಸಮಾಜದಲ್ಲಿ ನಡೆಯುವ ಮಾನವೀಯ ನಡವಳಿಕೆಗಳನ್ನು, ಸಮಾಜಮುಖಿ ಸಾಧನೆಗಳನ್ನು ಸಂಸ್ಕೃತಿ ಪುರಸ್ಕರಿಸುತ್ತದೆ. ಹಾಗೆಯೇ ಸಮಾಜ ವಿರೋಧಿ, ಮಾನವ ವಿರೋಧಿ ಚಟುವಟಿಕೆಗಳನ್ನು ದಂಡಿಸುವ ವರ್ತನಾ ಮಾದರಿಗಳನ್ನು ಸಂಸ್ಕೃತಿಯು ಹೊಂದಿದೆ. ಉದಾಹರಣೆಗೆ; ನಾವು ಯಾವುದಾದರೂ ತಪ್ಪುಗಳನ್ನು ಮಾಡುವಾಗ, ನಮ್ಮ ಹಿರಿಯರು ಮತ್ತು ಶಿಕ್ಷಕರು ನಮಗೆ ಇದು ಸರಿಯಾದ ನಡವಳಿಕೆಯಲ್ಲ, ಎಂದು ಹೇಳುವ ಮೂಲಕ ನಮ್ಮ ವರ್ತನೆಗಳನ್ನು ತಿದ್ದುತ್ತಾರೆ.

### ಸಮಾಜ ಮತ್ತು ಸಂಸ್ಕೃತಿ ನಡುವಿನ ಸಂಬಂಧ

**1. ಸಮಾಜ ಮತ್ತು ಸಂಸ್ಕೃತಿಯ ನಡುವಿನ ಸಂಬಂಧ ಅವಿನಾಭಾವದ್ದು :** ಮಾನವ ಸಮಾಜದ ವಿಕಾಸಕ್ಕೆ ಸಂಸ್ಕೃತಿಯೇ ತಳಪಾಯ. ನಾಗರಿಕತೆಯ ವಿಕಾಸ ಕಾಲದಿಂದಲೂ ಸಂಸ್ಕೃತಿಯು ಮನುಷ್ಯನ ಜೀವನದಲ್ಲಿ ಹಾಸುಹೊಕ್ಕಾಗಿದೆ. ಸಾಮಾಜಿಕ ಜೀವನದಲ್ಲಿ ಸಂಸ್ಕೃತಿ ಅವಿಭಾಜ್ಯ ಅಂಗ. ಸಾಮಾಜಿಕ ಜೀವನವಿದ್ದಲ್ಲೆಲ್ಲಾ ಸಮಾಜವಿದ್ದೇ ಇರುತ್ತದೆ. ಒಂದು ಸಮಾಜದಲ್ಲಿ ಮಾನವ ಸಂಬಂಧಗಳ ಒಡನಾಟವೇ ಸಂಸ್ಕೃತಿ. ಮಾನವ ಒಡನಾಟಗಳಿಲ್ಲದೆ ಮಾನವ ಸಮಾಜ ನಿರ್ಮಾಣವಾಗಲು ಸಾಧ್ಯವಿಲ್ಲ. ಹಾಗೆಯೇ ಸಂಸ್ಕೃತಿ ಇಲ್ಲದೆ ಮಾನವ ಬದುಕು ಮತ್ತು ಮಾನವ ಸಮಾಜ ಪರಿಪೂರ್ಣವಾಗುವುದಿಲ್ಲ.

**2. ಸಂಸ್ಕೃತಿ ಮತ್ತು ಸಮಾಜ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ :** ನಮ್ಮ ಸಾಮಾಜಿಕ ಪ್ರಪಂಚವು ಸಾವಿರಾರು ಮಾನವ ಸಂಬಂಧಗಳನ್ನು ಹೊಂದಿರುವ ಹಲವು ಸಮಾಜಗಳನ್ನು ಒಳಗೊಂಡಿದೆ. ಪ್ರತಿಯೊಂದು ಸಮಾಜವು ಸಾಂಸ್ಕೃತಿಕವಾಗಿ ವಿಭಿನ್ನವಾಗಿದೆ. ಸಂಸ್ಕೃತಿ ಮತ್ತು ಸಮಾಜ ಇವೆರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಂಸ್ಕೃತಿಯು ಮಾನವನನ್ನು ಇತರ ಜೀವಿಗಳಿಂದ ಪ್ರತ್ಯೇಕಿಸುತ್ತದೆ. ಸಾಂಸ್ಕೃತಿಕ ನಿಯಮಗಳನ್ನು ಅನುಸರಿಸುವ ಮೂಲಕ ಒಂದು ಸಮಾಜದ ಸಾಮಾಜಿಕ ನಿಯಂತ್ರಣಗಳು ರೂಪುಗೊಳ್ಳುತ್ತವೆ.

ಸಂಸ್ಕೃತಿಯು ಹುಟ್ಟು ಹಾಕುವ ಸಾಮಾಜಿಕ ನಿಯಮಗಳಿಗೂ ಸಮಾಜಕ್ಕೂ ನಿಕಟವಾದ ಸಂಬಂಧವಿರುತ್ತದೆ. ಈ ನಿಯಮಗಳು ಸಮಾಜದಲ್ಲಿ ಪ್ರತಿ ವ್ಯಕ್ತಿಯ ನಡವಳಿಕೆಗಳನ್ನು ನಿಯಂತ್ರಣ ಮಾಡುತ್ತವೆ. ಇದು ವ್ಯಕ್ತಿಗಳ ಮೇಲೆ ಇರುವ ಸಾಮಾಜಿಕ ನಿರ್ಬಂಧನೆಗಳನ್ನು ಸೂಚಿಸುತ್ತದೆ. ವ್ಯಕ್ತಿಗಳು ಜೀವನದಲ್ಲಿ ಅನೇಕ ಸಾಮಾಜಿಕ

©KTBS Not to be republished

ಸಂಸ್ಥೆಗಳ ಸದಸ್ಯರಾಗಿರುತ್ತಾರೆ. ಪ್ರತಿಯೊಂದು ಸಾಮಾಜಿಕ ಸಂಸ್ಥೆಗಳು ತನ್ನದೇ ಸಾಂಸ್ಕೃತಿಕ ನಿಯಮಗಳನ್ನು ವೈಯಕ್ತಿಕ ಸಂಬಂಧಗಳನ್ನು ಬಂಧಿಸಿರುತ್ತವೆ. ಉದಾಹರಣೆಗೆ; ನಮ್ಮ ಮನೆಗಳಲ್ಲಿ ನಾವು ಹಿರಿಯರ ಜೊತೆಗೆ ಹೇಗೆ ನಡೆದುಕೊಳ್ಳಬೇಕು ಎನ್ನುವ ನಿಯಮಗಳನ್ನು, ಆಯಾ ಕುಟುಂಬದಲ್ಲಿನ ಕೌಟುಂಬಿಕ ಸಂಬಂಧಗಳ ನಿಯಮಗಳನ್ನು ಅನೌಪಚಾರಿಕವಾಗಿ ಪಾಲಿಸುತ್ತಿರುತ್ತೇವೆ. ಇದೇ ಸಂಸ್ಕೃತಿಗೂ ಸಮಾಜಕ್ಕೂ ಇರುವ ಸಂಬಂಧವನ್ನು ವಿವರಿಸುವ ಮೂಲ ಲಕ್ಷಣ.

## ಸಾಂಸ್ಕೃತಿಕ ಆಚರಣೆಯ ಮಹತ್ವ, ಸಾಂಸ್ಕೃತಿಕ ವೈವಿಧ್ಯತೆ, ಇವುಗಳ ಪ್ರಾಮುಖ್ಯತೆ

ನಮ್ಮ ಜೀವನದಲ್ಲಿ ಪ್ರತಿ ದಿನವೂ ಒಂದಲ್ಲ ಒಂದು ಸಾಂಸ್ಕೃತಿಕ ಆಚರಣೆಗಳನ್ನು ನಾವು ನೋಡುತ್ತಿರುತ್ತೇವೆ ಅವುಗಳಲ್ಲಿ ಎಲ್ಲವನ್ನು ನಾವು ಪರಿಶೀಲಿಸುವುದು ಕಷ್ಟ. ಮಾನವೀಯತೆಯಿಂದ ನಡೆಯುವ ಸಾಂಸ್ಕೃತಿಕ ಆಚರಣೆಗಳು ಹೇಗೆ ಮಾನವ ಸಮಾಜದ ಒಳಿತಿಗೆ ಕಾರಣೀಭೂತವಾಗಿವೆ ಎನ್ನುವುದನ್ನು ಇಲ್ಲಿ ಚರ್ಚಿಸೋಣ.

ಜಾತ್ರೆಗಳು ಭಾರತದ ಗ್ರಾಮೀಣ ಪ್ರದೇಶದ ಸಾಂಸ್ಕೃತಿಕ ಆಚರಣೆಗಳಲ್ಲಿ ಅತ್ಯಂತ ಮಹತ್ವದ್ದಾಗಿವೆ. ಜಾತ್ರೆಗಳು ಕೇವಲ ಧಾರ್ಮಿಕ ಸಮಾರಂಭಗಳ ಉತ್ಸವಗಳಾಗಿಲ್ಲ. ಜಾತ್ರೆ ನಡೆಯುವ ಸುತ್ತಮುತ್ತಲ ಹತ್ತಾರು ಹಳ್ಳಿಗಳಿಗೆ ಜಾತ್ರೆ ಒಂದು ಮಾರುಕಟ್ಟೆಯಾಗಿರುತ್ತದೆ. ಇಲ್ಲಿ ವಸ್ತುಗಳನ್ನು ಮಾರುವ ಮತ್ತು ಕೊಳ್ಳುವ ಪ್ರಕ್ರಿಯೆ ನಡೆಯುತ್ತದೆ. ಇಲ್ಲಿ ತಾವು ಸಾಕಿದ ದನಗಳನ್ನು ಮಾರಾಟ ಮಾಡುವ ಮತ್ತು ಅಗತ್ಯವಿದ್ದರೆ ಕೊಳ್ಳುವ ಪ್ರಕ್ರಿಯೆ ನಡೆಯುತ್ತದೆ. ಜಾತ್ರೆ ಸುಗ್ಗಿಯ ನಂತರದ ಒಂದು ಬಗೆಯ ಮನೋರಂಜನೆಯಾಗಿಯೂ ಮುಖ್ಯವಾಗುತ್ತದೆ.

ಯಾವುದೇ ಜಾತಿ, ವರ್ಣ, ಧರ್ಮ, ಭೇದ ಭಾವಗಳಿಲ್ಲದೇ ಎಲ್ಲರೂ ಸೇರಿ ಭಾಗವಹಿಸುವ ಮೂಲಕ ಜಾತ್ರೆಗಳು ನಡೆಯುತ್ತವೆ. ಇವುಗಳು ಸಾಂಸ್ಕೃತಿಕವಾಗಿ ಅನೇಕ ಸಾಮಾಜಿಕ ಸಂಬಂಧಗಳನ್ನು ಗಟ್ಟಿಗೊಳಿಸುತ್ತವೆ. ವಿವಿಧ ಭಾಷೆ ಮಾತನಾಡುವ ಜನ ತಮ್ಮ ಕೈ ಚಳಕಗಳನ್ನು, ದೈಹಿಕ ಭಂಗಿಗಳನ್ನು ಪ್ರದರ್ಶನ ಮಾಡುವ ಜೊತೆಗೆ ಚಿಕ್ಕ ಪುಟ್ಟ ಸರ್ಕಸ್‌ಗಳು ಜಾತ್ರೆಗಳಲ್ಲಿ ಇರುತ್ತವೆ. ಹೀಗೆ ವಿವಿಧ ವೃತ್ತಿ, ವಿವಿಧ ಭಾಷೆ, ಕಸಬುಗಳನ್ನು ಮಾಡುವ ಜನ ತಮ್ಮ ಕುಶಲತೆಗಳನ್ನು ಇಲ್ಲಿ ಪ್ರದರ್ಶನದಲ್ಲಿ ಇಟ್ಟಿರುತ್ತಾರೆ. ಇವರ ಪ್ರದರ್ಶನ ಕೇವಲ ಪ್ರದರ್ಶನವಾಗಿರದೆ ಅವರ ಸಾಂಸ್ಕೃತಿಕ ಪ್ರವೃತ್ತಿಯೂ ಆಗಿರುತ್ತದೆ. ಉದಾಹರಣೆಗೆ; ವೇಷಗಾರರು ನಮ್ಮ ಹಳ್ಳಿಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ರಾಮಾಯಣ ಮತ್ತು ಮಹಾಭಾರತದ ಸ್ಥಳೀಯ ಆವೃತ್ತಿಗಳನ್ನು ಪಟ ಪಟನೇ ಹೇಳುತ್ತಿರುತ್ತಾರೆ.

ಈ ಎಲ್ಲಾ ಜನವರ್ಗಗಳು ವಿವಿಧ ಸಂಸ್ಕೃತಿ, ವಿವಿಧ ಭಾಷೆ, ವಿವಿಧ ಸಾಂಸ್ಕೃತಿಕ ಆಚರಣೆಗಳಿಗೆ ಸೇರಿದವರಾಗಿರುತ್ತಾರೆ. ಇವರು ಉರ್ದು, ಮರಾಠಿ, ಕನ್ನಡ, ತೆಲುಗು ಇತ್ಯಾದಿ ಭಾಷೆಗಳನ್ನು ಮಾತನಾಡುತ್ತಿರುತ್ತಾರೆ. ಹೀಗೆ ಮಾತನಾಡುವಾಗಲೇ ತಮ್ಮ ದೇಹ ರಚನೆಯಿಂದ ಹಿಡಿದು ಪ್ರತಿಯೊಂದು ವಿಷಯಗಳಲ್ಲಿಯೂ ಸ್ಥಳೀಯರಿಗಿಂತ ಭಿನ್ನವಾಗಿರುತ್ತಾರೆ. ಹೀಗೆ ವಿಭಿನ್ನವಾಗಿರುವ ಜನರು ಒಂದೆಡೆ ಸೇರಿ ಜಾತ್ರೆಗಳಲ್ಲಿ ಸಂಭ್ರಮಿಸುತ್ತಾರೆ. ಈ ಸಂಭ್ರಮಗಳು ಕೇವಲ ಸಂಭ್ರಮಗಳಾಗಿರುವುದಿಲ್ಲ ಇವು ನಮ್ಮ ದೇಶದ ಸಂವಿಧಾನದ ಆಶಯ ಹೇಳುವ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸುವ ಪ್ರಯತ್ನದಂತೆ ಇರುತ್ತವೆ. ಹೀಗೆ ಸಾಮೂಹಿಕವಾಗಿ ಸಾಂಸ್ಕೃತಿಕ ಆಚರಣೆಗಳಲ್ಲಿ ಭಾಗವಹಿಸುವ ನಾವು ವೈಯಕ್ತಿಕ ವೈವಿಧ್ಯತೆಯನ್ನು ಆಚರಿಸುತ್ತಿರುತ್ತೇವೆ. ಈ ಆಚರಣೆಗಳು ಜಾನಪದವೆಂದು, ಸ್ಥಳೀಯ ಜ್ಞಾನವೆಂದು ಕೆಲವರು ತಿಳಿಸುತ್ತಾರೆ. ಇನ್ನು ಕೆಲವರು ತಮ್ಮ ಜೀವನದ ಪ್ರೇರಕಾಂಶ ಎಂದು ಹೇಳುತ್ತಿರುತ್ತಾರೆ. ಹೀಗೆ ನಮ್ಮ ಸಾಂಸ್ಕೃತಿಕ ಆಚರಣೆಗಳು ಮಾನವ ಸಮಾಜದಲ್ಲಿ ಅತ್ಯಂತ ಮಹತ್ವವಾದ ಸ್ಥಾನಗಳನ್ನು ಹೊಂದಿವೆ ಎನ್ನುವುದರಲ್ಲಿ ಯಾವುದೇ ಸಂಶಯಗಳಿಲ್ಲ.

©KTBS Not to be republished

ನಮ್ಮ ಗಣರಾಜ್ಯೋತ್ಸವ ಸಮಾರಂಭದಲ್ಲಿ ಇಡೀ ದೇಶದ ಸಾಂಸ್ಕೃತಿಕ ವೈವಿಧ್ಯಗಳು ಸ್ತಬ್ಧ ಚಿತ್ರಗಳ ಮೂಲಕ, ನೃತ್ಯದ ಮೂಲಕ, ನೋಡಲು ಸಿಗುತ್ತವೆ. ಕರ್ನಾಟಕದ ಸಾಂಸ್ಕೃತಿಕ ಜೀವನವನ್ನು ಪ್ರತಿಪಾದಿಸುವ ಒಂದು ಸ್ತಬ್ಧ ಚಿತ್ರ ಕರ್ನಾಟಕದ ಗ್ರಾಮೀಣ ಪರಿಸರವನ್ನು ಪ್ರತಿಪಾದಿಸುತ್ತಿರುತ್ತದೆ. ಅದೇ ಸಂದರ್ಭದಲ್ಲಿ ಇನ್ನೊಂದು ಸ್ತಬ್ಧಚಿತ್ರ ರಾಜಸ್ತಾನದ ಗ್ರಾಮೀಣ ಪರಿಸರದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಿರುತ್ತದೆ. ಹೀಗೆ ಇಡೀ ಭಾರತದಲ್ಲಿರುವ ಪ್ರತಿ ರಾಜ್ಯದ ಸಾಂಸ್ಕೃತಿಕ ಬದುಕನ್ನು ಪ್ರತಿವರ್ಷ ಗಣರಾಜ್ಯೋತ್ಸವದ ಮೆರವಣಿಗೆಯಲ್ಲಿ ಹೇಳುವ ಅಥವಾ ತೋರಿಸುವ ಮುಖ್ಯ ಉದ್ದೇಶವೆಂದರೆ, ನಮ್ಮ ಸಾಂಸ್ಕೃತಿಕ ವೈವಿಧ್ಯತೆಯಲ್ಲಿ ಏಕತೆಯನ್ನು ಹೇಗೆ ಸಾಧಿಸಲಾಗುತ್ತಿದೆ ಎಂದು ಹೇಳುವುದು.

ಇದಕ್ಕೆ ಒಂದು ಭಾಷೆಯ ಉದಾಹರಣೆಯನ್ನು ವಿವರಿಸಿಕೊಳ್ಳಬಹುದು. ಹಲವು ಭಾಷೆಗಳನ್ನು ಮಾತನಾಡುತ್ತಾ, ಒಂದೇ ಪರಿಸರದಲ್ಲಿ ಬೆಳೆಯುವ ಮಕ್ಕಳು ಒಂದೇ ಸಮಯದಲ್ಲಿ ಮೂರರಿಂದ ನಾಲ್ಕು ಭಾಷೆಗಳನ್ನು ಕಲಿಯುತ್ತಿರುತ್ತಾರೆ ಮತ್ತು ಮಾತನಾಡುತ್ತಿರುತ್ತಾರೆ. ಈ ಸಂದರ್ಭದಲ್ಲಿ ಭಾಷೆಯನ್ನು ಮಾತ್ರ ಕಲಿಯದೆ ಭಾಷಾ ಪರಿಸರದಲ್ಲಿರುವ ಅಂಶಗಳನ್ನೂ ಒಳಗು ಮಾಡಿಕೊಳ್ಳುತ್ತಿರುತ್ತಾರೆ. ಆ ಮೂಲಕ ಧರ್ಮ, ಜಾತಿ ಆಧಾರಿತ ಅಂಶಗಳನ್ನು ಮೀರುವ ಪ್ರಯತ್ನಗಳನ್ನು ಮಾಡುತ್ತಿರುತ್ತಾರೆ. ಆ ಭಾಷಾ ಪರಿಸರದಲ್ಲಿ ಬೆಳೆಯುವ ಮಕ್ಕಳು ಎಲ್ಲಾ ಭಾಷೆಗಳ ಸಂಸ್ಕೃತಿಗಳನ್ನು, ಹಬ್ಬ ಸೇರಿದಂತೆ ಎಲ್ಲಾ ಸಾಂಸ್ಕೃತಿಕ ಹರಿದಿನ ಆಚರಣೆಗಳನ್ನು ಬಲ್ಲವರಾಗಿರುತ್ತಾರೆ. ಆ ಮೂಲಕ ನಾವೆಲ್ಲರೂ ಒಂದು ಎನ್ನುವ ಭಾವನೆಯನ್ನು ಕಟ್ಟಿಕೊಳ್ಳುತ್ತಿರುತ್ತಾರೆ. ಹೀಗಾಗಿ ಸಾಂಸ್ಕೃತಿಕ ವೈವಿಧ್ಯತೆಯನ್ನು ಗೌರವಿಸುವುದು, ಬಹುತ್ವವನ್ನು ಪ್ರೀತಿಸುವುದು ಮಾನವ ಸಮಾಜದ ಅಭಿವೃದ್ಧಿಗೆ ಮತ್ತು ಶಾಂತಿಗೆ ಅತ್ಯಂತ ಮಹತ್ವವಾದ ಅಂಶವಾಗಿದೆ.

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಸಂಸ್ಕೃತಿ ಎಂದರೆ ________________ ಎಂದರ್ಥ.
2. ಲೋಕ ರೂಢಿಗಳೆಂದರೆ ನಾವು ________________ ಮತ್ತೆ ಮತ್ತೆ ತೊಡಗಿಸಿಕೊಳ್ಳುವ ಚಟುವಟಿಕೆಗಳು.
3. ಭಾರತದಲ್ಲಿ ________________ ಯಲ್ಲಿ ಏಕತೆ ಕಂಡುಬರುತ್ತದೆ.
4. ಸಂಸ್ಕೃತಿಗೂ ಸಮಾಜಕ್ಕೂ ________________ ಸಂಬಂಧವಿದೆ.
5. ಸಂಸ್ಕೃತಿ ಇಂದಿನ ತಲೆಮಾರುಗಳ____________ ಮುಂದಿನ ತಲೆಮಾರಿಗೆ ಸಾಗಿಸುವ ವಾಹಕ.

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಸಂಸ್ಕೃತಿ ಎಂದರೇನು?
2. ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಇರುವ ಸಾಂಸ್ಕೃತಿಕ ವೈವಿಧ್ಯತೆಗೆ ಉದಾಹರಣೆ ಕೊಡಿ.
3. ಸಂಸ್ಕೃತಿಯನ್ನು ಎರಡು ವಿಧದಲ್ಲಿ ವಿಂಗಡಿಸಿದವರು ಯಾರು?
4. ಅಭೌತಿಕ ಸಂಸ್ಕೃತಿ ಎಂದರೇನು?
5. ಭೌತಿಕ ಸಂಸ್ಕೃತಿ ಎಂದರೇನು?

©KTBS Not to be republished

**III. ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ.**

1. ಲೋಕ ರೂಢಿಗಳೆಂದರೇನು? ಉದಾಹರಣೆ ಕೊಡಿ.
2. ಸಾಂಸ್ಕೃತಿಕ ವೈವಿಧ್ಯತೆಯನ್ನು ವಿವರಿಸಿ.
3. ಸಂಸ್ಕೃತಿಯ ಗುಣಲಕ್ಷಣಗಳನ್ನು ತಿಳಿಸಿ.
4. ಸಂಸ್ಕೃತಿ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹೇಗೆ?
5. ಜಾತ್ರೆಯ ವೈವಿಧ್ಯತೆಯನ್ನು ತಿಳಿಸಿ.

**IV. ಚಟುವಟಿಕೆ.**

1. ನಿಮ್ಮ ಊರಿನಲ್ಲಿ ನಡೆಯುವ ಜಾತ್ರೆಗೆ ಸಂಬಂಧಿಸಿದಂತೆ ಹಿರಿಯರಿಂದ ಮಾಹಿತಿ ಸಂಗ್ರಹಿಸಿ. ಜಾತ್ರೆಯ ಮಹತ್ವ, ಅದನ್ನು ಯಾವ ಕಾಲದಲ್ಲಿ ನಡೆಸಲಾಗುತ್ತದೆ, ಅದರ ರೀತಿ ನೀತಿಗಳ ಪಟ್ಟಿ ತಯಾರಿಸಿ.
2. ಶಿಕ್ಷಕರು ಮಕ್ಕಳ ಜೊತೆ ಸೇರಿ ಶಾಲೆಯಲ್ಲಿ ಸಾಂಸ್ಕೃತಿಕ ವೈವಿಧ್ಯತೆಯನ್ನು ಸಾರುವ ಕಾರ್ಯಕ್ರಮಗಳನ್ನು ರೂಪಿಸುವುದು.

*****

©KTBS Not to be republished

# ಭೂಗೋಳ ವಿಜ್ಞಾನ

## ಅಧ್ಯಾಯ-1

# ಭೂಮಿ-ನಮ್ಮ ಜೀವಂತ ಗ್ರಹ


**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಭೂಮಿಯ ಮಹತ್ವ ಮತ್ತು ವಿವಿಧ ಹೆಸರುಗಳನ್ನು ಪರಿಚಯಿಸುವುದು.
- ಭೂಮಿಯ ಗಾತ್ರ ಮತ್ತು ಆಕಾರಗಳನ್ನು ತಿಳಿಯುವುದು.
- ನೆಲ ಮತ್ತು ಜಲ ಭಾಗಗಳ ಹಂಚಿಕೆಯನ್ನು ತಿಳಿಯುವುದು.
- ಭೂ ಖಂಡ ಹಾಗೂ ಮಹಾಸಾಗರಗಳನ್ನು ಗುರುತಿಸುವುದು.
- ಅಕ್ಷಾಂಶ ಮತ್ತು ರೇಖಾಂಶಗಳ ಪರಿಚಯ, ಇವುಗಳಿಂದ ಸ್ಥಾನ ದಿಕ್ಕು ಮತ್ತು ವೇಳೆಗಳನ್ನು ನಿರ್ಧರಿಸುವುದರ ಬಗ್ಗೆ ತಿಳಿಯುವುದು.
- ಪ್ರಪಂಚದ ಪ್ರಾಕೃತಿಕ ಭೂಪಟದಲ್ಲಿ ಭೂಖಂಡಗಳು ಮತ್ತು ಸಾಗರಗಳನ್ನು ಗುರುತಿಸುವುದು.

ನಾವು ಎಲ್ಲಿ ಜೀವಿಸುತ್ತಿದ್ದೇವೆ ಎಂಬುದು ನಿಮಗೆ ತಿಳಿದಿದೆಯೆ?

ನಾವು ಭೂಮಿಯ ಮೇಲೆ ಜೀವಿಸುತ್ತಿದ್ದೇವೆ. ಇದು ಸೌರವ್ಯೂಹದಲ್ಲಿ ಸೂರ್ಯನಿಂದ ಮೂರನೇ ಗ್ರಹವಾಗಿದೆ. ಸೌರವೂಹ್ಯದಲ್ಲಿರುವ ಗ್ರಹಗಳಲ್ಲಿ ಭೂಮಿಯು ಮಾತ್ರ ಜೀವಿಗಳನ್ನು ಹೊಂದಿದೆ. ಭೂಮಿ ಎಲ್ಲ ಬಗೆಯ ಅಂದರೆ ಸಸ್ಯಗಳು, ಪ್ರಾಣಿ ಮತ್ತು ಮಾನವ ಜೀವಿಗಳಿಗೆ ವಾಸಸ್ಥಾನವಾಗಿದೆ. ಇದಕ್ಕೆ ಕಾರಣ ಸೂರ್ಯ ಮತ್ತು ಭೂಮಿಯ ನಡುವಿನ ದೂರ, ಜೀವಿಗಳಿಗೆ ಪೂರಕವಾದ ಉಷ್ಣಾಂಶ, ಅನಿಲಗಳು, ವಾಯುಗೋಳ ಮತ್ತು ಜಲಚಕ್ರ ಇತ್ಯಾದಿಗಳಾಗಿವೆ. ಹೀಗಾಗಿ ಭೂಮಿಯನ್ನು 'ಜೀವಂತ ಗ್ರಹ'; 'ವಿಶಿಷ್ಟ ಗ್ರಹ'; 'ಜಲಾವೃತ ಗ್ರಹ;' 'ನೀಲಿಗ್ರಹ' ಹೀಗೆ ವಿವಿಧ ಹೆಸರಿನಿಂದ ಕರೆಯಲಾಗಿದೆ.

### ಭೂಮಿಯ ಗಾತ್ರ ಮತ್ತು ಆಕಾರ




ಪೃಥ್ವಿ

ಸೂರ್ಯನ ಪರಿವಾರದಲ್ಲಿ ಭೂಮಿಯು ಐದನೆಯ ದೊಡ್ಡ ಗ್ರಹವಾಗಿದೆ. ಭೂಮಿಯ ವ್ಯಾಸವು ಚಂದ್ರನ ವ್ಯಾಸಕ್ಕಿಂತ ಸುಮಾರು ನಾಲ್ಕು ಪಟ್ಟು ದೊಡ್ಡದಾಗಿದೆ ಹಾಗೂ ಸೂರ್ಯನಿಗಿಂತ 107 ಪಟ್ಟು ಚಿಕ್ಕದಾಗಿದೆ.

ಭೂಮಿಯ ಒಟ್ಟು ಭೌಗೋಳಿಕ ಕ್ಷೇತ್ರವು 510 ದಶಲಕ್ಷ ಚದರ ಕಿ.ಮೀ.ಗಳಾಗಿದ್ದು ಅದರಲ್ಲಿ 361 ದಶಲಕ್ಷ ಚದರ ಕಿ.ಮೀ.ಗಳಷ್ಟು (70.78%) ಕ್ಷೇತ್ರವು ನೀರಿನಿಂದ ಆವರಿಸಲ್ಪಟ್ಟಿದೆ. ಉಳಿದ 149 ದಶಲಕ್ಷ ಚದರ ಕಿ.ಮೀ.ನಷ್ಟು ಕ್ಷೇತ್ರವು (29.22%) ಭೂ ಭಾಗದಿಂದ ಕೂಡಿದೆ. ಹೀಗೆ ಭೂಮಿಯ ಜಲ ಹಾಗೂ ಭೂ ಭಾಗಗಳ ಹಂಚಿಕೆ ಅಸಮತೆಯಿಂದ ಕೂಡಿದೆ. ಭೂ ಮತ್ತು ಜಲರಾಶಿಗಳ ಕ್ಷೇತ್ರ 1:2.43ರಷ್ಟು ಅನುಪಾತವನ್ನು ಹೊಂದಿವೆ.

©KTBS Not to be republished

**ಭೂಮಿಯ ಆಕಾರ :** ಭೂಮಿಯ ಆಕಾರವನ್ನು 'ಭೂಮ್ಯಾಕಾರ' (ಜಿಯಾಡ್) ಅಥವಾ 'ಗೋಳಾಕಾರ' ಎಂದು ಕರೆಯಲಾಗಿದೆ. ಏಕೆಂದರೆ ಭೂಮಿಯು ಧ್ರುವಗಳ ಬಳಿ ಸ್ವಲ್ಪ ಚಪ್ಪಟೆಯಾಗಿದ್ದು ಸಮಭಾಜಕವೃತ್ತದ ಬಳಿ ಉಬ್ಬಿದಂತಿದೆ. ಭೂಮಿಯ ಸಮಭಾಜಕವೃತ್ತದ ವ್ಯಾಸ 12,756 ಕಿ.ಮೀ.ಗಳು ಮತ್ತು ಧ್ರುವೀಯ ವ್ಯಾಸ 12,714 ಕಿ.ಮೀ ಆಗಿದೆ. ಇವೆರಡರ ವ್ಯಾಸದ ವ್ಯತ್ಯಾಸ 42 ಕಿ.ಮೀ.ಗಳಾಗಿದೆ. ಅದೇ ರೀತಿ ಸಮಭಾಜಕ ವೃತ್ತದ ಸುತ್ತಳತೆ 40,076ಕಿ.ಮೀ.ಗಳು ಮತ್ತು ಧ್ರುವೀಯ ಸುತ್ತಳತೆ 40,008 ಕಿ.ಮೀ.ಗಳಷ್ಟಿದೆ. ಇದರಲ್ಲಿ 68ಕಿ.ಮೀಗಳಷ್ಟು ವ್ಯತ್ಯಾಸವಿದೆ. ಇದು ಭೂಮಿಯು ಗೋಳಾಕಾರವಾಗಿರುವುದನ್ನು ಸ್ಪಷ್ಟಪಡಿಸುವುದು.




ಭೂಮಿಯ ಆಕಾರ

## ನೆಲ ಮತ್ತು ಜಲಭಾಗಗಳ ಹಂಚಿಕೆ

ಭೂಮಿಯ ನೆಲ ಭಾಗಗಳನ್ನು ಭೂ ಖಂಡಗಳೆಂದು ಕರೆಯುತ್ತಾರೆ. ಭೂ ನೆಲ ಭಾಗವನ್ನು ಏಳು ಭೂ ಖಂಡಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಏಷ್ಯ, ಆಫ್ರಿಕ, ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಅಂಟಾರ್ಕ್ಟಿಕ, ಯುರೋಪ್ ಮತ್ತು ಆಸ್ಟ್ರೇಲಿಯ. ಈ ಭೂ ಖಂಡಗಳು ವಿಸ್ತಾರವಾದ ಭೂ ಭಾಗಗಳಾಗಿವೆ. ಏಷ್ಯಾವು ಅತಿ ದೊಡ್ಡ ಖಂಡವಾದರೆ, ಆಸ್ಟ್ರೇಲಿಯಾವು ಅತಿ ಚಿಕ್ಕ ಖಂಡವಾಗಿದೆ. ಭೂಮಿಯ ಮೇಲಿನ ವಿಸ್ತಾರವಾದ ಜಲರಾಶಿಗಳನ್ನು ಮಹಾಸಾಗರಗಳೆಂದು ಕರೆಯುತ್ತಾರೆ. ಅವುಗಳನ್ನು ನಾಲ್ಕು ಮಹಾಸಾಗರಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಪೆಸಿಫಿಕ್ ಸಾಗರ, ಅಟ್ಲಾಂಟಿಕ್ ಸಾಗರ, ಹಿಂದೂ ಮಹಾಸಾಗರ ಮತ್ತು ಆರ್ಕ್ಟಿಕ್ ಸಾಗರ. ಪೆಸಿಫಿಕ್ ಸಾಗರವು ಅತಿ ವಿಶಾಲವಾದ ಹಾಗೂ ಹೆಚ್ಚು ಆಳವಾದುದಾಗಿದೆ. ಆರ್ಕ್ಟಿಕ್ ಸಾಗರವು ಅತಿ ಚಿಕ್ಕದು ಮತ್ತು ಕಡಿಮೆ ಆಳ ಹೊಂದಿದೆ.

ನೆಲ ಮತ್ತು ಜಲರಾಶಿಗಳು ಉತ್ತರಗೋಳಾರ್ಧ ಮತ್ತು ದಕ್ಷಿಣಗೋಳಾರ್ಧದಲ್ಲಿ ಸಮನಾಗಿ ಹಂಚಿಕೆಯಾಗಿಲ್ಲ. ಉತ್ತರಗೋಳಾರ್ಧದಲ್ಲಿ ಶೇ.60 ಭಾಗದಷ್ಟು ಭೂ ಭಾಗವಿದ್ದು, ಶೇ.40 ಭಾಗದಷ್ಟು ಜಲರಾಶಿಯಿರುವುದು. ಆದ್ದರಿಂದ ಇದನ್ನು 'ಭೂಪ್ರಧಾನ ಗೋಳಾರ್ಧ'ವೆಂದು ಕರೆಯಲಾಗಿದೆ. ಇದಕ್ಕೆ ವಿರುದ್ಧವಾಗಿ ದಕ್ಷಿಣಗೋಳಾರ್ಧದಲ್ಲಿ ಶೇ.81 ಭಾಗದಷ್ಟು ಜಲರಾಶಿಯಿದ್ದು ಶೇ.19 ಭಾಗದಷ್ಟು ನೆಲ ಭಾಗವಿದೆ. ಇದರಿಂದ ಇದನ್ನು 'ಜಲಪ್ರಧಾನ ಗೋಳಾರ್ಧ' ವೆಂದೂ ಕರೆಯುವರು.


## ಅಕ್ಷಾಂಶ ಮತ್ತು ರೇಖಾಂಶಗಳು

*ಒಂದು ಸ್ಥಳದ ಸ್ಥಾನ, ದಿಕ್ಕು ಮತ್ತು ಅಂತರಗಳನ್ನು ನಾವು ಹೇಗೆ ತಿಳಿಯುತ್ತೇವೆ?*

ಭೂಮಿಯು ಗೋಳಾಕಾರವಾಗಿದೆ. ಆದ್ದರಿಂದ ಭೂಮಿಯ ಮೇಲಿನ ಎರಡು ಸ್ಥಳಗಳ ಸ್ಥಾನ ದಿಕ್ಕು ಹಾಗೂ ಅಂತರಗಳನ್ನು ಗುರುತಿಸುವುದು ಕಷ್ಟ. ಭೂಮಿಯ ಮೇಲಿನ ಒಂದು ಸ್ಥಳದ ನಿರ್ದಿಷ್ಟ ಸ್ಥಾನ, ಅಂತರ ಮತ್ತು ದಿಕ್ಕುಗಳನ್ನು ಅರಿಯಲು ಕಾಲ್ಪನಿಕ ರೇಖಾಜಾಲ ವ್ಯವಸ್ಥೆಯನ್ನು ನಕ್ಷೆ ಅಥವಾ ಗೋಳದ ಮೇಲೆ ಎಳೆಯಲಾಗಿದೆ. ಈ ಕಾಲ್ಪನಿಕ ರೇಖೆಗಳನ್ನು ಪೂರ್ವ ಪಶ್ಚಿಮವಾಗಿ ಮತ್ತು ಉತ್ತರ ದಕ್ಷಿಣವಾಗಿ ಎಳೆಯಲಾಗಿದ್ದು, ಇವುಗಳನ್ನು ಕ್ರಮವಾಗಿ ಅಕ್ಷಾಂಶ ಮತ್ತು ರೇಖಾಂಶಗಳೆನ್ನುವರು. ಇವು ಪರಸ್ಪರ ಲಂಬಕೋನದಲ್ಲಿ ಛೇದಿಸುವುದರಿಂದ ದೊರೆಯುವ ಛೇದಕ ಬಿಂದುಗಳಿಗೆ ಭೌಗೋಳಿಕ ನಿರ್ದೇಶಾಂಕಗಳು (Geographic Co-ordinates) ಎನ್ನುವರು. ಇವುಗಳಿಗೆ ಭೌಗೋಳಿಕ ಜಾಲ ವ್ಯವಸ್ಥೆ ಎಂದೂ ಕರೆಯಲಾಗಿದೆ.

©KTBS Not to be republished


Not to be republished
© KTBS




ಪ್ರಪಂಚದ ಭೂಭಾಗ ಮತ್ತು ಜಲಭಾಗಗಳ ಹಂಚಿಕೆ.

**ಅಕ್ಷಾಂಶಗಳು :** ಭೂಮಧ್ಯ ರೇಖೆಯಿಂದ ಉತ್ತರ ಅಥವಾ ದಕ್ಷಿಣಕ್ಕಿರುವ ಕೋನಾಂತರವೇ ಅಕ್ಷಾಂಶ. ಇವು ಕಾಲ್ಪನಿಕ ರೇಖೆಗಳಾಗಿದ್ದು, ಅವುಗಳನ್ನು ಡಿಗ್ರಿಗಳಲ್ಲಿ ಅಳೆಯಲಾಗುತ್ತದೆ. ಉತ್ತರ ಮತ್ತು ದಕ್ಷಿಣ ಧ್ರುವಗಳ ಮಧ್ಯದಲ್ಲಿ ಭೂಅಕ್ಷಕ್ಕೆ ಲಂಬವಾಗಿ ಎಳೆದ ಕಾಲ್ಪನಿಕ ರೇಖೆಯೇ ಸಮಭಾಜಕವೃತ್ತ. ಈ ಸಮಭಾಜಕ ವೃತ್ತಕ್ಕೆ ಸಮಾನಾಂತರವಾಗಿರುವಂತೆ ಗೋಳದ ಮೇಲೆ ಪೂರ್ವ ಪಶ್ಚಿಮವಾಗಿ ಎಳೆದಿರುವ ಕಾಲ್ಪನಿಕ ರೇಖೆಗಳನ್ನೇ 'ಅಕ್ಷಾಂಶಗಳು' (Latitudes) ಎನ್ನುವರು. ಸಮಭಾಜಕವೃತ್ತವು $0^0$ ಮಹಾವೃತ್ತವಾಗಿದ್ದು ಅದು ಭೂ ಸುತ್ತಳತೆಗೆ ಸಮನಾಗಿದೆ. ಅಲ್ಲಿಂದ ಉತ್ತರ ಹಾಗೂ ದಕ್ಷಿಣಕ್ಕಿರುವ ಅಕ್ಷಾಂಶ ವೃತ್ತಗಳು ಉದ್ದದಲ್ಲಿ ಚಿಕ್ಕದಾಗುತ್ತವೆ. ಎಲ್ಲಾ ಅಕ್ಷಾಂಶ ವೃತ್ತಗಳು ಭೂಮಧ್ಯ ರೇಖೆಗೆ ಸಮಾನಾಂತರವಾಗಿರುವುದರಿಂದ ಅವುಗಳನ್ನು ಸಮಾನಾಂತರ ರೇಖೆಗಳೆಂತಲೂ ಕರೆಯುತ್ತಾರೆ. ಸಮಭಾಜಕವೃತ್ತದಿಂದ ಉತ್ತರಗೋಳಾರ್ಧದಲ್ಲಿ $90^0$ ಹಾಗೂ ದಕ್ಷಿಣಗೋಳಾರ್ಧದಲ್ಲಿ $90^0$ ಅಕ್ಷಾಂಶಗಳನ್ನು ರಚಿಸಲಾಗಿದೆ. ಆದರೆ $90^0$ ಉತ್ತರ ಹಾಗೂ ದಕ್ಷಿಣ ಅಕ್ಷಾಂಶಗಳು ಬಿಂದುಗಳಾಗಿವೆ. ಒಂದು ಅಕ್ಷಾಂಶದಿಂದ ಮತ್ತೊಂದು ಅಕ್ಷಾಂಶಕ್ಕಿರುವ ಭೂಮಿಯ ಮೇಲಿನ ಅಂತರ 110.4 ಕಿ.ಮೀ. ಗಳಾಗುತ್ತದೆ. $0^0$ ಅಕ್ಷಾಂಶ ಅಥವಾ ಭೂಮಧ್ಯರೇಖೆ ಸೇರಿಕೊಂಡು 181 ಅಕ್ಷಾಂಶಗಳಾಗುತ್ತವೆ.

**ಪ್ರಮುಖ ಅಕ್ಷಾಂಶಗಳು**




**ಅಕ್ಷಾಂಶ ಮತ್ತು ರೇಖಾಂಶಗಳ ಜಾಲ**

1) $0^0$ ಅಕ್ಷಾಂಶ – ಸಮಭಾಜಕವೃತ್ತ
2) $23\frac{1}{2}^o$ ಉತ್ತರ ಅಕ್ಷಾಂಶ – ಕರ್ಕಾಟಕ ಸಂಕ್ರಾಂತಿ ವೃತ್ತ.
3) $23\frac{1}{2}^o$ ದಕ್ಷಿಣ ಅಕ್ಷಾಂಶ – ಮಕರ ಸಂಕ್ರಾಂತಿ ವೃತ್ತ.
4) $66\frac{1}{2}^o$ ಉತ್ತರ ಅಕ್ಷಾಂಶ – ಉತ್ತರಧ್ರುವ ವೃತ್ತ (ಆರ್ಕ್ಟಿಕ್ ವೃತ್ತ).
5) $66\frac{1}{2}^o$ ದಕ್ಷಿಣ ಅಕ್ಷಾಂಶ–ದಕ್ಷಿಣಧ್ರುವ ವೃತ್ತ. (ಅಂಟಾರ್ಕ್ಟಿಕ್ ವೃತ್ತ).
6) $90^0$ ಉತ್ತರ ಅಕ್ಷಾಂಶ – ಉತ್ತರಧ್ರುವ.
7) $90^0$ ದಕ್ಷಿಣ ಅಕ್ಷಾಂಶ – ದಕ್ಷಿಣಧ್ರುವ.

**ರೇಖಾಂಶಗಳು :** ಸಮಭಾಜಕ ವೃತ್ತವನ್ನು ಸಮಕೋನದಲ್ಲಿ ಛೇದಿಸಿ ಉತ್ತರ ಮತ್ತು ದಕ್ಷಿಣ ಧ್ರುವಗಳನ್ನು ಸಂಧಿಸುವ ಕಾಲ್ಪನಿಕ ರೇಖೆಗಳನ್ನು ರೇಖಾಂಶಗಳು ಎನ್ನುವರು.

ಗೋಳದ ಮೇಲೆ ರೇಖಾಂಶಗಳು ಅರ್ಧವೃತ್ತಗಳ ಸರಣಿಗಳಂತೆ ಕಂಡುಬರುತ್ತವೆ. ಇವು ಉತ್ತರ ಮತ್ತು ದಕ್ಷಿಣ ಧ್ರುವಗಳಲ್ಲಿ ಸಂಧಿಸುತ್ತವೆ ಹಾಗೂ ಸಮಭಾಜಕವೃತ್ತದ ಮೂಲಕ ಹಾದುಹೋಗುತ್ತವೆ. ಎಲ್ಲ ರೇಖಾಂಶಗಳ ಉದ್ದ ಒಂದೇ ಆಗಿದೆ. ರೇಖಾಂಶಗಳನ್ನು ಮಧ್ಯಾಹ್ನ ಅಥವಾ ಮೆರಿಡಿಯನ್ ರೇಖೆಗಳೆನ್ನುವರು. (ಮೆರಿ–ಮಧ್ಯ, ಡಿಯನ್– ದಿನ). ಏಕೆಂದರೆ ಯಾವುದೇ ರೇಖಾಂಶದ ನೆತ್ತಿಯ ಮೇಲೆ ಸೂರ್ಯನು ಬಂದಾಗ ಆ ರೇಖಾಂಶದುದ್ದಕ್ಕೂ ಎಲ್ಲ ಸ್ಥಳಗಳಲ್ಲೂ ಒಂದೇ ಸಮಯದಲ್ಲಿ ಮಧ್ಯಾಹ್ನವಾಗುತ್ತದೆ.

ಇಂಗ್ಲೆಂಡಿನ ಗ್ರೀನ್‌ವಿಚ್‌ನ ಮೇಲೆ ಹಾದುಹೋಗುವ ರೇಖಾಂಶವನ್ನು 'ಪ್ರಧಾನ ರೇಖಾಂಶ'ವೆಂದು ಆಯ್ಕೆಮಾಡಲಾಗಿದೆ. ಇದನ್ನು $0^o$ ಎಂದು ಗುರುತಿಸಲಾಗಿದೆ. ಗ್ರೀನ್‌ವಿಚ್ ರೇಖಾಂಶದ ಪೂರ್ವಕ್ಕೆ $180^0$

© KTBS Not to be republished

ಹಾಗೂ ಪಶ್ಚಿಮಕ್ಕೆ $180^0$ ರೇಖಾಂಶಗಳಿವೆ. ಭೂಗೋಳದಲ್ಲಿ ಒಟ್ಟು $360^0$ ರೇಖಾಂಶ ರೇಖೆಗಳಿರುತ್ತವೆ. ಪ್ರಧಾನ ರೇಖಾಂಶದಿಂದ $180^0$ ಪೂರ್ವ ರೇಖಾಂಶದವರೆಗಿನ ವಲಯವನ್ನು ಪೂರ್ವಗೋಳಾರ್ಧವೆನ್ನುವರು. ಅದರ ವಿರುದ್ಧದ ಭಾಗವನ್ನು ಪಶ್ಚಿಮಗೋಳಾರ್ಧವೆನ್ನುವರು.

ಸಮಭಾಜಕವೃತ್ತದಿಂದ ಧ್ರುವದ ಕಡೆಗೆ ಹೋದಂತೆ ಎರಡು ರೇಖಾಂಶಗಳ ನಡುವಣ ಅಂತರವು ಕಡಿಮೆಯಾಗುತ್ತಾ ಹೋಗುತ್ತದೆ. ಇದಕ್ಕೆ ಕಾರಣ ಎಲ್ಲ ರೇಖಾಂಶಗಳು ಎರಡೂ ಧ್ರುವಗಳಲ್ಲಿ ಸಂಧಿಸುವುದು. ಸಮಭಾಜಕವೃತ್ತದ ಮೇಲೆ ಎರಡು ರೇಖಾಂಶಗಳ ನಡುವಿನ ಅಂತರ ಅತಿ ಹೆಚ್ಚು ಅಂದರೆ ಸುಮಾರು 111 ಕಿ.ಮೀ.ಗಳಾಗಿರುತ್ತದೆ.

**ರೇಖಾಂಶ ಮತ್ತು ವೇಳೆ :** ರೇಖಾಂಶ ಮತ್ತು ವೇಳೆಗಳ ನಡುವೆ ನಿಕಟವಾದ ಸಂಬಂಧವಿದೆ. ಭೂಮಿಯು ತನ್ನ ಅಕ್ಷದ ಸುತ್ತ ತಿರುಗುತ್ತದೆ ಹಾಗೂ ಒಂದು ಸುತ್ತನ್ನು ಪೂರ್ಣಗೊಳಿಸಲು 24 ಗಂಟೆಗಳ ಸಮಯಬೇಕು. ಅಂದರೆ $360^0$ ರೇಖಾಂಶಗಳನ್ನು ಸುತ್ತಿ ಪೂರ್ಣಗೊಳಿಸಲು 24 ಗಂಟೆಗಳು ಬೇಕು. ಒಂದು ರೇಖಾಂಶದಿಂದ ಮತ್ತೊಂದು ರೇಖಾಂಶಕ್ಕೆ ಇರುವ ವೇಳೆಯ ವ್ಯತ್ಯಾಸ 4 ನಿಮಿಷಗಳಾಗಿದ್ದು, ಪ್ರತಿ 15 ರೇಖಾಂಶಗಳಿಗೆ ಒಂದು ಗಂಟೆ ಅಥವಾ 60 ನಿಮಿಷಗಳಾಗುತ್ತವೆ. ($360 \times 4 = 1440 \div 60 = 24$ ಗಂಟೆಗಳು). ನಾವು ಗ್ರೀನಿಚ್‌ನಿಂದ ಪಶ್ಚಿಮದಿಂದ ಪೂರ್ವದ ಕಡೆಗೆ ಚಲಿಸುವಾಗ ವೇಳೆಯು ಹೆಚ್ಚಾಗುತ್ತದೆ. (EGA = East Gain Add) ಹಾಗೂ ಪೂರ್ವದಿಂದ ಪಶ್ಚಿಮದ ಕಡೆಗೆ ಚಲಿಸುವಾಗ ವೇಳೆಯು ಕಡಿಮೆಯಾಗುತ್ತಾ ಹೋಗುತ್ತದೆ (WLS - West Lose Subtracts).

**ಸ್ಥಾನಿಕ ವೇಳೆ :** ಒಂದು ಸ್ಥಳದ ರೇಖಾಂಶ ಅಥವಾ ಸೂರ್ಯನ ಸ್ಥಾನಕ್ಕನುಸಾರವಾಗಿ ನಿರ್ಧರಿಸುವ ವೇಳೆಯನ್ನು 'ಸ್ಥಾನಿಕ ವೇಳೆ' ಎನ್ನುವರು. ಸ್ಥಾನಿಕ ವೇಳೆಯು ಆ ಸ್ಥಳದ ಸ್ಥಳೀಯ ರೇಖಾಂಶವನ್ನು ಅದರಲ್ಲೂ ಸ್ಥಳೀಯ ಮಧ್ಯಾಹ್ನದ ರೇಖೆಯನ್ನು ಆಧರಿಸಿರುತ್ತದೆ. ಆ ಸ್ಥಳಗಳ ಮೇಲೆ ಸೂರ್ಯನ ಕಿರಣ ನೇರವಾಗಿ ಬೀಳುವುದರಿಂದ ಮಧ್ಯಾಹ್ನ 12 ಗಂಟೆಯಾಗಿರುತ್ತದೆ. ಆ ಮಧ್ಯಾಹ್ನರೇಖೆ ಹಾದುಹೋಗುವ ಎಲ್ಲಾ ಸ್ಥಳಗಳಲ್ಲೂ ಒಂದೇ ಸ್ಥಾನಿಕ ವೇಳೆಯಿರುತ್ತದೆ. ಪ್ರತಿ ರೇಖಾಂಶವೂ ತನ್ನದೇ ಆದ ಸ್ಥಾನಿಕ ವೇಳೆ ಹೊಂದಿದೆ.

**ಆದರ್ಶ ವೇಳೆ :** ಸ್ಥಾನಿಕ ವೇಳೆಯು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಪ್ರತಿಯೊಂದು ಸ್ಥಳವೂ ತನ್ನದೇ ಸ್ಥಾನಿಕ ವೇಳೆಯನ್ನು ಅನುಸರಿಸುವುದರಿಂದ, ಸಾಕಷ್ಟು ಗೊಂದಲವುಂಟಾಗುತ್ತದೆ. ಈ ಗೊಂದಲವನ್ನು ನಿವಾರಿಸಲು ಹಲವು ದೇಶಗಳು ಇಡೀ ದೇಶದಲ್ಲಿ ಏಕರೂಪದ ವೇಳೆಯನ್ನು ಅನುಸರಿಸುತ್ತವೆ. ಇಂತಹ ಏಕರೂಪದ ವೇಳೆಯು ಆ ದೇಶದ ಮಧ್ಯದಲ್ಲಿ ಹಾದುಹೋಗುವ ರೇಖಾಂಶದ ವೇಳೆಯನ್ನಾಧರಿಸಿರುತ್ತದೆ ಅಥವಾ ಆ ರೇಖಾಂಶದ ಮೇಲಿರುವ ಪ್ರಮುಖ ನಗರದ ವೇಳೆಯಾಗಿರುತ್ತದೆ. ಈ ವೇಳೆಯನ್ನು ದೇಶದ ಎಲ್ಲಾ ಭಾಗಗಳಲ್ಲೂ ಅನುಸರಿಸುವುದರಿಂದ ಇದನ್ನು ಆದರ್ಶ ವೇಳೆ(Standard Time) ಎಂದು ಕರೆಯುತ್ತಾರೆ.

ಭಾರತದಲ್ಲಿ $82\frac{1}{2}^0$ ಪೂರ್ವ ರೇಖಾಂಶವನ್ನು ದೇಶದ ಅಥವಾ ಆದರ್ಶ ರೇಖಾಂಶವೆಂದು ನಿರ್ಧರಿಸಲಾಗಿದೆ. ಇದು ಉತ್ತರ ಪ್ರದೇಶ ರಾಜ್ಯದ ಅಲಹಾಬಾದ್ ನಗರದ ಮೂಲಕ ಹಾದುಹೋಗಿದೆ. ಭಾರತದ ವೇಳೆ ಈ ರೇಖಾಂಶವನ್ನು ಆಧರಿಸುವುದರಿಂದ ಇದನ್ನು ಭಾರತದ ಆದರ್ಶ ವೇಳೆ (I S T) ಎನ್ನುವರು. ಇದು ಗ್ರೀನ್‌ವಿಚ್ ವೇಳೆಗಿಂತ 5 ಗಂಟೆ 30 ನಿಮಿಷಗಳಷ್ಟು ಮುಂದಿರುತ್ತದೆ.

**ವೇಳಾವಲಯಗಳು:** ಪ್ರಪಂಚದ ಕೆಲವು ರಾಷ್ಟ್ರಗಳು 45ಕ್ಕಿಂತ ಹೆಚ್ಚು ರೇಖಾಂಶಗಳಲ್ಲಿ ಹಾದುಹೋಗುವುದರಿಂದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಚಲಿಸಿದಾಗ 3ರಿಂದ 4ಗಂಟೆಗಳಷ್ಟು ವೇಳೆ ವ್ಯತ್ಯಾಸವಾಗುತ್ತದೆ. ಇಲ್ಲಿ ಒಂದೇ ಆದರ್ಶ ವೇಳೆಯನ್ನು ಅನುಸರಿಸಲು ಸಾಧ್ಯವಾಗುವುದಿಲ್ಲ,

©KTBS Not to be republished


ಆದುದರಿಂದ ಇಡೀ ರಾಷ್ಟ್ರವನ್ನು ಕಾಲವಲಯಗಳನ್ನಾಗಿ ವಿಭಾಗಿಸುವುದು ಹಾಗೂ ಇಡೀ ಭೂಗೋಳವನ್ನು 24 ವೇಳಾವಲಯಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿ ವೇಳಾವಲಯಕ್ಕೆ ಒಂದು ಗಂಟೆಯಷ್ಟು ಮಾತ್ರ ವೇಳೆ ವ್ಯತ್ಯಾಸವಾಗುತ್ತದೆ.

ವಿಸ್ತಾರವಾದ ರಾಷ್ಟ್ರಗಳಲ್ಲಿ ಅನೇಕ ರೇಖಾಂಶಗಳು ಹಾದುಹೋಗುವುದರಿಂದ ಹೆಚ್ಚು ವೇಳಾವಲಯಗಳನ್ನು ಹೊಂದಿರುತ್ತವೆ. ಉದಾಹರಣೆಗಾಗಿ, ರಷ್ಯಾದಲ್ಲಿ 11 ವೇಳಾವಲಯಗಳು, ಯು ಎಸ್ ಎ ಮತ್ತು ಕೆನಡಾಗಳಲ್ಲಿ 5 ವೇಳಾವಲಯ ಹಾಗೂ ಆಸ್ಟ್ರೇಲಿಯಾದಲ್ಲಿ 3 ವೇಳಾವಲಯಗಳಿವೆ.

**ಅಂತಾರಾಷ್ಟ್ರೀಯ ದಿನಾಂಕ ರೇಖೆ** (I D L) : ಪ್ರಪಂಚದ ವೇಳೆಯ ಸಮಸ್ಯೆಯನ್ನು ಮೊದಲು ಆದರ್ಶ ವೇಳೆಯಿಂದ, ಅನಂತರ ವೇಳಾವಲಯದಿಂದಲೂ ಪರಿಹರಿಸಲಾಗಿದೆ. ಆದರೆ ಪ್ರಪಂಚವನ್ನೇ ಪ್ರದಕ್ಷಿಣೆ ಹಾಕುವ ಪ್ರಯಾಣಿಕರಿಗೆ ವಾರದಲ್ಲಿನ ಸರಿಯಾದ ದಿನಾಂಕ ಮತ್ತು ದಿನಗಳನ್ನು ಸರಿಪಡಿಸಲು ಹೊಸ ಸಮಸ್ಯೆ ಎದುರಾಗುತ್ತದೆ. ಆದ್ದರಿಂದ ಗ್ರೀನ್‌ವಿಚ್ ರೇಖಾಂಶದ ವಿರುದ್ಧವಾದ ದಿಕ್ಕಿನಲ್ಲಿರುವ $180^0$ ರೇಖಾಂಶದ ಮೇಲೆ ಪ್ರಪಂಚ ಪರ್ಯಟನೆ ಮಾಡುವವರು ತಮ್ಮ ಸಂದರ್ಭಕ್ಕೆ ದಿನ ಮತ್ತು ದಿನಾಂಕವನ್ನು ಸರಿದೂಗಿಸಿಕೊಳ್ಳಬೇಕಾಗುತ್ತದೆ. ಇದು ಪೆಸಿಫಿಕ್ ಸಾಗರದ ಮೂಲಕ ಹಾದುಹೋಗುವ $180^0$ ರೇಖಾಂಶದ ಮೇಲೆ ಇದ್ದರೂ ಕೆಲವೆಡೆ ಭೂಭಾಗಗಳನ್ನು ತಪ್ಪಿಸಲು ಅಲ್ಲಲ್ಲಿ ಅಂಕುಡೊಂಕಾಗಿ ಎಳೆಯಲಾಗಿದೆ. ಇದನ್ನೇ ಅಂತಾರಾಷ್ಟ್ರೀಯ ದಿನಾಂಕ ರೇಖೆ ಎನ್ನುವರು.

ಹಡಗು ಮತ್ತು ವಿಮಾನದಲ್ಲಿ ಪ್ರಯಾಣಿಸುವವರು ಈ ರೇಖೆಯನ್ನು ದಾಟುವಾಗ ದಿನಾಂಕ ಮತ್ತು ದಿನಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಯಾವುದೇ ಹಡಗು ಈ ರೇಖೆಯನ್ನು ಪಶ್ಚಿಮದಿಂದ ಪೂರ್ವಕ್ಕೆ ದಾಟಿದಾಗ (ಏಷ್ಯಾದಿಂದ ಉತ್ತರ ಅಮೇರಿಕಾ) ಒಂದೇ ದಿನವನ್ನು ಎರಡುಬಾರಿ ಗಣನೆಗೆ ತೆಗೆದುಕೊಳ್ಳಬೇಕು. ಅದೇರೀತಿ ಈ ರೇಖೆಯನ್ನು ಪೂರ್ವದಿಂದ ಪಶ್ಚಿಮದ ಕಡೆಗೆ ಹಾದುಹೋಗುವಾಗ (ಉತ್ತರ ಅಮೇರಿಕಾದಿಂದ ಏಷ್ಯಾ) ಒಂದು ದಿನವನ್ನು ಕಳೆದುಕೊಳ್ಳಬೇಕಾಗುತ್ತದೆ.

©KTBS Not to be republished




**ಪ್ರಪಂಚದ ವೇಳಾವಲಯಗಳು ಮತ್ತು ಅಂತಾರಾಷ್ಟ್ರೀಯ ದಿನರೇಖೆ**

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಉತ್ತರಗಳಿಂದ ಭರ್ತಿಮಾಡಿ.**

1. ಭೂಮಿಯ ಒಟ್ಟು ಭೌಗೋಳಿಕ ಕ್ಷೇತ್ರವು ________ ಚ.ಕಿ.ಮೀ.
2. ಭೂಮಿಯು ________ ಆಕಾರದಲ್ಲಿದೆ.
3. ಭೂಮಿಯ ಸಮಭಾಜಕವೃತ್ತ ಮತ್ತು ಧ್ರುವ ಪ್ರದೇಶಗಳ ವ್ಯಾಸವು ________ ಮತ್ತು ________ ಕಿ.ಮೀ.ಗಳು.
4. $23\frac{1}{2}^0$ ಉತ್ತರ ಅಕ್ಷಾಂಶವನ್ನು ________ ಎಂದು ಕರೆಯುತ್ತಾರೆ.
5. ಭಾರತದ ಆದರ್ಶ ವೇಳೆಯು ________ ರೇಖಾಂಶವನ್ನು ಆಧರಿಸಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.**

1. ಭೂಮಿಯನ್ನು 'ಜೀವಂತಗ್ರಹ'ವೆಂದು ಏಕೆ ಕರೆಯುತ್ತಾರೆ?
2. ಉತ್ತರಗೋಳಾರ್ಧವನ್ನು 'ಭೂಪ್ರಧಾನಗೋಳ'ವೆಂದು ಹಾಗೂ ದಕ್ಷಿಣಗೋಳಾರ್ಧವನ್ನು 'ಜಲಪ್ರಧಾನಗೋಳ'ವೆಂದು ಏಕೆ ಕರೆಯುತ್ತಾರೆ?
3. ಅಕ್ಷಾಂಶಗಳು ಮತ್ತು ರೇಖಾಂಶಗಳೆಂದರೇನು?
4. ಸ್ಥಾನಿಕ ವೇಳೆ ಮತ್ತು ಆದರ್ಶ ವೇಳೆಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ.
5. ಅಂತಾರಾಷ್ಟ್ರೀಯ ದಿನಾಂಕ ರೇಖೆ ಎಂದರೇನು?

**III. ಈ ಕೆಳಗಿನವುಗಳ ಅರ್ಥ ಬರೆಯಿರಿ.**

1. ವಿಶಿಷ್ಟ ಗ್ರಹ
4. ಭೂಖಂಡಗಳು
2. ಭೂಮಧ್ಯ ರೇಖೆ
3. ಭೂಮ್ಯಾಕಾರ
5. ಪ್ರಧಾನ ರೇಖಾಂಶ
6. ಭಾರತದ ಆದರ್ಶವೇಳೆ

**IV. ನೆನಪಿನಲ್ಲಿಡಬೇಕಾದ ಅಂಶಗಳು.**

1. ಜೀವಂತಗ್ರಹ
4. ಅಂಟಾರ್ಕ್ಟಿಕ್ ವೃತ್ತ
2. ಸಮಭಾಜಕವೃತ್ತ
3. ಉತ್ತರ ಧ್ರುವವೃತ್ತ (ಆರ್ಕ್ಟಿಕ್ ವೃತ್ತ)
5. ವೇಳಾವಲಯ
6. ಅಂತಾರಾಷ್ಟ್ರೀಯ ದಿನಾಂಕ ರೇಖೆ

**V. ಚಟುವಟಿಕೆ.**

1. ರೇಖಾಂಶಗಳ ಆಧಾರದ ಮೇಲೆ ಪೂರ್ವಗೋಳಾರ್ಧ ರಾಷ್ಟ್ರಗಳು ಮತ್ತು ಪಶ್ಚಿಮಗೋಳಾರ್ಧ ರಾಷ್ಟ್ರಗಳನ್ನು ಪಟ್ಟಿ ಮಾಡಿರಿ.

*****

©KTBS Not to be republished

## ಅಧ್ಯಾಯ – 2

# ಶಿಲಾಗೋಳ

### ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.


- *ಶಿಲಾಗೋಳದ ಅರ್ಥ ಮತ್ತು ಪ್ರಾಮುಖ್ಯತೆ ತಿಳಿಯುವುದು.*
- *ಭೂಮಿಯ ಅಂತರಾಳದ ರಚನೆ ಮತ್ತು ಸಂಯೋಜನೆಗಳು.*
- *ಶಿಲೆಗಳ ಉತ್ಪತ್ತಿ ಮತ್ತು ಅವುಗಳ ವಿಧಗಳ ಪರಿಚಯ.*
- *ಭೂಮಿಯ ಅಂತರ್ಜನಿಕ ಶಕ್ತಿಗಳು, ಜ್ವಾಲಾಮುಖಿ ಮತ್ತು ಭೂಕಂಪನಗಳು ಉಂಟಾಗುವ ಬಗೆ.*
- *ಭೂಮಿಯ ಬಾಹ್ಯ ಶಕ್ತಿಗಳಾದ ಉಷ್ಣಾಂಶ, ಮಾರುತಗಳು, ಮಳೆ, ನದಿ ಇವುಗಳ ಮಹತ್ವ ತಿಳಿಯುವುದು.*

### ಅರ್ಥ ಮತ್ತು ಪ್ರಾಮುಖ್ಯತೆ

ಭೂಮಿಯ ಅತ್ಯಂತ ಮೇಲ್ಭಾಗದ ಘನ ಪದರವನ್ನು 'ಶಿಲಾಗೋಳ' ಎನ್ನುವರು. ಈ ಪದರವು ಭೂಖಂಡಗಳಲ್ಲಿ ಹೆಚ್ಚು ದಪ್ಪವಾಗಿದ್ದು ಮತ್ತು ಸಾಗರಗಳ ತಳಭಾಗದಲ್ಲಿ ಸ್ವಲ್ಪ ತೆಳುವಾಗಿದೆ. ಶಿಲಾಗೋಳವು ವಿವಿಧ ಬಗೆಯ ಶಿಲೆ, ಖನಿಜ, ಮಣ್ಣು ಇತ್ಯಾದಿಗಳಿಂದ ಕೂಡಿದೆ. ವಾಯುಗೋಳ ಮತ್ತು ಜಲಗೋಳಗಳ ಸಹಾಯದಿಂದ ಈ ಪದರದ ಮೇಲೆ ಜೀವಿಗಳು ಅಸ್ತಿತ್ವದಲ್ಲಿವೆ. ಭೂಖಂಡಗಳು ಶಿಲಾಗೋಳದ ಭಾಗಗಳಾಗಿವೆ. ಇಲ್ಲಿ ವಿವಿಧ ರೀತಿಯ ಭೂಸ್ವರೂಪಗಳಿಂದ ಅಂದರೆ ಪರ್ವತ, ಪ್ರಸ್ಥಭೂಮಿ, ಮೈದಾನ ಇತ್ಯಾದಿಗಳನ್ನು ಹೊಂದಿದೆ.

### ಭೂಮಿಯ ಅಂತರಾಳದ ರಚನೆ ಮತ್ತು ಸಂಯೋಜನೆ.

ನಮ್ಮ ಭೂಗ್ರಹವು 4.6 ದಶಲಕ್ಷ ಕೋಟಿ ವರ್ಷಗಳಿಗಿಂತ ಹಳೆಯದಾಗಿದ್ದು ಈಗಲೂ ಅದರಲ್ಲಿ ಬದಲಾವಣೆಯ ಕಾರ್ಯಾಚರಣೆ ನಡೆಯುತ್ತಿದೆ. ಮಾನವನು ಈ ಬದಲಾವಣೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಭೂಮಿಯ ಅಂತರಾಳದ ಬಗ್ಗೆ ಹೆಚ್ಚು ತಿಳಿಯಲು ಪ್ರಯತ್ನಿಸುತ್ತಿರುವನು. ಹಲವು ವರ್ಷಗಳ ಅಧ್ಯಯನ ಮತ್ತು ಸಂಶೋಧನೆಯ ಫಲವಾಗಿ ಮಾನವನಿಗೆ ಭೂಮಿಯ 10 ರಿಂದ 12 ಕಿ.ಮೀ.ಗಳ ಒಳಗಿನ ವಸ್ತುಗಳ ಬಗ್ಗೆ ಮಾಹಿತಿ ಪಡೆಯಲು ಸಾಧ್ಯವಾಗಿದೆ. ಇನ್ನೂ ಹೆಚ್ಚು ಆಳಕ್ಕೆ ಹೋದಂತೆ ಉಷ್ಣಾಂಶವು ಹೆಚ್ಚಾಗುವುದರಿಂದ (ಪ್ರತಿ 32 ಮೀಟರ್‌ಗೆ $1^0$ ಸೆಂಟಿಗ್ರೇಡ್) ಆಳದ ಬಗ್ಗೆ ಹೆಚ್ಚು ತಿಳಿಯಲು ಕಷ್ಟವಾಗುತ್ತದೆ.




ಭೂಮಿಯ ಅಂತರಾಳದ ಬಗ್ಗೆ ಹೆಚ್ಚು ತಿಳಿಯಲು ಮಾನವನು ಪರೋಕ್ಷ ಮೂಲಗಳನ್ನು ಅವಲಂಬಿಸಿದ್ದಾನೆ. ಅವುಗಳೆ ಭೂಕಂಪನದ ಅಲೆಗಳು, ಜ್ವಾಲಾಮುಖಿಯ ವಸ್ತುಗಳು ಇತ್ಯಾದಿ. ಭೂಮಿಯ ಅಂತರಾಳವು ವಿವಿಧ ಬಗೆಯ ವಸ್ತುಗಳನ್ನು ವಿವಿಧ ರೂಪಗಳಲ್ಲಿ ಒಳಗೊಂಡಿದೆ. ವಸ್ತುಗಳ ಸಾಂದ್ರತೆ, ರಾಸಾಯನಿಕ ಸಂಯೋಜನೆ ಮತ್ತು ಭೌತದ್ರವ್ಯಗಳ ರೂಪದ ಆಧಾರದ ಮೇಲೆ ಭೂಮಿಯ ಅಂತರಾಳವನ್ನು 3 ಪ್ರಮುಖ ಪದರುಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ–ಭೂಚಿಪ್ಪು , ಮ್ಯಾಂಟಲ್ ಮತ್ತು ಕೇಂದ್ರ ಗೋಳ.

©KTBS Not to be republished

**i. ಭೂಚಿಪ್ಪು (Crust) :** ಇದು ಭೂಮಿಯ ಅತ್ಯಂತ ಮೇಲ್ಭಾಗದ ಪದರವಾಗಿದೆ. ಇದು ಹೆಚ್ಚಾಗಿ ಸಿಲಿಕ, ಅಲ್ಯೂಮಿನಿಯಂ ಮತ್ತು ಮೆಗ್ನೀಷಿಯಂಗಳಿಂದ ಕೂಡಿದೆ. ಇದನ್ನು 'ಶಿಲಾಗೋಳ' ಎನ್ನುವರು. ಭೂ ಮೇಲ್ಭಾಗದಿಂದ ಇದು ಸುಮಾರು 60 ಕಿ.ಮೀ. ಆಳದವರೆಗೆ ವಿಸ್ತರಿಸಿದೆ. ಈ ಪದರದ ಮೇಲ್ಭಾಗವು ಹೆಚ್ಚು ಹಗುರವಾದ ವಸ್ತುಗಳಿಂದ ಕೂಡಿದೆ. ಇವುಗಳಲ್ಲಿ ಸಿಲಿಕ ಮತ್ತು ಅಲ್ಯೂಮಿನಿಯಂಗಳ ಪ್ರಮಾಣ ಹೆಚ್ಚಾಗಿರುವುದರಿಂದ ಇದನ್ನು 'ಸಿಯಾಲ್' (Sial) ಎಂದು ಕರೆಯಲಾಗಿದೆ. ಇದನ್ನು 'ಭೂಖಂಡಗಳ ಮೇಲ್ಪದರ' ಎಂದೂ ಸಹ ಕರೆಯುವರು. ಇದರ ಕೆಳಭಾಗವು ಸಿಲಿಕ ಮತ್ತು ಮೆಗ್ನೀಷಿಯಂಗಳಿಂದ ಕೂಡಿದ್ದು, ಹೆಚ್ಚು ಸಾಂದ್ರಯುತವಾಗಿದೆ. ಇದನ್ನು 'ಸೈಮಾ' (Sima) ಎಂದು ಕರೆಯಲಾಗಿದೆ. ಇದನ್ನು ಕೆಲವೊಮ್ಮೆ 'ಸಾಗರೀಯ ಮೇಲ್ಪದರ' ಎಂತಲೂ ಕರೆಯುವರು.

**ii. ಮ್ಯಾಂಟಲ್ :** ಇದು ಭೂಮಿಯ ಅಂತರಾಳದ ಎರಡನೆಯ ಹಾಗೂ ಮಧ್ಯಭಾಗದ ಪದರು. ಮ್ಯಾಂಟಲ್ ವಲಯವು ಭೂ ಮೇಲ್ಮೈನಿಂದ ಸುಮಾರು 2900 ಕಿ.ಮಿ.ಗಳ ಆಳದವರೆಗೆ ವಿಸ್ತರಿಸಿದೆ. ಇದರ ಮೇಲ್ಪದರದಲ್ಲಿನ ವಸ್ತಗಳು ಭಾಗಶಃ ದ್ರವ ಮತ್ತು ಘನ ಸ್ಥಿತಿಯಲ್ಲಿರುವುದರಿಂದ ಇದನ್ನು 'ಶಿಲಾಪಾಕ' (ಮ್ಯಾಗ್ಮಾ) ಎಂದು ಕರೆಯುವರು. ಮ್ಯಾಂಟಲ್ ವಲಯವು ಹೆಚ್ಚು ಸಾಂದ್ರತೆಯುಳ್ಳ ಹಾಗೂ ಕಠಿಣ ಶಿಲಾ ವಸ್ತುಗಳಿಂದ ಕೂಡಿದ್ದು ಪ್ರಮುಖವಾಗಿ ಖನಿಜಗಳನ್ನು ಹೊಂದಿದೆ. ಅವುಗಳೆಂದರೆ ಮೆಗ್ನೀಷಿಯಂ ಮತ್ತು ಕಬ್ಬಿಣ. ಮ್ಯಾಂಟಲ್‌ನಲ್ಲಿ ಎರಡು ಭಾಗಗಳಿವೆ. ಎ) ಮ್ಯಾಂಟಲ್‌ನ ಮೇಲ್ಪದರು ಅಥವಾ 'ಏಸ್ತೆನೋಸ್ಪಿಯರ್' ಎನ್ನುವರು. ಇದು ಭಾಗಶಃ ದ್ರವರೂಪದಲ್ಲಿದೆ. ಬಿ) ಮ್ಯಾಂಟಲ್‌ನ ಕೆಳಪದರು ಅಥವಾ 'ಮೆಸಾಸ್ಪಿಯರ್' ಎನ್ನುವರು. ಇದು ಘನರೂಪದಲ್ಲಿರುತ್ತದೆ.

ಭೂಚಿಪ್ಪು ಮತ್ತು ಮ್ಯಾಂಟಲ್ ಸಂಧಿಸುವ ಸೀಮಾ ವಲಯವನ್ನು 'ಮೊಹೊರೋವಿಸಿಕ್' ಅಥವಾ 'ಮೋಹೋ' ವಲಯ ಎನ್ನುವರು. ಅದೇರೀತಿ ಮ್ಯಾಂಟಲ್ ಮತ್ತು ಕೇಂದ್ರಗೋಳವನ್ನು ಬೇರ್ಪಡಿಸುವ ಗಡಿಯನ್ನು 'ಗುಟೆನ್‌ಬರ್ಗ್ ಸೀಮಾವಲಯ' ಎನ್ನುವರು. ಇಲ್ಲಿಂದ ಮೇಲೆ ಅಥವಾ ಕೆಳಗೆ ಶಿಲೆಗಳು ವಿವಿಧ ರಾಸಾಯನಿಕ ಸಂಯೋಜನೆಗಳಿಂದ ಕೂಡಿರುತ್ತವೆ.

**iii. ಕೇಂದ್ರ ಗೋಳ(ಭೂ ತಿರುಳು):** ಇದು ಭೂಮಿಯ ಅತ್ಯಂತ ಒಳಭಾಗ. ಇದು ಭೂಮಿಯ ಮೇಲ್ಮೈನಿಂದ 6,371 ಕಿ.ಮೀ ಆಳದವರೆಗೆ ಇರುವುದು. ಕೇಂದ್ರಗೋಳವು ಪ್ರಧಾನವಾಗಿ ನಿಕ್ಕಲ್ (Ni) ಮತ್ತು ಕಬ್ಬಿಣ (Fe)ದ ವಸ್ತುಗಳಿಂದ ಕೂಡಿರುವುದು. ಇದರಿಂದ ಕೇಂದ್ರವಲಯವನ್ನು ಸಾಂಕೇತಿಕವಾಗಿ 'ನಿಫೆ' (Nife) ಎಂದು ಕರೆಯಲಾಗಿದೆ. ಕೇಂದ್ರವಲಯವನ್ನು ಎರಡು ಉಪ ವಲಯಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

ಎ) ಹೊರಕೇಂದ್ರ ಗೋಳ–ಇದು ಅರೆದ್ರವರೂಪ ಸ್ಥಿತಿಯಲ್ಲಿದೆ. ಬಿ) ಒಳಕೇಂದ್ರ ಗೋಳ – ಇದು ಘನರೂಪದಲ್ಲಿದೆ.

**ಇದು ನಿಮಗೆ ತಿಳಿದಿರಲಿ**

**ಪ್ರಪಂಚದಲ್ಲಿ ಅತಿ ಆಳವಾದ ಕೆಲವು ಭೂ ಗಣಿಕೇಂದ್ರಗಳು**

*1. ರಷ್ಯಾದ ಅಕೋಲ ಪರ್ಯಾಯ ದ್ವೀಪ ಸುಮಾರು 12 ಕಿ.ಮೀ. ಆಳವಾಗಿದೆ.*

*2. ದಕ್ಷಿಣ ಆಫ್ರಿಕಾದಲ್ಲಿ ಕಿಂಬರ್ಲಿ ವಜ್ರದ ಗಣಿಯು ಸುಮಾರು 3.9 ಕಿ.ಮೀ. ಆಳವಿದೆ.*

*3. ಭಾರತದ ಕರ್ನಾಟಕದಲ್ಲಿನ ಕೆ.ಜಿ.ಎಫ್.ನ ಚಾಂಪಿಯನ್ ರೀಫ್ ಗಣಿಯು ಸುಮಾರು 1.5ಕಿ.ಮೀ. ಆಳವಿದೆ.*

©KTBS Not to be republished

# ಶಿಲೆಗಳು (Rocks)


ಶಿಲೆಗಳು ವಿವಿಧ ಬಗೆಯ ಖನಿಜಗಳ ಸಂಯುಕ್ತ ವಸ್ತುಗಳಾಗಿವೆ. ಇವು ಶಿಲಾಗೋಳದಲ್ಲಿ ಸ್ವಾಭಾವಿಕವಾಗಿ ಘನ ರೂಪದ ಅಜೈವಿಕ (Inorganic) ವಸ್ತುಗಳು. ಇದರಿಂದ ಶಿಲೆಗಳನ್ನು ಖನಿಜಗಳ ಮಿಶ್ರಣವೆಂದೂ ಕರೆಯುವರು. ಶಿಲೆಗಳು ವಿವಿಧ ನೈಸರ್ಗಿಕ ಪ್ರಕ್ರಿಯೆಗಳಿಂದ ನಿರ್ಮಿತವಾಗುವುದರಿಂದ ಇವುಗಳನ್ನು ಮೂರು ಮುಖ್ಯ ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ; 1. ಅಗ್ನಿ ಶಿಲೆಗಳು, 2. ಕಣ ಶಿಲೆಗಳು ಮತ್ತು 3. ರೂಪಾಂತರ ಶಿಲೆಗಳು.

**1. ಅಗ್ನಿ ಶಿಲೆಗಳು (Igneous Rocks)** : ಅಗ್ನಿ ಶಿಲೆಗಳನ್ನು ಆಂಗ್ಲಭಾಷೆಯಲ್ಲಿ 'ಇಗ್ನಿಯಸ್ ರಾಕ್ಸ್' ಎಂದು ಕರೆಯುವರು. ಇಗ್ನಿಯಸ್ ಎಂದರೆ ಬೆಂಕಿ ಎಂದರ್ಥ. ಇದು ಲ್ಯಾಟಿನ್ ಭಾಷೆಯ 'ಇಗ್ನಿಸ್' ಅಥವಾ ಸಂಸ್ಕೃತದ 'ಅಗ್ನಿ' ಎಂಬ ಪದದಿಂದ ಬಂದಿದೆ. ಅಗ್ನಿ ಶಿಲೆಗಳು ಭೂಮಿಯ ಅಂತರಾಳದಿಂದ ಶಿಲಾಪಾಕವು ಹೊರಹೊಮ್ಮಿ ಭೂ ಮೇಲ್ಮೈಯಲ್ಲಿ ತಂಪಾಗಿ ಘನೀಭವಿಸುವುದರಿಂದ ಉತ್ಪತ್ತಿಯಾಗುತ್ತವೆ. ಅಗ್ನಿಶಿಲೆಗಳು ಮೊದಲು ನಿರ್ಮಾಣವಾಗುವುದರಿಂದ ಇವುಗಳನ್ನು 'ಪ್ರಾಥಮಿಕ ಶಿಲೆ'ಗಳೆಂದೂ ಕರೆಯುವರು. ಅಗ್ನಿ ಶಿಲೆಗಳಲ್ಲಿ ಈ ಕೆಳಕಂಡಂತೆ ವಿಧಗಳಿವೆ.

ಅಗ್ನಿಶಿಲೆಗಳು

- ಅಂತಸ್ಸರಣ ಶಿಲೆಗಳು
  - ಅಂತರಾಗ್ನಿಶಿಲೆಗಳು (ಗ್ರಾನೈಟ್) ಹರಳುತ್ಪತ್ತಿ
  - ಡೈಕ್ ಶಿಲೆಗಳು (ಡೋಲೊರೈಟ್) ಭಾಗಶಃ ಹರಳುತ್ಪತ್ತಿ
- ಬಹಿಸ್ಸರಣ ಶಿಲೆಗಳು ಲಾವಾ ಅಥವಾ ಜ್ವಾಲಾಮುಖಿ ಜನ್ಯ ಶಿಲೆಗಳು (ಗಾಜತ್ವ ಅಥವಾ ಕಿಟ್ಟ) ಬಸಾಲ್ಟ್ ಶಿಲೆ

**i. ಅಂತಸ್ಸರಣ ಶಿಲೆಗಳು:** ಶಿಲಾಪಾಕ ಅಥವಾ ಮ್ಯಾಗ್ಮಾ ಭೂಮೇಲ್ಮೈಯನ್ನು ತಲುಪುವ ಮೊದಲೇ ಕೆಲವು ವೇಳೆ ಅಂತರಾಳದಲ್ಲಿ ತಂಪಾಗಿ, ಘನೀಭವಿಸಿ ನಿಧಾನವಾಗಿ ಶಿಲೆಗಳು ನಿರ್ಮಿತವಾಗುತ್ತವೆ. ಇವುಗಳನ್ನು ಅಂತಸ್ಸರಣ ಶಿಲೆಗಳು ಎನ್ನುವರು. ಈ ಶಿಲೆಗಳು ದಪ್ಪ ಹರಳಿನಿಂದ ಕೂಡಿರುತ್ತವೆ ಮತ್ತು ಇವುಗಳು ಭೂಮಿಯ ಒಳಭಾಗದಲ್ಲಿ ಹೆಚ್ಚು ಆಳದಲ್ಲಿರುತ್ತವೆ. ಉದಾ: ಗ್ರಾನೈಟ್, ಡಯೊರೈಟ, ಗ್ಯಾಬ್ರೊ ಇತ್ಯಾದಿ.



ಶಿಲಾ ಚಕ್ರ


ಶಿಲಾವಸ್ತುಗಳು ಭೂಮಿಯ ಒಳಭಾಗದಲ್ಲಿ ಕರಗಿ ದ್ರವ ಅಥವಾ ಅರೆ ದ್ರವರೂಪದಲ್ಲಿರುತ್ತವೆ. ಇದನ್ನು 'ಮ್ಯಾಗ್ಮಾ' (ಶಿಲಾಪಾಕ) ಎನ್ನುವರು. ಇದು ಭೂಮಿಯ ಹೊರಭಾಗಕ್ಕೆ ಬಂದಾಗ 'ಲಾವಾರಸ' ಎನ್ನುವರು.

**ii. ಬಹಿಸ್ಸರಣ ಶಿಲೆಗಳು** : ಶಿಲಾಪಾಕವು (ಮ್ಯಾಗ್ಮಾ) ಹೊರಹೊಮ್ಮಿ ಕ್ರಮೇಣ ಭೂಮೇಲ್ಮೈಯಲ್ಲಿ

©KTBS Not to be republished

ತಂಪಾಗಿ ಉತ್ಪತ್ತಿಯಾದ ಶಿಲೆಗಳನ್ನು ಬಹಿಸ್ಸರಣ ಶಿಲೆಗಳು ಎಂದು ಕರೆಯಲಾಗಿದೆ. ಈ ಶಿಲೆಗಳು ಸಾಮಾನ್ಯವಾಗಿ ಸಣ್ಣ ಹರಳುಗಳಿಂದ ಕೂಡಿದ್ದು ಗಾಜಿನಂತೆ ನಯವಾಗಿರುತ್ತವೆ. ಏಕೆಂದರೆ ಲಾವಾರಸವು ಭೂಮಿಯ ಮೇಲೆ ಬಹುಬೇಗ ತಂಪಾಗಿ, ಘನೀಭವಿಸಿ ಶಿಲೆಗಳಾಗುತ್ತವೆ. ಉದಾ: ಬಸಾಲ್ಟ್, ಆಂಡೆಸೈಟ್.

**2. ಕಣ ಶಿಲೆಗಳು:** ಇದು ಆಂಗ್ಲಭಾಷೆಯ ಸೆಡಿಮೆಂಟರಿ ಪದವು ಲ್ಯಾಟಿನ್ ಭಾಷೆಯ **'ಸೆಡಿಮೆಂಟಮ್'** ಎಂಬ ಪದದಿಂದ ಬಳಕೆಗೆ ಬಂದಿದೆ. ಅಂದರೆ ತಳಸೇರುವಿಕೆ ಎಂದರ್ಥ. ಕಣಶಿಲೆಗಳು ನೀರು, ಗಾಳಿ ಮತ್ತು ಹಿಮನದಿ ಮುಂತಾದ ಕರ್ತೃಗಳಿಂದ ನಿರ್ಮಾಣವಾಗುತ್ತವೆ. ಈ ಕರ್ತೃಗಳು ಅಗ್ನಿಶಿಲೆಗಳನ್ನು ಚೂರುಚೂರಾಗಿ ಒಡೆದು ಸವೆಸುತ್ತವೆ. ಒಡೆದ ಶಿಲಾಚೂರುಗಳು ಸಾಗಿಸಲ್ಪಟ್ಟು ಕೆಲವು ಸ್ಥಳಗಳಲ್ಲಿ ಸಂಚಯಗೊಳ್ಳುತ್ತವೆ. ಇವು ಪದರು ರೂಪದಲ್ಲಿ ರಚನೆಯಾಗುವುದರಿಂದ ಕಣಶಿಲೆಗಳನ್ನು ಪದರು ಶಿಲೆಗಳೆಂದು ಕರೆಯುವರು. ಕಣಶಿಲೆಗಳು ಅಗ್ನಿಶಿಲೆಯ ನಂತರ ರಚನೆಯಾಗುವುದರಿಂದ ದ್ವಿತೀಯ ಶಿಲೆಗಳೆಂದೂ ಕರೆಯುವರು. ಸಾಮಾನ್ಯವಾಗಿ ಇವು ಸಮುದ್ರ, ಸಾಗರ ಮೊದಲಾದ ಜಲರಾಶಿಗಳಲ್ಲಿ ಸಂಚಯಿತವಾಗಿ ನಿರ್ಮಿತವಾಗುವುದರಿಂದ ಇವುಗಳನ್ನು **'ಜಲಶಿಲೆ'**ಗಳೆಂದೂ ಕರೆಯುವರು. ಇವುಗಳ ನಿರ್ಮಾಣದಲ್ಲಿ ನೀರು ಮುಖ್ಯ ಪಾತ್ರವಹಿಸುವುದು. ಕಣ ಶಿಲೆಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಭೌತಿಕ ಕ್ರಿಯೆಯಿಂದಾದ ಕಣ ಶಿಲೆಗಳು ಮತ್ತು ರಾಸಾಯನಿಕ ಕ್ರಿಯೆಯಿಂದಾದ ಕಣ ಶಿಲೆಗಳು.




**ಭೌತಿಕ ಕ್ರಿಯೆಯಿಂದಾದ ಕಣ ಶಿಲೆಗಳು :** ಶಿಥಿಲೀಕರಣ ಮತ್ತು ನಗ್ನೀಕರಣ ಕಾರ್ಯದಿಂದ ಮೂಲಕಲೆಗಳಿಂದ ಉತ್ಪತ್ತಿಯಾದ ಶಿಲಾಕಣಗಳಿಂದ ಈ ಶಿಲೆಗಳು ನಿರ್ಮಿತವಾಗುತ್ತವೆ. ಉದಾ: ಮರಳುಗಲ್ಲು (ಮರುಳುಮಯಶಿಲೆ) ಮತ್ತು ಜೇಡಿಶಿಲೆ (ಮೃಣ್ಮಯ ಶಿಲೆಗಳು).

**ರಾಸಾಯನಿಕ ಕ್ರಿಯೆಯಿಂದಾದ ಕಣ ಶಿಲೆಗಳು :** ಲವಣಾಂಶಗಳಿಂದ ಕೂಡಿರುವ ನೀರಿನ ದ್ರಾವಣವು ಉಷ್ಣಾಂಶದಿಂದ ಭಾಷ್ಪೀಭವನಗೊಳ್ಳುವುದರಿಂದ ರಾಸಾಯನಿಕ ಕಣಗಳು ಸಂಚಯಗೊಂಡು ಇಂತಹ ಶಿಲೆಗಳು ನಿರ್ಮಿತವಾಗುತ್ತವೆ. ಉದಾ : ಕಲ್ಲುಪ್ಪು, ಜಿಪ್ಸಂ ಇತ್ಯಾದಿ.

**ಜೈವಿಕ ಕ್ರಿಯೆಗಳಿಂದಾದ ಕಣಶಿಲೆಗಳು :** ಜೀವಾವಶೇಷಗಳಾದ ಜಲಚರಗಳ ಚಿಪ್ಪುಗಳು, ಸಸ್ಯವರ್ಗ ಮತ್ತು ಪ್ರಾಣಿವರ್ಗಗಳ ಪಳೆಯುಳಿಕೆಗಳು ಮಣ್ಣಿನಲ್ಲಿ ಸೇರಿ ಗಟ್ಟಿಯಾಗಿ ಜೈವಿಕ ಕಣಶಿಲೆಗಳಾಗುತ್ತವೆ. ಉದಾ: ಸುಣ್ಣಕಲ್ಲು (ಚೂರ್ಣಾಧಿಕ್ಯಶಿಲೆ) ಮತ್ತು ಕಲ್ಲಿದ್ದಲು (ಇಂಗಾಲಾಧಿಕ್ಯಶಿಲೆ).

**3. ರೂಪಾಂತರ ಶಿಲೆಗಳು:** ಅಗ್ನಿಶಿಲೆಗಳು ಹಾಗೂ ಕಣಶಿಲೆಗಳು ಅತ್ಯಧಿಕ ಉಷ್ಣ ಹಾಗೂ ಒತ್ತಡದ ಪರಿಣಾಮದಿಂದ ಮಾರ್ಪಾಡು ಹೊಂದಿ ರೂಪಾಂತರ ಶಿಲೆಗಳು ರೂಪುಗೊಳ್ಳುತ್ತವೆ. ಉದಾಹರಣೆಗೆ:

©KTBS Not to be republished

ಎ) ಗ್ರಾನೈಟ್–>ನೀಸ್, ಡಿ) ಮರುಳು ಶಿಲೆ–>ಸ್ಫಟಿಕ ಶಿಲೆ,

ಬಿ) ಬಸಾಲ್ಟ್–> ಶಿಸ್ಟ್, ಇ) ಕಲ್ಲಿದ್ದಲು–>ಗ್ರಾಫೈಟ್,

ಸಿ) ಸುಣ್ಣಕಲ್ಲು–>ಅಮೃತಶಿಲೆ, ಎಫ್) ಗ್ರಾಫೈಟ್–>ವಜ್ರ.

ರೂಪಾಂತರ ಶಿಲೆಗಳು ಅತ್ಯಂತ ಕಠಿಣವಾದವು. ಇವುಗಳು ಅಮೂಲ್ಯವಾದ ಖನಿಜಗಳನ್ನು ಮತ್ತು ಬೆಲೆಬಾಳುವ ಹರಳುಗಳನ್ನು ಒಳಗೊಂಡಿರುತ್ತವೆ. ಉದಾ: ವಜ್ರ, ರೂಬಿ, ಎಮರಾಲ್ಡ್ ಇತ್ಯಾದಿ.

## ಭೂಚಿಪ್ಪಿನ ಶಕ್ತಿಗಳು


ಭೂಮಿಯು ಎರಡು ಬಗೆಯ ಶಕ್ತಿಗಳನ್ನು ಹೊಂದಿದೆ. ಈ ಶಕ್ತಿಗಳು ಭೂ ಮೇಲ್ಮೈನ ಸ್ವರೂಪಗಳ ಮೇಲೆ ಪರಿಣಾಮವನ್ನು ಬೀರುತ್ತವೆ. ಅವುಗಳೆಂದರೆ ಅಂತರ್ಜನಿತ (Internal force) ಅಥವಾ ಆಂತರಿಕ ಶಕ್ತಿ ಹಾಗೂ ಬಹಿರ್ಜನಿತ ಅಥವಾ ಬಾಹ್ಯ ಶಕ್ತಿ (External force) ಗಳಾಗಿವೆ.

### 1. ಅಂತರ್ಜನಿತ ಶಕ್ತಿಗಳು

ಇವುಗಳು ಭೂಮಿಯ ಒಳಗಿನ ಅಥವಾ ಆಂತರಿಕ ಶಕ್ತಿಗಳಾಗಿವೆ. ಇವುಗಳಿಂದ ಭೂ ಮೇಲ್ಮೈನ ಸ್ವರೂಪಗಳು ಕ್ಷಿಪ್ರವಾಗಿ ಬದಲಾವಣೆಯನ್ನು ಹೊಂದುತ್ತವೆ. ಉದಾ: ಜ್ವಾಲಾಮುಖಿಗಳು ಮತ್ತು ಭೂಕಂಪಗಳು.

**ಜ್ವಾಲಾಮುಖಿಗಳು (Volcanoes)**

ಭೂ ಮೇಲ್ಮೈನಲ್ಲಿ ಬಿರುಕು ಅಥವಾ ರಂಧ್ರಗಳು ಅಥವಾ ದ್ವಾರಗಳು ಉಂಟಾಗಿ ಅವುಗಳ ಮೂಲಕ ಭೂಮಿಯ ಒಳಗಿನ ಶಿಲಾಪಾಕವು ಹೊರಬೀಳುವುದನ್ನು ಜ್ವಾಲಾಮುಖಿಯೆಂದು ಕರೆಯುವರು. ಭೂ ಕವಚದಿಂದ ನೇರವಾಗಿ ಆಳದಲ್ಲಿರುವ ಶಿಲಾಪಾಕದ ಜಾಗಕ್ಕೆ ಸಂಪರ್ಕ ಕಲ್ಪಿಸುವ ರಂಧ್ರಗಳನ್ನು ನಾಳವೆನ್ನುವರು. ಇದರ ಮೂಲಕ ಶಿಲಾಪಾಕ, ಶಿಲಾಚೂರುಗಳು, ಲಾವಾರಸ, ಬೂದಿ, ನೀರಾವಿ, ಜ್ವಾಲೆಗಳು ಮತ್ತು ಇತರೆ ಅನಿಲಗಳು ಭೂಮಿಯ ಅಂತರಾಳದಿಂದ ಹೊರಚಿಮ್ಮುತ್ತವೆ.



ಜ್ವಾಲಾಮುಖಿ ರಚನೆ

ಆಲಿಕೆ ಆಕಾರದ ಜ್ವಾಲಾಮುಖಿನಾಳದ ತುತ್ತತುದಿಯ ತಗ್ಗು ಭಾಗವನ್ನು ಕುಂಡ ಅಥವಾ ಜ್ವಾಲಾಮುಖಿಬಾಯಿ ಎನ್ನುವರು. ಕಡಿದಾದ ಬದಿಗಳನ್ನುಳ್ಳ ಕುಂಡ ಬೋಗುನಿ ಆಕಾರದ ವಿಶಾಲ ತಗ್ಗು ಭಾಗಕ್ಕೆ 'ಕಾಲ್ಡೆರ' ಎಂದು ಹೆಸರು.

**ಜ್ವಾಲಾಮುಖಿಯ ವಿಧಗಳು:** ಜ್ವಾಲಾಮುಖಿಗಳನ್ನು ಅವುಗಳ ಸ್ಫೋಟನಾ ಸಂಭವನೀಯತೆ ಆಧರಿಸಿ ಈ ಕೆಳಕಂಡಂತೆ ಮೂರು ವಿಧಗಳಾಗಿ ವಿಂಗಡಿಸಬಹುದು.

**i) ಜಾಗೃತ ಜ್ವಾಲಾಮುಖಿಗಳು (Active Volcanoes):** ನಿರಂತರವಾಗಿ ಸ್ಫೋಟಗೊಳ್ಳುವ ಲಾವಾರಸ, ಅನಿಲ, ಬೂದಿ ಇತ್ಯಾದಿಗಳನ್ನು ಹೊರಚಿಮ್ಮುವ ಜ್ವಾಲಾಮುಖಿಗಳಿಗೆ ಜಾಗೃತ ಜ್ವಾಲಾಮುಖಿಗಳು ಎನ್ನುವರು. ಪ್ರಪಂಚದಾದ್ಯಂತ ಸುಮಾರು 600 ಜಾಗೃತ ಜ್ವಾಲಾಮುಖಿಗಳಿವೆ. ಉದಾ: ಫಿಲಿಫೈನ್ಸ್ ದ್ವೀಪದ ಪಿನಾಟುಬೊ, ಇಟಲಿಯ ಸ್ಟ್ರಾಂಬೋಲಿ ಮತ್ತು ಎಟ್ನಾ, ಯುಎಸ್‌ಎಯ ಸೇಂಟ್ ಹೆಲೆನಾ, ಹವಾಯಿ ದ್ವೀಪದ ಮೌನಲೋವ ಮೊದಲಾದವು.

**ii) ಸುಪ್ತ ಜ್ವಾಲಾಮುಖಿಗಳು (Dormant Volcanoes) :** ಒಮ್ಮೆ ಸ್ಫೋಟಿಸಿ ಅನಂತರ ಬಹುಕಾಲ ಕಾರ್ಯಾಚರಣೆ ನಡೆಸದೆ ಸುಪ್ತವಾಗಿದ್ದು ಯಾವಾಗಲೋ ಒಮ್ಮೆ ಜಾಗೃತವಾಗಿ ಕಾರ್ಯಾಚರಣೆ ನಡೆಸುವ

©KTBS Not to be republished

ಜ್ವಾಲಾಮುಖಿಗಳನ್ನು ಸುಪ್ತ ಜ್ವಾಲಾಮುಖಿ ಎನ್ನುವರು. ಉದಾ: ಇಟಲಿಯ ಮೌಂಟ್ ವೆಸೂವಿಯಸ್, ಜಪಾನಿನ ಪ್ಯೂಜಿಯಾಮ, ಇಂಡೋನೇಷ್ಯಾದ ಕ್ರಕಟೋವ, ತಾಂಜೇನಿಯಾದ ಕಿಲಿಮಂಜರೋ ಮೊದಲಾದವು.

**iii) ಲುಪ್ತ ಜ್ವಾಲಾಮುಖಿಗಳು (Extinct Volcanoes):** ಇವುಗಳು ಪುರಾತನ ಕಾಲದಲ್ಲಿ ಕಾರ್ಯಾಚರಣೆ ನಡೆಸಿದ್ದು ನಂತರದಲ್ಲಿ ಯಾವುದೇ ಕಾರ್ಯಾಚರಣೆ ನಡೆಸಿಲ್ಲ. ಉದಾ: ಅರ್ಜೆಂಟೈನಾದ ಅಕಾಂಕಗುವಾ, ತಾಂಜೇನಿಯಾದ ಗೊರಾಂಗೊರೊ, ಸ್ಕಾಟ್ಲೆಂಡ್‌ನ ಆರ್ಥರ್‌ಸೀಟ್ ಮೊದಲಾದವು.

**ನಿಮಗೆ ತಿಳಿದಿರಲಿ**

**ಪ್ರಪಂಚದ ಪ್ರಸಿದ್ಧ ಜ್ವಾಲಾಮುಖಿಗಳು**

1. *ಮೌಂಟ್ ವೆಸೂವಿಯಸ್ (ಇಟಲಿ).*
2. *ಕ್ರಕಟೋವ (ಇಂಡೋನೇಷ್ಯ).*
3. *ಮೌಂಟ್ ಪಿಲೀ (ವೆಸ್ಟ್ ಇಂಡೀಸ್).*
4. *ಮೌಂಟ್‌ಫ್ಯೂಜಿಯಾಮ ಜ್ವಾಲಾಮುಖಿಯನ್ನು ಜಪಾನಿಯರು ದೇವರೆಂದು ಪೂಜಿಸುತ್ತಾರೆ.*

**ಜ್ವಾಲಾಮುಖಿಯ ವಸ್ತುಗಳು :** ಜ್ವಾಲಾಮುಖಿಗಳಿಂದ ಮೂರು ಬಗೆಯ ವಸ್ತುಗಳು ಹೊರ ಬೀಳುತ್ತವೆ. ಅವುಗಳೆಂದರೆ: ಘನವಸ್ತುಗಳು– ಜ್ವಾಲಾಮುಖಿಯ ಗುಂಡುಗಳು, ಕಿಟ್ಟಧೂಳು, ಬೂದಿ, ದ್ರವವಸ್ತು–ಲಾವಾರಸ, ಅನಿಲಗಳು–ಗಂಧಕ, ಜಲಜನಕ, ಇಂಗಾಲದ ಡೈ ಆಕ್ಸೈಡ್, ನೀರಾವಿ ಮೊದಲಾದವು.

**ಜ್ವಾಲಾಮುಖಿಗಳ ಹಂಚಿಕೆ** : ಪ್ರಪಂಚದ ಅನೇಕ ಪ್ರದೇಶಗಳಲ್ಲಿ ಜ್ವಾಲಾಮುಖಿಗಳು ಸಂಭವಿಸುತ್ತವೆ. ದ್ವೀಪಗಳು, ಹೊಸಮಡಿಕೆ ಪರ್ವತ ಸರಣಿಗಳು ಹಾಗೂ ಭೂ ಖಂಡಗಳಲ್ಲಿರುವ ಪ್ರಸ್ಥಭೂಮಿಗಳಲ್ಲೂ ಕಂಡುಬರುತ್ತವೆ. ಜ್ವಾಲಾಮುಖಿ ಕಂಡುಬರುವ ಪ್ರಮುಖ ಪ್ರದೇಶಗಳೆಂದರೆ –


**ಪೆಸಿಫಿಕ್ ವೃತ್ತಪ್ರದೇಶ ಅಥವಾ ಪೆಸಿಫಿಕ್ ಅಗ್ನಿವೃತ್ತ:** ಪೆಸಿಫಿಕ್ ಸಾಗರದ ಕರಾವಳಿಗಳಲ್ಲಿ ಅಂದರೆ ಫಿಲಿಫೈನ್ಸ್, ಜಪಾನ್, ಯುಎಸ್‌ಎ, ಮಧ್ಯ ಅಮೆರಿಕ, ದಕ್ಷಿಣ ಅಮೆರಿಕ ಇತ್ಯಾದಿಗಳಲ್ಲಿ ಜ್ವಾಲಾಮುಖಿಗಳಿವೆ.

**ಮಧ್ಯ ಅಟ್ಲಾಂಟಿಕ್ ವಲಯ** : ಐಸ್‌ಲ್ಯಾಂಡ್, ವೆಸ್ಟ್ ಇಂಡೀಸ್ ದ್ವೀಪಗಳು.

**ಮಧ್ಯ ಭೂಖಂಡವಲಯ** : ಇಟಲಿ, ಸ್ಪೇನ್, ಫ್ರಾನ್ಸ್, ಗ್ರೀಸ್, ಟರ್ಕಿ ಇತ್ಯಾದಿ.

**ಪ್ರಮುಖ ದ್ವೀಪಗಳು :** ಹವಾಯಿ, ಇಂಡೋನೇಷ್ಯ ಇತ್ಯಾದಿ.

**ಭೂಕಂಪಗಳು: (Earthquakes)**




**ಭೂಕಂಪದ ಕ್ರಿಯೆಗಳು**

ಭೂ ಮೇಲ್ಮೈಯಲ್ಲಿ ಉಂಟಾಗುವ ನಡುಗುವಿಕೆ, ಕಂಪನ ಹಾಗೂ ಕಂಪನಗಳ ಸರಣಿಯನ್ನು ಭೂಕಂಪ ವೆಂದು ಕರೆಯುವರು. ಇವುಗಳು ಭೂಕವಚದ ಶಿಲೆಗಳ ಕ್ಷಿಪ್ರ ಚಲನೆಯಿಂದ ಭೂಕವಚ ಅಥವಾ ಮ್ಯಾಂಟಲ್ ಪದರದೊಳಗೆ ಉಂಟಾಗುತ್ತವೆ. ಭೂಕಂಪನದ ತೀವ್ರತೆಯು ಭೂಕಂಪನದ ಹೊರಕೇಂದ್ರದ ಸಮೀಪ ಗರಿಷ್ಠ ಪ್ರಮಾಣದಲ್ಲಿರುತ್ತದೆ ಮತ್ತು ಭೂಕಂಪ ಹೊರಕೇಂದ್ರದಿಂದ ದೂರ ಹೋದಂತೆ ಕಂಪನದ ತೀವ್ರತೆಯು ಕಡಿಮೆಯಾಗುತ್ತಾ ಹೋಗುತ್ತದೆ. ಭೂಕಂಪನಾಭಿಯು ಭೂ ಮೇಲ್ಮೈನ ಸಮೀಪದಲ್ಲಿದ್ದರೆ ಭೂಕಂಪದ ಅಲೆಗಳು ಪ್ರಬಲವಾಗಿದ್ದು ಹೆಚ್ಚು ಪರಿಣಾಮವನ್ನುಂಟು ಮಾಡುತ್ತವೆ.

©KTBS Not to be republished

ಭೂಮಿಯ ಅಂತರಾಳದಲ್ಲಿ ಉಂಟಾಗುವ ಭೂಕಂಪದ ಉಗಮಸ್ಥಾನವನ್ನು 'ಭೂಕಂಪನಾಭಿ' ಅಥವಾ ಭೂಕಂಪ ಒಳಕೇಂದ್ರವೆಂದು ಕರೆಯುವರು. ಭೂಕಂಪ ನಾಭಿಯಿಂದ ಲಂಬಕೋನದಲ್ಲಿರುವ ಭೂ ಮೇಲ್ಮೈನ ಸ್ಥಳವನ್ನು "ಭೂಕಂಪ ಹೊರಕೇಂದ್ರ"ವೆನ್ನುವರು.

ಭೂಕಂಪ ಕುರಿತ ವೈಜ್ಞಾನಿಕ ಅಧ್ಯಯನವನ್ನು ಭೂಕಂಪಶಾಸ್ತ್ರ (Seismology) ಎನ್ನುವರು. ಭೂಕಂಪ ಅಲೆಗಳ ಆರಂಭ ಸ್ಥಳ, ವೇಳೆ, ವೇಗ ಹಾಗೂ ದಿಕ್ಕನ್ನು ದಾಖಲಿಸುವ ಉಪಕರಣವನ್ನು ಭೂಕಂಪಮಾಪಕ (Seismograph) ಎನ್ನುವರು.

**ಭೂಕಂಪನಗಳು ಉಂಟಾಗಲು ಕಾರಣಗಳು**

**ಭೂರಚನಾ ಕಾರಣಗಳು :** ಭೂಕವಚವು ಹಲವಾರು ದೊಡ್ಡ ಮತ್ತು ಸಣ್ಣ ಶಿಲಾಫಲಕಗಳಿಂದ ಕೂಡಿದೆ. ಈ ಭೂ ಫಲಕಗಳ ಅಂಚುಗಳು ಚಲಿಸುವ ಭಾಗಗಳಾಗಿದ್ದು, ಇವು ಭೂಕಂಪಗಳುಂಟಾಗುವ ಮೂಲಸ್ಥಳಗಳಾಗಿವೆ. (ಪೆಸಿಫಿಕ್ ಸಾಗರದ ಸುತ್ತಮುತ್ತಲಿನ ವಲಯ).

**ಜ್ವಾಲಾಮುಖಿ ಸ್ಫೋಟನೆಗಳು :** ಜ್ವಾಲಾಮುಖಿಗಳಲ್ಲಿ ಅನಿಲಗಳ ಸ್ಫೋಟನೆಯಿಂದ ಭೂಕಂಪಗಳು ಉಂಟಾಗುತ್ತವೆ. (ಇಂಡೋನೇಷ್ಯಾದ ಕ್ರಕಟೋವ ಜ್ವಾಲಾಮುಖಿ).

**ಸ್ತರಭಂಗ :** ಭೂಮಿಯ ಶಿಲಾಸ್ತರಗಳ ಮರುಹೊಂದಾಣಿಕೆಯು ಹಲವು ವಿಧಗಳಲ್ಲಿ ಕಂಡುಬರುವುದು. ಅವುಗಳ ಸ್ಥಾನಪಲ್ಲಟ, ಭೂಕುಸಿತ ಇವುಗಳಿಂದ ಭೂಸ್ತರಗಳು ಮೇಲಕ್ಕೆ ಅಥವಾ ಕೆಳಮುಖವಾಗಿ ಜರುಗುವುದರಿಂದ ಉದ್ದವಾದ ಬಿರುಕುಗಳುಂಟಾಗುತ್ತವೆ. ಈ ರೀತಿ ಭೂಫಲಕಗಳು ಸ್ಥಾನಪಲ್ಲಟವಾಗುವುದರಿಂದ ಭೂಕಂಪಗಳುಂಟಾಗುತ್ತವೆ. (ಅಮೆರಿಕಾದ ಕ್ಯಾಲಿಫೋರ್ನಿಯಾದಲ್ಲಿರುವ ಸಾನ್ ಆಂಡ್ರಿಯಾಸ್ ಸ್ತರಭಂಗ ಪ್ರದೇಶ.)

**ಮಾನವ ನಿರ್ಮಿತ ಅಂಶಗಳು :** ಪ್ರಕೃತಿಯೊಡನೆ ಮಾನವನು ನಡೆಸುವ ಅತಿಯಾದ ಕಾರ್ಯಾಚರಣೆಗಳು ಸಹ ಭೂಕಂಪಗಳುಂಟಾಗಲು ಕಾರಣಗಳಾಗಿವೆ. ಅವುಗಳೆಂದರೆ ಗಣಿಗಾರಿಕೆ, ಬೃಹತ್ ಅಣೆಕಟ್ಟು ಮತ್ತು ಜಲಾಶಯಗಳ ನಿರ್ಮಾಣ ಮತ್ತು ಅಣುಪರೀಕ್ಷೆಗಳು ಇತ್ಯಾದಿ (ಮಹಾರಾಷ್ಟ್ರದ ಕೊಯ್ನಾ ಅಣೆಕಟ್ಟು, ಯು.ಎಸ್.ಎ. ನಲ್ಲಿರುವ ಹೂವರ್ ಅಣೆಕಟ್ಟು.)

**ಭೂಕಂಪನ ಅಲೆಗಳು**

ಭೂಕಂಪನ ಒಳಕೇಂದ್ರದಿಂದ ಕಂಪನಗಳು ಆರಂಭಗೊಂಡು ಅಲ್ಲಿಂದ ವೃತ್ತಾಕಾರದಲ್ಲಿ ತರಂಗಗಳಂತೆ ಭೂ ಹೊರಕೇಂದ್ರದ ಕಡೆಗೆ ಹರಡುತ್ತವೆ. ಭೂಕಂಪನ ಅಲೆಗಳಲ್ಲಿ ಮೂರು ವಿಧಗಳಿವೆ. ಅವುಗಳೆಂದರೆ :

1. **ಪ್ರಾಥಮಿಕ ಅಲೆಗಳು :** ಇವುಗಳು ಭೂಕಂಪನದ ಒಳಕೇಂದ್ರದಿಂದ ಮೊದಲು ಹೊರಕೇಂದ್ರವನ್ನು ತಲುಪುತ್ತವೆ. ಇವುಗಳು ನೀಳ ಅಲೆಗಳಾಗಿದ್ದು ಅತ್ಯಂತ ವೇಗವಾಗಿ ಚಲಿಸುತ್ತವೆ. ಇವುಗಳು ಘನ, ದ್ರವ ಮತ್ತು ಅನಿಲಗಳ ಮೂಲಕ ಚಲಿಸುತ್ತವೆ.

2. **ದ್ವಿತೀಯ ಅಲೆಗಳು :** ಇವುಗಳನ್ನು 'ಅಡ್ಡ ಅಲೆ' (Transverse) ಗಳೆಂತಲೂ ಕರೆಯುವರು. ಇವು ದ್ರವ ವಸ್ತುಗಳ ಮೂಲಕ ಚಲಿಸಲಾರವು. ಪ್ರಾಥಮಿಕ ಅಲೆಗಳ ನಂತರ ಇವು ಹೊರ ಕೇಂದ್ರವನ್ನು ತಲುಪುತ್ತವೆ.

3. **ಮೇಲ್ಮೈ ಅಲೆಗಳು :** ಇವುಗಳನ್ನು 'ಉದ್ದ ಅಲೆ'ಗಳೆಂದೂ ಸಹ ಕರೆಯುವರು. ಇವು ಅತ್ಯಂತ ನಿಧಾನ ಗತಿಯ ಭೂಕಂಪನ ಅಲೆಗಳಾಗಿವೆ. ಆದರೆ ಇವು ಅತ್ಯಂತ ಹಾನಿಕಾರಕ ಅಲೆಗಳಾಗಿವೆ.

> ಭೂಕಂಪನದ ತೀವ್ರತೆ ಮತ್ತು ಪ್ರಮಾಣವನ್ನು ರಿಕ್ಟರ್ ಮಾಪನದಿಂದ ಅಳತೆ ಮಾಡಲಾಗುವುದು.

©KTBS Not to be republished

**ಪರಿಣಾಮಗಳು :** ಭೂಕಂಪಗಳು ಅತ್ಯಂತ ವಿನಾಶಕಾರಿಯಾದವು. ಇವುಗಳಿಂದ ಅಪಾರ ಜೀವಹಾನಿ ಹಾಗೂ ಆಸ್ತಿಪಾಸ್ತಿಗಳಿಗೆ ನಷ್ಟವುಂಟಾಗುವುದು. ಇವುಗಳಿಂದ ಉಂಟಾಗುವ ಭೂಕುಸಿತ, ಕ್ಷಿಪ್ರ ಪ್ರವಾಹ ಮೊದಲಾದವುಗಳಿಂದ ಅಪಾರ ಜನರು ಸಾವಿಗೀಡಾಗುವರು. ಕಟ್ಟಡ, ಸೇತುವೆ, ರಸ್ತೆ ಹಾಗೂ ರೈಲು ಮಾರ್ಗಗಳು ಹಾನಿಗೀಡಾಗುತ್ತವೆ.


**ಸುನಾಮಿ :** ಸಮುದ್ರ ಮತ್ತು ಸಾಗರ ತಳದಲ್ಲಿ ಉಂಟಾಗುವ ಭೂಕಂಪನಗಳಿಂದ ಸಾಗರಗಳಲ್ಲಿ ಅತಿ ಎತ್ತರವಾದ ದೈತ್ಯ ಅಲೆಗಳು ತೀರಕ್ಕೆ ಅಪ್ಪಳಿಸುತ್ತವೆ. ಇವುಗಳನ್ನು ಸುನಾಮಿ ಎಂದು ಕರೆಯುವರು. ಇದು ಜಪಾನ್ ಭಾಷೆಯ ಪದವಾಗಿದ್ದು, ಇದರ ಅರ್ಥ ತೀರಕ್ಕೆ ಅಪ್ಪಳಿಸುವ ಎತ್ತರದ ಬಂದರು ಅಲೆಗಳು ಎಂಬುದು.

**ನಿಮಗೆ ತಿಳಿದಿರಲಿ**

1. *2004 ಡಿಸೆಂಬರ್ 26 ರಂದು ಸುನಾಮಿ ಅಲೆಗಳು ಭಾರತ, ಇಂಡೋನೇಷ್ಯ, ಥೈಲ್ಯಾಂಡ್, ಶ್ರೀಲಂಕ ದೇಶಗಳ ತೀರಕ್ಕೆ ಅಪ್ಪಳಿಸಿ ಅಪಾರ ಹಾನಿಯನ್ನುಂಟುಮಾಡಿದವು.*
2. *2011 ರ ಮಾರ್ಚ್ 11 ರಂದು ಸುನಾಮಿ ಅಲೆಗಳು ಜಪಾನಿನ ಪುಕುಶೀಮ, ಸೆಂಡೈ, ಮೀಯಾಗಿ ಮೊದಲಾದ ಪ್ರದೇಶಗಳಿಗೆ ಅಪ್ಪಳಿಸಿ ಅಪಾರ ಹಾನಿಯನ್ನುಂಟುಮಾಡಿವೆ.*
3. *ಭಾರತದಲ್ಲಿರುವ ಕೆಲವು ಭೂಕಂಪನ ದಾಖಲೆಯ ಕೇಂದ್ರಗಳೆಂದರೆ : ಗೌರಿಬಿದನೂರು, ಕೊಡೈಕೆನಾಲ್, ಪುಣೆ, ಹೈದರಾಬಾದ್ ಮತ್ತು ಡೆಹರಾಡೂನ್.*

ಭೂಕಂಪನದ ಹಂಚಿಕೆ : ಭೂಕಂಪನದ ಹಂಚಿಕೆಯು ಈ ಕೆಳಕಂಡಂತೆ ಇದೆ.

- ಪೆಸಿಫಿಕ್ ಸಾಗರದ ಸುತ್ತಲಿನ ತೀರ ಪ್ರದೇಶ. ಇದು ನ್ಯೂಜಿಲ್ಯಾಂಡ್, ಫಿಲಿಫೈನ್ಸ್, ಕ್ಯೂರೈಲ್ ದ್ವೀಪಗಳು ಜಪಾನ್ ಅಮೆರಿಕ ಖಂಡಗಳ ಆಂಡೀಸ್, ಪೆರು, ಚಿಲಿ ಮೊದಲಾದವುಗಳನ್ನು ಒಳಗೊಂಡಿದೆ.
- ಮೆಡಿಟರೇನಿಯನ್ ಸಮುದ್ರದ ಸುತ್ತಲಿನ ತೀರ ಪ್ರದೇಶ.
- ಭಾರತದ ಹಿಮಾಲಯ ಪರ್ವತ ಪ್ರದೇಶ. (ಸಿವಾಲಿಕ್ ಪ್ರದೇಶ).




**ಭೂಕಂಪಗಳು ಮತ್ತು ಜ್ವಾಲಾಮುಖಿ ಪ್ರದೇಶಗಳು**

Not to be republished ©KTBS

## ಬಾಹ್ಯಶಕ್ತಿಗಳು (Exogenic forces)

ಬಾಹ್ಯಶಕ್ತಿಗಳು ಭೂಮಿಯ ಮೇಲಿನ ಪ್ರಾಕೃತಿಕ ಶಕ್ತಿಗಳಾಗಿವೆ. ಇವು ತಮ್ಮ ಕಾರ್ಯಗಳಿಂದ ಭೂಮೇಲ್ಮೈನ ಸ್ವರೂಪಗಳನ್ನು ಮಾರ್ಪಡಿಸುತ್ತವೆ. ಪ್ರಮುಖ ಬಾಹ್ಯ ಶಕ್ತಿಗಳೆಂದರೆ ಶಿಥಿಲೀಕರಣ ಉಷ್ಣಾಂಶ, ಮಾರುತಗಳು, ಮಳೆ, ಹಿಮವೃಷ್ಟಿ ನದಿ, ಹಿಮನದಿ, ಮಾರುತ, ಸಮುದ್ರದ ಅಲೆ ಮತ್ತು ಅಂತರ್ಜಲ.

**ಶಿಥಿಲೀಕರಣ :** ಶಿಲೆಗಳು ಒಡೆದು ಚೂರಾಗುವ ಮತ್ತು ಕ್ಷೀಣಿಸುವ ಸ್ವಾಭಾವಿಕ ಪ್ರಕ್ರಿಯೆಯೇ ಶಿಥಿಲೀಕರಣ. ಇದು ವಾಯುಗೋಳದಲ್ಲಿನ ಉಷ್ಣಾಂಶ, ಮಳೆ, ಗಾಳಿ ಮುಂತಾದವುಗಳಿಂದ ನಡೆಯುತ್ತದೆ. ಶಿಥಿಲೀಕರಣದ ವಿಧಗಳೆಂದರೆ:

**1. ಭೌತಿಕ ಶಿಥಿಲೀಕರಣ:** ಶಿಲೆಗಳಲ್ಲಿ ಯಾವುದೇ ರಾಸಾಯನಿಕ ಬದಲಾವಣೆಯಾಗದೇ ಒಡೆದು ಚೂರಾಗುವ ಮತ್ತು ಕ್ಷೀಣಿಸುವ ಪ್ರಕ್ರಿಯೆಯನ್ನು ಭೌತಿಕ ಶಿಥಿಲೀಕರಣವೆನ್ನುವರು. ಪ್ರಮುಖ ಭೌತಿಕ ಶಿಥಿಲೀಕರಣದ ಕ್ರಿಯೆಗಳೆಂದರೆ ಕಣವಿಭಜನೆ, ಶಿಲಾವಿಭಜನೆ, ಪದರುವಿಭಜನೆ. ಭೌತಿಕ ಶಿಥಿಲೀಕರಣದ ಕರ್ತೃಗಳಾವುವೆಂದರೆ ಉಷ್ಣಾಂಶ, ಮಳೆ, ಹಿಮ ಇತ್ಯಾದಿ.

**2. ರಾಸಾಯನಿಕ ಶಿಥಿಲೀಕರಣ :** ಈ ವಿಧದ ಶಿಥಿಲೀಕರಣದಲ್ಲಿ ಮಳೆಯ ನೀರು ವಾಯುಮಂಡಲದ ಅನಿಲಗಳೊಡನೆ ವಿಲೀನಗೊಂಡು ಶಿಲೆಗಳನ್ನು ಶಿಥಿಲಗೊಳಿಸುವುದು. ಈ ಶಿಥಿಲೀಕರಣದ ಪ್ರಕ್ರಿಯೆಯಿಂದ ಶಿಲೆಗಳಲ್ಲಿರುವ ಖನಿಜಗಳ ಸಂಯೋಜನೆಯಲ್ಲಿ ಬದಲಾವಣೆಯಾಗುತ್ತವೆ. ರಾಸಾಯನಿಕ ಶಿಥಿಲೀಕರಣದಲ್ಲಿ ಈ ಕೆಳಕಂಡ ನಾಲ್ಕು ವಿಧಗಳಿವೆ.

**ಎ) ಆಮ್ಲಜನಕ ಸಂಯೋಜನೆ (Oxidation):** ಆಮ್ಲಜನಕದಿಂದ ಕೂಡಿರುವ ಮಳೆಯ ನೀರು ಕೆಲವು ಖನಿಜಗಳ ಮೇಲೆ ಪ್ರಭಾವ ಬೀರುತ್ತವೆ. ಇದರಿಂದ ಶಿಲೆಗಳು ನಶಿಸುತ್ತವೆ. ವಿಶೇಷವಾಗಿ ಕಬ್ಬಿಣವು ಕಬ್ಬಿಣದ ಆಕ್ಸೈಡ್ ಆಗುವ ಪರಿವರ್ತನೆ.

**ಬಿ) ಇಂಗಾಲದ ಸಂಯೋಜನೆ (Carbonation) :** ಇಂಗಾಲಯುಕ್ತ ಮಳೆನೀರು ಸುಣ್ಣಕಲ್ಲುಗಳ ಮೇಲೆ ಬಿದ್ದಾಗ, ಶಿಲೆಗಳಲ್ಲಿರುವ ಕ್ಯಾಲ್ಸಿಯಂ ಕಾರ್ಬೋನೇಟ್‌ಗಳನ್ನು ಮಳೆಯ ನೀರಿನಲ್ಲಿರುವ ಇಂಗಾಲದ ಡೈ–ಆಕ್ಸೈಡ್ ಹೀರಿಕೊಳ್ಳುವುದರಿಂದ ಕ್ಯಾಲ್ಸಿಯಂ ಬೈಕಾರ್ಬೋನೇಟ್ ಆಗಿ ಬದಲಾಗುತ್ತದೆ.

**ಸಿ) ಜಲಸಂಯೋಜನೆ (Hydration) :** ಈ ಕ್ರಿಯೆಯಲ್ಲಿ ಕೆಲವು ಬಗೆಯ ಖನಿಜಗಳಲ್ಲಿನ ಕಣಗಳು ನೀರನ್ನು ಹೀರುವುದರಿಂದ ಉಬ್ಬಿಕೊಂಡು ಪುಡಿರೂಪದಲ್ಲಿ ಕ್ರಮೇಣ ನಶಿಸುತ್ತವೆ. ಫೆಲ್ಸಫರ್ ಇದು ಹರಳುಗಳಿಂದುಂಟಾದ ಪ್ರಮುಖ ಶಿಲೆಯಾಗಿದೆ.

**ಡಿ) ದ್ರಾವಣೀಕರಣ (Solution) :** ಮಳೆಯ ನೀರು ಕೆಲವು ಶಿಲೆಗಳನ್ನು ಕರಗಿಸಿ ದ್ರಾವಣೀಕರಿಸುವುದರಿಂದ ಶಿಥಿಲೀಕರಣವೇರ್ಪಡುವುದು. ಉದಾ: ಜಿಪ್ಸಂ, ಉಪ್ಪು, ಫಾಸ್ಫೇಟ್ ಇತ್ಯಾದಿ.

**3. ಜೈವಿಕ ಶಿಥಿಲೀಕರಣ (Biological Weathering):** ಸಸ್ಯವರ್ಗ, ಪ್ರಾಣಿವರ್ಗ ಮತ್ತು ಮಾನವನಿಂದ ಶಿಲೆಗಳು ಒಡೆದು ಚೂರಾಗುವುದನ್ನು ಜೈವಿಕ ಶಿಥಿಲೀಕರಣ ಎನ್ನುವರು. ಇದರಲ್ಲಿ ಭೌತಿಕ ಹಾಗೂ ರಾಸಾಯನಿಕ ಕ್ರಿಯೆಗಳೆರಡರಿಂದಲೂ ಶಿಥಿಲೀಕರಣವಾಗುತ್ತವೆ.

**ಸಸ್ಯವರ್ಗ** – ಸಸ್ಯಗಳ ಬೇರುಗಳು ಬೆಳೆದು ದಪ್ಪವಾಗುವುದರಿಂದ ಶಿಲೆಗಳು ಒಡೆದು ಚೂರಾಗುತ್ತವೆ.

**ಪ್ರಾಣಿವರ್ಗ** – ಬಿಲಗಳಲ್ಲಿ ವಾಸಿಸುವ ಪ್ರಾಣಿಗಳು, ಎರೆಹುಳು, ಮೊಲಗಳು, ಇಲಿಗಳು ಇತ್ಯಾದಿ.

**ಮಾನವಜೀವಿ** – ಗಣಿಗಾರಿಕೆ, ಕಲ್ಲುಗಣಿ, ಕಟ್ಟಡ ನಿರ್ಮಾಣದ ಕೆಲಸ ಇತ್ಯಾದಿ.


©KTBS Not to be republished

# ಭೂ ನಗ್ನೀಕರಣ (Denudation)

**ಭೂ ನಗ್ನೀಕರಣದ ಕರ್ತೃಗಳು:** ವಿವಿಧ ರೀತಿಯ ನೈಸರ್ಗಿಕ ಶಕ್ತಿಗಳು ಭೂಮಿಯ ಮೇಲ್ಭಾಗವನ್ನು ಮಾರ್ಪಡಿಸುವ ಕಾರ್ಯವನ್ನು 'ಭೂ ನಗ್ನೀಕರಣ' ಎನ್ನುವರು. ನಗ್ನೀಕರಣದ ಕರ್ತೃಗಳೆಂದರೆ; ನದಿ, ಹಿಮನದಿ, ಅಂತರ್ಜಲ, ಮಾರುತ ಹಾಗೂ ಸಮುದ್ರದ ಅಲೆಗಳು. ಇವು ಸವೆತ, ಸಾಗಾಣಿಕೆ ಮತ್ತು ಸಂಚಯ ಎಂಬ ಮೂರು ಕಾರ್ಯಗಳನ್ನು ನಡೆಸಿ ಭೂಮಿಯ ಮೇಲ್ಭಾಗದಲ್ಲಿ ವಿಶಿಷ್ಟವಾದ ಭೂಸ್ವರೂಪಗಳನ್ನು ನಿರ್ಮಿಸುತ್ತವೆ.

**ನದಿಯ ಕಾರ್ಯ :** ಉಗಮ ಸ್ಥಾನದಿಂದ ನದಿ ಮುಖದವರೆಗೆ ತನ್ನ ನಿಗದಿತ ಕಣಿವೆಯಲ್ಲಿ ಹರಿಯುವ ಶುದ್ಧನೀರಿನ ಜಲಧಾರೆಯೇ ನದಿ. ಹರಿಯುವ ನದಿಯ ನೀರು ವಿಸ್ತಾರವಾದ ಭೂಭಾಗದಲ್ಲಿ ನಗ್ನೀಕರಣ ಕಾರ್ಯವನ್ನು ನಿರ್ವಹಿಸುವ ಮುಖ್ಯ ಕರ್ತೃ. ನದಿಗಳು ಸಾಮಾನ್ಯವಾಗಿ ಚಿಲುಮೆ, ಹಿಮನದಿ ಅಥವಾ ಮಳೆನೀರಿನ ಮೂಲದಿಂದ ಉಗಮವಾಗುತ್ತದೆ. ನದಿ ಹರಿಯುವ ಮಾರ್ಗವೇ 'ನದಿಯ ಪಾತ್ರ'. ನದಿಯು ಉಗಮಗೊಳ್ಳುವ ಸ್ಥಾನವನ್ನು 'ನದಿಯಮೂಲ' ಎಂದೂ, ನದಿ ಅಂತ್ಯಗೊಂಡು ಸರೋವರ ಅಥವಾ ಸಮುದ್ರ ಸೇರುವ ಭಾಗವನ್ನು 'ನದಿಮುಖ' ಎಂದು ಕರೆಯುವರು. ಒಂದು ಸಣ್ಣ ನದಿಯು ತನ್ನ ಕಣಿವೆಯಲ್ಲಿ ಮತ್ತೊಂದು ಪ್ರಧಾನ ನದಿಯನ್ನು ಸೇರಿದಲ್ಲಿ ಅದನ್ನು 'ಉಪನದಿ' ಎಂದು ಕರೆಯುವರು. ಒಂದು ನದಿ ಮತ್ತೊಂದು ನದಿಯನ್ನು ಸೇರುವ ಸ್ಥಳವನ್ನು 'ಸಂಗಮ' ಎನ್ನುವರು.

**ನದಿಯ ಪಾತ್ರ** : ನದಿಯ ಪಾತ್ರವನ್ನು ಮೇಲ್ಕಣಿವೆ ಪಾತ್ರ, ಮಧ್ಯಕಣಿವೆ ಪಾತ್ರ ಮತ್ತು ಕೆಳಕಣಿವೆ ಪಾತ್ರ ಎಂದು ಮೂರುಹಂತಗಳಾಗಿ ವಿಂಗಡಿಸಬಹುದು. ಈ ಹಂತಗಳ ನದಿಯ ನೀರಿನ ಪ್ರಮಾಣ, ನೀರಿನ ವೇಗ ಮತ್ತು ನದಿ ಪಾತ್ರದ ಭೂ ಸ್ವರೂಪ ಬೇರೆ ಬೇರೆ ರೀತಿಯಲ್ಲಿರುವುದು. ಪ್ರತಿ ಹಂತದಲ್ಲಿಯೂ ನದಿಯ ಕಾರ್ಯ ಹಾಗೂ ಅದರಿಂದ ಉಂಟಾಗುವ ಭೂ ಸ್ವರೂಪಗಳು ವಿಶಿಷ್ಟವಾಗಿವೆ.




**ನದಿಯ ಪಾತ್ರಗಳು ಮತ್ತು ಅವುಗಳಿಗೆ ಸಂಬಂಧಿಸಿದ ಭೂಸ್ವರೂಪಗಳು**

**i) ಮೇಲ್ಕಣಿವೆ ಪಾತ್ರ:** ನದಿಯು ಈ ಹಂತದಲ್ಲಿ ಎತ್ತರ ಭಾಗದಲ್ಲಿದ್ದು ನದಿಯು ಮುಖ್ಯವಾಗಿ ಸವೆತ ಕಾರ್ಯವನ್ನು ನಿರ್ವಹಿಸುವುದು. ಅದರಲ್ಲಿಯೂ ತಳಸವೆತ ಹೆಚ್ಚು. ಅಂದರೆ ನದಿಯು ತನ್ನ ಕಣಿವೆಯನ್ನು ಆಳವಾಗಿ ಕೊರೆಯುವುದು. ಇದರಿಂದ ಆಳವಾದ ಕಂದರಗಳು, ಮಹಾಕಂದರ 'v' ಆಕಾರದ ಕಣಿವೆಗಳು,

©KTBS Not to be republished

ಜಲಪಾತಗಳು, (ಏಂಜಲ್ ಜಲಪಾತ, ನಯಾಗರ ಜಲಪಾತ, ಜೋಗ್ ಜಲಪಾತ ಇತ್ಯಾದಿ) ಮತ್ತು ಕುಂಭಕುಳಿಗಳು ಮೊದಲಾದ ಭೂಸ್ವರೂಪಗಳು ನಿರ್ಮಾಣವಾಗುತ್ತವೆ.

**ii) ಮಧ್ಯಕಣಿವೆ ಪಾತ್ರ :** ಈ ಹಂತದಲ್ಲಿ ನದಿಯು ಮೈದಾನವನ್ನು ಪ್ರವೇಶಿಸುವುದು. ಇಲ್ಲಿ ನದಿಯ ಪಾತ್ರದ ಇಳಿಜಾರು ಕಡಿಮೆಯಾಗುವುದರಿಂದ ನೀರಿನ ವೇಗವೂ ಸಹ ಕಡಿಮೆಯಾಗುವುದು. ಪ್ರಧಾನ ನದಿಗೆ ಅನೇಕ ಉಪ ನದಿಗಳು ಸೇರುವುದರಿಂದ ನದಿಯ ನೀರಿನ ಪ್ರಮಾಣ ಹೆಚ್ಚುವುದು. ಈ ಹಂತದಲ್ಲಿ ನದಿಯು ಮುಖ್ಯವಾಗಿ ಸಾಗಾಣಿಕೆ ಕಾರ್ಯವನ್ನು ನಿರ್ವಹಿಸುವುದು. ಜೊತೆಗೆ ಅಲ್ಲಲ್ಲಿ ಇದರ ಸಂಚಯ ಕಾರ್ಯವನ್ನೂ ಕಾಣಬಹುದು. ಇದರಿಂದ ಹಲವು ವಿಶಿಷ್ಟ ಭೂ ಸ್ವರೂಪಗಳು ನಿರ್ಮಿತವಾಗುತ್ತವೆ. ಅವುಗಳೆಂದರೆ ಮೆಕ್ಕಲು ಬೀಸಣಿಗೆ, ನದಿಯ ತಿರುವುಗಳು ಮೊದಲಾದವು.




**ನದಿ ಸಂಚಯನದಿಂದಾದ ಪ್ರಮುಖ ಭೂಸ್ವರೂಪಗಳು**

**iii) ಕೆಳಕಣಿವೆ ಪಾತ್ರ:** ಈ ಹಂತದಲ್ಲಿ ನದಿಯು ಅತ್ಯಂತ ನಿಧಾನವಾಗಿ ಹರಿಯುವುದು. ಇದಕ್ಕೆ ಕಾರಣ ಇಳಿಜಾರು ಅತ್ಯಂತ ಕಡಿಮೆಯಾಗುವುದು ಹಾಗೂ ನದಿಯ ಪಾತ್ರ ದೊಡ್ಡದಾಗುವುದು. ಈ ಹಂತದಲ್ಲಿ ನದಿಯು ಮುಖ್ಯವಾಗಿ ಸಂಚಯ ಕಾರ್ಯವನ್ನು ನಿರ್ವಹಿಸುವುದು. ಕೆಳಕಣಿವೆ ಪಾತ್ರದಲ್ಲಿ ಪ್ರವಾಹ ಮೈದಾನ, ಸ್ವಾಭಾವಿಕ ದಡಕಟ್ಟೆ, ಶೃಂಗ ಸರೋವರ, ಮುಖಜಭೂಮಿ, (ಸುಂದರಬನ ನೈಲ್‌ನದಿ ಮುಖಜಭೂಮಿ) ಮೊದಲಾದ ಭೂ ಸ್ವರೂಪಗಳು ನಿರ್ಮಿತವಾಗುತ್ತವೆ.

*"ನದಿಯ ಕಾರ್ಯವನ್ನು ನದಿಯ ಆವರ್ತನ (fluvial cycle) ಎಂದು ಕರೆಯುವರು."*

**ನಿಮಗೆ ತಿಳಿದಿರಲಿ**

***ಅಳಿವೆ (Estuary)***: *ನದಿಯು ಸಾಗರ ಅಥವಾ ಸಮುದ್ರವನ್ನು ಸೇರುವ ಭಾಗದಲ್ಲಿ ಅಗಲವಾಗಿ ಕಂಡುಬರುವ ಉಬ್ಬರವಿಳಿತ ಮುಖ ಭಾಗ.*

***ಮುಖಜ ಭೂಮಿ :*** *ನದಿಯು ಸಮುದ್ರ ಸೇರುವ ಅಂತಿಮ ಭಾಗದಲ್ಲಿ ಸಂಚಯದಿಂದ ನಿರ್ಮಿತವಾಗಿರುವ ತ್ರಿಕೋನಾಕೃತಿಯ ಮೈದಾನಗಳು.*


**ಹಿಮನದಿ:** ಪರ್ವತಗಳ ಅತಿ ಎತ್ತರ ಭಾಗಗಳು ಮತ್ತು ಧ್ರುವ ಪ್ರದೇಶಗಳಲ್ಲಿ ನೀರ್ಗಲ್ಲು ಮತ್ತು ಹಿಮರಾಶಿ ಕಂಡುಬರುತ್ತದೆ. ಹಿಮರಾಶಿಯು ಅದರ ಭಾರ ಹಾಗೂ ಗುರುತ್ವಾಕರ್ಷಣ ಬಲದಿಂದ ಇಳಿಜಾರಿನಲ್ಲಿ ನಿಧಾನವಾಗಿ ಜಾರುವುದನ್ನು "ಹಿಮನದಿ" ಎನ್ನುವರು.

© KTBS Not to be republished

**ಹಿಮನದಿಯ ವಿಧಗಳು :** ಹಿಮನದಿಗಳಲ್ಲಿ ಎರಡು ಮುಖ್ಯ ವಿಧಗಳಿವೆ. ಅವುಗಳೆಂದರೆ ಖಂಡಾಂತರ ಹಿಮನದಿ ಮತ್ತು ಪರ್ವತ ಹಿಮನದಿ.

**ಖಂಡಾಂತರ ಹಿಮನದಿ :** ಧ್ರುವಪ್ರದೇಶಗಳಲ್ಲಿರುವ ವಿಸ್ತಾರವಾದ ಮಂಜುಗಡ್ಡೆಯ ಹಾಳೆಯನ್ನು ಖಂಡಾಂತರ ಹಿಮನದಿ ಎನ್ನುವರು. ಉದಾ : ಗ್ರೀನ್‌ಲ್ಯಾಂಡ್ ಮತ್ತು ಅಂಟಾರ್ಕ್ಟಿಕಾ.

**ಪರ್ವತ ಅಥವಾ ಆಲ್ಪೈನ್ ಅಥವಾ ಕಣಿವೆ ಹಿಮನದಿಗಳು :** ಎತ್ತರದ ಪರ್ವತ ಪ್ರದೇಶಗಳಲ್ಲಿರುವ ಹಿಮನದಿಗಳನ್ನು ಪರ್ವತ ಅಥವಾ ಕಣಿವೆ ಹಿಮನದಿ ಎನ್ನುವರು.




**ಹಿಮನದಿ**

ಭೂ ನಗ್ನೀಕರಣದ ಕರ್ತೃವಾಗಿ ಹಿಮನದಿಯು ಸವೆತ, ಸಾಗಾಣಿಕೆ ಮತ್ತು ಸಂಚಯ ಕಾರ್ಯವನ್ನು ನಿರ್ವಹಿಸುತ್ತದೆ. ಹಿಮನದಿಯ ಸವೆತಕಾರ್ಯ ಬಹುತೇಕ ಪಾರ್ಶ್ವ ಕೊರೆತವಾಗಿರುವುದು. ಇದರಿಂದ ಹಲವು ಬಗೆಯ ವಿಶಿಷ್ಟವಾದ ಭೂ ಸ್ವರೂಪಗಳು ನಿರ್ಮಿತವಾಗುತ್ತವೆ. ಇವುಗಳೆಂದರೆ: ಹಿಮಾಗಾರ, ಗಿರಿಶೃಂಗ, ಪರ್ವತಕಟಕ, ಶಿಲಾಸೋಪಾನ, **U** ಆಕಾರದ ಕಣಿವೆ, ತೂಗುಕಣಿವೆ ಮೊದಲಾದವು.

ಹಿಮನದಿಯು ಸಾಗಾಣಿಕೆ ಮತ್ತು ಸಂಚಯ ಕಾರ್ಯಗಳನ್ನು ಜೊತೆ ಜೊತೆಯಲ್ಲಿಯೇ ನಿರ್ವಹಿಸುವುದು. ಸಂಚಯ ಕಾರ್ಯದಿಂದ ನಿರ್ಮಿತವಾಗುವ ಮುಖ್ಯ ಸ್ವರೂಪಗಳೆಂದರೆ ಶಿಲಾನಿಚಯಗಳು, ಸರ್ಪಾಕಾರದ ದಿಣ್ಣೆಗಳು, ರೇವೆಮಣ್ಣಿನ ಮೈದಾನಗಳು, ತ್ರಿಕೋನಾಕೃತಿಯ ದಿಣ್ಣೆಗಳು ಹಾಗೂ ಹಿಮಜಲ ಪ್ರವಾಹ ಮೈದಾನಗಳು (out wash plains).

'ಶಿಲಾನಿಚಯ'ಗಳು ಹಿಮೀಕರಣದ ಪ್ರದೇಶದಲ್ಲಿ ಕಂಡುಬರುವ ಅತಿ ಮುಖ್ಯ ಭೂ ಸ್ವರೂಪಗಳು. ಇವು ಹಿಮನದಿಯಿಂದ ಸಂಚಯಿತವಾಗಿರುವ ವಿವಿಧ ಆಕಾರ, ಗಾತ್ರದ ಅಗಾಧ ಪ್ರಮಾಣದ ಶಿಲಾವಸ್ತುಗಳು. ಶಿಲಾನಿಚಯಗಳನ್ನು ಅವುಗಳು ಸಂಚಯಗೊಂಡಿರುವ ಸ್ಥಳದ ಆಧಾರದಿಂದ ನಾಲ್ಕು ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ:

**ಎ) ಪಾರ್ಶ್ವ ಶಿಲಾನಿಚಯ:** ಹಿಮನದಿಯ ಕಣಿವೆಯುದ್ದಕ್ಕೂ ಎರಡೂ ಬದಿಗಳಲ್ಲಿ ಶಿಲಾವಸ್ತುಗಳು ಸಂಚಯವಾಗುವುದನ್ನು ಪಾರ್ಶ್ವ ಶಿಲಾನಿಚಯ ಎನ್ನುವರು.

**ಬಿ) ಮಧ್ಯ ಶಿಲಾನಿಚಯ:** ಎರಡು ಹಿಮನದಿಗಳು ಸಂಧಿಸಿದಾಗ ಅವುಗಳ ಪಾರ್ಶ್ವ ಶಿಲಾನಿಚಯಗಳು ಪರಸ್ಪರ ಒಗ್ಗೂಡುತ್ತವೆ. ಇವುಗಳನ್ನು ಮಧ್ಯ ಶಿಲಾನಿಚಯವೆಂದು ಕರೆಯುವರು.

**ಸಿ) ತಳದ ಶಿಲಾನಿಚಯ:** ಹಿಮನದಿ ಕಣಿವೆಯ ತಳಭಾಗದಲ್ಲಿ ಶಿಲಾವಸ್ತುಗಳು ಸಂಚಯವಾಗುವುದನ್ನು ತಳದ ಶಿಲಾನಿಚಯವೆನ್ನುವರು.

**ಡಿ) ಅಂತ್ಯ ಶಿಲಾನಿಚಯ :** ಇವು ಹಿಮನದಿಯ ಅಂತ್ಯಭಾಗದಲ್ಲಿ ಸಂಚಯಗೊಂಡ ಶಿಲಾವಸ್ತುಗಳು.

*ಹಿಮನದಿ ಕಾರ್ಯವನ್ನು ಹಿಮನದಿ ಆವರ್ತನ (Glacial Cycle) ವೆನ್ನುವರು.*


©KTBS Not to be republished

## ಅಂತರ್ಜಲ

ಭೂಮಿಯ ಮೇಲೆ ಬೀಳುವ ಮಳೆಯ ನೀರಿನ ಸ್ವಲ್ಪ ಭಾಗವು ಇಂಗಿ ಒಳಸೇರುವುದು. ಹೀಗೆ ಭೂ ಒಳಪದರಗಳಲ್ಲಿ ಸಂಗ್ರಹವಾಗಿರುವ ನೀರನ್ನು 'ಅಂತರ್ಜಲ'ವೆಂದು ಕರೆಯುವರು. ಅಂತರ್ಜಲವು ಸುಲಭವಾಗಿ ಪ್ರವಹಿಸಬಹುದಾದ ಶಿಲಾಪದರುಗಳನ್ನು 'ಪ್ರವೇಶ್ಯ ಶಿಲೆ' ಅಥವಾ 'ವ್ಯಾಪ್ಯಶಿಲೆ'ಗಳೆನ್ನುವರು. ಅಂತರ್ಜಲವು ಪ್ರವೇಶಿಸಲಾರದ ಶಿಲಾಪದರಗಳನ್ನು 'ಅಪ್ರವೇಶ್ಯ' ಅಥವಾ 'ಅವ್ಯಾಪ್ಯ' ಶಿಲೆಗಳೆಂದು ಕರೆಯುವರು. ಕೆಲವು ಪ್ರವೇಶ್ಯ ಶಿಲೆಗಳು ಅಪಾರ ಪ್ರಮಾಣದ ಅಂತರ್ಜಲವನ್ನು ಹೊಂದಿರುತ್ತವೆ. ಇವುಗಳನ್ನು 'ಜಲಜಶಿಲೆ' ಎನ್ನುವರು. ಪ್ರವೇಶ್ಯ ಶಿಲೆಗಳಲ್ಲಿ ಭರ್ತಿಯಾದ ನೀರು ಕೆಲವು ಸನ್ನಿವೇಶಗಳಲ್ಲಿ ಸ್ವಾಭಾವಿಕವಾಗಿ ಹೊರಬೀಳುವುದು. ಹೀಗೆ ಅಂತರ್ಜಲವು ಸ್ವಾಭಾವಿಕವಾಗಿ ಹೊರಬೀಳುವುದನ್ನು 'ಚಿಲುಮೆ' (Spring) ಗಳೆಂದು ಕರೆಯುವರು.

## ಚಿಲುಮೆಗಳ ವಿಧಗಳು


1) **ನಿರಂತರ ಚಿಲುಮೆಗಳು:** ಈ ಚಿಲುಮೆಗಳಲ್ಲಿ ವರ್ಷದ ಎಲ್ಲಾ ಕಾಲದಲ್ಲಿಯೂ ನಿರಂತರವಾಗಿ ಅಂತರ್ಜಲವು ಹೊರಬೀಳುವುದು.
2) **ನಿಯತಕಾಲಿಕ ಚಿಲುಮೆಗಳು:** ಈ ಚಿಲುಮೆಗಳಲ್ಲಿ ವರ್ಷದ ಕೆಲವುಕಾಲ (ಮಳೆಗಾಲ) ಮಾತ್ರ ಅಂತರ್ಜಲ ಹೊರಬೀಳುವುದು. ಇನ್ನುಳಿದ ಕಾಲದಲ್ಲಿ ಬತ್ತಿ ಹೋಗುತ್ತದೆ.
3) **ಬಿಸಿನೀರಿನ ಚಿಲುಮೆಗಳು:** ಈ ಚಿಲುಮೆಗಳಲ್ಲಿ ಬಿಸಿನೀರು ಹೊರಬೀಳುವುದು. ಇವು ಸಾಮಾನ್ಯವಾಗಿ ಜ್ವಾಲಾಮುಖಿ ಪ್ರದೇಶದಲ್ಲಿ ಕಂಡುಬರುತ್ತದೆ.
4) **ಗೇಸರ್:** ಈ ಚಿಲುಮೆಗಳಲ್ಲಿ ಬಿಸಿನೀರು ನೀರಾವಿಯೊಡನೆ ಆಗಿಂದಾಗ್ಗೆ ಸಾಕಷ್ಟು ಎತ್ತರದವರೆಗೆ ಚಿಮ್ಮುವುದು. ಉದಾ: ಯು.ಎಸ್.ಎ.ಯಲ್ಲಿರುವ 'ಓಲ್ಡ್ ಫೇತ್ ಫುಲ್ ಗೇಸರ್'.
5) **ಆರ್ಟಿಸಿಯನ್ ಬಾವಿ:** ಕೆಲವು ಕಡೆಗಳಲ್ಲಿ ಶಿಲಾಪದರುಗಳು ಬೋಗುಣಿಯಾಕಾರದಲ್ಲಿ ರಚನೆಯಾಗಿ ಒಂದು ಪ್ರವೇಶ್ಯ ಶಿಲಾ ಪದರಿನ ಮೇಲೆ ಹಾಗೂ ಕೆಳಗೆ ಅಪ್ರವೇಶ್ಯ ಶಿಲಾಪದರುಗಳಿರುತ್ತವೆ. ಇಂತಹ ಶಿಲಾಪದರಗಳಲ್ಲಿ ಸಂಗ್ರಹವಾದ ಅಂತರ್ಜಲವು ಸ್ವಾಭಾವಿಕವಾಗಿ ಹೊರಬೀಳಲಾರದು. ಇಂತಹ ಕಡೆ ಪ್ರವೇಶ್ಯ ಶಿಲೆಯವರೆಗೆ ರಂಧ್ರವನ್ನು ಕೊರೆದಾಗ ನೀರು ಹೊರಚಿಮ್ಮುವುದು. ಇವುಗಳನ್ನು ಆರ್ಟಿಸಿಯನ್ ಬಾವಿಗಳೆಂದು ಕರೆಯುವರು. ಇವುಗಳು ಆಸ್ಟ್ರೇಲಿಯಾದಲ್ಲಿ ಹೆಚ್ಚಾಗಿ ಕಂಡುಬರುತ್ತವೆ.




ಆರ್ಟಿಸಿಯನ್ ಬಾವಿಗಳು

© KTBS Not to be republished

ಅಂತರ್ಜಲವು ಸವೆತ ಮತ್ತು ಸಂಚಯನ ಕಾರ್ಯವನ್ನು ನಿರ್ವಹಿಸುವುದು. ಸುಣ್ಣಕಲ್ಲಿನ ಪ್ರದೇಶದಲ್ಲಿ ಅಂತರ್ಜಲಕಾರ್ಯವು ಪ್ರಧಾನ ವಾಗಿರುವುದು. ಅಂತರ್ಜಲಕಾರ್ಯದಿಂದ ನಿರ್ಮಿತ ವಾಗುವ ಭೂ ಸ್ವರೂಪಗಳೆಂದರೆ ಲೆಪೀಸ್, ನುಂಗುಬಿಲ, ಅಂತರ್ ಗುಹೆ, ಆರೋಹಿ ಮತ್ತು ಅವರೋಹಿ ಶಂಕುಗಳು, ಸುಣ್ಣಕಲ್ಲಿನ ಸ್ತಂಭಗಳು ಮೊದಲಾದವು.



**ಅಂತರ್ಜಲ ಚಟುವಟಿಕೆ**

ಅಂತರ್ಜಲ ಕಾರ್ಯದಿಂದ ನಿರ್ಮಿತವಾಗಿರುವ ಭೂಸ್ವರೂಪಗಳನ್ನು ಕಾರ್ಸ್ಟ್‌ಟೋಪೋಗ್ರಫಿ ಎಂದು ಕರೆಯುವರು.


***ನಿಮಗೆ ತಿಳಿದಿರಲಿ – ಸುಣ್ಣಕಲ್ಲಿನ ಗುಹೆಗಳು.***

*1. ಆಕಳ ಗವಿ (ಉಳವಿ) ಗುಹೆಗಳು – ಕರ್ನಾಟಕದ ಉತ್ತರಕನ್ನಡ ಜಿಲ್ಲೆ*

*2. ಬೇಲಂ ಮತ್ತು ಬೊರ್ರಾ ಗುಹೆಗಳು –ಆಂಧ್ರಪ್ರದೇಶ.*

**ಮಾರುತಗಳು**

ಮಾರುತಗಳ ನಗ್ನೀಕರಣದ ಕಾರ್ಯವು ಶುಷ್ಕ ಅಥವಾ ಮರುಭೂಮಿ ಪ್ರದೇಶಗಳಲ್ಲಿ ಸಾಮಾನ್ಯವಾಗಿದೆ. ಮರುಭೂಮಿಗಳಲ್ಲಿ ಅಡೆತಡೆಯಿಲ್ಲದೆ ಅತ್ಯಂತ ವೇಗವಾಗಿ ಬೀಸುವ ಮಾರುತಗಳು, ಭೂಮೇಲ್ಮೈಯನ್ನು ಸವೆಸಿ, ಸಾಗಿಸಿ ಅನಂತರ ಅವುಗಳನ್ನು ಸಂಚಯಿಸಿ ವಿವಿಧ ಬಗೆಯ ಭೂ ಸ್ವರೂಪಗಳನ್ನು ನಿರ್ಮಿಸುತ್ತವೆ. ಮಾರುತದ ಕಾರ್ಯದಿಂದ ನಿರ್ಮಿತವಾಗುವ ಮುಖ್ಯ ಭೂಸ್ವರೂಪಗಳೆಂದರೆ : i) ನಾಯಿಕೊಡೆ (ಅಣಬೆಯಾಕಾರದ ಶಿಲೆ) ಶಿಲಾಪೀಠ, ಶಿಲಾದ್ವೀಪ, ಮರುಳು ದಿಣ್ಣೆಗಳ– ನೀಳಮರಳು ದಿಣ್ಣೆ ಅಡ್ಡಮರಳು ದಿಣ್ಣೆ ಮತ್ತು ಅರ್ಧ ಚಂದ್ರಾಕೃತಿಯ ಮರುಳು ದಿಣ್ಣೆ ಮತ್ತು ಲೋಯಸ್ ಮೈದಾನ ಮೊದಲಾದವು.



**ಅರ್ಧಚಂದ್ರಾಕೃತಿಯ ಮರುಳುದಿಣ್ಣೆ**


ಅರ್ಧಚಂದ್ರಾಕೃತಿಯ ಮರುಳು ದಿಣ್ಣೆಗಳು ಮರುಭೂಮಿಗಳಲ್ಲಿ ಕಂಡುಬರುವ ವಿಶೇಷ ಭೂ ಸ್ವರೂಪಗಳು. ಮರುಭೂಮಿಗಳ ಅಂಚಿನಲ್ಲಿ ನುಣುಪಾದ ಹಳದಿಬಣ್ಣದ ಮಣ್ಣಿನ ಕಣಗಳಿಂದ ಸಂಚಯಗೊಂಡ ಪ್ರದೇಶವನ್ನು 'ಲೋಯೆಸ್' ಎಂದು ಕರೆಯುವರು. ಉದಾ: ಚೀನಾದ ಲೋಯೆಸ್ ಮೈದಾನ.

*ಮಾರುತಗಳ ನಗ್ನೀಕರಣದ ಕಾರ್ಯವನ್ನು ಮಾರುತದ ಆವರ್ತನ–(ಇಯೋಲಿಯನ್ ಸೈಕಲ್)–ಎಂದು ಕರೆಯುವರು.*

©KTBS Not to be republished

### ಸಮುದ್ರದ ಅಲೆಗಳು

ವಿವಿಧ ಭೂನಗ್ನೀಕರಣ ಕರ್ತೃಗಳಲ್ಲಿ ಸಮುದ್ರದ ಅಲೆಗಳು ಕೂಡ ಒಂದು ಪ್ರಮುಖ ಬಾಹ್ಯ ಶಕ್ತಿಯಾಗಿದೆ. ಸಮುದ್ರದ ಅಲೆಗಳು ಸಮುದ್ರದ ಮೇಲ್ಭಾಗದಲ್ಲಿ ಏರು ತಗ್ಗುಗಳನ್ನು ಹೊಂದಿರುವ ನೀರಿನ ಪ್ರಕಾರವಾಗಿದೆ. ಸಮುದ್ರದ ಅಲೆಗಳಿಂದ ನಿರ್ಮಾಣವಾಗುವ ಕಾರ್ಯವು ಪ್ರಮುಖವಾಗಿ ಕರಾವಳಿಯಲ್ಲಿ ಕಂಡುಬರುವುದು. ಸಮುದ್ರದ ಅಲೆಗಳಿಂದ ನಿರ್ಮಾಣವಾಗುವ ಪ್ರಮುಖ ಭೂಸ್ವರೂಪಗಳೆಂದರೆ– ಶಿಲಾಪ್ರಪಾತ ಸಮುದ್ರ ಗುಹೆಗಳು, ಸಮುದ್ರ ಬಿಡಿಬಂಡೆ, ಸಮುದ್ರ ಕಮಾನು, ಭೂಶಿರ, ಮರಳು ಅಡ್ಡಗಟ್ಟುಗಳು, ಮರಳುದಂಡೆಗಳು, ಲಗೂನ್ ಸರೋವರಗಳು ಇತ್ಯಾದಿ.




ಸಮುದ್ರದ ಅಲೆಗಳು

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿಮಾಡಿರಿ.**

1. 'ಭೂಖಂಡಗಳ' ಮೇಲ್ಪದರು ಎಂದು ___________ ನ್ನು ಕರೆಯುತ್ತಾರೆ.
2. ತಗ್ಗಾದ, ವಿಸ್ತಾರವಾದ ಜ್ವಾಲಾಮುಖಿ ದ್ವಾರವನ್ನು ___________ ಎನ್ನುವರು.
3. ಹೆಚ್ಚು ಹಾನಿಕಾರಕ ಭೂಕಂಪನ ಅಲೆಗಳೆಂದರೆ ___________ .
4. ಆರೋಹಿ ಮತ್ತು ಅವರೋಹಿ ಶಂಕುಗಳು ___________ ನಗ್ನೀಕರಣ ಕರ್ತೃವಿನಿಂದ ನಿರ್ಮಾಣವಾಗುತ್ತವೆ.
5. ಮರಳು ದಂಡೆಗಳು ___________ ಕಾರ್ಯದಿಂದ ನಿರ್ಮಿತವಾಗುತ್ತವೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಭೂಮಿಯ ಅಂತರಾಳದ ಮೂರು ಪ್ರಮುಖ ಪದರುಗಳನ್ನು ತಿಳಿಸಿ.
2. ಕಾರ್ಯಾಚರಣೆ ಆಧಾರದ ಮೇಲೆ ಜ್ವಾಲಾಮುಖಿಯ ವಿಧಗಳನ್ನು ಹೆಸರಿಸಿ.
3. ಪ್ರಪಂಚದ ಪ್ರಮುಖ ಭೂಕಂಪ ವಲಯಗಳನ್ನು ತಿಳಿಸಿ.
4. ಶಿಥಿಲೀಕರಣ ಎಂದರೇನು? ಶಿಥಿಲೀಕರಣದ ಮೂರು ಮುಖ್ಯ ವಿಧಗಳನ್ನು ಹೆಸರಿಸಿ.
5. ಭೂನಗ್ನೀಕರಣದ ಕರ್ತೃವಾಗಿ ನದಿಗಳು ನಿರ್ಮಿಸುವ ಭೂಸ್ವರೂಪಗಳನ್ನು ಹೆಸರಿಸಿ.

©KTBS Not to be republished

**III. ಹೊಂದಿಸಿ ಬರೆಯಿರಿ.**

| ಅ | ಬ |
|---|---|
| 1. ಸೈಮಾ | ಅ) ಭೂಕಂಪ |
| 2. ಮರಳುಗಲ್ಲು | ಆ) ಹಳದಿಮಣ್ಣು |
| 3. ಹೊರ ಕೇಂದ್ರ | ಇ) ಸಾಗರೀಕ ವಲಯದ ಮೇಲ್ಪದರು |
| 4. ಗೇಸರ್ | ಈ) ಕಣಶಿಲೆ |
| 5. ಲೋಯೆಸ್ | ಉ) ಅಂತರ್ಜಲ |

**IV. ಈ ಕೆಳಗಿನವುಗಳನ್ನು ಅರ್ಥೈಸಿ.**

1. ಜಲಜಶಿಲೆಗಳು
2. ಪೆಸಿಫಿಕ್ ಅಗ್ನಿವೃತ್ತ
3. ಭೌತಿಕ ಶಿಥಿಲೀಕರಣ
4. ಶಿಲಾನಿಚಯಗಳು
5. ಇಂಗಾಲಾಧಿಕ್ಯ ಶಿಲೆಗಳು
6. ಸುನಾಮಿ
7. ಖಂಡಾಂತರ ಹಿಮನದಿ
8. ಬಿಸಿನೀರಿನ ಚಿಲುಮೆ

**V. ನೆನಪಿನಲ್ಲಿಡಬೇಕಾದ ಅಂಶಗಳು.**

1. ನಿಫೆ
2. ಚೂರ್ಣಾಧಿಕ್ಯ ಮತ್ತು ಮೃಣ್ಮಯ ಶಿಲೆಗಳು
3. ಭೂರಚನಾ ಶಕ್ತಿಗಳು
4. ಪರ್ವತ ಹಿಮನದಿ
5. ಮಾರುತ ಕಾರ್ಯದ ಆವರ್ತನ
6. ಸಮುದ್ರ ತೀರಗಳು

**VI. ಚಟುವಟಿಕೆಗಳು.**

1. ನಿಮ್ಮ ಸುತ್ತಮುತ್ತಲಿನ ಸ್ಥಳಗಳಲ್ಲಿ ಸಿಗುವ ವಿವಿಧ ಶಿಲೆಗಳನ್ನು ಸಂಗ್ರಹಿಸಿ, ಹೆಸರಿಸಿ.
2. ಸಮೀಪದ ಜಲಪಾತಗಳಿಗೆ ಭೇಟಿ ನೀಡಿ ಅವು ಹೇಗೆ ನಿರ್ಮಿತವಾಗಿವೆ ಎಂದು ತಿಳಿಯಿರಿ.

*****

©KTBS Not to be republished

# ಅರ್ಥಶಾಸ್ತ್ರ

## ಅಧ್ಯಾಯ – 1

## ಅರ್ಥಶಾಸ್ತ್ರದ ಪರಿಚಯ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಅರ್ಥಶಾಸ್ತ್ರದ ಅರ್ಥ ಮತ್ತು ಅರ್ಥಶಾಸ್ತ್ರದ ಮೂಲ ಪರಿಕಲ್ಪನೆಗಳು.*
- *ಅರ್ಥಶಾಸ್ತ್ರದ ಅಧ್ಯಯನ ಮಹತ್ವ.*
- *ಮೂಲ ಆರ್ಥಿಕ ಸಮಸ್ಯೆಗಳನ್ನು ವಿವರಿಸುವಲ್ಲಿ ಆರ್ಥಿಕ ಚಟುವಟಿಕೆಗಳು.*
- *ಸೂಕ್ಷ್ಮ ಅರ್ಥಶಾಸ್ತ್ರ ಮತ್ತು ವಿಶಾಲಾತ್ಮಕ ಅರ್ಥಶಾಸ್ತ್ರಗಳ ನಡುವಿನ ವ್ಯತ್ಯಾಸ.*

### ಅರ್ಥಶಾಸ್ತ್ರದ ಅರ್ಥ ಮತ್ತು ಮಹತ್ವ

ನಮ್ಮ ದೈನಂದಿನ ಜೀವನದಲ್ಲಿ ನಾವು ವಿವಿಧ ವಸ್ತುಗಳನ್ನು ಬಳಕೆ ಮಾಡುತ್ತೇವೆ. ಅವುಗಳನ್ನು 'ಸರಕುಗಳು' ಮತ್ತು 'ಸೇವೆಗಳು' ಎಂದು ಕರೆಯುತ್ತೇವೆ. ಸರಕುಗಳು ಭೌತಿಕ ಮತ್ತು ಗೋಚರಿಸುವ ವಸ್ತುಗಳಾಗಿದ್ದು ಅವು ಆಹಾರ, ಬಟ್ಟೆ, ಪುಸ್ತಕ, ಸೈಕಲ್, ಫೋನ್, ಟಿವಿ, ಇತ್ಯಾದಿಗಳಾಗಿರುತ್ತವೆ. ಇನ್ನೊಂದೆಡೆ, ಸೇವೆಗಳು ಅಗೋಚರಗಳಾಗಿದ್ದು ಅವುಗಳು ಕೂಡ ನಮಗೆ ಬಳಕೆಗೆ ಅಗತ್ಯವಿರುವವು. ವಿದ್ಯುಚ್ಛಕ್ತಿ, ಸಾರಿಗೆ, ಶಿಕ್ಷಣ, ವೈದ್ಯಕೀಯ, ಹೊಲಿಗೆ, ಸಂಗೀತ, ಮೊಬೈಲ್ ಮತ್ತು ಅಂತರ್ಜಾಲ ಸೇವೆ ಇತ್ಯಾದಿಗಳು ನಾವು ಬಳಕೆ ಮಾಡುವ ಸಾಮಾನ್ಯ ಸೇವೆಗಳಾಗಿವೆ. ಸರಕುಗಳನ್ನು ಮತ್ತು ಸೇವೆಗಳನ್ನು ಬಳಕೆ ಮಾಡುವವರನ್ನು 'ಗ್ರಾಹಕರು' ಹಾಗೂ ಸರಕುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸುವವರನ್ನು 'ಉತ್ಪಾದಕರು' ಎನ್ನುತ್ತೇವೆ. ಈ ಸರಕುಗಳನ್ನು ಮತ್ತು ಸೇವೆಗಳನ್ನು ನಾವು ಇರುವ ಸ್ಥಳದಲ್ಲಿ ಲಭ್ಯವಾಗುವಂತೆ ಮಾಡುವ ಸಾರಿಗೆದಾರರಿಗೆ, ವ್ಯಾಪಾರಸ್ಥರಿಗೆ ಮತ್ತು ಅಂಗಡಿಕಾರರಿಗೆ 'ವಿತರಕರು' ಎನ್ನಲಾಗುತ್ತದೆ.

ಅಗತ್ಯವಾದ ಸರಕುಗಳನ್ನು ಮತ್ತು ಸೇವೆಗಳನ್ನು ನಾವು ನಿಗದಿಪಡಿಸಿದ 'ಬೆಲೆ' ನೀಡಿ ಕೊಂಡುಕೊಳ್ಳುತ್ತೇವೆ. ಇದು ಹಣದ ರೂಪದಲ್ಲಿ ವ್ಯಕ್ತಪಡಿಸಿದ ಸರಕು ಅಥವಾ ಸೇವೆಗಳ ಮೌಲ್ಯವಾಗಿದೆ. ಅಂದರೆ ನಮ್ಮ ದೈನಂದಿನ ಜೀವನದಲ್ಲಿ ಅಗತ್ಯವಿರುವ ವಿವಿಧ ಸರಕುಗಳನ್ನು ಮತ್ತು ಸೇವೆಗಳನ್ನು ಕೊಳ್ಳಲು ನಮಗೆ ಹಣ ಬೇಕು. ಹಾಗಾದರೆ, ಹಣವನ್ನು ಹೇಗೆ ಪಡೆಯುವುದು? ಅದಕ್ಕಾಗಿ ನಾವೆಲ್ಲರೂ ಉದ್ಯೋಗದಲ್ಲಿ ತೊಡಗುತ್ತೇವೆ ಅಥವಾ ಉದ್ಯೋಗಿಗಳಾಗುತ್ತೇವೆ. 'ಉದ್ಯೋಗ'ದಿಂದ ನಾವು 'ಆದಾಯ'ವನ್ನು ಪಡೆಯುತ್ತೇವೆ. ನಾವು ನಮ್ಮ ಆದಾಯವನ್ನು ವೆಚ್ಚ ಮಾಡಿದಾಗ ಅದು ಉತ್ಪಾದಕರ ಮತ್ತು ವಿತರಕರ ಆದಾಯವಾಗಿರುತ್ತದೆ. ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವುದು 'ಸರ್ಕಾರ'ದ ಜವಾಬ್ದಾರಿಯಾಗಿದ್ದು, ಅದು ಆಂತರಿಕ ಮತ್ತು ಬಾಹ್ಯ ಭದ್ರತೆಯ ಜೊತೆಗೆ ಉತ್ತಮ ರಸ್ತೆಗಳು, ವಿದ್ಯುಚ್ಛಕ್ತಿಯಂತಹ ಮೂಲ ಸೌಲಭ್ಯಗಳನ್ನು ಒದಗಿಸುತ್ತದೆ. ಸರಕಾರವು ತಾನು ಒದಗಿಸುವ ಸರಕುಗಳಿಗೆ ಮತ್ತು ಸೇವೆಗಳಿಗೆ 'ತೆರಿಗೆ'ಗಳನ್ನು ವಿಧಿಸುತ್ತದೆ.

ಆದುದರಿಂದ, ಒಂದು ಸಾಮಾನ್ಯ ದಿನದಲ್ಲಿ ಪ್ರತಿಯೊಬ್ಬ ಉತ್ಪಾದಕರ, ವಿತರಕರ, ಗ್ರಾಹಕರ ಮತ್ತು ಸರ್ಕಾರದ ನಡುವಿನ ಪರಸ್ಪರ ಸಂಬಂಧ ಕಂಡು ಬರುತ್ತದೆ. ಈ ಪ್ರತಿಯೊಬ್ಬರ ಆದಾಯ ಗಳಿಕೆ ಮತ್ತು ವೆಚ್ಚ ಮಾಡುವ ಕಾರ್ಯವು ಆರ್ಥಿಕ ಚಟುವಟಿಕೆಯ ಮೂಲ ಅಂಶವಾಗಿದೆ. ಅರ್ಥಶಾಸ್ತ್ರವನ್ನು ವ್ಯಕ್ತಿಗಳ ಇಂತಹ ಆರ್ಥಿಕ ಚಟುವಟಿಕೆಗಳ ಅಧ್ಯಯನವನ್ನು ಮಾಡುವ ವಿಷಯ ಅಥವಾ ಉತ್ಪಾದನೆ, ವಿತರಣೆ ಮತ್ತು ಸರಕು–ಸೇವೆಗಳ ಬಳಕೆ ಕುರಿತು ಅಭ್ಯಸಿಸುವ ವಿಜ್ಞಾನವೆಂದು ವರ್ಣಿಸಬಹುದಾಗಿದೆ.

© KTBS Not to be republished

ಆದರೆ ಒಂದು ಮಹತ್ವದ ಸಂಗತಿಯೆಂದರೆ ನಾವು ಬಯಸುವ ಎಲ್ಲ ಸರಕು ಮತ್ತು ಸೇವೆಗಳನ್ನು ಹೊಂದಲು ಸಾಧ್ಯವಿಲ್ಲ. ಏಕೆಂದರೆ, ಅವುಗಳನ್ನು ಕೊಳ್ಳಲು ಬೇಕಾದ ಹಣವು ಮಿತವಾಗಿದೆ ಅಥವಾ 'ಕೊರತೆ'ಯಲ್ಲಿದೆ. ಹೀಗಿದ್ದಾಗ, ಅತ್ಯಗತ್ಯವಾದುದನ್ನು ಮೊದಲು ಆಯ್ಕೆ ಮಾಡಿ ಕಡಿಮೆ ಅಗತ್ಯವಾದುದರ ಬಳಕೆಯನ್ನು ಮುಂದೂಡಲಾಗುತ್ತದೆ. ಆದುದರಿಂದ, ಆಹಾರವು ಚಲನಚಿತ್ರಕ್ಕಿಂತ ಹೆಚ್ಚು ಮಹತ್ವವಾದುದು; ಟ್ರ್ಯಾಕ್ಟರನ್ನು ಕೊಳ್ಳುವುದಕ್ಕಿಂತ ಬೀಜಗಳನ್ನು ಮತ್ತು ರಸಗೊಬ್ಬರಗಳನ್ನು ಕೊಳ್ಳುವುದು ಹೆಚ್ಚು ಮಹತ್ವವಾದುದು; ಇತ್ಯಾದಿ. ಈ ರೀತಿಯಾದ ಬಯಕೆಗಳನ್ನು ಹೆಚ್ಚು ಅಥವಾ ಕಡಿಮೆ ಮಹತ್ವದ್ದು ಎಂದು ವರ್ಗೀಕರಿಸುವುದನ್ನು 'ಆದ್ಯತೆ' ನೀಡುವುದು ಎನ್ನುತ್ತೇವೆ. ಆದ್ಯತೆ ನೀಡಿದ ಬಯಕೆಗಳನ್ನು ತೃಪ್ತಿ ಪಡಿಸಲು ಹೆಚ್ಚಿನ ಸಂಪನ್ಮೂಲ (ಹಣ) ವನ್ನು ನಾವು ವಿನಿಯೋಗಿಸುತ್ತೇವೆ. ಆದುದರಿಂದ, ಸಂಪನ್ಮೂಲದ ಕೊರತೆಯಿದ್ದಾಗ ನಾವು ಹೆಚ್ಚು ಅಗತ್ಯವುಳ್ಳ ಬಯಕೆಗಳನ್ನು ಆಯ್ಕೆ ಮಾಡುತ್ತೇವೆ ಅಥವಾ ಅವುಗಳ ಮಹತ್ವದ ಆಧಾರದ ಮೇಲೆ ಪಟ್ಟಿ ಮಾಡುತ್ತೇವೆ. ಆದ್ದರಿಂದ ಕೊರತೆ ಮತ್ತು ಆಯ್ಕೆಗಳು ನಾವೆಲ್ಲರೂ ಎದುರಿಸುವ ಮೂಲಭೂತ ಸಮಸ್ಯೆಗಳಾಗಿದ್ದು ಅವು ಅರ್ಥಶಾಸ್ತ್ರದ ಪ್ರಮುಖ ಸಮಸ್ಯೆಗಳೂ ಆಗಿವೆ.

***ನಿಮಗಿದು ತಿಳಿದಿರಲಿ :*** *ನಿಮ್ಮ ಹತ್ತಿರ ರೂ.20 ಇದೆ ಎನ್ನೋಣ. ನಿಮ್ಮ ಶಿಕ್ಷಕರು ಒಂದು ಪುಸ್ತಕವನ್ನು ಕೊಳ್ಳಲು ಹೇಳಿದ್ದಾರೆ, ನೀವು ಇತ್ತೀಚಿನ ಚಲನಚಿತ್ರವನ್ನು ನೋಡಲು ಇಚ್ಛಿಸಿರುತ್ತೀರಿ, ತಲೆನೋವಿಗೆ ಔಷಧ ಕೊಳ್ಳಲು ಬಯಸುತ್ತೀರಿ, ನೀವು ಮನೆಗೆ ಹೋಗಬೇಕು ಮತ್ತು ನೀವು ಹಸಿದಿದ್ದೀರಿ ಕೂಡ. ಕೈಯಲ್ಲಿರುವ ರೂ.20ರಿಂದ ಎಲ್ಲ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಧ್ಯವಿಲ್ಲ. ಆಗ ನೀವು ಯಾವ ಬಯಕೆಯನ್ನು ಮೊದಲು ತೃಪ್ತಿ ಪಡಿಸಿಕೊಳ್ಳುತ್ತೀರಿ, ನಂತರದಲ್ಲಿ ಯಾವುದು ಎಂಬುದರ ಆಯ್ಕೆ ಮಾಡುತ್ತೀರಿ. ಅಂದರೆ, ನೀವು ಮೊದಲಿಗೆ ಏನನ್ನಾದರೂ ತಿನ್ನುತ್ತೀರಿ, ಕೆಲವು ಮಾತ್ರೆಗಳನ್ನು ಕೊಳ್ಳುತ್ತೀರಿ ಮತ್ತು ನಂತರದಲ್ಲಿ ಮನೆಗೆ ಹೋಗಲು ಹಣ ಖರ್ಚು ಮಾಡುವಿರಿ ಮತ್ತು ಪುಸ್ತಕಗಳನ್ನು ಕೊಳ್ಳುವುದನ್ನು ಹಾಗೂ ಚಲನಚಿತ್ರ ನೋಡುವುದನ್ನು ಮುಂದೂಡುತ್ತೀರಿ. ಇದನ್ನೇ ಆದ್ಯತೆ ನೀಡುವುದು ಮತ್ತು ಅದಕ್ಕಾಗಿ ನಮ್ಮ ಬಳಿಯಿರುವ ಸಂಪನ್ಮೂಲವನ್ನು (ರೂ.20) ವಿನಿಯೋಗಿಸುವುದು ಆಗಿದೆ.*

"ಅರ್ಥಶಾಸ್ತ್ರವು ಜನರು ತಮ್ಮ ಅಪರಿಮಿತವಾದ ಬಯಕೆಗಳನ್ನು ತೃಪ್ತಿಪಡಿಸಲು ಮಿತವಾಗಿರುವ ಅಥವಾ ಕೊರತೆಯಲ್ಲಿರುವ ಸಂಪನ್ಮೂಲದ ಉಪಯೋಗವನ್ನು ಹೇಗೆ ಮಾಡುತ್ತಾರೆ ಎಂದು ಪರಿಶೀಲಿಸುವ ಸಮಾಜ ವಿಜ್ಞಾನವಾಗಿದೆ ಎಂದು ವ್ಯಾಖ್ಯಾನಿಸಲಾಗುತ್ತದೆ". ಅರ್ಥಶಾಸ್ತ್ರವನ್ನು ವಿವಿಧ ರೀತಿಗಳಲ್ಲಿ ವ್ಯಾಖ್ಯಾನಿಸಿದ್ದರೂ, ಮೇಲಿನ ವ್ಯಾಖ್ಯೆಯು ಅರ್ಥಶಾಸ್ತ್ರದ ಮೂಲ ಸಮಸ್ಯೆಯನ್ನು ವಿವರಿಸುತ್ತದೆ.

***ಅರ್ಥಶಾಸ್ತ್ರಜ್ಞರಿಂದ ಅರ್ಥಶಾಸ್ತ್ರದ ವ್ಯಾಖ್ಯೆಗಳು :***

*"ಸಂಪತ್ತನ್ನು ಅಧ್ಯಯನ ಮಾಡುವ ವಿಷಯವೇ ಅರ್ಥಶಾಸ್ತ್ರ" – ಆಡಂ ಸ್ಮಿತ್ (1776) (ಅರ್ಥಶಾಸ್ತ್ರದ ಪಿತಾಮಹ).*

*"ಜನರ ಸಾಮಾನ್ಯ ಜೀವನದ ವ್ಯವಹಾರವನ್ನು ಅರ್ಥಶಾಸ್ತ್ರ ಅಧ್ಯಯನ ಮಾಡುತ್ತದೆ" – ಆಲ್ಫ್ರೆಡ್ ಮಾರ್ಷಲ್ (1890).*

*"ವಿವಿಧ ಉಪಯುಕ್ತತೆಗಳನ್ನು ಹೊಂದಿರುವ ಕೊರತೆಯಲ್ಲಿರುವ ಸಂಪನ್ಮೂಲಗಳ ಮತ್ತು ಮಾನವನ ಅಪರಿಮಿತ ಬಯಕೆಗಳ ನಡುವಿನ ಸಂಬಂಧವಾಗಿ ಮಾನವನ ನಡವಳಿಕೆಯನ್ನು ಅಧ್ಯಯನ ಮಾಡುವ ವಿಜ್ಞಾನವೇ ಅರ್ಥಶಾಸ್ತ್ರ"– ಲಿಯೋನಿಲ್ ರಾಬಿನ್ಸ (1932).*

*"ವಿವಿಧ ಸಮಾಜಗಳು ಕೊರತೆಯಲ್ಲಿರುವ ಸಂಪನ್ಮೂಲಗಳನ್ನು ಬಳಸಿ ಉಪಯುಕ್ತ ಸರಕುಗಳನ್ನು ಉತ್ಪಾದಿಸಿ ಅವುಗಳನ್ನು ಜನರಲ್ಲಿ ಹೇಗೆ ವಿತರಿಸುತ್ತವೆ ಎಂಬುದನ್ನು ಅಭ್ಯಸಿಸುವ ವಿಷಯವೇ ಅರ್ಥಶಾಸ್ತ್ರ" – ಪಾಲ್.ಎ. ಸಾಮ್ಯೂಯೆಲಸನ್ (1948).*

© KTBS
Not to be republished

'ಅರ್ಥಶಾಸ್ತ್ರ'ವು ಎಕನಾಮಿಕ್ಸ್ ಎಂಬ ಇಂಗ್ಲಿಷ ಪದದ ಕನ್ನಡ ರೂಪವಾಗಿದ್ದು, ಆ ಪದವು ಗ್ರೀಕ್ ಪದ 'ಓಕೋಸ್' ಅಂದರೆ 'ಕುಟುಂಬ' ಮತ್ತು 'ನೊಮೊಸ್' ಅಂದರೆ 'ನಿರ್ವಹಣೆ' ಎಂಬ ಪದಗಳಿಂದ ಬಂದಿದೆ. ಆದುದರಿಂದ, ಅರ್ಥಶಾಸ್ತ್ರವು "ಕುಟುಂಬ ನಿರ್ವಹಣೆ" ಎಂಬುದನ್ನು ಸೂಚಿಸುತ್ತದೆ ಮತ್ತು ಅದು ಕುಟುಂಬದ ಮೂಲ ಅಗತ್ಯಗಳನ್ನು ತೃಪ್ತಿಪಡಿಸಲು ಮತ್ತು ಕುಟುಂಬದ ಪ್ರಗತಿಗೆ ಲಭ್ಯವಿದ್ದ ಸಂಪನ್ಮೂಲಗಳನ್ನು ಉಪಯೋಗಿಸುವುದನ್ನು ಒಳಗೊಂಡಿದೆ. ಇದೇ ನಿಯಮವನ್ನು ಇಡೀ ಸಮಾಜಕ್ಕೆ ಅನ್ವಯಿಸಿದಾಗ, ಜನರ ಮೂಲ ಅಗತ್ಯಗಳನ್ನು ತೃಪ್ತಿಪಡಿಸಲು ಮತ್ತು ಆರ್ಥಿಕ ಸಮೃದ್ಧಿಗೆ ಸಮಾಜವು ಹೇಗೆ ತನ್ನ ಸಂಪನ್ಮೂಲಗಳನ್ನು ಉಪಯೋಗಿಸುತ್ತದೆ ಎಂಬುದು ಅರ್ಥಶಾಸ್ತ್ರದ ಮೂಲ ಅಧ್ಯಯನ ವಿಷಯವಾಗುತ್ತದೆ. ವಿವಿಧ ಆರ್ಥಿಕ ಚಟುವಟಿಕೆಗಳ ಸಂಘಟನೆಯನ್ನು 'ಆರ್ಥಿಕ ವ್ಯವಸ್ಥೆ' ಎನ್ನಲಾಗುತ್ತದೆ.

**ಅರ್ಥಶಾಸ್ತ್ರದ ಅಧ್ಯಯನದ ಮಹತ್ವ :**

ಅರ್ಥಶಾಸ್ತ್ರ ಅಧ್ಯಯನವು ವ್ಯಕ್ತಿಗೆ ಹಾಗೂ ಸಮಾಜಕ್ಕೆ ಅತ್ಯಂತ ಮಹತ್ವದ್ದಾಗಿದೆ. ಅರ್ಥಶಾಸ್ತ್ರದ ಅಧ್ಯಯನದಿಂದ ಈ ಕೆಳಗಿನ ಕಾರ್ಯಗಳಿಗೆ ಸಹಾಯಕವಾಗುವುದು.

- ಅಪರಿಮಿತ ಬಯಕೆಗಳ ಸನ್ನಿವೇಶದಲ್ಲಿ ಸಂಪನ್ಮೂಲಗಳ ಕೊರತೆಯನ್ನು ಪರಿಗಣಿಸುವುದು;
- ಸಂಪನ್ಮೂಲಗಳ ಉಪಯೋಗದಲ್ಲಿ ಆದ್ಯತೆ ನೀಡಿ ಅವುಗಳಲ್ಲಿ ಯಾವುದು ಅಧಿಕ ಮಹತ್ವವಾದುದು ಮತ್ತು ಯಾವುದು ಕಡಿಮೆ ಮಹತ್ವವಾದುದು ಎಂದು ಗುರುತಿಸುವುದು;
- ಸಂಪನ್ಮೂಲಗಳ ಉಪಯೋಗದಲ್ಲಿ ಮಿತವ್ಯಯ (ಉಳಿತಾಯ) ಮಾಡುವುದು ಮತ್ತು ಸಂಪನ್ಮೂಲ ಗಳನ್ನು ಉಪಯೋಗಿಸುವಲ್ಲಿ ಅಧಿಕ ದಕ್ಷತೆಯ ಮಾರ್ಗಗಳನ್ನು ಹುಡುಕುವುದು;
- ಪ್ರತಿ ವ್ಯಕ್ತಿಯು ತನ್ನ ಕುಟುಂಬ ಮತ್ತು ರಾಷ್ಟ್ರದ ಏಳ್ಗೆಗಾಗಿ ಅರ್ಥಿಕ ಚಟುವಟಿಕೆಯಲ್ಲಿ ತೊಡಗುವುದು;
- ಸರ್ಕಾರದ ಆದಾಯಕ್ಕೆ ಕೊಡುಗೆಯನ್ನು ನೀಡುವುದು ಮತ್ತು ಅದಕ್ಕೆ ಅಭಿವೃದ್ಧಿಪರ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳುವಲ್ಲಿ ಸಹಾಯ ಮಾಡುವುದು;
- ರಾಷ್ಟ್ರದಲ್ಲಿನ ಸಾಮಾಜಿಕ-ಆರ್ಥಿಕ ಸಮಸ್ಯೆಗಳಾದಂತಹ ಬಡತನ, ನಿರುದ್ಯೋಗ, ಹಣದುಬ್ಬರ, ಮುಂತಾದವುಗಳನ್ನು ತಿಳಿಯಲು ಮತ್ತು ಅವುಗಳಿಗೆ ಪರಿಹಾರವನ್ನು ಒದಗಿಸಲು ಪ್ರಯತ್ನಿಸಲು;
- ರಾಷ್ಟ್ರದ ನಿರೀಕ್ಷಿತ ಪ್ರಗತಿ ಮತ್ತು ಅಭಿವೃದ್ಧಿಗೆ ಉತ್ತಮ ನೀತಿಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸಲು ಉತ್ತಮ ಮಾರ್ಗಗಳನ್ನು ಸೂಚಿಸಲು.

| ಅರ್ಥಶಾಸ್ತ್ರ ಅಧ್ಯಯನವು ಜ್ಞಾನವನ್ನು ಹೆಚ್ಚಿಸುವುದಲ್ಲದೇ ಲಾಭದಾಯಕವು ಆಗಿದೆ-ಎ.ಸಿ.ಪೀಗೂ |
|---|

**ಆರ್ಥಿಕ ಚಟುವಟಿಕೆಗಳು**

ನಾವು ಪ್ರತಿನಿತ್ಯ ಉಪಯೋಗಿಸುವ ಹಲವಾರು ಸರಕು ಮತ್ತು ಸೇವೆಗಳ ಪೂರೈಕೆಯು ಮಿತವಾಗಿದೆ ಮತ್ತು ಅವುಗಳು ಉಚಿತವಾಗಿ ದೊರೆಯುವುದಿಲ್ಲ. ಅವುಗಳನ್ನು ಕೊಳ್ಳಲು ನಾವು ಹಣವನ್ನು ನೀಡಬೇಕು. ಇಂಥ ಸರಕು ಮತ್ತು ಸೇವೆಗಳನ್ನು ಆರ್ಥಿಕ ಸರಕುಗಳು ಮತ್ತು ಸೇವೆಗಳು ಎನ್ನುತ್ತೇವೆ. ನಾವು ನಮ್ಮ ಕೌಶಲ್ಯವನ್ನು ಮತ್ತು ಶ್ರಮವನ್ನು ಉಪಯೋಗಿಸಿ ಹಣವನ್ನು ಗಳಿಸುತ್ತೇವೆ ಹಾಗೂ ಆ ಹಣದಿಂದ ನಮ್ಮ ಬಯಕೆಗಳನ್ನು ತೃಪ್ತಿ ಪಡಿಸಿಕೊಳ್ಳುತ್ತೇವೆ. ನಮ್ಮ ಬಯಕೆಗಳನ್ನು ತೃಪ್ತಿಪಡಿಸಲು, ಹಣ ಮತ್ತು ಸಂಪತ್ತನ್ನು ಗಳಿಸುವುದಕ್ಕೋಸ್ಕರ ನಾವು ಕೈಗೊಳ್ಳುವ ವಿವಿಧ ಚಟುವಟಿಕೆಗಳನ್ನು ಆರ್ಥಿಕ ಚಟುವಟಿಕೆಗಳು ಎನ್ನುತ್ತೇವೆ. ಈ ಆರ್ಥಿಕ ಚಟುವಟಿಕೆಗಳನ್ನು ನಾಲ್ಕು ವಿಧಗಳಲ್ಲಿ ವರ್ಗೀಕರಿಸಬಹುದು.

©KTBS Not to be republished

i. **ಉತ್ಪಾದನೆ:** ಸರಕುಗಳು ಮತ್ತು ಸೇವೆಗಳನ್ನು ಉತ್ಪಾದಿಸುವ ಕಾರ್ಯಗಳು ಉತ್ಪಾದಕ ಚಟುವಟಿಕೆಗಳು. ಉದಾ: ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ಗಣಿಗಾರಿಕೆ, ಅರಣ್ಯ ಅಭಿವೃದ್ಧಿ, ವಿವಿಧ ಪ್ರಕಾರದ ಕೈಗಾರಿಕೆಗಳು, ಸಾರಿಗೆ, ಸಂಪರ್ಕ, ಇತ್ಯಾದಿ.

ii. **ಅನುಭೋಗ:** ಸರಕುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸುವುದು ಮಾನವರ ಅನುಭೋಗದ ಸಲುವಾಗಿ. ಮಾನವನು ತನ್ನ ಬಯಕೆಗಳನ್ನು ತೃಪ್ತಿಪಡಿಸಲು ಸರಕುಗಳನ್ನು ಮತ್ತು ಸೇವೆಗಳನ್ನು ಕೊಳ್ಳುತ್ತಾನೆ. ಈ ಎಲ್ಲ ಚಟುವಟಿಕೆಗಳನ್ನು ಅನುಭೋಗ ಚಟುವಟಿಕೆಗಳು ಎಂದು ಕರೆಯಲಾಗುತ್ತದೆ.

iii. **ವಿನಿಮಯ:** ಉತ್ಪಾದಕರು ಉತ್ಪಾದಿಸಿದ ಸರಕು ಮತ್ತು ಸೇವೆಗಳನ್ನು ಅನುಭೋಗಿಗಳಿಗೆ ತಲುಪಿಸಲು ಮಾರುಕಟ್ಟೆ ವ್ಯವಸ್ಥೆ ಇರುತ್ತದೆ. ಈ ವ್ಯವಸ್ಥೆಯಲ್ಲಿ ಸರಕುಗಳ ಸಂಗ್ರಹ, ಸಾರಿಗೆ, ಮಾರಾಟ ಮತ್ತು ಕೊಳ್ಳುವಿಕೆ ಕಾರ್ಯಗಳು ಇರುತ್ತವೆ.

iv. **ಹಂಚಿಕೆ :** ಸರಕುಗಳ ಮತ್ತು ಸೇವೆಗಳ ಉತ್ಪಾದನೆಯಿಂದ ಪಡೆದ ಆದಾಯವನ್ನು ಉತ್ಪಾದನೆಗೆ ಸಹಕಾರ ನೀಡಿದ ಉತ್ಪಾದನಾಂಗಗಳಿಗೆ (ಭೂಮಿ, ಶ್ರಮ, ಬಂಡವಾಳ ಮತ್ತು ಉದ್ಯಮಶೀಲತೆ ಅಥವಾ ಸಂಘಟನೆ) ಹಂಚಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಉತ್ಪಾದನಾಂಗಗಳ ಬೆಲೆಗಳನ್ನು ನಿರ್ಧರಿಸುವ ಕಾರ್ಯಗಳನ್ನು ಒಳಗೊಂಡಿರುತ್ತದೆ. ಸೃಷ್ಟಿಯಾದ ಆದಾಯವನ್ನು ಎಲ್ಲ ಉತ್ಪಾದನಾಂಗಗಳಿಗೆ ಯೋಗ್ಯ ರೀತಿಯಲ್ಲಿ ಹಂಚಲು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

ಕೆಲವೊಮ್ಮೆ ಹಲವಾರು ಚಟುವಟಿಕೆಗಳು ಆರ್ಥಿಕವಲ್ಲದಿದ್ದರೂ ನಂತರದಲ್ಲಿ ಅವುಗಳು ಆರ್ಥಿಕ ಚಟುವಟಿಕೆಗಳು ಆಗಬಹುದು. ಉದಾಹರಣೆಗೆ: ಒಬ್ಬ ಶಿಕ್ಷಕ ವಿದ್ಯಾರ್ಥಿಗಳಿಗೆ ಮನೆಯಲ್ಲಿ ಉಚಿತ ಪಾಠ ನೀಡಿದರೆ ಅದು ಆರ್ಥಿಕ ಚಟುವಟಿಕೆ ಎನಿಸುವುದಿಲ್ಲ. ಆದರೆ, ಅದೇ ಶಿಕ್ಷಕ ಪಾಠ ಹೇಳಲು ಶುಲ್ಕವನ್ನು ವಿಧಿಸಿದರೆ ಅದು ಆರ್ಥಿಕ ಚಟುವಟಿಕೆ ಎನಿಸುತ್ತದೆ.

### ಸೂಕ್ಷ್ಮ ಮತ್ತು ವಿಶಾಲಾತ್ಮಕ ಅರ್ಥಶಾಸ್ತ್ರ

ಅರ್ಥಶಾಸ್ತ್ರವು ಮಾನವನ ಆರ್ಥಿಕ ಚಟುವಟಿಕೆಗಳನ್ನು ಅಧ್ಯಯನ ಮಾಡುವುದರಿಂದ ಅದು ಬಹಳ ವಿಶಾಲವಾದ ವಿಷಯವಾಗಿದೆ. ಆದುದರಿಂದ, ವಿವಿಧ ಆರ್ಥಿಕ ಚಟುವಟಿಕೆಗಳನ್ನು ಅಧ್ಯಯನ ಮಾಡಲು, ಅದನ್ನು 'ಸೂಕ್ಷ್ಮ ಅರ್ಥಶಾಸ್ತ್ರ (ಮೈಕ್ರೋ)' ಮತ್ತು 'ವಿಶಾಲಾತ್ಮಕ ಅರ್ಥಶಾಸ್ತ್ರ (ಮ್ಯಾಕ್ರೋ)' ಎಂದು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ.

**ಸೂಕ್ಷ್ಮ ಅರ್ಥಶಾಸ್ತ್ರ :** ಸೂಕ್ಷ್ಮ (ಮೈಕ್ರೋ) ಎಂದರೆ ಅತ್ಯಂತ ಚಿಕ್ಕದು ಎಂದಾಗುತ್ತದೆ. ಸೂಕ್ಷ್ಮ ಅರ್ಥಶಾಸ್ತ್ರವು ಅತ್ಯಂತ ಚಿಕ್ಕ ಘಟಕಗಳ ಆರ್ಥಿಕ ಚಟುವಟಿಕೆಗಳ ಅಧ್ಯಯನವನ್ನು ಮಾಡುತ್ತದೆ. ನೀವು ಮೊದಲು ಕಲಿತಂತೆ, ಅರ್ಥಶಾಸ್ತ್ರವು ಸರಕುಗಳನ್ನು ಮತ್ತು ಸೇವೆಗಳನ್ನು ಉಪಯೋಗಿಸುವ ಕುರಿತಾದ ನಿರ್ಣಯಗಳನ್ನು ಕೈಗೊಳ್ಳುವುದನ್ನು ಒಳಗೊಂಡಿದೆ. ಸಮಾಜದ ಅತಿ ಚಿಕ್ಕ ಘಟಕಗಳಾದಂತಹ ವ್ಯಕ್ತಿಗಳು, ಕುಟುಂಬಗಳು ಮತ್ತು ವ್ಯವಹಾರ ಸಂಸ್ಥೆಗಳ ಸಂಪನ್ಮೂಲಗಳ ಉಪಯೋಗದ ನಿರ್ಧಾರ ಕೈಗೊಳ್ಳುವಿಕೆಯ ಅಧ್ಯಯನವನ್ನು ಸೂಕ್ಷ್ಮ ಅರ್ಥಶಾಸ್ತ್ರ ಮಾಡುತ್ತದೆ. ಅಂತಹ ಕೆಲವು ನಿರ್ಧಾರಗಳೆಂದರೆ –

(1) ನಿಮ್ಮ ಬಯಕೆಗಳನ್ನು ತೃಪ್ತಿ ಪಡಿಸಲು ನೀವು ವಿವಿಧ ಸರಕುಗಳನ್ನು ಮತ್ತು ಸೇವೆಗಳನ್ನು ಖರೀದಿಸಬೇಕಾಗುತ್ತದೆ. ಯಾವ ಬಯಕೆಯನ್ನು ನೀವು ತೃಪ್ತಿ ಪಡಿಸುವಿರಿ? ನಿರ್ದಿಷ್ಟ ಸರಕು ಅಥವಾ ಸೇವೆಯನ್ನು ಪಡೆಯಲು ಎಷ್ಟು ಬೆಲೆಯನ್ನು ನೀವು ಕೊಡಲು ಇಚ್ಛಿಸುತ್ತೀರಿ? ನೀವು ಎಷ್ಟು ಘಂಟೆಗಳ ಅವಧಿಗೆ ಮತ್ತು ಎಲ್ಲಿ ಕೆಲಸ ಮಾಡಲು ಸಿದ್ಧರಿರುವಿರಿ? ಇತ್ಯಾದಿಗಳ ನಿರ್ಧಾರಗಳನ್ನು

© KTBS Not to be republished

ಕೈಗೊಳ್ಳಬೇಕಾಗುತ್ತದೆ. ಒಬ್ಬ ವ್ಯಕ್ತಿಯು ಅನುಭೋಗದಿಂದ ಗರಿಷ್ಠ ತೃಪ್ತಿ ಪಡೆಯಲು ಈ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

(2) ಒಂದು ಉದ್ಯಮ ಸಂಸ್ಥೆಯು ಸರಕುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸುವ ಒಂದು ಉತ್ಪಾದನಾ ಘಟಕವಾಗಿದ್ದು, ಅದು ಉತ್ಪಾದನೆಯ ಪ್ರಮಾಣವನ್ನು ಮತ್ತು ಸರಕು ಅಥವಾ ಸೇವೆಯನ್ನು ಮಾರಾಟ ಮಾಡಲು ಬೆಲೆಯನ್ನು ನಿರ್ಧರಿಸಬೇಕಾಗುತ್ತದೆ. ಕನಿಷ್ಠ ವೆಚ್ಚದಲ್ಲಿ ಉತ್ಪಾದನೆಯನ್ನು ಮಾಡಲು ಉತ್ಪಾದನಾಂಗಗಳ ಮಿಶ್ರಣವನ್ನು ಅದು ನಿರ್ಧರಿಸಬೇಕಾಗುತ್ತದೆ.

(3) ಮಾರುಕಟ್ಟೆಯಲ್ಲಿ ಬೆಲೆಯು ಕೊಳ್ಳುವವರ ಮತ್ತು ಮಾರುವವರ ಪರಸ್ಪರ ಸಂಬಂಧದಿಂದ ನಿರ್ಧಾರವಾಗುತ್ತದೆ. ಅವರು ಹೇಗೆ ಪರಸ್ಪರ ವ್ಯವಹರಿಸುತ್ತಾರೆ? ಯಾವ ಆಧಾರದ ಮೇಲೆ ಪರಸ್ಪರ ಒಪ್ಪಿಗೆಯಾಗುವ ಬೆಲೆಯನ್ನು ನಿರ್ಧರಿಸುತ್ತಾರೆ? ಎಂಬುದು ಕೂಡ ಸೂಕ್ಷ್ಮ ಅರ್ಥಶಾಸ್ತ್ರದ ವಿಷಯ ವಸ್ತುವಾಗಿದೆ.

**ವಿಶಾಲಾತ್ಮಕ ಅರ್ಥಶಾಸ್ತ್ರ :** ವಿಶಾಲಾತ್ಮಕ (ಮ್ಯಾಕ್ರೋ) ಎಂಬುದು ಒಟ್ಟು ಅಥವಾ ದೊಡ್ಡದು ಎಂದರ್ಥವಾಗುತ್ತದೆ. ವ್ಯಕ್ತಿಗೆ ಹೋಲಿಸಿದಾಗ ಸಮಾಜ ಅಥವಾ ರಾಷ್ಟ್ರ ಅಥವಾ ಅರ್ಥವ್ಯವಸ್ಥೆಯು ಅತ್ಯಂತ ಬೃಹತ್ತಾದುದು. ಕೆಲವು ನಿರ್ಧಾರಗಳನ್ನು ಅರ್ಥವ್ಯವಸ್ಥೆಯ ಸಮಗ್ರ ಮಟ್ಟದಲ್ಲಿ ಕೈಗೊಳ್ಳಬೇಕಾಗುತ್ತದೆ. ಇಡೀ ಆರ್ಥಿಕ ವ್ಯವಸ್ಥೆಯ ಮಟ್ಟದಲ್ಲಿ ತೆಗೆದುಕೊಂಡ ಆರ್ಥಿಕ ನಿರ್ಧಾರಗಳು ವಿಶಾಲಾತ್ಮಕ ಅರ್ಥಶಾಸ್ತ್ರದ ವಿಷಯ ವಸ್ತುವಾಗಿವೆ. ಇಡೀ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭಾವ ಉಂಟು ಮಾಡುವಂತಹ ಆರ್ಥಿಕ ನಿರ್ಧಾರಗಳಾದಂತಹ ತೆರಿಗೆಗಳ ಸಂಗ್ರಹ, ಸಾರ್ವಜನಿಕ ಸರಕುಗಳು ಹಾಗೂ ಕಲ್ಯಾಣ ಪರ ಚಟುವಟಿಕೆಗಳ ಮೇಲಿನ ವೆಚ್ಚ, ಹಣದುಬ್ಬರದ ನಿಯಂತ್ರಣ, ಆರ್ಥಿಕ ಪ್ರಗತಿಗೆ ಉತ್ತೇಜನ, ಇತ್ಯಾದಿಗಳು ವಿಶಾಲಾತ್ಮಕ ಅರ್ಥಶಾಸ್ತ್ರದ ವ್ಯಾಪ್ತಿಯಲ್ಲಿ ಬರುತ್ತವೆ. ಸಾಮಾನ್ಯವಾಗಿ ಅಂತಹ ನಿರ್ಧಾರಗಳನ್ನು ಸರ್ಕಾರವು ತೆಗೆದುಕೊಳ್ಳುತ್ತದೆ.

ಸೂಕ್ಷ್ಮ ಅರ್ಥಶಾಸ್ತ್ರವು ಒಬ್ಬ ಕೊಳ್ಳುವವ ಮತ್ತು ಮಾರುವವನಾಗಿ ಒಬ್ಬ ವ್ಯಕ್ತಿಯ ನಡುವಳಿಕೆಗೆ ಸಂಬಂಧಿಸಿದುದು ಆಗಿದೆ. ಒಬ್ಬ ಕೊಳ್ಳುವವನಾಗಿ, ವ್ಯಕ್ತಿಯು ಸರಕುಗಳು ಮತ್ತು ಸೇವೆಗಳ ಮೇಲೆ ಮಾಡುವ ವೆಚ್ಚವು ಆತನ/ಅವಳ ಅನುಭೋಗದ ವೆಚ್ಚವಾಗಿರುತ್ತದೆ. ಎಲ್ಲ ವ್ಯಕ್ತಿಗಳ ಅನುಭೋಗ ವೆಚ್ಚವನ್ನು ಒಟ್ಟುಗೂಡಿಸಿದಾಗ ನಮಗೆ ಒಟ್ಟು ಅನುಭೋಗಿ ವೆಚ್ಚ ದೊರಕುತ್ತದೆ. ಅದೇ ರೀತಿ ಎಲ್ಲ ವ್ಯಕ್ತಿಗಳ ಆದಾಯವನ್ನು ಒಟ್ಟುಗೂಡಿಸಿದಾಗ ನಮಗೆ ಒಟ್ಟು ಆದಾಯ ಅಥವಾ ರಾಷ್ಟ್ರೀಯ ಆದಾಯ ದೊರಕುತ್ತದೆ. ಈ ಸಮಗ್ರ ಅಂಶಗಳ –ರಾಷ್ಟ್ರೀಯ ಆದಾಯ, ರಾಷ್ಟ್ರದ ಒಟ್ಟು ಅನುಭೋಗಿ ವೆಚ್ಚ, ಇತ್ಯಾದಿಗಳು ವಿಶಾಲಾತ್ಮಕ ಅರ್ಥಶಾಸ್ತ್ರದಲ್ಲಿ ಬರುತ್ತವೆ. ಹಣದುಬ್ಬರ ಅಥವಾ ಬೆಲೆ ಹೆಚ್ಚಳವು ವಿಶಾಲಾತ್ಮಕ ಅರ್ಥಶಾಸ್ತ್ರದ ಮತ್ತೊಂದು ಅಂಗವಾಗಿದೆ. ಅದರ ಕಾರಣ, ಪರಿಣಾಮಗಳು ಮತ್ತು ಅದನ್ನು ನಿಯಂತ್ರಿಸುವ ಸಾಧನಗಳನ್ನು ವಿಶಾಲಾತ್ಮಕ ಅರ್ಥಶಾಸ್ತ್ರ ಅಧ್ಯಯನ ಮಾಡುತ್ತದೆ. ಅದೇ ರೀತಿ ನಿರುದ್ಯೋಗ, ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿ, ಇತ್ಯಾದಿಗಳು ಇಡೀ ರಾಷ್ಟ್ರವನ್ನು ಪರಿಣಮಿಸುವುದರಿಂದ ಅವು ಕೂಡ ವಿಶಾಲಾತ್ಮಕ ಅರ್ಥಶಾಸ್ತ್ರದ ಭಾಗವಾಗಿವೆ. ಆದಾಗ್ಯೂ ಎರಡೂ ವಿಭಾಗಗಳು ಮಹತ್ವವಾಗಿವೆ.

**ನಿಮಗಿದು ತಿಳಿದಿರಲಿ.**

ಸೂಕ್ಷ್ಮ ಅರ್ಥಶಾಸ್ತ್ರವು ಅರಣ್ಯದಲ್ಲಿನ ಒಂದು ಮರದ ಅಧ್ಯಯನ ಮಾಡಿದರೆ ವಿಶಾಲಾತ್ಮಕ ಅರ್ಥಶಾಸ್ತ್ರವು ಇಡೀ ಅರಣ್ಯದ ಕುರಿತು ಅಧ್ಯಯನ ಮಾಡುತ್ತದೆ; ಸೂಕ್ಷ್ಮ ಅರ್ಥಶಾಸ್ತ್ರವು ಆರ್ಥಿಕ ವ್ಯವಸ್ಥೆಯ ಕ್ರಿಮಿಯ ನೋಟವನ್ನು ಒದಗಿಸಿದರೆ ವಿಶಾಲಾತ್ಮಕ ಅರ್ಥಶಾಸ್ತ್ರವು ಆರ್ಥಿಕ ವ್ಯವಸ್ಥೆಯ ಪಕ್ಷಿ ನೋಟವನ್ನು ಒದಗಿಸುತ್ತದೆ.

©KTBS Not to be republished

## ಮೂಲ ಆರ್ಥಿಕ ಸಮಸ್ಯೆಗಳು

ಅರ್ಥಶಾಸ್ತ್ರದಲ್ಲಿ ಸಮಸ್ಯೆಗಳು ಸಂಪನ್ಮೂಲಗಳ ಕೊರತೆಯಿಂದ ಉಂಟಾಗುತ್ತವೆ ಹಾಗೂ ಅವು ಸೂಕ್ತ ರೀತಿಯ ಆಯ್ಕೆಗಳನ್ನು ಮಾಡಲು ಒತ್ತಡ ನೀಡುತ್ತವೆ. ಇದು ಸೂಕ್ಷ್ಮ ಮತ್ತು ವಿಶಾಲಾತ್ಮಕ ಮಟ್ಟದ ಎರಡರಲ್ಲೂ ಇರುತ್ತದೆ. ಈ ನಿಟ್ಟಿನಲ್ಲಿ, ಅರ್ಥಶಾಸ್ತ್ರವು ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಲು ಪ್ರಯತ್ನಿಸುತ್ತದೆ.

i. **ಏನನ್ನು ಉತ್ಪಾದಿಸಬೇಕು?** ಒಬ್ಬ ವ್ಯಕ್ತಿ ಅಥವಾ ಒಂದು ಸಮಾಜವು ಯಾವ ಸರಕುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸಬೇಕು ಎಂಬುದನ್ನು ನಿರ್ಣಯಿಸಬೇಕಾಗುತ್ತದೆ. ಹೆಚ್ಚಿನ ಪ್ರಮಾಣದ ಆಹಾರ ಧಾನ್ಯಗಳು ಅಥವಾ ಶಸ್ತ್ರಾಸ್ತ್ರಗಳೋ? ಕೃಷಿ ಸರಕುಗಳೋ ಅಥವಾ ಕೈಗಾರಿಕಾ ಸರಕುಗಳೋ? ಶಿಕ್ಷಣವೋ ಅಥವಾ ಆರೋಗ್ಯವೋ? ಅನುಭೋಗಿ ಸರಕುಗಳನ್ನು ಉತ್ಪಾದಿಸಬೇಕಾ ಅಥವಾ ಯಂತ್ರೋಪಕರಣಗಳನ್ನು ಉತ್ಪಾದಿಸಬೇಕಾ? ಸರಕುಗಳ ಉತ್ಪಾದನೆಯ ವಿಧ ಮತ್ತು ಪ್ರಮಾಣವು ಒಂದು ಕಡೆ ಸಂಪನ್ಮೂಲಗಳ ಲಭ್ಯತೆ ಮತ್ತು ಇನ್ನೊಂದು ಕಡೆ ಜನರ ಅವಶ್ಯಕತೆಗಳ ಮೇಲೆ ಅವಲಂಬಿತವಾಗಿದೆ.

ii. **ಹೇಗೆ ಉತ್ಪಾದಿಸಬೇಕು?** ನಿರ್ಧರಿತ ಸರಕನ್ನು ಉತ್ಪಾದಿಸಲು ಹಲವಾರು ಮಾರ್ಗಗಳಿವೆ. ನಿಶ್ಚಿತ ಪ್ರಮಾಣದ ಸರಕು ಅಥವಾ ಸೇವೆಯನ್ನು ಉತ್ಪಾದಿಸಲು ಉತ್ಪಾದನಾಂಗಗಳ ಮತ್ತು ಸಂಪನ್ಮೂಲಗಳ ವಿವಿಧ ಸಂಯೋಜನೆಗಳನ್ನು ಬಳಸಬಹುದು. ಇದನ್ನು ಉತ್ಪಾದನಾ ತಂತ್ರಜ್ಞಾನ ಎನ್ನುತ್ತಾರೆ. ಶ್ರಮದ ಹೆಚ್ಚಿನ ಬಳಕೆಯ ತಂತ್ರಜ್ಞಾನ ಅಥವಾ (ಶ್ರಮ ಸಾಂದ್ರ ತಂತ್ರಜ್ಞಾನ) ಅಥವಾ ಬಂಡವಾಳದ ಹೆಚ್ಚಿನ ಬಳಕೆಯ ತಂತ್ರಜ್ಞಾನ (ಬಂಡವಾಳ ಸಾಂದ್ರ ತಂತ್ರಜ್ಞಾನ) ಗಳಲ್ಲಿ ಯಾವುದನ್ನು ಉಪಯೋಗಿಸಬೇಕು ಎನ್ನುವುದನ್ನು ಸಮಾಜವು ನಿರ್ಧರಿಸಬೇಕಾಗುತ್ತದೆ. ಇದು ಕನಿಷ್ಠ ಉತ್ಪಾದನಾ ವೆಚ್ಚಕ್ಕೆ ಮತ್ತು ಅಸ್ತಿತ್ವದಲ್ಲಿರುವ ಸಂಪನ್ಮೂಲಗಳ ದಕ್ಷ ಉಪಯೋಗಕ್ಕೆ ಅತ್ಯವಶವಾಗಿದೆ.

iii. **ಯಾರಿಗಾಗಿ ಉತ್ಪಾದಿಸಬೇಕು?** ಉತ್ಪಾದಿಸಿದ ಸರಕುಗಳನ್ನು ಯಾರು ಪಡೆಯುತ್ತಾರೆ ಮತ್ತು ಯಾವ ಪ್ರಮಾಣದಲ್ಲಿ ಪಡೆಯುತ್ತಾರೆ? ಇದು ಹಂಚಿಕೆಗೆ ಸಂಬಂಧಪಟ್ಟ ವಿಷಯವಾಗಿದ್ದು ಪ್ರತಿ ವ್ಯಕ್ತಿಯು ಕನಿಷ್ಠ ಪ್ರಮಾಣದ ಸರಕುಗಳನ್ನು ಮತ್ತು ಸೇವೆಗಳನ್ನು ಪಡೆಯುವಂತಿರಬೇಕು. ಉದಾಹರಣೆಗೆ; ಆಹಾರ ಲಭ್ಯತೆ, ಮೂಲ ಶಿಕ್ಷಣ ಅಥವಾ ಪ್ರಾಥಮಿಕ ಆರೋಗ್ಯ ಮುಂತಾದವುಗಳು. ಆದುದರಿಂದ ಪ್ರತಿ ಸಮಾಜವು ವಿವಿಧ ಕೊರತೆಯಲ್ಲಿರುವ ಸಂಪನ್ಮೂಲಗಳನ್ನು ಮತ್ತು ಸರಕುಗಳು ಹಾಗೂ ಸೇವೆಗಳನ್ನು ಜನರ ಬಳಕೆಗಾಗಿ ಹಂಚಿಕೆ ಮಾಡುವುದನ್ನು ನಿರ್ಣಯಿಸಬೇಕಾಗುತ್ತದೆ.

ಆದುದರಿಂದ, ಅರ್ಥಶಾಸ್ತ್ರ ಅಧ್ಯಯನವು ಸಂಪನ್ಮೂಲಗಳ ಪ್ರಚಲಿತ ಉಪಯೋಗ ಮತ್ತು ಭವಿಷ್ಯದಲ್ಲಿ ಅವುಗಳ ದಕ್ಷ ಉಪಯೋಗಕ್ಕೆ ಯೋಜನೆ ತಯಾರಿಸಲು ಸಹಾಯ ಮಾಡುತ್ತದೆ. ಸಾಮಾನ್ಯವಾಗಿ ಅರ್ಥಶಾಸ್ತ್ರಜ್ಞರು ಸರ್ಕಾರಕ್ಕೆ ಈ ವಿಷಯಗಳಿಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡುತ್ತಾರೆ. ಈ ಮೂಲಕ ವ್ಯಕ್ತಿಗಳ ಮತ್ತು ರಾಷ್ಟ್ರದ ಯೋಗಕ್ಷೇಮವನ್ನು ಸುಧಾರಿಸಬಹುದಾಗಿದೆ.

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತಪದಗಳಿಂದ ಭರ್ತಿಮಾಡಿ.**

1. 'ಅರ್ಥಶಾಸ್ತ್ರ' ಎಂಬ ಪದವು ಗ್ರೀಕ್ ಮೂಲ ಪದಗಳಾದ ______ ಮತ್ತು ______ಬಂದಿದೆ.
2. ________ ನೀಡುವ ಚಟುವಟಿಕೆಗಳನ್ನು ಮಾತ್ರ ಆರ್ಥಿಕ ಚಟುವಟಿಕೆ ಎಂದು ಕರೆಯುತ್ತೇವೆ.

©KTBS Not to be republished

3. ಸೂಕ್ಷ್ಮ ಅರ್ಥಶಾಸ್ತ್ರವು ________ ಘಟಕಗಳ ಅಧ್ಯಯನವಾಗಿದೆ.

4. ವಿಶಾಲಾತ್ಮಕ ಅರ್ಥಶಾಸ್ತ್ರವು ________ ಘಟಕಗಳ ಅಧ್ಯಯನವಾಗಿದೆ.

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಅರ್ಥಶಾಸ್ತ್ರ ಎಂದರೇನು?
2. ಕೊರತೆಯನ್ನು ವ್ಯಾಖ್ಯಾನಿಸಿ.
3. ವಿವಿಧ ಆರ್ಥಿಕ ಚಟುವಟಿಕೆಗಳನ್ನು ಪಟ್ಟಿ ಮಾಡಿ.
4. ನೀವು ಒಂದು ಪೆನ್ನು ಖರೀದಿ ಮಾಡಿದಾಗ, ಅರ್ಥಶಾಸ್ತ್ರದ ಯಾವ ಶಾಖೆಯು ನಿಮ್ಮ ನಿರ್ಣಯವನ್ನು ವಿಶ್ಲೇಷಿಸುತ್ತದೆ?
5. ಸೂಕ್ಷ್ಮ ಅರ್ಥಶಾಸ್ತ್ರ ಎಂದರೇನು?

**III. ಕೆಳಗಿನ ಪ್ರತಿಯೊಂದನ್ನು ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ**

1. ಆರ್ಥಿಕ ಚಟುವಟಿಕೆಗಳು ಯಾವುವು?
2. ನಾವು ಅರ್ಥಶಾಸ್ತ್ರದ ಅಧ್ಯಯನವನ್ನು ಏಕೆ ಮಾಡಬೇಕು?
3. ಸೂಕ್ಷ್ಮ ಮತ್ತು ವಿಶಾಲಾತ್ಮಕ ಅರ್ಥಶಾಸ್ತ್ರಗಳ ನಡುವಿನ ವ್ಯತ್ಯಾಸ ತಿಳಿಸಿರಿ.
4. ಮೂಲ ಆರ್ಥಿಕ ಸಮಸ್ಯೆಗಳು ಯಾವುವು?
5. ಸರ್ಕಾರವು ಯಾವ ಪ್ರಮುಖ ಆರ್ಥಿಕ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ?

**IV. ಸಲಹಾ ಚಟುವಟಿಕೆಗಳು.**

1. ನಿಮ್ಮ ಕುಟುಂಬದ ಸದಸ್ಯರು ಕೈಗೊಂಡಿರುವ ಆರ್ಥಿಕ ಚಟುವಟಿಕೆಗಳನ್ನು ಪಟ್ಟಿ ಮಾಡಿರಿ.
2. ನಿಮ್ಮ ಸುತ್ತಮುತ್ತ ಜನರು ತೊಡಗಿರುವ ಆರ್ಥಿಕ ಚಟುವಟಿಕೆಗಳನ್ನು ಪಟ್ಟಿ ಮಾಡಿರಿ.
3. ನೀವು ಪ್ರತಿನಿತ್ಯ ಅನುಭೋಗಿಸುವ ಸರಕುಗಳನ್ನು ಪಟ್ಟಿ ಮಾಡಿರಿ.
4. ರೈತರು ಯಾವ ಬೆಳೆಗಳನ್ನು ಬೆಳೆಯಬೇಕು ಮತ್ತು ಅವುಗಳನ್ನು ಬೆಳೆಯಲು ಉಪಯೋಗಿಸುವ ವಿವಿಧ ಉತ್ಪಾದನಾಂಗಗಳ ಬಳಕೆ ಕುರಿತಾದ ನಿರ್ಣಯ ಹೇಗೆ ಕೈಗೊಳ್ಳುತ್ತಾರೆ ಎಂಬುದನ್ನು ಅವಲೋಕಿಸಿ.
5. ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರು ಅರ್ಥಶಾಸ್ತ್ರವನ್ನು ಅಳವಡಿಸಿಕೊಳ್ಳುತ್ತಾರೆಯೇ? ಒಂದು ಚಿಕ್ಕ ಸಂದರ್ಶನವನ್ನು ನಡೆಸಿರಿ.

*****

©KTBS Not to be republished

## ಅಧ್ಯಾಯ – 2

# ಅರ್ಥವ್ಯವಸ್ಥೆಯ ಅರ್ಥ ಮತ್ತು ಪ್ರಕಾರಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಅರ್ಥವ್ಯವಸ್ಥೆಯ ಅರ್ಥ ಮತ್ತು ಪ್ರಕಾರಗಳು.*
- *ಆರ್ಥಿಕ ವ್ಯವಸ್ಥೆಯ ವಿಧಗಳು ಮತ್ತು ಅವುಗಳ ಗುಣ–ದೋಷಗಳು.*
- *ಭಾರತದ ಆರ್ಥಿಕ ರಚನೆಯ ಲಕ್ಷಣಗಳು.*
- *ಭಾರತದಲ್ಲಿ ಸಾರ್ವಜನಿಕ ವಲಯದ ಕಾರ್ಯಕ್ಷಮತೆ.*

ಅರ್ಥ ವ್ಯವಸ್ಥೆಯು ಸಮಾಜದಲ್ಲಿನ ಆರ್ಥಿಕ ಚಟುವಟಿಕೆಗಳ ಸಂಘಟನೆಯ ಸ್ವರೂಪವನ್ನು ತೋರಿಸುತ್ತದೆ. ನೀವು ಕಲಿತಿರುವಂತೆ, ಲಭ್ಯವಿರುವ ಕೊರತೆಯ ಸಂಪನ್ಮೂಲಗಳ ಚೌಕಟ್ಟಿನಲ್ಲಿ ಸರಕು–ಸೇವೆಗಳನ್ನು ಖರೀದಿಸಿ ಬಯಕೆಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ, ಆದಾಯ ಹೊಂದಲು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುತ್ತೀರಿ. ಅರ್ಥವ್ಯವಸ್ಥೆಯಲ್ಲಿ ಜನರು ತೊಡಗಿಕೊಂಡ ಆರ್ಥಿಕ ಚಟುವಟಿಕೆಗಳ ಸ್ವರೂಪ ಮತ್ತು ಮಟ್ಟದ ಆಧಾರದ ಮೇಲೆ, ಅವರ ಆದಾಯವು ಭಿನ್ನವಾಗಿರುತ್ತದೆ. ಕೆಲವು ಚಟುವಟಿಕೆಗಳಲ್ಲಿ (ಉದಾ: ತಂತ್ರಾಂಶ (ಸಾಫ್ಟ್‌ವೇರ್) ಅಭಿವೃದ್ಧಿ) ಆದಾಯವು ಅಧಿಕವಾಗಿರುತ್ತದೆ. ಅಲ್ಲದೇ ಮತ್ತು ತೀವ್ರವಾಗಿ ಹೆಚ್ಚಳವಾದರೆ ಕೃಷಿಯಂಥ ಚಟುವಟಿಕೆಗಳಲ್ಲಿ ಆದಾಯವು ಕಡಿಮೆ ಇದ್ದು ಮಂದಗತಿಯಲ್ಲಿ ಹೆಚ್ಚಾಗುತ್ತದೆ. ಆದುದರಿಂದ, ರಾಷ್ಟ್ರಗಳಲ್ಲಿ ಇರುವ ಚಟುವಟಿಕೆಗಳ ದೆಸೆಯಿಂದಾಗಿ, ಅವು ಹೆಚ್ಚಿನ ಆದಾಯ ಹೊಂದಿ ವೇಗವಾಗಿ ಅಥವಾ ಕಡಿಮೆ ಆದಾಯ ಹೊಂದಿ ನಿಧಾನವಾಗಿ ಬೆಳೆಯುತ್ತವೆ. ವೇಗವಾಗಿ ಬೆಳೆಯುತ್ತಿರುವ ಚಟುವಟಿಕೆಗಳನ್ನು ಹೊಂದಿರುವ ಅರ್ಥವ್ಯವಸ್ಥೆಗಳು ಉಳಿದ ರಾಷ್ಟ್ರಗಳಿಗಿಂತ ವೇಗವಾಗಿ ಬೆಳೆದು ಅಭಿವೃದ್ಧಿಯನ್ನು ಹೊಂದುತ್ತವೆ. ಸಂಪನ್ಮೂಲಗಳ ಒಡೆತನದ ಆಧಾರದ ಮೇಲೆಯೂ ಅರ್ಥವ್ಯವಸ್ಥೆಗಳನ್ನು ವಿಂಗಡಿಸಲಾಗುತ್ತದೆ. ಸಂಪನ್ಮೂಲಗಳು ಖಾಸಗಿ ಒಡೆತನ ಅಥವಾ ಸಾಮೂಹಿಕ ಒಡೆತನದಲ್ಲಿ ಇರಬಹುದು. ಅರ್ಥವ್ಯವಸ್ಥೆಗಳನ್ನು ಆಡಳಿತಾತ್ಮಕ ಘಟಕಗಳ ಆಧಾರದ ಮೇಲೆಯೂ ವಿಂಗಡಿಸಲಾಗುತ್ತದೆ. ಅಂದರೆ ಗ್ರಾಮ ಅರ್ಥವ್ಯವಸ್ಥೆ, ಜಿಲ್ಲಾ ಅರ್ಥವ್ಯವಸ್ಥೆ, ರಾಜ್ಯ ಅರ್ಥವ್ಯವಸ್ಥೆ (ಉದಾ: ಕರ್ನಾಟಕ) ಮತ್ತು ರಾಷ್ಟ್ರ ಅರ್ಥವ್ಯವಸ್ಥೆ (ಉದಾ: ಭಾರತ)ಗಳು ಇದ್ದು ಅವು ವಿವಿಧ ಮಟ್ಟದ ಅಭಿವೃದ್ಧಿ ಹೊಂದಿರಬಹುದಾಗಿದೆ. ಆದುದರಿಂದ ಅರ್ಥವ್ಯವಸ್ಥೆಯನ್ನು ಮತ್ತು ಅದರ ಅಭಿವೃದ್ಧಿ ಮಟ್ಟವನ್ನು ವೀಕ್ಷಿಸಲು ಹಲವಾರು ಮಾರ್ಗಗಳಿವೆ.

**ಅರ್ಥ :** ಮಾನವನ ಬಯಕೆಗಳನ್ನು ಈಡೇರಿಸಲು ರಚಿಸಿದ ಮಾನವ ನಿರ್ಮಿತ ಒಂದು ಸಂಘಟನೆ ಎಂದು ಅರ್ಥವ್ಯವಸ್ಥೆಯನ್ನು ವಿವರಿಸಬಹುದು. ಎ.ಜೆ.ಬ್ರೌನ್‌ರವರ ಪ್ರಕಾರ ಜನರಿಗೆ ಜೀವನೋಪಾಯ ಅವಕಾಶಗಳನ್ನು ದೊರಕಿಸಲು ನಿರ್ಮಿಸಿದ ವ್ಯವಸ್ಥೆಯು ಅರ್ಥವ್ಯವಸ್ಥೆಯಾಗಿದೆ. ಜೀವನೋಪಾಯ ಗಳಿಸಲು ವ್ಯಕ್ತಿಯು ವಿವಿಧ ಚಟುವಟಿಕೆಗಳಲ್ಲಿ ತೊಡಗಿರುತ್ತಾನೆ ಎಂಬುದನ್ನು ನೀವು ಗಮನಿಸಿರಬಹುದು. ಇದು ಸ್ಥಳದಿಂದ ಸ್ಥಳಕ್ಕೆ ಮತ್ತು ಸಮಯದಿಂದ ಸಮಯಕ್ಕೆ ಭಿನ್ನವಾಗಿರುತ್ತದೆ. ಪುರಾತನ ದಿನಗಳಲ್ಲಿ ಜೀವನೋಪಾಯದ ಮೂಲಗಳು ಸರಳವಾಗಿದ್ದವು, ನಾಗರಿಕತೆ ಬೆಳೆದಂತೆ ಅವು ಸಂಕೀರ್ಣವಾಗುತ್ತ ಸಾಗಿರುವುದನ್ನು ಗಮನಿಸಬಹುದು. ಮುಖ್ಯವಾಗಿ, ವ್ಯಕ್ತಿಯ ಜೀವನೋಪಾಯದ ಗಳಿಕೆಯು ನ್ಯಾಯಸಮ್ಮತ ಮತ್ತು ಕಾನೂನು ರೀತಿಯಲ್ಲಿ ಇರಬೇಕು. ಕಾನೂನುಬಾಹಿರವಾದ ಅಂದರೆ ದರೋಡೆ, ಅಕ್ರಮ ಕಳ್ಳಸಾಗಣೆಗಳಿಂದ



©KTBS Not to be republished

ಸ್ವಂತಕ್ಕಾಗಿ ಆದಾಯ ಗಳಿಕೆಯಾದರೂ ಸಾಮಾಜಿಕವಾಗಿ ಹಾನಿಕಾರಕವಾಗಿರುವುದರಿಂದ ಅವುಗಳನ್ನು ಆರ್ಥಿಕ ಚಟುವಟಿಕೆಗಳು ಎಂದು ಪರಿಗಣಿಸುವುದಿಲ್ಲ. ಆದ್ದರಿಂದ, ವ್ಯಕ್ತಿಯ ಮತ್ತು ಸಮಾಜದ ಯೋಗಕ್ಷೇಮವನ್ನು ಹೆಚ್ಚಿಸುವ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲಾಗುವ ಆರ್ಥಿಕ ಸಂಸ್ಥೆಗಳ ಚೌಕಟ್ಟನ್ನು ಅರ್ಥವ್ಯವಸ್ಥೆ ಎಂದು ವ್ಯಾಖ್ಯಾನಿಸಬಹುದು. ಈ ರೀತಿ ವಿವರಿಸಿದಾಗ ಅರ್ಥವ್ಯವಸ್ಥೆಯು ಕೆಳಗಿನ ಲಕ್ಷಣಗಳನ್ನು ಹೊಂದಿರುತ್ತದೆ:

1. ಒಂದು ಅರ್ಥವ್ಯವಸ್ಥೆಯು ವ್ಯಕ್ತಿಗಳು, ಆರ್ಥಿಕ ಸಂಸ್ಥೆಗಳು ಮತ್ತು ಸರ್ಕಾರ ಹಾಗೂ ಅವುಗಳ ಪರಸ್ಪರ ಸಂಬಂಧಗಳನ್ನು ಒಳಗೊಂಡಿರುತ್ತದೆ.

2. ಒಂದು ಅರ್ಥ ವ್ಯವಸ್ಥೆಯು ಕ್ರಿಯಾಶೀಲತೆ ಹೊಂದಿದ್ದು ನಿರಂತರವಾಗಿ ಬದಲಾಗುತ್ತಿರುತ್ತದೆ. ಆರ್ಥಿಕ ಸಂಸ್ಥೆಗಳು ನಿರಂತರವಾಗಿ ರಚನೆಗೊಳ್ಳುತ್ತವೆ, ನಾಶವಾಗುತ್ತವೆ ಮತ್ತು ಬದಲಾಗುತ್ತವೆ. ಉದಾಹರಣೆಗೆ, 1950ರಲ್ಲಿ ಭಾರತದ ಅಭಿವೃದ್ಧಿಗೆ ಸಾಮಾಜಿಕ–ಆರ್ಥಿಕ ಯೋಜನೆಗಳನ್ನು ರೂಪಿಸಲು ಯೋಜನಾ ಆಯೋಗವನ್ನು ರಚಿಸಲಾಯಿತು ಆದರೆ, 2015ರಲ್ಲಿ ನೀತಿ ಆಯೋಗ ಅದರ ಸ್ಥಾನದಲ್ಲಿ ಸ್ಥಾಪಿತವಾಯಿತು. ಅದರಂತೆ, 1917ರಲ್ಲಿ ಸಾಮ್ರಾಜ್ಯಶಾಹಿ (ಕಮ್ಯುನಿಸಂ) ಅರ್ಥವ್ಯವಸ್ಥೆ ಅಳವಡಿಕೆಯಾಗಿ 1989ರಲ್ಲಿ ಬಂಡವಾಳಶಾಹಿ ಅರ್ಥವ್ಯವಸ್ಥೆಯಿಂದ ಬದಲಾಯಿಸಲ್ಪಟ್ಟಿತು. ಮೊದಲು, ಸಾಟಿ ವಿನಿಮಯ ಪದ್ಧತಿಯು ಚಾಲ್ತಿಯಲ್ಲಿತ್ತು, ಆದರೆ ಇಂದು ಹಣವಿಲ್ಲದೇ ಯಾವ ವ್ಯವಹಾರವೂ ಜರುಗುವುದಿಲ್ಲ.

3. ಉತ್ಪಾದನೆ, ಅನುಭೋಗ ಮತ್ತು ಹೂಡಿಕೆಗಳು ಅರ್ಥವ್ಯವಸ್ಥೆಯ ಅತ್ಯಂತ ಪ್ರಮುಖ ಚಟುವಟಿಕೆಗಳಾಗಿವೆ.

4. ವಿವಿಧ ಅರ್ಥವ್ಯವಸ್ಥೆಗಳಲ್ಲಿ ಆರ್ಥಿಕ ಚಟುವಟಿಕೆಗಳು ನಿರಂತರ ಬದಲಾವಣೆ ಹೊಂದುತ್ತಿರುತ್ತವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕಡಿಮೆ ಆದಾಯವನ್ನು ಒದಗಿಸುವ ಪ್ರಾಥಮಿಕ (ಸಂಪನ್ಮೂಲ ಆಧಾರಿತ) ಚಟುವಟಿಕೆಗಳು ಪ್ರಮುಖವಾಗಿ ಕಂಡುಬರುತ್ತವೆ. ಆದರೆ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಅಧಿಕ ಆದಾಯವನ್ನು ಒದಗಿಸುವ ದ್ವಿತೀಯ ಮತ್ತು ತೃತೀಯ (ಉತ್ಪಾದನೆ ಮತ್ತು ಸೇವೆ ಆಧಾರಿತ) ವಲಯದ ಚಟುವಟಿಕೆಗಳು ಪ್ರಮುಖವಾಗಿರುತ್ತವೆ. ಅದರಂತೆ, ಉತ್ಪಾದನಾ ತಂತ್ರಜ್ಞಾನವು ಕೂಡ ಬದಲಾಗುತ್ತಿರುತ್ತದೆ.

5. ವ್ಯಕ್ತಿಗಳು ಉತ್ಪಾದಕರು ಮತ್ತು ಅನುಭೋಗಿಗಳೆರಡೂ ಆಗಿರುತ್ತಾರೆ. ಉತ್ಪಾದಕರಾಗಿ ಅವರು ಸರಕುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸುತ್ತಾರೆ ಮತ್ತು ಅನುಭೋಗಿಗಳಾಗಿ ಅವುಗಳನ್ನು ಸೇವಿಸುತ್ತಾರೆ. ನಾವೆಲ್ಲರೂ ಅನುಭೋಗಿಗಳೇ, ಆದರೆ ನಮ್ಮಲ್ಲಿ ಕೆಲವರು ಉತ್ಪಾದಕರೂ ಇದ್ದಾರೆ.

6. ಆಧುನಿಕ ಆರ್ಥಿಕ ವ್ಯವಸ್ಥೆಯು ಸಂಕೀರ್ಣವಾಗಿದ್ದು ವ್ಯಕ್ತಿಗಳ ಚಟುವಟಿಕೆಗಳನ್ನು ಹಲವಾರು ಸಂಸ್ಥೆಗಳು ನಿಯಂತ್ರಿಸುತ್ತವೆ. ಆದ್ದರಿಂದ, ನಾವು ಭಾರತೀಯ ರಿಸರ್ವ್ ಬ್ಯಾಂಕ್ (RBI), ಭಾರತೀಯ ಷೇರು ವಿನಿಮಯ ಮಂಡಳಿ (SEBI), ಜಾಗತಿಕ ಬ್ಯಾಂಕು, ಅಂತಾರಾಷ್ಟ್ರೀಯ ಹಣಕಾಸು ನಿಧಿ (IMF), ವಿಶ್ವ ವ್ಯಾಪಾರ ಸಂಘಟನೆ (WTO), ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಸ್ಥೆ (SAARC), ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ADB), ಇತ್ಯಾದಿ ಸಂಸ್ಥೆಗಳನ್ನು ಹೊಂದಿದ್ದು ಅವು ವ್ಯಕ್ತಿಗಳ ಮತ್ತು ರಾಷ್ಟ್ರಗಳ ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ ಮತ್ತು ಪ್ರೋತ್ಸಾಹಿಸುತ್ತವೆ.

©KTBS Not to be republished

| | | |
|---|---|---|
| RBI | : | Reserve Bank of India |
| SEBI | : | Securities Exchange Board of India, |
| IMF | : | International Monetary Fund |
| WTO | : | World Trade Organization, |
| SAARC | : | South Asian Association for Regional Co-operation |
| ADB | : | Asian Development Bank |

### ಬಂಡವಾಳಶಾಹಿ, ಸಮಾಜವಾದಿ ಮತ್ತು ಮಿಶ್ರ ಆರ್ಥಿಕ ವ್ಯವಸ್ಥೆಗಳು

ಅರ್ಥ ವ್ಯವಸ್ಥೆಗಳನ್ನು ಅವುಗಳಲ್ಲಿನ ಉತ್ಪಾದನಾ ಸಾಧನಗಳ ಒಡೆತನ ಅಲ್ಲದೆ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರದ ಮಧ್ಯಸ್ಥಿಕೆಯ ಪ್ರಮಾಣ ಮತ್ತು ನಿಯಂತ್ರಣದ ಆಧಾರದ ಮೇಲೆ ಬಂಡವಾಳಶಾಹಿ, ಸಮಾಜವಾದಿ ಮತ್ತು ಮಿಶ್ರ ಆರ್ಥಿಕ ವ್ಯವಸ್ಥೆಗಳು ಎಂದು ವಿಂಗಡಿಸಲಾಗಿದೆ. ಈ ಅರ್ಥಿಕ ವ್ಯವಸ್ಥೆಗಳ ಅರ್ಥ, ಲಕ್ಷಣಗಳು, ಗುಣ ಮತ್ತು ದೋಷಗಳನ್ನು ತಿಳಿಯೋಣ.

### ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ

ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ವ್ಯಕ್ತಿಗಳು ಉತ್ಪಾದನಾ ಸಾಧನಗಳ ಒಡೆತನ ಹೊಂದಿರುತ್ತಾರೆ ಮತ್ತು ಅವರಿಗೆ ಪ್ರಯೋಜನವಾಗುವ ರೀತಿಯಲ್ಲಿ ಅವುಗಳನ್ನು ಉಪಯೋಗಿಸಲು ಸ್ವತಂತ್ರರಾಗಿರುತ್ತಾರೆ. ಆದ್ದರಿಂದ, ಇದನ್ನು ಮುಕ್ತ ಉದ್ಯಮ ಅರ್ಥವ್ಯವಸ್ಥೆ ಎಂದು ಕರೆಯುತ್ತಾರೆ. ಇಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರ ಹಸ್ತಕ್ಷೇಪವು ಕನಿಷ್ಠ ಮಟ್ಟದ್ದಾಗಿರುತ್ತದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯ ಪ್ರಮುಖ ಲಕ್ಷಣಗಳು ಹೀಗಿವೆ:

i. **ಖಾಸಗಿ ಆಸ್ತಿ:** ಇಲ್ಲಿ ವ್ಯಕ್ತಿಗಳು ಅವರ ಇಚ್ಛೆಯ ಮೇರೆಗೆ ಆಸ್ತಿಯನ್ನು ಹೊಂದಲು, ಗಳಿಸಲು ಮತ್ತು ಮರಣದ ನಂತರ ಆಸ್ತಿಯನ್ನು ಬಿಟ್ಟು ಕೊಡಲು ಸ್ವತಂತ್ರರಾಗಿರುತ್ತಾರೆ. ಆದ್ದರಿಂದ, ಆಸ್ತಿಯನ್ನು ಅವರವರ ಸ್ವಂತ ಲಾಭಕ್ಕೆ ಉಪಯೋಗಿಸುವುದರಿಂದ, ಸಂಪತ್ತನ್ನು ಹೊಂದುವ ಮತ್ತು ಸಂಗ್ರಹಿಸುವ ಭಾವನೆಯು ಅತ್ಯಂತ ಪ್ರಬಲವಾಗಿರುತ್ತದೆ.

ii. **ಉದ್ಯಮದ ಸ್ವಾತಂತ್ರ:** ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ವ್ಯಕ್ತಿಗಳು ಯಾವುದೇ ಉದ್ಯೋಗ ಆಯ್ದುಕೊಳ್ಳಬಹುದಾಗಿದೆ. ವ್ಯವಹಾರ ಸಂಸ್ಥೆಗಳು ಸಂಪನ್ಮೂಲಗಳನ್ನು ಪಡೆಯಲು ಮತ್ತು ಅವುಗಳನ್ನು ಯಾವುದೇ ಸರಕು ಅಥವಾ ಸೇವೆಯ ಉತ್ಪಾದನೆಗೆ ಬಳಸಬಹುದು ಮತ್ತು ತಮ್ಮ ಆಯ್ಕೆಯ ಮೇರೆಗೆ ಮಾರುಕಟ್ಟೆಯಲ್ಲಿ ಅತ್ಯಧಿಕ ಲಾಭ ಪಡೆಯುವ ಹಾಗೆ ಮಾರಾಟಮಾಡಬಹುದು.

iii. **ಅನುಭೋಗಿಯ ಸಾರ್ವಭೌಮತ್ವ:** ಬಂಡವಾಳಶಾಹಿ ಅರ್ಥ ವ್ಯವಸ್ಥೆಯಲ್ಲಿ ಅನುಭೋಗಿಯೇ ಸಾರ್ವಭೌಮ ಎಂದು ಹೇಳಲಾಗುತ್ತದೆ. ತಮಗೆ ಗರಿಷ್ಠ ತೃಪ್ತಿ ನೀಡುವ ಸರಕುಗಳು ಮತ್ತು ಸೇವೆಗಳ ಮೇಲೆ ವೆಚ್ಚ ಮಾಡಲು ಅವರು ಸ್ವತಂತ್ರರಿರುವರು. ಇಲ್ಲಿ ಉತ್ಪಾದನೆಯು ಅನುಭೋಗಿಗಳ ಆಯ್ಕೆಗಳ ಆಧಾರದ ಮೇಲೆಯೇ ನಿರ್ಧಾರವಾಗುತ್ತದೆ.

iv. **ಲಾಭದ ಉದ್ದೇಶ:** ಬಂಡವಾಳಶಾಹಿ ಪದ್ಧತಿಯಲ್ಲಿ ಸಂಪತ್ತಿನ ಸ್ವಾಧೀನ ಮತ್ತು ಕ್ರೋಢಿಕರಣದ ಮೇಲೆ ನಿರ್ಬಂಧ ಇರುವುದಿಲ್ಲ. ವ್ಯಕ್ತಿಗಳು ತಮ್ಮ ಸ್ವ–ಹಿತಾಸಕ್ತಿಯಿಂದ ನಿರ್ದೇಶಿಸಲ್ಪಡುತ್ತಾರೆ.

©KTBS Not to be republished

ವಿಶೇಷವಾಗಿ, ಬಂಡವಾಳಶಾಹಿ ವರ್ಗ ಎಂದು ಕರೆಯಲ್ಪಡುವ ಉತ್ಪಾದಕರು ಕನಿಷ್ಠ ವೆಚ್ಚ ಮಾಡಿ ಗರಿಷ್ಠ ಆದಾಯ ಹಾಗೂ ಗರಿಷ್ಠ ಲಾಭ ಹೊಂದಲು ಪ್ರಯತ್ನಿಸುತ್ತಾರೆ.

v. **ಪೈಪೋಟಿ, ಮಾರುಕಟ್ಟೆಗಳು ಮತ್ತು ಬೆಲೆಗಳು:** ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರು ಲಾಭ ಗಳಿಸಲು ಮತ್ತು ತಮ್ಮ ಆಯ್ಕೆಯ ಮೇರೆಗೆ ಉದ್ಯೋಗ ಹೊಂದಲು ಸ್ವತಂತ್ರರಿರುವುದರಿಂದ ತೀವ್ರ ಪೈಪೋಟಿ ಇರುತ್ತದೆ. ಬೆಲೆ ನಿರ್ಧಾರದಲ್ಲಿ ಮಾರುಕಟ್ಟೆ ಶಕ್ತಿಗಳಾದ ಬೇಡಿಕೆ ಮತ್ತು ಪೂರೈಕೆಗಳು ಮುಕ್ತವಾಗಿ ಕಾರ್ಯನಿರ್ವಹಿಸುತ್ತವೆ.

vi. **ಸರ್ಕಾರದ ಹಸ್ತಕ್ಷೇಪ ಇಲ್ಲದಿರುವಿಕೆ:** ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಮುಕ್ತ ಮಾರುಕಟ್ಟೆ ಕಾರ್ಯಾಚರಣೆ ಮತ್ತು ಬೆಲೆ ಪದ್ಧತಿಯು ನಿಯಂತ್ರಕ ಮತ್ತು ನಿರ್ಣಾಯಕ ಆಗಿರುತ್ತವೆ. ಇಲ್ಲಿ ಸರ್ಕಾರದ ಹಸ್ತಕ್ಷೇಪ ಇರುವುದೇ ಇಲ್ಲ ಅಥವಾ ಅತಿ ಕಡಿಮೆ ಪ್ರಮಾಣದಲ್ಲಿರುತ್ತದೆ.

ಆದರೆ, ಜನರ ಕಲ್ಯಾಣವನ್ನು ಮತ್ತು ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸುವಲ್ಲಿ ಸರ್ಕಾರದ ಸಕ್ರಿಯ ಪಾತ್ರದ ಅಗತ್ಯವನ್ನು ಮನಗಾಣಲಾಗಿ ಆರ್ಥಿಕ ಚಟುವಟಿಕೆಗಳ ಮೇಲಿನ ಅದರ ನಿಯಂತ್ರಣ ಮತ್ತು ಹಸ್ತಕ್ಷೇಪ ಕ್ರಮೇಣ ಹೆಚ್ಚಾಗಿದ್ದು ಸಂಪೂರ್ಣ ಬಂಡವಾಳಶಾಹಿ ಪದ್ಧತಿಯು ಈಗ ಕಂಡುಬರುವುದಿಲ್ಲ. ಅಮೆರಿಕ ಹಾಗೂ ಯುರೋಪ್‌ನ ಬಹಳಷ್ಟು ರಾಷ್ಟ್ರಗಳು ಹೆಚ್ಚು ಬಂಡವಾಳಶಾಹಿ ವ್ಯವಸ್ಥೆಗಳಾಗಿವೆ.

## ಸಮಾಜವಾದಿ ಅರ್ಥವ್ಯವಸ್ಥೆ

ಸಮಾಜದ ಸಮಗ್ರ ಹಿತಾಸಕ್ತಿಯನ್ನು ವೃದ್ಧಿಸಲು ಸರ್ಕಾರವು ಉತ್ಪಾದಕ ಸಂಪನ್ಮೂಲಗಳ ಒಡೆತನ ಮತ್ತು ನಿಯಂತ್ರಣ ಹೊಂದಿದ್ದರೆ ಅದನ್ನು ಸಮಾಜವಾದಿ ವ್ಯವಸ್ಥೆ ಎನ್ನುತ್ತಾರೆ. ಈ ವ್ಯವಸ್ಥೆಯಲ್ಲಿ, ಎಲ್ಲರ ಹಿತಾಸಕ್ತಿಗಾಗಿ ಒಂದು ಕೇಂದ್ರ ಯೋಜನಾ ಸಂಸ್ಥೆಯು ಯೋಜನೆಗಳನ್ನು ರೂಪಿಸುತ್ತದೆ ಮತ್ತು ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ಸಮಾಜವಾದಿ ಅರ್ಥವ್ಯವಸ್ಥೆಯು ಈ ಕೆಳಗಿನ ಲಕ್ಷಣಗಳನ್ನು ಹೊಂದಿದೆ:

i. **ಉತ್ಪಾದನಾ ಸಾಧನಗಳ ಮತ್ತು ಸಂಪತ್ತಿನ ಸಾಮೂಹಿಕ ಒಡೆತನ :** ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ ಉತ್ಪಾದನಾ ಸಾಧನಗಳ ಒಡೆತನವನ್ನು ಜನರ ಪರವಾಗಿ ಸರ್ಕಾರವೇ ಹೊಂದಿರುತ್ತದೆ. ಎಲ್ಲ ಸಂಪತ್ತಿನ ಒಡೆತನವು ಸಾಮೂಹಿಕವಾಗಿರುತ್ತದೆ.

ii. **ಸಾಮಾಜಿಕ ಕಲ್ಯಾಣದ ಉದ್ದೇಶ :** ಜನರ ಕಲ್ಯಾಣನ್ನು ಹೆಚ್ಚಿಸಲು ಅವರ ಪರವಾಗಿ ಸರ್ಕಾರವು ನಿರ್ಧಾರಗಳನ್ನು ಕೈಗೊಳ್ಳುತ್ತದೆ. ಒಟ್ಟಾರೆ ಹಿತಾಸಕ್ತಿಗಳನ್ನು ಗಮನದಲ್ಲಿರಿಸಿಕೊಂಡು ಸರ್ಕಾರವು ಉತ್ಪಾದನಾ ಪ್ರಮಾಣ ಹಾಗೂ ಅವುಗಳ ಹಂಚಿಕೆಯನ್ನು ನಿರ್ಧರಿಸುತ್ತದೆ.

iii. **ಕೇಂದ್ರೀಕೃತ ಯೋಜನೆ :** ರಾಷ್ಟ್ರದ ಅಭಿವೃದ್ಧಿ ಆದ್ಯತೆಗಳನ್ನು ನಿರ್ಧರಿಸಿ ಅವುಗಳನ್ನು ಈಡೇರಿಸಲು ಅಗತ್ಯವಾದ ಸಂಪನ್ಮೂಲಗಳ ಹಂಚಿಕೆಯನ್ನು ಆರ್ಥಿಕ ಯೋಜನೆಯ ಮುಖಾಂತರ ಮಾಡಲಾಗುತ್ತದೆ. ರಾಷ್ಟ್ರದ ಅಗತ್ಯಗಳನ್ನು ಮತ್ತು ಆದ್ಯತೆಗಳನ್ನು ಗುರುತಿಸಿ, ಅವುಗಳನ್ನು ಈಡೇರಿಸಲು ಕಾರ್ಯತಂತ್ರಗಳನ್ನು ರಚಿಸಿ, ಸಮಗ್ರ ಅಭಿವೃದ್ಧಿ ಮತ್ತು ಎಲ್ಲರ ಕಲ್ಯಾಣಕ್ಕಾಗಿ ಆ ಕಾರ್ಯತಂತ್ರಗಳ ಅನುಷ್ಠಾನಕ್ಕಾಗಿ ಒಂದು ಕೇಂದ್ರೀಯ ಯೋಜನಾ ಪ್ರಾಧಿಕಾರವನ್ನು ರಚಿಸಲಾಗುತ್ತದೆ. ಆ ಸಂಸ್ಥೆಯು ರಾಷ್ಟ್ರದ ಆದ್ಯತೆಗಳನ್ನು ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಸಂಪನ್ಮೂಲಗಳ ವಿನಿಯೋಗ ಮಾಡುತ್ತದೆ. ಪ್ರಚಲಿತ ಮತ್ತು ಭವಿಷ್ಯದ

©KTBS Not to be republished

ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಉತ್ಪಾದನೆ, ಅನುಭೋಗ ಮತ್ತು ಹೂಡಿಕೆ ಕುರಿತಂತೆ ಎಲ್ಲ ಆರ್ಥಿಕ ನಿರ್ಣಯಗಳನ್ನು ಸರ್ಕಾರವು ಮಾಡುತ್ತದೆ. ಸಮಾಜವಾದಿ ಆರ್ಥ ವ್ಯವಸ್ಥೆಗಳಲ್ಲಿ ಬೆಲೆ ಮತ್ತು ಮಾರುಕಟ್ಟೆಗಳ ಪಾತ್ರವು ಸಂಕುಚಿತವಾಗಿರುತ್ತದೆ.

iv. **ಅಸಮಾನತೆಯ ಕುಗ್ಗುವಿಕೆ :** ಸಮಾಜವಾದಿ ಅರ್ಥ ವ್ಯವಸ್ಥೆಯಲ್ಲಿ ಖಾಸಗಿ ಆಸ್ತಿಯ ಸಂಗ್ರಹಕ್ಕೆ ಆಸ್ಪದ ಇಲ್ಲದಿರುವುದರಿಂದ ಆರ್ಥಿಕ ಅಸಮಾನತೆಯು ಕುಗ್ಗುತ್ತದೆ.

v. **ವರ್ಗ ಸಂಘರ್ಷ ಇಲ್ಲದಿರುವಿಕೆ :** ಸಮಾಜವಾದಿ ಸಮಾಜದಲ್ಲಿ ಎಲ್ಲರೂ ಸಹ ದುಡಿಮೆಗಾರರೇ ಆಗಿರುವುದರಿಂದ ವರ್ಗ ಸಂಘರ್ಷ ಇರುವುದಿಲ್ಲ.

ದ್ವಿತೀಯ ಜಾಗತಿಕ ಯುದ್ಧದ ನಂತರ ರಷ್ಯಾ, ಚೀನಾ ಮತ್ತು ಪಶ್ಚಿಮ ಯುರೋಪ್‌ನ ಅನೇಕ ರಾಷ್ಟ್ರಗಳು ಸಮಾಜವಾದವನ್ನು ಅಳವಡಿಸಿಕೊಂಡಿದ್ದವು. ಆದರೆ 1990ರ ಉದಾರೀಕರಣದ ಅಲೆಯು ಈ ರಾಷ್ಟ್ರಗಳ ಮೇಲೆಯೂ ಪ್ರಭಾವ ಬೀರಿ ಈಗ ಬಹುತೇಕ ಎಲ್ಲ ರಾಷ್ಟ್ರಗಳು ಖಾಸಗಿ ವಲಯದ ವಿಸ್ತಾರವನ್ನು ಹೆಚ್ಚಿಸಿಕೊಂಡಿವೆ.

## ಮಿಶ್ರ ಅರ್ಥ ವ್ಯವಸ್ಥೆ

ಮಿಶ್ರ ಅರ್ಥವ್ಯವಸ್ಥೆಯು ಬಂಡವಾಳಶಾಹಿ ಮತ್ತು ಸಮಾಜವಾದಿ ವ್ಯವಸ್ಥೆಗಳ ಉತ್ತಮ ಅಂಶಗಳನ್ನು ಒಳಗೊಂಡಿದೆ. ಇದು ಬಂಡವಾಳಶಾಹಿ ಅರ್ಥವ್ಯವಸ್ಥೆಯ ಮುಕ್ತ ಉದ್ಯಮಶೀಲತೆ ಮತ್ತು ಸಮಾಜವಾದಿ ಅರ್ಥವ್ಯವಸ್ಥೆಯ ಸರ್ಕಾರಿ ನಿಯಂತ್ರಣಗಳ ಮಿಶ್ರಣವನ್ನು ಹೊಂದಿದೆ. ಇದನ್ನು ಸಾರ್ವಜನಿಕ ಮತ್ತು ಜೊತೆ ಜೊತೆಯಲ್ಲಿ ಕಾರ್ಯನಿರ್ವಹಿಸುವ ಆರ್ಥಿಕ ಪದ್ಧತಿ ಎಂದು ವ್ಯಾಖ್ಯಾನಿಸಲಾಗಿದೆ. ಮಿಶ್ರ ಅರ್ಥ ವ್ಯವಸ್ಥೆಯ ಲಕ್ಷಣಗಳು ಕೆಳಗಿನಂತಿವೆ:

i. **ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹಅಸ್ತಿತ್ವ:** ಲಾಭದ ಉದ್ದೇಶ ಹೊಂದಿರುವ ಖಾಸಗಿ ಉದ್ಯಮಗಳು ಮತ್ತು ಕಲ್ಯಾಣಪರ ಉದ್ದೇಶ ಹೊಂದಿದ ಸರ್ಕಾರದ ಒಡೆತನದ ಉದ್ಯಮಗಳು ಜೊತೆಯಲ್ಲಿ ಅಸ್ತಿತ್ವದಲ್ಲಿರುತ್ತವೆ. ಖಾಸಗಿ ಹಾಗೂ ಸಾರ್ವಜನಿಕ ವಲಯಗಳೆರಡರ ಕಾರ್ಯಕ್ಷೇತ್ರಗಳನ್ನು ವಿಭಜಿಸಿ ನಿರ್ದಿಷ್ಟಗೊಳಿಸಲಾಗಿರುತ್ತದೆ. ಒಟ್ಟಾರೆ ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ, ಅರ್ಥವ್ಯವಸ್ಥೆಯ ಸಂಪನ್ಮೂಲಗಳ ಬಳಕೆಯನ್ನು ನಿರ್ದೇಶಿಸಲು ಸರ್ಕಾರವು ಯೋಜನಾ ಸಾಧನವನ್ನು ಬಳಸುತ್ತದೆ. ಇದು ಖಾಸಗಿ ವಲಯದ ಚಟುವಟಿಕೆಗಳನ್ನು ಲೈಸೆನ್ಸ್, ತೆರಿಗೆ, ಬೆಲೆ, ಹಣಕಾಸು ಮತ್ತು ವಿತ್ತ ನೀತಿಗಳ ಮೂಲಕ ನಿಯಂತ್ರಣಕ್ಕೆ ಒಳಪಡಿಸುತ್ತದೆ.

ii. **ವೈಯಕ್ತಿಕ ಸ್ವಾತಂತ್ರ್ಯ:** ವ್ಯಕ್ತಿಗಳು ತಮ್ಮ ಆಸಕ್ತಿಯನುಸಾರ ಉದ್ಯೋಗ ಮತ್ತು ಅನುಭೋಗವನ್ನು ಆಯ್ಕೆ ಮಾಡಲು ಸ್ವತಂತ್ರರಾಗಿರುತ್ತಾರೆ. ಉತ್ಪಾದಕರು ಅನುಭೋಗಿಗಳನ್ನು ಮತ್ತು ಕಾರ್ಮಿಕರನ್ನು ಶೋಷಿಸಲು ಅವಕಾಶವಿರುವುದಿಲ್ಲ. ಜನರ ಯೋಗಕ್ಷೇಮವನ್ನು ಗಮನದಲ್ಲಿರಿಸಿ ಸರ್ಕಾರವು ನೀತಿಗಳನ್ನು ರೂಪಿಸುತ್ತದೆ ಮತ್ತು ಖಾಸಗಿ ವಲಯವನ್ನು ನಿಯಂತ್ರಿಸುತ್ತದೆ. ಸರ್ಕಾರದ ಈ ನಿಯಮಗಳು, ನಿಯಂತ್ರಣಗಳು ಮತ್ತು ನಿರ್ಬಂಧಗಳ ಚೌಕಟ್ಟಿನಲ್ಲಿ ಖಾಸಗಿ ವಲಯವು ತನ್ನ ಕಾರ್ಯಾಚರಣೆಯಲ್ಲಿ ಸ್ವಾತಂತ್ರ್ಯ ಹೊಂದಿರುತ್ತದೆ.

iii. **ಆರ್ಥಿಕ ಯೋಜನೆ :** ಅರ್ಥ ವ್ಯವಸ್ಥೆಯ ಅಭಿವೃದ್ಧಿಗಾಗಿ ಸರ್ಕಾರವು ಅಭಿವೃದ್ಧಿಪರ ಯೋಜನೆಗಳನ್ನು ರೂಪಿಸಲು ಯೋಜನಾ ವಿಧಾನವನ್ನು ಬಳಸುತ್ತದೆ ಮತ್ತು ತನ್ಮೂಲಕ ಖಾಸಗಿ ಮತ್ತು ಸಾರ್ವಜನಿಕ ವಲಯಗಳ ಪಾತ್ರಗಳನ್ನು ನಿರ್ಧರಿಸುತ್ತದೆ. ಸಾರ್ವಜನಿಕ ವಲಯವು

© KTBS Not to be republished

ನೇರವಾಗಿ ಸರ್ಕಾರದ ನಿಯಂತ್ರಣದಲ್ಲಿದ್ದು, ಉತ್ಪಾದನೆಯ ಗುರಿಗಳಿಗೆ ಮತ್ತು ಯೋಜನೆಗಳ ಅನುಗುಣವಾಗಿ ಕಾರ್ಯನಿರ್ವಹಿಸಿದರೆ, ಖಾಸಗಿ ವಲಯವು ಪ್ರೋತ್ಸಾಹಕಗಳು, ಬೆಂಬಲ ಮತ್ತು ಸಹಾಯಧನಗಳ ಮೂಲಕ ಪೋಷಿಸಲ್ಪಡುತ್ತದೆ.

**iv. ಬೆಲೆ ನೀತಿ :** ಮಿಶ್ರ ಅರ್ಥವ್ಯವಸ್ಥೆಯಲ್ಲಿ ಸರಕಾರದ ನೀತಿಗಳು ಬೆಲೆಗಳ ಮೇಲೆ ಗಮನಾರ್ಹ ಪ್ರಭಾವ ಬೀರುತ್ತವೆ. ಸಾರ್ವಜನಿಕ ವಲಯದ ಉದ್ದಿಮೆಗಳ ಸರಕು ಅಥವಾ ಸೇವೆಗಳ ಬೆಲೆಯನ್ನು ಸರ್ಕಾರವೇ ನಿರ್ಧರಿಸುತ್ತಿದ್ದು ಅವುಗಳನ್ನು ಆಡಳಿತಾತ್ಮಕ ಬೆಲೆಗಳು ಎಂದು ಕರೆಯುತ್ತೇವೆ (ಉದಾ: ಭಾರತದಲ್ಲಿ ರೈಲುಗಳು).

ಮಿಶ್ರ ಅರ್ಥವ್ಯವಸ್ಥೆಗೆ ಭಾರತವು ಒಂದು ಉತ್ತಮ ಉದಾಹರಣೆ ಆಗಿದೆ. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಕಾರ್ಯಕ್ಷೇತ್ರಗಳನ್ನು ಸುವ್ಯವಸ್ಥಿತವಾಗಿ ನಿರ್ದಿಷ್ಟಪಡಿಸಿದ್ದು, ಅಭಿವೃದ್ಧಿಯನ್ನು ಸಾಧಿಸಲು ಆರ್ಥಿಕ ಯೋಜನೆಯು ಮುಖ್ಯ ತಂತ್ರವಾಗಿದೆ. ಇವತ್ತು, ಜಗತ್ತಿನ ಬಹುತೇಕ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯಲ್ಲಿ ಸರ್ಕಾರವು ಸಕ್ರಿಯ ಪಾತ್ರವನ್ನು ನಿರ್ವಹಿಸುತ್ತಿದ್ದು, ಮಿಶ್ರ ಅರ್ಥವ್ಯವಸ್ಥೆಯ ಲಕ್ಷಣಗಳನ್ನು ಪಡೆದಿವೆ.

### ಅಭಿವೃದ್ಧಿ ಮಟ್ಟದ ಆಧಾರದ ಮೇಲೆ ಆರ್ಥಿಕ ವ್ಯವಸ್ಥೆಗಳ ಪ್ರಕಾರಗಳು

ಅಭಿವೃದ್ಧಿ ಮಟ್ಟದ ಆಧಾರದ ಮೇಲೆ ಅಂದರೆ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯಗಳನ್ನು ಆಧರಿಸಿ ಆರ್ಥಿಕ ವ್ಯವಸ್ಥೆಗಳನ್ನು ಎರಡು ವರ್ಗಗಳಲ್ಲಿ ವಿಂಗಡಿಸಲಾಗಿದೆ. ಅವುಗಳು (i) ಅಭಿವೃದ್ಧಿ ಹೊಂದಿದ ಅರ್ಥವ್ಯವಸ್ಥೆ ಮತ್ತು (ii) ಅಭಿವೃದ್ಧಿ ಹೊಂದುತ್ತಿರುವ ಅರ್ಥವ್ಯವಸ್ಥೆ.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಅಧಿಕ ರಾಷ್ಟ್ರೀಯ ಮತ್ತು ತಲಾ ಆದಾಯ; ಅಧಿಕ ಉಳಿತಾಯ ಮತ್ತು ಹೂಡಿಕೆ ಹೊಂದಿದ್ದು ಇದರಿಂದಾಗಿ ಅಧಿಕ ಪ್ರಮಾಣದ ಬಂಡವಾಳ ನಿರ್ಮಾಣ ಸಾಧ್ಯವಿದೆ. ಈ ರಾಷ್ಟ್ರಗಳಲ್ಲಿ ಉತ್ತಮ ಕೌಶಲ್ಯ ಮತ್ತು ತರಬೇತಿ ಹೊಂದಿದ ಮಾನವ ಸಂಪನ್ಮೂಲ, ಒಳ್ಳೆಯ ನಾಗರಿಕ ಸೌಲಭ್ಯಗಳು, ಉತ್ತಮ ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳು ಇದ್ದು ಕಡಿಮೆ ಜನನ ದರ, ಕಡಿಮೆ ಮರಣ ದರ ಮತ್ತು ಕಡಿಮೆ ಶಿಶು ಮರಣ ದರ ಇವೆ. ಅವು ಸದೃಢವಾದ ಹಣಕಾಸು ಮತ್ತು ಬಂಡವಾಳ ಮಾರುಕಟ್ಟೆಗಳನ್ನು ಒಳಗೊಂಡಂತೆ ಅಭಿವೃದ್ಧಿ ಹೊಂದಿದ ಕೈಗಾರಿಕೆ ಮತ್ತು ಸಾಮಾಜಿಕ ಮೂಲಸೌಕರ್ಯಗಳನ್ನು ಹೊಂದಿರುತ್ತವೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಜನರು ಉನ್ನತ ಜೀವನಮಟ್ಟವನ್ನು ಹೊಂದಿರುತ್ತಾರೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಅಭಿವೃದ್ಧಿ ಏಣಿಯ ಕೆಳಹಂತದಲ್ಲಿರುತ್ತವೆ. ಅವುಗಳನ್ನು ಅರೆ ಅನಭಿವೃದ್ಧಿ ಹೊಂದಿದ, ಹಿಂದುಳಿದ ಅಥವಾ ಬಡ ರಾಷ್ಟ್ರಗಳು ಎಂದು ಸಹ ಕರೆಯುತ್ತಾರೆ. ಈ ರಾಷ್ಟ್ರಗಳ ರಾಷ್ಟ್ರೀಯ ಮತ್ತು ತಲಾ ಆದಾಯಗಳು ಕಡಿಮೆ ಇರುತ್ತದೆ. ಅವುಗಳು ಕಡಿಮೆ ಉಳಿತಾಯ, ಹೂಡಿಕೆ ಮತ್ತು ಬಂಡವಾಳ ನಿರ್ಮಾಣದೊಂದಿಗೆ ಹಿಂದುಳಿದ ಕೃಷಿ ಮತ್ತು ಕೈಗಾರಿಕೆ ವಲಯಗಳನ್ನು ಹೊಂದಿರುತ್ತವೆ. ಈ ರಾಷ್ಟ್ರಗಳು ಸಾಮಾನ್ಯವಾಗಿ ಪ್ರಾಥಮಿಕ ಕೃಷಿ ಮತ್ತು ನೈಸರ್ಗಿಕ ಸಂಪನ್ಮೂಲ ಆಧಾರಿತ ವಸ್ತುಗಳನ್ನು ರಫ್ತು ಮಾಡುತ್ತವೆ. ಸಂಕ್ಷಿಪ್ತವಾಗಿ, ಅವು ಕಡಿಮೆ ಜೀವನಮಟ್ಟ, ಅನಾರೋಗ್ಯ ಮತ್ತು ಅನೈರ್ಮಲ್ಯತೆ, ಅಧಿಕ ಪ್ರಮಾಣದ ಶಿಶು ಮರಣ, ಅಧಿಕ ಜನನ ಮತ್ತು ಮರಣ ದರಗಳು ಮತ್ತು ದುರ್ಬಲ ಮೂಲಸೌಕರ್ಯಗಳಿಂದ ಬಾಧಿತವಾಗಿವೆ.

### ಮಿಶ್ರ ಅರ್ಥವ್ಯವಸ್ಥೆಯಾಗಿ ಭಾರತ

ಸರ್ಕಾರದ ಯೋಜನಾ ಅನುದಾನ ಮತ್ತು ನಿಯಂತ್ರಣಗಳ ಚೌಕಟ್ಟಿನೊಳಗೆ ಸಾರ್ವಜನಿಕ ಮತ್ತು

©KTBS Not to be republished

ಖಾಸಗಿ ವಲಯಗಳೆರಡೂ ಕಾರ್ಯನಿರ್ವಹಿಸುತ್ತಿರುವ ಭಾರತವು ಮಿಶ್ರ ಅರ್ಥ ವ್ಯವಸ್ಥೆಗೆ ಒಂದು ಉತ್ತಮ ಉದಾಹರಣೆ ಆಗಿದೆ. ಭಾರತವು ಹೆಚ್ಚಿನ ಮತ್ತು ತ್ವರಿತಗತಿಯಲ್ಲಿ ಅಭಿವೃದ್ಧಿ ಸಾಧಿಸಲು ಮತ್ತು ಎಲ್ಲ ವರ್ಗದ ಜನರಿಗೆ ಉತ್ತಮ ಜೀವನ ಮಟ್ಟವನ್ನು ಒದಗಿಸುವ ಸಲುವಾಗಿ ಸ್ವಾತಂತ್ರ್ಯ ಪಡೆದ ನಂತರ ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಅಳವಡಿಸಿಕೊಂಡಿತು. ಭಾರತದ ಮಿಶ್ರ ಆರ್ಥಿಕ ವ್ಯವಸ್ಥೆಯ ಪ್ರಮುಖ ಲಕ್ಷಣಗಳು ಹೀಗಿವೆ:

i) **ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹಅಸ್ತಿತ್ವ :** ಭಾರತ ಸರ್ಕಾರವು ಜಾರಿಗೊಳಿಸಿದ 1948 ಮತ್ತು 1956ರ ಕೈಗಾರಿಕೆ ನೀತಿಗಳು ಸಾರ್ವಜನಿಕ ವಲಯದ ವಿಸ್ತೃತ ಪಾತ್ರದೊಂದಿಗೆ ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹಅಸ್ತಿತ್ವಕ್ಕೆ ಅವಕಾಶವನ್ನು ಮಾಡಿತು. ಸಾರ್ವಜನಿಕ ವಲಯದಲ್ಲಿ ಮೂಲ ಮತ್ತು ಭಾರೀ ಕೈಗಾರಿಕೆಗಳಿದ್ದವು. ಆದರೆ, 1990ರಿಂದ ಈಚೆಗೆ ಉದಾರೀಕರಣ ನೀತಿಗಳಿಂದಾಗಿ ಖಾಸಗಿ ವಲಯದ ವ್ಯಾಪ್ತಿಯು ವಿಸ್ತಾರಗೊಳ್ಳುತ್ತಿದೆ.

ii) **ಯೋಜನಾಧಾರಿತ ಅಭಿವೃದ್ಧಿ :** ರಾಷ್ಟ್ರದ ಮತ್ತು ಜನರ ಸಮಗ್ರ ಅಭಿವೃದ್ಧಿಗಾಗಿ, ಸಂವಿಧಾನದಲ್ಲಿ ಅಡಕವಾಗಿರುವ ರಾಷ್ಟ್ರ ನೀತಿಯ ನಿರ್ದೇಶಕ ತತ್ವಗಳ ಚೌಕಟ್ಟಿನೊಳಗೆ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಲು 1950ರಲ್ಲಿ ಯೋಜನಾ ಆಯೋಗವನ್ನು ಸ್ಥಾಪಿಸಲಾಯಿತು. ಯೋಜನಾ ಆಯೋಗವು ಇಲ್ಲಿಯವರೆಗೆ ಹನ್ನೆರಡು ಪಂಚವಾರ್ಷಿಕ ಯೋಜನೆಗಳನ್ನು, ಅನೇಕ ವಾರ್ಷಿಕ ಯೋಜನೆಗಳನ್ನು ತಯಾರಿಸಿ ಅವುಗಳನ್ನು ಕಾರ್ಯರೂಪದಲ್ಲಿ ತಂದಿದೆ. ಈ ಯೋಜನೆಗಳು ಭಾರತದ ಅರ್ಥ ವ್ಯವಸ್ಥೆಯನ್ನು ಕ್ರಿಯಾಶೀಲಗೊಳಿಸಿವೆ. 2015ರಲ್ಲಿ, ಯೋಜನಾ ಆಯೋಗದ ಬದಲಾಗಿ (NITI - National Institution for Transforming India) ಭಾರತದ ಪರಿವರ್ತನೆಗೆ ರಾಷ್ಟ್ರೀಯ ಸಂಸ್ಥೆ ಎಂಬ ಹೊಸ ಸಂಸ್ಥೆ ರಚನೆಯಾಗಿದೆ.

*ಭಾರತದ ಯೋಜನೆಗಳ ಮುಖ್ಯ ಉದ್ದೇಶಗಳು: (a) ಆರ್ಥಿಕ ಪ್ರಗತಿ; (b) ಆಧುನೀಕರಣ; (c) ಸ್ವಾವಲಂಬನೆ; (d) ಸಾಮಾಜಿಕ ನ್ಯಾಯ; (e) ಬಡತನ ನಿರ್ಮೂಲನೆ; (f) ಪೂರ್ಣೋದ್ಯೋಗ ಸಾಧಿಸುವುದು ಮತ್ತು (g) ಮೂಲ ಅಗತ್ಯಗಳಾದ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ, ಇತ್ಯಾದಿಗಳ ಸಮರ್ಪಕ ಪೂರೈಕೆ.*

iii) **ಸಾರ್ವಜನಿಕ ವಲಯದ ಪಾತ್ರ :** ಭಾರತದ ಅರ್ಥವ್ಯವಸ್ಥೆಯಲ್ಲಿ ಸಾರ್ವಜನಿಕ ವಲಯವು ಮಹತ್ವದ ಪಾತ್ರವನ್ನು ಹೊಂದಿದೆ. ಇದು ಆರ್ಥಿಕ ಪ್ರಗತಿಯನ್ನು ಹೆಚ್ಚಿಸಿದೆ ಮತ್ತು ಆದಾಯ ಹಾಗೂ ಸಂಪತ್ತಿನ ಅಸಮಾನತೆಯನ್ನು ಕುಗ್ಗಿಸಿದೆ. ಇದು (ಅ) ಮೂಲ ಸೌಕರ್ಯಗಳ ಅಭಿವೃದ್ಧಿ; (ಬ) ಮೂಲ ಮತ್ತು ಭಾರೀ ಕೈಗಾರಿಕೆಗಳ ಸ್ಥಾಪನೆ; (ಕ) ಹಲವಾರು ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳ ವಿಸ್ತರಣೆ; ಮತ್ತು (ಡ) ಅಂತಾರಾಷ್ಟ್ರೀಯ ವ್ಯಾಪಾರ ಒಳಗೊಂಡಂತೆ, ವ್ಯಾಪಾರ ಮತ್ತು ಮಾರುಕಟ್ಟೆ ಚಟುವಟಿಕೆಗಳನ್ನು ಉತ್ತೇಜಿಸುವ ಕಾರ್ಯಗಳಿಗೆ ಗಮನಾರ್ಹ ಕೊಡುಗೆ ನೀಡಿದೆ.

iv) **ಖಾಸಗಿ ವಲಯ :** ಕೇವಲ ಕೈಗಾರಿಕೆ ಮಾತ್ರವಲ್ಲದೇ, ಕೃಷಿ, ಸಣ್ಣ ಕೈಗಾರಿಕೆ, ವ್ಯಾಪಾರ, ವಸತಿ ಮತ್ತು ಕಟ್ಟಡ ನಿರ್ಮಾಣದಲ್ಲಿನ ಅಧಿಕ ಪ್ರಮಾಣದ ಚಟುವಟಿಕೆಗಳನ್ನು ಖಾಸಗಿ ವಲಯ ನಿರ್ವಹಿಸುತ್ತದೆ. ಇದು ಮಾನವ ಶಕ್ತಿಯ ಮುಕ್ಕಾಲು ಭಾಗಕ್ಕೆ ಉದ್ಯೋಗವನ್ನು ಒದಗಿಸುತ್ತದೆ. ಖಾಸಗಿ ವಲಯವನ್ನು ನಿಯಂತ್ರಿಸಲು ಹಲವಾರು ನೀತಿಗಳು ಮತ್ತು ನಿಯಮಗಳು ಜಾರಿಯಲ್ಲಿವೆ. ಆದರೆ ಆ ನಿಬಂಧನೆಗಳು ಮೊದಲು ಇದ್ದಂತೆ ಈಗ ಕಠಿಣವಾಗಿ ಇಲ್ಲ.

Not to be republished ©KTBS

v) **ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಮನ್ವಯತೆ :** ಯೋಜನಾ ಆಯೋಗದ ಗುರಿಗಳನ್ನು ಸಾಧಿಸಲು ಸಾರ್ವಜನಿಕ ಮತ್ತು ಖಾಸಗಿಗಳೆರಡೂ ಜೊತೆಯಾಗಿ ಕಾರ್ಯನಿರ್ವಹಿಸುತ್ತಿವೆ.

ಆದಾಗ್ಯೂ, ಇತ್ತೀಚೆಗೆ ಸಾರ್ವಜನಿಕ ವಲಯದ ಪಾತ್ರ ಕುಗ್ಗುತ್ತಿದ್ದು, ಖಾಸಗಿ ವಲಯದ ಚಟುವಟಿಕೆಗಳು ವಿಸ್ತಾರಗೊಳ್ಳುತ್ತಿವೆ.

**ಭಾರತದಲ್ಲಿ ಸಾರ್ವಜನಿಕ ವಲಯದ ಸಾಧನೆ**

ಭಾರತದಲ್ಲಿ ಅರ್ಥವ್ಯವಸ್ಥೆಯ ಪ್ರಮುಖ ವಲಯಗಳ ಮೇಲೆ ಅಧಿಪತ್ಯವನ್ನು ಹೊಂದುವ ಉದ್ದೇಶದಿಂದ ಸಾರ್ವಜನಿಕ ವಲಯಕ್ಕೆ ಅತ್ಯಂತ ಮಹತ್ವದ ಪಾತ್ರವನ್ನು ನೀಡಲಾಯಿತು. ತೀವ್ರಗತಿಯ ಆರ್ಥಿಕ ಅಭಿವೃದ್ಧಿ, ಆರ್ಥಿಕ ಶಕ್ತಿಯ ಕೇಂದ್ರೀಕರಣದ ತಗ್ಗಿಸುವಿಕೆ, ಸಮತೋಲಿತ ಪ್ರಾದೇಶಿಕ ಅಭಿವೃದ್ಧಿ, ಉದ್ಯೋಗಾವಕಾಶಗಳ ಸೃಷ್ಟಿ, ಆಮದು ನಿಯಂತ್ರಣ ಮತ್ತು ರಫ್ತು ಉತ್ತೇಜನ, ಹಾಗೂ ಸಂಪನ್ಮೂಲಗಳ ಸದುಪಯೋಗದ ಉದ್ದೇಶಗಳು ಸಾರ್ವಜನಿಕ ವಲಯವನ್ನು ಪ್ರೋತ್ಸಾಹಿಸಲು ಮುಖ್ಯ ಕಾರಣಗಳಾಗಿದ್ದವು.

ಅಂತೆಯೇ, ಸಾರ್ವಜನಿಕ ವಲಯವು ಕೈಗಾರಿಕಾ ವಲಯದಲ್ಲಿನ ಅಂತರಗಳನ್ನು ತುಂಬುತ್ತಾ ಉದ್ಯೋಗಾವಕಾಶಗಳ ನಿರ್ಮಾಣ ಮತ್ತು ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಯನ್ನು ಪ್ರೋತ್ಸಾಹಿಸಿ ರಾಷ್ಟ್ರದ ಅರ್ಥವ್ಯವಸ್ಥೆಗೆ ಮಹತ್ತರವಾದ ಕೊಡುಗೆಯನ್ನು ನೀಡಿದೆ. ಪ್ರಮುಖ ಉತ್ಪನ್ನಗಳಾದ ಉಕ್ಕು, ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಪೆಟ್ರೋಲಿಯಂ ಉದ್ದಿಮೆಗಳಲ್ಲಿ ಅಧಿಕ ಹೂಡಿಕೆ ಮಾಡಿ ಪ್ರಭಾವಿ ವಲಯಗಳ ಉತ್ತಮ ನಿಯಂತ್ರಣ ಹೊಂದಿದೆ.

ಆದರೆ, ದೋಷಪೂರಿತ ಬೆಲೆ ನೀತಿ; ಅಧಿಕ ರಾಜಕೀಯ ಹಸ್ತಕ್ಷೇಪ; ನಿರ್ಣಯ ಕೈಗೊಳ್ಳುವಲ್ಲಿ ವಿಳಂಬ ನೀತಿ; ಮಿತಿಮೀರಿದ ಸಿಬ್ಬಂದಿ; ಉತ್ತರದಾಯಿತ್ವದ ಕೊರತೆ; ಮತ್ತು ಸಾಮರ್ಥ್ಯದ ಅರೆ ಉಪಯೋಗಗಳಂತಹ ಹಲವಾರು ಗಂಭೀರ ಸಮಸ್ಯೆಗಳ ಕಾರಣದಿಂದ ಸಾರ್ವಜನಿಕ ವಲಯವು ಉತ್ತಮ ಹಣಕಾಸಿನ ಸಾಧನೆಯನ್ನು ಮಾಡದೇ ನಷ್ಟದಲ್ಲಿ ನರಳುವಂತಾಗಿದೆ.

ಆದ್ದರಿಂದ, 1980ರಿಂದೀಚೆಗೆ ಅವುಗಳ ಕಾರ್ಯಚರಣೆಯನ್ನು ಸುಧಾರಿಸಲು ಹಲವಾರು ಪ್ರಯತ್ನಗಳನ್ನು ಮಾಡಲಾಯಿತು ಮತ್ತು 1991ರ ಆರ್ಥಿಕ ಸುಧಾರಣಾ ಕ್ರಮಗಳಲ್ಲಿ ಸರ್ಕಾರದ ಸಾರ್ವಜನಿಕ ವಲಯದ ನೀತಿಯಲ್ಲಿ ಖಾಸಗೀಕರಣವು ಒಂದು ಪ್ರಮುಖ ಅಂಶವಾಗಿದೆ. ಸರ್ಕಾರವು ಸಾರ್ವಜನಿಕ ಉದ್ದಿಮೆಗಳಲ್ಲಿನ ತನ್ನ ಷೇರುಗಳನ್ನು ಖಾಸಗಿಯವರಿಗೆ ಮಾರುತ್ತಲಿದ್ದು ಅದನ್ನು ಬಂಡವಾಳ ಹಿಂತೆಗೆತ ಎನ್ನುತ್ತೇವೆ.

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಅರ್ಥವ್ಯವಸ್ಥೆಯು ______________ ಸಂಘಟನೆಯ ಸ್ವರೂಪಕ್ಕೆ ಸಂಬಂಧಿಸಿದೆ.
2. ನೀತಿ ಆಯೋಗವನ್ನು ______________ ರಲ್ಲಿ ರಚಿಸಲಾಗಿದೆ.
3. ಮುಕ್ತ ಉದ್ಯಮವು ______________ ಅರ್ಥವ್ಯವಸ್ಥೆಯ ಮುಖ್ಯ ಲಕ್ಷಣವಾಗಿದೆ.
4. ಬಂಡವಾಳಶಾಹಿ ಅರ್ಥವ್ಯವಸ್ಥೆಗೆ ______________ ಉತ್ತಮ ಉದಾಹರಣೆಯಾಗಿದೆ.
5. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹ ಅಸ್ತಿತ್ವವನ್ನು __________ ದಲ್ಲಿ ಕಾಣಬಹುದು.

©KTBS Not to be republished

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಅರ್ಥವ್ಯವಸ್ಥೆ ಎಂದರೇನು?
2. ಬಂಡವಾಳಶಾಹಿ ಅರ್ಥವ್ಯವಸ್ಥೆಯ ಲಕ್ಷಣಗಳನ್ನು ತಿಳಿಸಿರಿ.
3. ಬಂಡವಾಳಶಾಹಿ ವ್ಯವಸ್ಥೆಯ ದೋಷಗಳು ಯಾವುವು?
4. ಯೋಜನೆ ಎಂದರೇನು?
5. ಅಭಿವೃದ್ಧಿ ಮಟ್ಟದ ಆಧಾರದ ಮೇಲೆ ಆರ್ಥಿಕ ವ್ಯವಸ್ಥೆಗಳನ್ನು ಹೇಗೆ ವಿಂಗಡಿಸಲಾಗುತ್ತದೆ?
6. ಮಿಶ್ರ ಅರ್ಥವ್ಯವಸ್ಥೆಯಲ್ಲಿ ಖಾಸಗಿ ವಲಯದ ಚಟುವಟಿಕೆಗಳನ್ನು ಸರ್ಕಾರವು ಹೇಗೆ ನಿಯಂತ್ರಿಸುತ್ತದೆ?
7. ಹೂಡಿಕೆ ಹಿಂತೆಗೆತ ಎಂದರೇನು?
8. ಭಾರತವನ್ನು ಅಭಿವೃದ್ಧಿ ಹೊಂದುತ್ತಿರುವ ಅರ್ಥವ್ಯವಸ್ಥೆ ಎಂದು ಏಕೆ ಪರಿಗಣಿಸಲಾಗಿದೆ?

**III. ಯೋಜನಾ ಕಾರ್ಯ**

1. ಭಾರತದಲ್ಲಿನ ಯೋಜನೆಗಳ ಉದ್ದೇಶಗಳನ್ನು ಪಟ್ಟಿ ಮಾಡಿರಿ.

**IV. ಚಟುವಟಿಕೆಗಳು**

1. ಭಾರತದಲ್ಲಿನ ಸಾರ್ವಜನಿಕ ವಲಯದ ಉದ್ಯಮಗಳ ಪಟ್ಟಿಯನ್ನು ಮಾಡಿರಿ ಮತ್ತು ಅವುಗಳ ಸಮಸ್ಯೆಗಳನ್ನು ತಿಳಿಯಿರಿ.

*****

©KTBS Not to be republished

# ವ್ಯವಹಾರ ಅಧ್ಯಯನ

## ಅಧ್ಯಾಯ – 1

## ವಾಣಿಜ್ಯ ಅಧ್ಯಯನದ ಘಟಕಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ವ್ಯವಹಾರ ಅಧ್ಯಯನದ ಮೂಲಭೂತ ಅಂಶಗಳಾದ ಆರ್ಥಿಕ ಚಟುವಟಿಕೆಗಳು ಮತ್ತು ಅವುಗಳ ವಿಧಗಳು.*
- *ವ್ಯವಹಾರದ ವಿಕಸನವು ಬೆಳೆದುಬಂದ ಹಂತಗಳು.*
- *ಆರ್ಥಿಕ ಬೆಳವಣಿಗೆಯಲ್ಲಿ ವ್ಯಾಪಾರ ಮತ್ತು ವಾಣಿಜ್ಯದ ಪಾತ್ರ ಮತ್ತು ಪ್ರಾಮುಖ್ಯತೆ.*
- *ಇಪ್ಪತ್ತೊಂದನೇ ಶತಮಾನದಲ್ಲಿ ವಾಣಿಜ್ಯದ ಬೆಳವಣಿಗೆ.*

ಸಮಾಜ ವಿಜ್ಞಾನದ ಈ ಭಾಗದಲ್ಲಿ ವ್ಯವಹಾರ ಅಧ್ಯಯನದ ಕೆಲವು ಮೂಲ ವಿಷಯಗಳನ್ನು ತಿಳಿಯೋಣ. ಆರ್ಥಿಕ ಚಟುವಟಿಕೆಗಳು ವ್ಯವಹಾರ ಅಧ್ಯಯನಕ್ಕೆ ಮೂಲಭೂತ ಅಂಶಗಳಾಗಿವೆ. ವ್ಯವಹಾರ ಎಂಬ ಪದವು ಸದಾ ಚಟುವಟಿಕೆಯಿಂದ ಕೂಡಿರುವ "BUSY" ಎಂಬ ಪದದಿಂದ ಬಂದಿದೆ. ಪ್ರತಿಯೊಬ್ಬ ಮನಷ್ಯನಿಗೂ ಆಹಾರ, ಉಡುಪು ಮತ್ತು ವಸತಿ ಅತ್ಯವಶ್ಯಕವಾಗಿದೆ. ನಮಗೆ ಇವುಗಳ ಜೊತೆಗೆ ಪ್ರತಿನಿತ್ಯದ ಗೃಹೋಪಯೋಗಿ ವಸ್ತುಗಳು ಅವಶ್ಯವಾಗಿವೆ. ಇವುಗಳನ್ನು ನಾವು ವ್ಯಾಪಾರಿಗಳಿಂದ ಪಡೆಯುತ್ತೇವೆ. ಈ ವ್ಯಾಪಾರಿಗಳಾದ ಚಿಲ್ಲರೆ ವ್ಯಾಪಾರಿಗಳು ಸಗಟು ವ್ಯಾಪಾರಿಗಳಿಂದ ಅಥವಾ ಉತ್ಪಾದಕರಿಂದ ಪಡೆಯುತ್ತಾರೆ. ಇವರೆಲ್ಲರ ವಿವಿಧ ಚಟುವಟಿಕೆಗಳನ್ನು ವ್ಯವಹಾರ ಎನ್ನುತ್ತೇವೆ. ಹಾಗೂ ಇವರೆಲ್ಲರನ್ನು ವ್ಯಾಪಾರಸ್ಥರೆಂದು ಕರೆಯುತ್ತೇವೆ. ವ್ಯವಹಾರವು ಒಂದು ಆರ್ಥಿಕ ಚಟುವಟಿಕೆಯಾಗಿದ್ದು ವಸ್ತುಗಳ ಉತ್ಪಾದನೆ ಮತ್ತು ವಿತರಣೆ–ಯು ನಿರಂತರವಾಗಿ ನಡೆಯುತ್ತ ಮಾನವನ ಬಯಕೆಗಳನ್ನು ಪೂರೈಸುತ್ತವೆ.

**ಆರ್ಥಿಕ ಚಟುವಟಿಕೆಗಳು :** ಮಾನವನಿಗೆ ಅನೇಕ ಬಯಕೆಗಳಿರುತ್ತವೆ. ಇವನ್ನು ಪೂರೈಸಿಕೊಳ್ಳಲು ಅನೇಕ ವಸ್ತುಗಳ ಮತ್ತು ಸೇವೆಗಳ ಅವಶ್ಯಕತೆ ಇದೆ. ವ್ಯವಸಾಯ ಮತ್ತು ಕೈಗಾರಿಕೆಗಳಿಂದ ವಸ್ತುಗಳ ಉತ್ಪಾದನೆಯಾಗುತ್ತದೆ. ಈ ವಸ್ತುಗಳ ವಿತರಣೆಯಾಗಬೇಕಾದರೆ ಉತ್ಪಾದನಾ ಘಟಕಗಳಿಗೆ ಹಾಗೂ ಗ್ರಾಹಕರಿಗೆ ಅನೇಕ ಸೇವೆಗಳು ಕೂಡ ಅವಶ್ಯವಾಗಿವೆ. ವಸ್ತುಗಳ ಉತ್ಪಾದನೆ, ಅವುಗಳ ವಿತರಣೆ ಹಾಗೂ ಸೇವೆಗಳನ್ನು ಒದಗಿಸುವ ಚಟುವಟಿಕೆಗಳನ್ನು ಆರ್ಥಿಕ ಚಟುವಟಿಕೆಗಳೆನ್ನುತ್ತೇವೆ.

**ಆರ್ಥಿಕ ಚಟುವಟಿಕೆಗಳ ವಿಧಗಳು :** ಆರ್ಥಿಕ ಚಟುವಟಿಕೆಗಳನ್ನು ಮೂರು ವಿಧಗಳಾಗಿ ವಿಂಗಡಿಸಬಹುದು. ಯಾವುವೆಂದರೆ;

1. ವ್ಯವಹಾರ    2. ವೃತ್ತಿ    3. ಉದ್ಯೋಗ

1. ವ್ಯವಹಾರವು ಮುಖ್ಯವಾಗಿ ಸರಕು ಮತ್ತು ಸೇವೆಗಳ ಉತ್ಪಾದನೆ ಮತ್ತು ಅವುಗಳನ್ನು ಗ್ರಾಹಕರಿಗೆ ಒದಗಿಸುವ ಚಟುವಟಿಕೆಯಾಗಿದೆ. ಉದಾ: ಅಂಗಡಿಗಳು

2. ವೃತ್ತಿಯು ಮುಖ್ಯವಾಗಿ ವಿಶಿಷ್ಟವಾದ ತಾಂತ್ರಿಕ ಹಾಗೂ ತಜ್ಞ ಪರಿಣಿತ ಸೇವೆಗಳನ್ನು ಸಲ್ಲಿಸುವ ಚಟುವಟಿಕೆಯಾಗಿದೆ. ಉದಾ: ವಕೀಲರು, ಲೆಕ್ಕಪರಿಶೋಧಕರು, ವೈದ್ಯರು, ಆಡಳಿತ ಸಲಹೆಗಾರರು, ಇತ್ಯಾದಿ.

©KTBS Not to be republished

3. ಉದ್ಯೋಗ ಅಥವಾ ಸೇವೆಗಳು ವೇತನ ಅಥವಾ ಕೂಲಿಯ ಪ್ರತಿಫಲಕ್ಕಾಗಿ ಉದ್ಯೋಗದಾತನು ವಹಿಸುವ ಕಾರ್ಯವನ್ನು ಉದ್ಯೋಗಿಯು ನಿರ್ವಹಿಸುವ ಚಟುವಟಿಕೆಯಾಗಿದೆ. ಉದಾ: ಬೇಸಾಯ ಕಾರ್ಮಿಕರು, ಕೈಗಾರಿಕಾ ಕಾರ್ಮಿಕರು.

**ನಿಮಗಿದು ತಿಳಿದಿರಲಿ**

*ಉದ್ಯೋಗದಾತನನ್ನು ಉದ್ಯಮಪತಿ ಅಥವಾ ಯಜಮಾನನೆಂದೂ ಕರೆಯುತ್ತಾರೆ. ಇವನು ವೇತನ ಅಥವಾ ಕೂಲಿ ಕೊಟ್ಟು ಕೆಲಸ ಮಾಡಿಸಿಕೊಳ್ಳುವವನು. ಉದ್ಯೋಗಿ ಎಂದರೆ ಉದ್ಯೋಗದಾತ ಹೇಳಿದ ಕೆಲಸವನ್ನು ವೇತನಕ್ಕಾಗಿ ಮಾಡುವವನು, ಇವನನ್ನು ನೌಕರನೆಂದು ಕರೆಯುತ್ತಾರೆ.*

**ವಿನಿಮಯ :** ವಸ್ತುಗಳು ಮತ್ತು ಸೇವೆಗಳು ಗ್ರಾಹಕರಿಗೆ ವಿತರಣೆಯಾಗುವುದಕ್ಕೆ ವಿನಿಮಯ ಎನ್ನುತ್ತೇವೆ. ವಿನಿಮಯವು ಉತ್ಪಾದನೆ ಮತ್ತು ಬಳಕೆಗಳ ಮಧ್ಯೆ ಒಂದು ಕೊಂಡಿಯಾಗಿದೆ. ಯಾವುದೋ ಜಾಗದಲ್ಲಿ ಉತ್ಪಾದನೆಯಾಗುವ ವಸ್ತುಗಳು ಮತ್ತಾವುದೋ ಜಾಗದಲ್ಲಿ ಬಳಕೆಯಾಗಲು ಹೋಗಿ ಸೇರಬೇಕು. ವಸ್ತುಗಳ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಉತ್ಪಾದಕರು ಮಾರುಕಟ್ಟೆ ಪರಿಶೀಲನೆ, ಸಾಗಾಣಿಕೆ, ಬೆಲೆಯ ನಿರ್ಧಾರ, ವಸ್ತುಗಳ ಸಂಗ್ರಹಣೆ, ವಸ್ತುಗಳ ಬಗ್ಗೆ ಜಾಹೀರಾತು, ಹಣಕಾಸಿನ ಸೌಲಭ್ಯಗಳು ಮುಂತಾದುವನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ. ಈ ಎಲ್ಲ ಅಂಶಗಳು ವಸ್ತುಗಳ ವಿನಿಮಯ ಚಟುವಟಿಕೆಯಲ್ಲಿ ಅಡಕವಾಗಿವೆ. ಈಗ ವಸ್ತುಗಳ ವಿನಿಮಯ ಸುಲಭವಾಗಿದೆ. ಯಾವುದೇ ವಸ್ತುವನ್ನು ಬೇಕಾದರೂ ಹಣಕ್ಕೆ ವಿನಿಮಯ ಮಾಡಿಕೊಳ್ಳಬಹುದು. ಈ ವಿನಿಮಯ ಪದ್ಧತಿಯೇ ವ್ಯಾಪಾರಕ್ಕೆ ನಾಂದಿಯಾಯಿತೆಂದು ಹೇಳಬಹುದು.

**ನಿಮಗಿದು ತಿಳಿದಿರಲಿ.**

*ಬಳಕೆಯನ್ನು ಅನುಭೋಗವೆಂದೂ ಕರೆಯುತ್ತಾರೆ. ಅನುಭೋಗವೆಂದರೆ ವಸ್ತುಗಳನ್ನು ಉಪಯೋಗಿಸುವ ಮತ್ತು ಸೇವೆಗಳನ್ನು ಪಡೆಯುವ ಒಂದು ಕಲೆಯಾಗಿದೆ. ಅನುಭೋಗಿಸುವ ವ್ಯಕ್ತಿಯನ್ನು ಅನುಭೋಗಿ ಅಥವಾ ಗ್ರಾಹಕನೆಂದು ಕರೆಯುತ್ತಾರೆ.*

## ವ್ಯವಹಾರದ ವಿಕಸನ ಮತ್ತು ಬೆಳವಣಿಗೆ

ವ್ಯವಹಾರವೆಂದರೆ ಮನುಷ್ಯನ ಯಾವುದೇ ಆರ್ಥಿಕ ಚಟುವಟಿಕೆ ಎನ್ನಬಹುದು. ವ್ಯವಹಾರವು ಉತ್ಪಾದನೆ, ವ್ಯಾಪಾರ, ಕೈಗಾರಿಕೆ, ಬ್ಯಾಂಕಿಂಗ್, ವಿಮೆ ಏಜೆನ್ಸಿ, ಜಾಹೀರಾತು, ಸಾರಿಗೆ ಮತ್ತು ಇತರ ಅಂಶಗಳಿಂದ ಕೂಡಿದ್ದು ವಸ್ತು ಮತ್ತು ಸೇವೆಗಳನ್ನು ಗ್ರಾಹಕರಿಗೆ ಒದಗಿಸುವ ಚಟುವಟಿಕೆಯಾಗಿದೆ.

ಒಂದು ಚಟುವಟಿಕೆಯ ಹುಟ್ಟು ಮತ್ತು ಅದು ಕ್ರಮೇಣ ಬೆಳೆದು ಬಂದ ದಾರಿಯನ್ನು 'ವಿಕಸನ' ಎನ್ನುತ್ತೇವೆ. ವಾಣಿಜ್ಯದ ವಿಕಸನವನ್ನು ವ್ಯವಹಾರದ ಇತಿಹಾಸ ಎಂದೂ ಕರೆಯಬಹುದು. ವಾಣಿಜ್ಯವು ವ್ಯವಹಾರದ ಒಂದು ಭಾಗವಾಗಿದ್ದು ಇದರ ಚಟುವಟಿಕೆ ವಸ್ತುಗಳ ಮತ್ತು ಸೇವೆಗಳ ವಿತರಣೆಯಾಗಿದೆ.

ವ್ಯವಹಾರದ ವಿಕಸನವು ಅನೇಕ ಹಂತಗಳನ್ನು ದಾಟಿ ಇಂದಿನ ಸ್ಥಿತಿಗೆ ಬಂದು ನಿಂತಿದೆ. ಈ ಹಂತಗಳಲ್ಲಿ ಮುಖ್ಯವಾದವು ಯಾವುವೆಂದರೆ :

1. ಬೇಟೆಗಾರಿಕೆ ಮತ್ತು ಮೀನು ಹಿಡಿಯುವ ಹಂತ
2. ಪ್ರಾಣಿ ಸಾಕಾಣಿಕೆಯ ಹಂತ
3. ಕೃಷಿ ಅಥವಾ ಬೇಸಾಯದ ಹಂತ
4. ಕುಶಲ ಕರ್ಮಿಗಳ ಹಂತ
5. ವಸ್ತು ವಿನಿಮಯ ಹಂತ
6. ಹಣದ ಆರ್ಥಿಕತೆಯ ಹಂತ
7. ಪಟ್ಟಣದ ಆರ್ಥಿಕ ಹಂತ
8. ಅಂತಾರಾಷ್ಟ್ರೀಯ ವ್ಯಾಪಾರದ ಹಂತ.

©KTBS Not to be republished

ಈ ಹಂತಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

**1. ಬೇಟೆಗಾರಿಕೆ ಮತ್ತು ಮೀನು ಹಿಡಿಯುವ ಹಂತ:** ಇದನ್ನು ಆರ್ಥಿಕ ಬೆಳವಣಿಗೆಯ ಮೊದಲ ಹಂತವೆಂದು ಹೇಳಬಹುದು. ಈ ಅವಧಿಯಲ್ಲಿ ಮಾನವರು ಅಲೆಮಾರಿಗಳಾಗಿದ್ದು ಒಂದು ನಿರ್ದಿಷ್ಟ ಸ್ಥಳದಲ್ಲಿ ನೆಲೆಸಿರಲಿಲ್ಲ. ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಸ್ಥಳಾಂತರ ಮಾಡುತ್ತಿದ್ದರು. ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ನದಿ, ಕೊಳಗಳಲ್ಲಿ ಮೀನನ್ನು ಹಿಡಿಯುತ್ತಿದ್ದರು. ಗೆಡ್ಡೆ ಗೆಣಸು, ಹಣ್ಣು ಮತ್ತು ಕಾಯಿಗಳನ್ನು ಆರಿಸುತ್ತಿದ್ದರು. ಪ್ರಾಣಿಗಳ ಮಾಂಸ, ಗೆಡ್ಡೆ ಗೆಣಸುಗಳು, ಮೀನು ಅವರ ಆಹಾರವಾಗಿತ್ತು. ಚಳಿ ಗಾಳಿ ಮಳೆಗಳಿಂದ ರಕ್ಷಿಸಿಕೊಳ್ಳಲು ಪ್ರಾಣಿಗಳ ಚರ್ಮ ಉಪಯೋಗಿಸುತ್ತಿದ್ದರು. ಗುಹೆಗಳಲ್ಲಿ ಹಾಗೂ ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದರು. ಈ ಹಂತದಲ್ಲಿ ಯಾವುದೇ ಆರ್ಥಿಕ ಚಟುವಟಿಕೆಗಳು ಕಂಡು ಬರುತ್ತಿರಲಿಲ್ಲ.

**2. ಪ್ರಾಣಿ ಸಾಕಣಿಕೆಯ ಹಂತ:** ಈ ಹಂತದಲ್ಲಿ ಮಾನವರು ಪ್ರಾಣಿಗಳನ್ನು ಸಾಕುವುದನ್ನು ಕಲಿತರು. ಮೊದಲು ದನಗಳು, ಕುರಿಗಳು, ಮೇಕೆಗಳು ಮುಂತಾದ ಪ್ರಾಣಿಗಳನ್ನು ಸಾಕಲು ಪ್ರಾರಂಭಿಸಿದರು. ಈ ಪ್ರಾಣಿಗಳು ಅವರಿಗೆ ಆಹಾರ ಮತ್ತು ಹೊದಿಕೆಗಳನ್ನು ಪೂರೈಸುತ್ತಿದ್ದವು. ಪ್ರಾಣಿಗಳ ಮೇವಿಗಾಗಿ ಹುಲ್ಲುಗಾವಲುಗಳನ್ನು ಹುಡುಕಿಕೊಂಡು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ವಲಸೆ ಹೋಗುತ್ತಿದ್ದರು. ಈ ಹಂತದಲ್ಲಿ ಮಾನವರು ಸ್ವಲ್ಪ ಉತ್ತಮ ಮಟ್ಟಕ್ಕೆ ಏರಿದರು. ಆದರೂ ವಾಣಿಜ್ಯದ ಬೆಳವಣಿಗೆ ಕಂಡು ಬರುತ್ತಿರಲಿಲ್ಲ.

**3. ಕೃಷಿ ಅಥವಾ ಬೇಸಾಯ ಹಂತ:** ಪ್ರಾಣಿ ಸಾಕಾಣಿಕೆಯ ಹಂತದ ಹಲವಾರು ವರ್ಷಗಳ ನಂತರ ಮಾನವರು ಕೆಲವು ಬೆಳೆಗಳನ್ನು ಬೆಳೆಯುವುದನ್ನು ಕಲಿತರು. ಒಂದು ನಿರ್ದಿಷ್ಟ ಜಾಗದಲ್ಲಿ ವಾಸಿಸುವುದಕ್ಕೆ ಮೊದಲು ಮಾಡಿದರು. ಗುಂಪುಗಳಲ್ಲಿ ವಾಸಿಸುವುದು ಮೊದಲಾಯಿತು. ವಾಣಿಜ್ಯ ಚಟುವಟಿಕೆಗಳು ಪ್ರಾರಂಭವಾದವು. ಗ್ರಾಮಗಳು ಮತ್ತು ಸಮುದಾಯಗಳು ಹುಟ್ಟಿಕೊಂಡವು. ಶ್ರಮದ ವಿಭಜನೆ ಪ್ರಾರಂಭವಾಯಿತು.

**4. ಕುಶಲ ಕರ್ಮಿಗಳ ಹಂತ:** ಬೇಸಾಯಗಾರರಿಗೆ ಹಲವು ಉಪಕರಣಗಳು ಬೇಕಾದವು. ವಾಸಕ್ಕೆ ಮನೆಗಳನ್ನು ಕಟ್ಟಿಕೊಳ್ಳಬೇಕಾಯಿತು. ಇದಕ್ಕಾಗಿ ಕೆಲವು ಜನರು ತಮ್ಮ ಮನೆಗಳಲ್ಲಿ ವ್ಯವಸಾಯಕ್ಕೆ ಬೇಕಾದ ಉಪಕರಣಗಳನ್ನು ಮಾಡುವುದು, ಕೆಲವರು ಮನೆಗಳನ್ನು ಕಟ್ಟುವುದು ಮುಂತಾದ ಕಸುಬುಗಳನ್ನು ಪ್ರಾರಂಭಿಸಿದರು. ಇವರನ್ನು ಕುಶಲ ಕರ್ಮಿಗಳೆಂದು ಕರೆದರು. ಇವರು ಬೇಸಾಯಗಾರರಿಗೆ ಸಲಕರಣೆಗಳನ್ನು ಒದಗಿಸಿ ಅವರಿಂದ ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ಪಡೆಯುತ್ತಿದ್ದರು. ವಸ್ತು ವಿನಿಮಯ ಪದ್ಧತಿ ರೂಢಿಗೆ ಬಂದಿತು. ಇಂದೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಕುಶಲ ಕರ್ಮಿಗಳನ್ನು ಕಾಣುತ್ತೇವೆ. ಕಾಲಕ್ರಮದಲ್ಲಿ ಈ ಕುಶಲ ಕರ್ಮಿಗಳು ತಮ್ಮ ಪ್ರಗತಿಗಾಗಿ ತಮ್ಮದೇ ಆದ ವೃತ್ತಿ ಸಂಘಗಳನ್ನು ಸ್ಥಾಪಿಸಿಕೊಂಡರು. ಈ ವೃತ್ತಿ ಸಂಘಗಳು ಬಹಳ ಪ್ರಾಮುಖ್ಯತೆ ಪಡೆದವು.

**5. ವಸ್ತು ವಿನಿಮಯ ಪದ್ಧತಿಯ ಹಂತ:** ಶ್ರಮ ವಿಭಜನೆಯಿಂದ ಹೆಚ್ಚು ವೇಗವಾಗಿ ವಸ್ತುಗಳನ್ನು ಉತ್ಪಾದಿಸಲು ಸಾಧ್ಯವಾಯಿತು. ಈ ರೀತಿ ಹೆಚ್ಚಾಗಿ ಉತ್ಪಾದಿಸಿದ ವಸ್ತುಗಳ ಬದಲಿಗೆ ಬೇಕಾದ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ವಸ್ತುಗಳನ್ನು ನೇರವಾಗಿ ವಸ್ತುಗಳಿಗೆ ವಿನಿಮಯ ಮಾಡಿಕೊಳ್ಳುವ ಪದ್ಧತಿಗೆ 'ವಸ್ತು ವಿನಿಮಯ ಪದ್ಧತಿ' ಎನ್ನುತ್ತಾರೆ. ಈ ಹಂತದಲ್ಲಿ ಅನೇಕ ಸಮಸ್ಯೆಗಳು ಎದುರಾದವು. ಅವುಗಳಲ್ಲಿ ಮುಖ್ಯವಾದವು ಈ ಕೆಳಕಂಡಂತಿವೆ.

©KTBS Not to be republished

• **ಬಯಕೆಗಳ ಮರು ಹೊಂದಾಣಿಕೆಯ ಕೊರತೆ:** ಉದಾ: ಒಬ್ಬ ರೈತನಲ್ಲಿ ಭತ್ತ ಹೆಚ್ಚಾಗಿದ್ದು ಅವನಿಗೆ ಗೋಧಿ ಬೇಕಾದಲ್ಲಿ, ಗೋಧಿ ಇರುವವನು ಭತ್ತವನ್ನು ಗೋಧಿಗೆ ವಿನಿಮಯಿಸಿಕೊಂಡರೆ ಇದನ್ನು ಬಯಕೆಗಳ ಸರಿಹೊಂದುವಿಕೆ ಎನ್ನುತ್ತೇವೆ. ಆದರೆ ಅನೇಕ ವೇಳೆ ಒಂದು ಪದಾರ್ಥಕ್ಕೆ ಬದಲಾಗಿ ಇನ್ನೊಂದು ಪದಾರ್ಥ ಪಡೆಯಲು ಬಯಕೆಗಳು ಸರಿ ಹೊಂದುತ್ತಿರಲಿಲ್ಲ ಉದಾ: ಭತ್ತದ ರೈತನಿಗೆ ಗೋಧಿ ಬೇಕಾಗಿದ್ದು ಗೋಧಿ ಉಳ್ಳ ರೈತನಿಗೆ ಜೋಳ ಬೇಕಾದಲ್ಲಿ ಭತ್ತಕ್ಕೆ ಬದಲಾಗಿ ಗೋಧಿ ಸಿಕ್ಕುತ್ತಿರಲಿಲ್ಲ.

• **ಮೌಲ್ಯದ ಅಳತೆ ಸಮರ್ಪಕವಾಗಿ ಇಲ್ಲದೆ ಇರುವುದು :** ಒಂದು ಮಾಪನ ಭತ್ತಕ್ಕೆ ಎಷ್ಟು ಮಾಪನ ಗೋಧಿ ಅಥವಾ ಒಂದು ಹಸುವಿಗೆ ಎಷ್ಟು ಕುರಿಗಳು ಎಂಬ ಕಿಮ್ಮತ್ತನ್ನು ನಿಗದಿಪಡಿಸಲು ಸಾಧ್ಯವಿರಲಿಲ್ಲ.

• **ವಸ್ತುಗಳನ್ನು ವಿಭಜಿಸುವ ಕೊರತೆ :** ಒಂದು ಹಸುವಿಗೆ ಸರಿ ಹೊಂದುವಂತೆ ಕುರಿಗಳನ್ನು ವಿಭಜಿಸಲು ಸಾಧ್ಯವಿರಲಿಲ್ಲ.

• **ವಸ್ತುಗಳ ಸಾಗಾಣಿಕೆಯ ಮತ್ತು ಸಂಗ್ರಹದ ಸಮಸ್ಯೆ :** ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಸ್ತುಗಳನ್ನು ಸಾಗಿಸುವುದು ಒಂದು ದೊಡ್ಡ ಸಮಸ್ಯೆಯಾಗಿತ್ತು. ವಸ್ತುಗಳನ್ನು ಹೆಚ್ಚುಕಾಲ ಸಂಗ್ರಹಿಸಿಡುವುದು ಕೂಡ ಸಮಸ್ಯೆಯಾಗುತ್ತಿತ್ತು.

**6. ಹಣದ ಆರ್ಥಿಕ ವ್ಯವಸ್ಥೆಯ ಹಂತ :** ವಸ್ತು ವಿನಿಮಯದ ಸಮಸ್ಯೆಗಳನ್ನು ನಿವಾರಿಸಲು ಅನೇಕ ಮಾಧ್ಯಮಗಳನ್ನು ಉಪಯೋಗಿಸಲಾಯಿತು. ಉದಾಃ ಪ್ರಾಣಿಗಳ ಚರ್ಮ, ಕವಡೆಗಳು ಮುಂತಾದವುಗಳನ್ನು ವಿನಿಮಯ ಮಾಧ್ಯಮವಾಗಿ ಉಪಯೋಗಿಸಲಾಗುತ್ತಿತ್ತು. ನಂತರ ಲೋಹಗಳು ರೂಢಿಗೆ ಬಂದವು. ಲೋಹಗಳನ್ನು ಒಂದು ನಿರ್ದಿಷ್ಟ ತೂಕ ಹಾಗೂ ಆಕಾರಕ್ಕೆ ತಂದು ಅವುಗಳನ್ನು ಮಾಧ್ಯಮವಾಗಿ ಉಪಯೋಗಿಸುತ್ತಿದ್ದರು. ಕ್ರಮೇಣ ತಾಮ್ರ, ಬೆಳ್ಳಿ ಮತ್ತು ಚಿನ್ನದ ನಾಣ್ಯಗಳು ರೂಢಿಗೆ ಬಂದವು. ಇಲ್ಲೂ ಕೂಡ ಸಾಗಾಣಿಕೆ ಕಷ್ಟವಾಯಿತು. ಹೀಗಾಗಿ ಕಾಗದದ ಹಣ ಚಾಲನೆಗೆ ಬಂದಿತು. ಈ ಕಾಗದದ ಹಣಕ್ಕೆ ಕೇಂದ್ರ ರಿಸರ್ವ್ ಬ್ಯಾಂಕ್ ಪೂರ್ಣ ಜವಾಬ್ದಾರಿ ಹೊತ್ತಿದ್ದು ಇದು ಸಂಕೇತದ ಹಣವಾಗಿರುತ್ತದೆ. ಚೆಕ್ಕುಗಳು, ಡ್ರಾಫ್ಟ್‌ಗಳು, ವಾಗ್ದಾನ ಪತ್ರಗಳು, ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್ ಮುಂತಾದ ಬ್ಯಾಂಕ್ ಹಣ ಚಾಲ್ತಿಯಲ್ಲಿದೆ.

**7. ಪಟ್ಟಣಗಳ ಆರ್ಥಿಕತೆಯ ಹಂತ:** ವಿನಿಮಯಕ್ಕೆ ಬದಲಾಗಿ ಹಣ ಬಳಸುವ ಪದ್ಧತಿ ರೂಢಿಗೆ ಬಂದ ಮೇಲೆ ವಾಣಿಜ್ಯದ ಪ್ರಗತಿ ತೀವ್ರಗತಿಯಲ್ಲಿ ಸಾಗಲು ಪ್ರಾರಂಭವಾಯಿತು. ಜನರು ಹೆಚ್ಚು ಹೆಚ್ಚಾಗಿ ವಸ್ತುಗಳನ್ನು ಉತ್ಪಾದಿಸಲು ಪ್ರಾರಂಭಿಸಿದರು. ಇವರೆಲ್ಲರೂ ಒಟ್ಟಾಗಿ ವಸ್ತುಗಳ ವಿನಿಮಯಕ್ಕಾಗಿ ಒಂದೆಡೆ ಸೇರುತ್ತಿದ್ದರು. ಇವು ಸ್ಥಳೀಯ ಮಾರುಕಟ್ಟೆಗಳಾದವು. ಕ್ರಮೇಣ ಈ ಮಾರುಕಟ್ಟೆಗಳು ಪಟ್ಟಣಗಳಾಗಿ ಪರಿವರ್ತಿತಗೊಂಡವು ಹಾಗೂ ಉತ್ಪಾದನಾ ವಸ್ತುಗಳನ್ನು ಪೂರೈಸುವ ಕೇಂದ್ರಗಳಾದವು. ವ್ಯಾಪಾರಗಾರರು ಅಸ್ತಿತ್ವಕ್ಕೆ ಬಂದರು. ಇವರು ಕುಶಲ ಕರ್ಮಿಗಳನ್ನು ಒಂದೆಡೆಗೆ ಬರ ಮಾಡಿಕೊಂಡು ಕಚ್ಚಾ ಪದಾರ್ಥಗಳನ್ನು ಸಂಗ್ರಹಿಸಿ ಅವರಿಂದ ಕೆಲಸ ಮಾಡಿಸಿಕೊಳ್ಳಲು ಪ್ರಾರಂಭಿಸಿದರು. ತಯಾರಾದ ವಸ್ತುಗಳನ್ನು ಗ್ರಾಮಗಳಿಗೆ ಸರಬರಾಜು ಮಾಡುತ್ತಿದ್ದರು. ಈ ಹಂತದಲ್ಲಿ ವಾಣಿಜ್ಯವು ಬಹುವಾಗಿ ಅಭಿವೃದ್ಧಿ ಹೊಂದಿತು ಹಾಗೂ ಮಾರುಕಟ್ಟೆಗಳು ಉದ್ದಗಲಕ್ಕೂ ಬೆಳೆದವು.

**8. ಅಂತಾರಾಷ್ಟ್ರೀಯ ವ್ಯಾಪಾರ ಹಂತ:** ಸಾ.ಶ. 15 ಮತ್ತು 16ನೇ ಶತಮಾನಗಳಲ್ಲಿ ಭೌಗೋಳಿಕ ಅನ್ವೇಷಣೆಗಳು ಪ್ರಾರಂಭವಾದವು. ಕೊಲಂಬಸ್ ಅಮೆರಿಕವನ್ನು ಕಂಡುಹಿಡಿದನು. ವಾಸ್ಕೋಡಗಾಮನು

©KTBS Not to be republished

ಭಾರತಕ್ಕೆ ಹೊಸ ಸಮುದ್ರ ಮಾರ್ಗವನ್ನು ಕಂಡು ಹಿಡಿದನು. ಪೋರ್ಚುಗೀಸ್ ದೇಶದ ಮೆಗಲನ್ನನು ಸ್ಪೇನ್ ದೇಶದ ದೊರೆಯ ಸಹಾಯದಿಂದ ವಿಶ್ವಪರ್ಯಟನೆಗಾಗಿ ಹಡಗಿನಲ್ಲಿ ಸ್ಪೇನ್‌ನ್ನು ಬಿಟ್ಟು ದಕ್ಷಿಣ ಅಮೇರಿಕಾದ ದಕ್ಷಿಣ ಭೂಶಿರವನ್ನು ದಾಟಿ ಪೆಸಿಫಿಕ್ ಸಾಗರವನ್ನು ಸೇರಿದನು. ಅಲ್ಲಿಂದ ಫಿಲಿಫೈನ್ಸ್ ದ್ವೀಪಗಳನ್ನು ಸೇರಿ ಅಲ್ಲಿ ಕೊಲ್ಲಲ್ಪಟ್ಟನು. ಆದರೆ ಅವನ ಹಡಗು 'ವಿಕ್ಟೋರಿಯ' ಮೂರು ವರ್ಷಗಳ ನಂತರ ಸ್ಪೇನ್ ದೇಶಕ್ಕೆ ಹಿಂದಿರುಗಿತು. ಇದು ವಿಶ್ವಪರ್ಯಟನೆ ಮಾಡಿದ ಮೊದಲ ಹಡಗಾಯಿತು.

ಬ್ರಿಟನ್ನಿನಲ್ಲಾದ ಕೈಗಾರಿಕಾ ಕ್ರಾಂತಿ ಹಾಗೂ ಭೌಗೋಳಿಕ ಅನ್ವೇಷಣೆಗಳು ವಾಣಿಜ್ಯದ ಬೆಳವಣಿಗೆಗೆ ಬಹಳವಾಗಿ ಸಹಾಯ ಮಾಡಿದವು. ಉತ್ಪಾದನೆಯು ಬೃಹತ್ ಪ್ರಮಾಣದಲ್ಲಿ ಸ್ಥಳೀಯ ಬೇಡಿಕೆಗೆ ಮಾತ್ರವಲ್ಲದೆ ಇತರ ದೇಶಗಳ ಬೇಡಿಕೆಗಾಗಿಯೂ ಉತ್ಪಾದಿಸಲು ಪ್ರಾರಂಭವಾಯಿತು. ಗುಣಮಟ್ಟದ ವಸ್ತುಗಳು ಯಂತ್ರಗಳ ಸಹಾಯದಿಂದ ಅಧಿಕ ಪ್ರಮಾಣದಲ್ಲಿ ಉತ್ಪಾದನೆಯಾಗಲು ಆರಂಭವಾಗಿ ಅಂತಾರರಾಷ್ಟ್ರೀಯ ಮಾರುಕಟ್ಟೆ ಪ್ರಾರಂಭವಾಯಿತು. ಸಾರಿಗೆ ಮತ್ತು ಸಂಪರ್ಕ ಸಾಧನೆಗಳಲ್ಲುಂಟಾದ ತೀವ್ರಗತಿಯ ಬದಲಾವಣೆ ಮಾರುಕಟ್ಟೆ ವಿಕಸನಗೊಳ್ಳಲು ಸಾಧ್ಯವಾಯಿತು. ವಸ್ತುಗಳ ಉತ್ಪಾದನೆ ಕೇವಲ ಒಂದು ದೇಶಕ್ಕೆ ಸೀಮಿತವಾಗದೆ ವಿಶ್ವದ ಮಾರುಕಟ್ಟೆಗೂ ವ್ಯಾಪಿಸಿತು.

## ಆರ್ಥಿಕ ಬೆಳವಣಿಗೆಯಲ್ಲಿ ವ್ಯಾಪಾರ ಮತ್ತು ವಾಣಿಜ್ಯದ ಪಾತ್ರ ಮತ್ತು ಪ್ರಾಮುಖ್ಯತೆ

ವ್ಯಾಪಾರವೆಂದರೆ ಸರಕುಗಳನ್ನು ಕೊಳ್ಳುವುದು ಮತ್ತು ಮಾರುವುದೇ ಆಗಿದೆ. ವಾಣಿಜ್ಯವೆಂದರೆ ವ್ಯಾಪಾರ ಸುಗಮವಾಗಿ ನಡೆಯಲು ಪೂರಕವಾದ ಇತರೆ ಅಂಶಗಳನ್ನು ಒಳಗೊಂಡಿದೆ. ಈ ಪೂರಕ ಅಂಶಗಳಾವುವೆಂದರೆ ಸಾಗಾಣಿಕೆ, ವಿಮೆ, ಬ್ಯಾಂಕಿಂಗ್, ಉಗ್ರಾಣ ವ್ಯವಸ್ಥೆ, ಜಾಹೀರಾತು ಮುಂತಾದವು. ಇವುಗಳನ್ನು ವಾಣಿಜ್ಯ ಸೇವೆಗಳೆಂದು ಕರೆಯಬಹುದು. ವ್ಯಾಪಾರಗಾರರು ಗ್ರಾಹಕರ ಇಷ್ಟಗಳನ್ನು ಅರಿತು ಅನುದಿನವೂ ಅವರಿಗೆ ಬೇಕಾದ ಸರಕುಗಳನ್ನು ಸರಬರಾಜು ಮಾಡುತ್ತಾರೆ. ಹಾಗೆಯೇ ಇತರೇ ಅನೇಕ ಸೇವೆಗಳನ್ನು ಒದಗಿಸುತ್ತಾರೆ. ವ್ಯಾಪಾರ ಸುಗಮವಾಗಿ ಸಾಗಲು ಸಹಕರಿಸುವ ಸೇವೆಗಳಾದ ಸಾಗಾಣಿಕೆಯು ಸರಕುಗಳನ್ನು ಉತ್ಪಾದನೆಯ ಕೇಂದ್ರಗಳಿಂದ ವ್ಯಾಪಾರಿಗಳಿಗೆ ಮತ್ತು ಅವರ ಮೂಲಕ ಗ್ರಾಹಕರಿಗೆ ತಲುಪಲು ಸಹಾಯ ಮಾಡುತ್ತದೆ. ಉತ್ಪಾದಕರಿಗೆ ಅಥವಾ ವ್ಯಾಪಾರಿಗಳಿಗೆ ಬೇಕಾದ ಹಣ ಸೌಲಭ್ಯವನ್ನು ಬ್ಯಾಂಕುಗಳು ಒದಗಿಸುತ್ತವೆ. ಸಾಗಾಟದ ಸಮಯದಲ್ಲಾಗಲಿ, ಶೇಖರಣೆಯ ಸಮಯದಲ್ಲಾಗಲಿ ಸರಕುಗಳು ನಾಶ ಹೊಂದಿದರೆ ಅದರಿಂದ ಉಂಟಾದ ನಷ್ಟವನ್ನು ವಿಮಾ ಕಂಪನಿಗಳು ತುಂಬಿ ಕೊಡುವುದರ ಮೂಲಕ ಸೇವೆ ಸಲ್ಲಿಸುತ್ತವೆ. ಯಾವುದೋ ಕಾಲದಲ್ಲಿ ಉತ್ಪಾದನೆಯಾದ ವಸ್ತುಗಳು ಮತ್ತಾವುದೋ ಕಾಲದಲ್ಲಿ ಗ್ರಾಹಕರಿಗೆ ಬೇಕಾಗುತ್ತದೆ. ಇದಕ್ಕಾಗಿ ಉಗ್ರಾಣಗಳು ವಸ್ತುಗಳನ್ನು ವೈಜ್ಞಾನಿಕ ತಂತ್ರಜ್ಞಾನಗಳಿಂದ ರೂಪಿಸಲ್ಪಟ್ಟು ಸರಕುಗಳ ಶೇಖರಣೆಗೆ ಸಹಾಯ ಮಾಡುತ್ತವೆ. ಗ್ರಾಹಕರಿಗೆ ವಸ್ತುಗಳ ಬಗ್ಗೆ ಬೇಕಾದ ಮಾಹಿತಿಯನ್ನು ಜಾಹೀರಾತು ಸಂಸ್ಥೆಗಳು ನಿರ್ವಹಿಸುತ್ತವೆ. ಈ ಎಲ್ಲ ಸೇವೆಗಳು ವಾಣಿಜ್ಯ ಕ್ಷೇತ್ರಕ್ಕಷ್ಟೇ ಸೀಮಿತವಾಗಿರದೆ ಸಮಾಜಕ್ಕೂ ಕೂಡ ಅನೇಕ ರೀತಿಗಳಿಂದ ಸೇವೆಗಳನ್ನು ಸಲ್ಲಿಸುತ್ತವೆ.

**ವಾಣಿಜ್ಯದ ಪ್ರಾಮುಖ್ಯತೆಯನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ :** ವಾಣಿಜ್ಯವು ಗ್ರಾಹಕರಿಗೆ ಬೇಕಾದ ವಸ್ತುಗಳನ್ನು ಸರಿಯಾದ ಸಮಯಕ್ಕೆ ಒದಗಿಸುವ ಜವಾಬ್ದಾರಿ ಹೊತ್ತಿದೆ. ಕೈಗಾರಿಕೆಗಳು ಸ್ಥಾಪನೆಯಾಗಬೇಕಾದರೆ ಅದಕ್ಕೆ ಬೇಕಾದ ಸವಲತ್ತುಗಳನ್ನು ಒದಗಿಸುತ್ತದೆ. ಪ್ರಪಂಚದ ಬೇರೆ ಬೇರೆ ಪ್ರದೇಶಗಳಲ್ಲಿ ಹಂಚಿರುವ ಜನರನ್ನು

©KTBS Not to be republished

ಒಟ್ಟುಗೂಡಿಸುತ್ತದೆ. ಬೆಲೆಗಳನ್ನು ಹತೋಟಿಯಲ್ಲಿಡಲು ಸಹಕರಿಸುತ್ತದೆ. ವಿಷಯಗಳ ವಿನಿಮಯದ ಮೂಲಕ ಸಾಂಸ್ಕೃತಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ದೇಶದ ಆರ್ಥಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಸರ್ಕಾರದ ಆದಾಯಕ್ಕೆ ಕರ ತೆರಿಗೆ ಮತ್ತು ಸುಂಕಗಳನ್ನು ನೀಡುವುದರ ಮೂಲಕ ತನ್ನ ಪಾಲನ್ನು ನೀಡುತ್ತದೆ.

**ಇಪ್ಪತ್ತೊಂದನೇ ಶತಮಾನದಲ್ಲಿ ವಾಣಿಜ್ಯದ ಬೆಳವಣಿಗೆ**

21ನೇ ಶತಮಾನವನ್ನು ಮಾಹಿತಿ ತಂತ್ರಜ್ಞಾನ ಯುಗವೆಂದು ಕರೆಯುತ್ತಾರೆ. ಅಂತರ್ಜಾಲ, ಬ್ಯಾಂಕಿಂಗ್, ವಿಮಾಸೇವೆಯ ಖಾಸಗೀಕರಣ, ಟೆಲಿ ಮಾರುಕಟ್ಟೆ ಹಾಗೂ ವಿದ್ಯುನ್ಮಾನ ಜಾಹೀರಾತು ವ್ಯವಸ್ಥೆಯು ಗ್ರಾಹಕನು ವಸ್ತು ಮತ್ತು ಸೇವೆಗಳನ್ನು ಅತಿ ಶೀಘ್ರವಾಗಿ ಪಡೆಯಲು ಸಹಾಯಕವಾಗಿವೆ.

ಗ್ರಾಹಕರು ವಿಶ್ವದ ಯಾವುದೇ ಭಾಗದಲ್ಲಿ ಉತ್ಪಾದಿಸಿದ ತನಗೆ ಬೇಕಾದ ವಸ್ತುಗಳನ್ನು ಟೆಲಿ ಮಾರುಕಟ್ಟೆಯ ಮುಖಾಂತರ ಅತಿ ವೇಗವಾಗಿ ಕೊಂಡುಕೊಳ್ಳಬಹುದಾಗಿದೆ. ಇಂದಿನ ಉತ್ಪಾದಕರು ವಿದ್ಯುನ್ಮಾನ ಜಾಹೀರಾತು ವ್ಯವಸ್ಥೆಯ ಮೂಲಕ ವಿಶ್ವದೆಲ್ಲೆಡೆಯಿಂದ ಗ್ರಾಹಕರನ್ನು ಆಕರ್ಷಿಸಬಹುದಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ಅನೇಕ ರಾಷ್ಟ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಇವುಗಳಿಂದ ಉತ್ಪಾದನೆಯಾದ ವಸ್ತುಗಳನ್ನು ವಿಶ್ವ ಮಾರುಕಟ್ಟೆಗೆ ಸರಬರಾಜು ಮಾಡಲು ಸಾಧ್ಯವಾಗಿದೆ. ಈ ಕಂಪನಿಗಳು ಬೃಹತ್ ಪ್ರಮಾಣದಲ್ಲಿ ವಸ್ತುಗಳನ್ನು ಉತ್ಪಾದಿಸುತ್ತಿದ್ದು ವಿಶೇಷ ಗುಣಮಟ್ಟದ ವಸ್ತುಗಳನ್ನು ಪೈಪೋಟಿ ದರದಲ್ಲಿ ಗ್ರಾಹಕರಿಗೆ ಪೂರೈಸುತ್ತಿವೆ. ಒಟ್ಟಿನಲ್ಲಿ ವಾಣಿಜ್ಯದ ಅಭಿವೃದ್ಧಿಯು ದಾಪುಗಾಲು ಹಾಕುತ್ತ ನಡೆಯುತ್ತಿದೆ.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಜಾಗಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

1. ಗ್ರಾಹಕರಿಗೆ ಸಲ್ಲಿಸುವ ತಾಂತ್ರಿಕ ಅಥವಾ ವಿಶಿಷ್ಟ ವೈಯುಕ್ತಿಕ ಸೇವೆಗಳ ಆರ್ಥಿಕ ಚಟುವಟಿಕೆಯನ್ನು ____________ ಎನ್ನುತ್ತಾರೆ.
2. ಪ್ರಾಚೀನ ಕಾಲದಲ್ಲಿ ವಸ್ತುಗಳ ವಿನಿಮಯ ____________ ಜೊತೆಯಲ್ಲಿ ಆಗುತ್ತಿತ್ತು.
3. ಕಾಗದದ ಹಣಕ್ಕೆ ದೇಶದ ____________ ಪೂರ್ಣ ಜವಾಬ್ದಾರಿ ಹೊತ್ತಿರುತ್ತದೆ.
4. ವಾಣಿಜ್ಯ ವಿಕಸನದ _________ ಹಂತದಲ್ಲಿ ಗ್ರಾಮ ಮತ್ತು ಸಮುದಾಯಗಳು ಹುಟ್ಟಿಕೊಂಡವು.
5. ಅಂತಾರಾಷ್ಟ್ರೀಯ ವ್ಯಾಪಾರ ಹಂತಕ್ಕೆ ಮುಖ್ಯ ಕಾರಣ ________________ ಪ್ರಾರಂಭವಾಗಿದ್ದು.
6. ವ್ಯಾಪಾರ ಮತ್ತು ವಾಣಿಜ್ಯ ಸರ್ಕಾರಕ್ಕೆ ____________ ಗಳನ್ನು ಕೊಡುವುದರಿಂದ ಆರ್ಥಿಕ ಬೆಳವಣಿಗೆಗೆ ಸಹಾಯವಾಗುತ್ತದೆ.

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಆರ್ಥಿಕ ಚಟುವಟಿಕೆಗಳೆಂದರೇನು?
2. ವ್ಯಾಪಾರ ಮತ್ತು ವಾಣಿಜ್ಯಗಳ ಅರ್ಥ ತಿಳಿಸಿ.

©KTBS Not to be republished

3. ಪದಾರ್ಥಗಳ ನೇರ ವಿನಿಮಯ ಪದ್ಧತಿ ಎಂದರೇನು?
4. ಉದ್ಯೋಗ ಎಂದರೇನು?
5. ವ್ಯಾಪಾರ ಪೂರಕಗಳೆಂದರೇನು? ಅವು ಯಾವುವು?
6. ವೃತ್ತಿ ಸಂಘಗಳೆಂದರೇನು?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಉತ್ತರ ಬರೆಯಿರಿ.**

1 ನಮ್ಮ ದೈನಂದಿನ ಜೀವನದಲ್ಲಿ ವಸ್ತುಗಳ ಉತ್ಪಾದನೆ ಮತ್ತು ವಿತರಣೆ ಹೇಗೆ ಮುಖ್ಯ ಪಾತ್ರ ವಹಿಸುತ್ತದೆ?

2 ವಿವಿಧ ಬಗೆಯ ಆರ್ಥಿಕ ಚಟುವಟಿಕೆಗಳನ್ನು ವಿವರಿಸಿ.

3 ವಸ್ತು ವಿನಿಮಯ ಪದ್ಧತಿಯ ಸಮಸ್ಯೆಗಳಾವುವು? ಹಣ ಮಾಧ್ಯಮ ಇದನ್ನು ಹೇಗೆ ನಿವಾರಿಸುತ್ತದೆ?

4 ವಾಣಿಜ್ಯ ವಿಕಸನದ ಹಂತಗಳಲ್ಲಿ ಮುಖ್ಯವಾದುವು ಯಾವುವು? ಸಂಕ್ಷಿಪ್ತವಾಗಿ ಯಾವುದಾದರೂ ಒಂದನ್ನು ವಿವರಿಸಿ.

**IV. ಚಟುವಟಿಕೆ.**

1. ನಿಮ್ಮ ಊರಿನಲ್ಲಿ ಕಂಡುಬರುವ ಕುಶಲ ಕರ್ಮಿಗಳನ್ನು ಪಟ್ಟಿಮಾಡಿ, ಯಾರಾದರೂ ಒಬ್ಬರ ಕೆಲಸವನ್ನು ಸಮಂಜಸವಾಗಿ ತಿಳಿದುಕೊಳ್ಳಿ. ನಿಮ್ಮ ಅನುಭವಗಳನ್ನು ಕುರಿತು ಒಂದು ಪ್ರಬಂಧ ಬರೆಯಿರಿ.

*****

©KTBS Not to be republished